ವೀರಶರಣೆ

ಗುಡ್ಡಾಪುರ ದಾನಮ್ಮ



- ಶ್ರೀಮತಿ ಜಯಶ್ರೀ ಸುಕಾಲೆ

ವೀರಶರಣೆ ಗುಡ್ಡಾಪುರ ದಾನಮ್ಮ

ಲೇಖಕರು :
ಶ್ರೀಮತಿ ಜಯಶ್ರೀ ಸುಕಾಲೆ

ಪ್ರಕಾಶಕರು :
'ಜಯ ಬಸವ ಭಾರತಿ'
ಬೀದರ

VEERASHARANE GUDDAPURA DANAMMA : WRITTEN BY
SMT. JAYASHREE SUKALE,
BASAVA PRAKASHA NILAYA, SHARANANAGARA, BIDAR-585401
8073015110 / 9481633463

PUBLISHER
JAYA BASAVA BHARATHI
BIDAR

COPY RIGHT | AUTHOR
FIRST PRINT | 5TH OCTOBER, 2022
PAGES | XXVIII +123
COPIES | 1000
PRICE | RS. 145/-

ವೀರಶರಣೆ ಗುಡ್ಡಾಪುರ ದಾನಮ್ಮ :
ಲೇಖಕರು,
ಶ್ರೀಮತಿ ಜಯಶ್ರೀ ಸುಕಾಲೆ
'ಬಸವ ಪ್ರಕಾಶ ನಿಲಯ' ಶರಣನಗರ, ಬೀದರ-೫೮೫೪೦೧.

ಪ್ರಕಾಶಕರು :
'ಜಯ ಬಸವ ಭಾರತಿ'
ಬೀದರ

ಹಕ್ಕುಗಳು । ಲೇಖಕರದು
ಪ್ರಥಮ ಮುದ್ರಣ । ಅಕ್ಟೋಬರ್ 5, 2022 ವಿಜಯದಶಮಿ
ಪುಟಗಳು । *XXVIII* + 123
ಪ್ರತಿಗಳು । 1000
ಬೆಲೆ । ರೂ. 145/-
ಮುಖಪುಟ ವಿನ್ಯಾಸ । ಸ್ವಾಮಿ ಬದ್ರಿ, ದೊಣೆಹಳ್ಳಿ
ಮುದ್ರಣ । ಪದ್ಮಶ್ರೀ ಪ್ರಿಂಟರ್ಸ್
ರಾಜಾಜಿನಗರ, ಬೆಂಗಳೂರು-10

ಅರ್ಪಣೆ

ಬಸವಾದಿ ಶರಣರಂತೆ ಜೀವನವನ್ನು ಸಾಗಿಸಿ ವೀರಶರಣೆಯಾಗಿ
ಎಲ್ಲರ ಮನೆ ಮಾತಾಗಿರುವ ಗುಡ್ಡಾಪುರದ ದಾನಮ್ಮ ತಾಯಿಯವರಿಗೆ
ಹೃನ್ಮನದ ಶರಣುಗಳು
ಇವರ ಅನುಭಾವದ ಮಾತುಗಳು ಕಾಲ ಗರ್ಭದಲ್ಲಿ ಲೀನವಾಗಿರುವುದು
ಒಂದು ನೋವಿನ ವಿಚಾರವಾದರೂ ದೊರೆತ ಮಾಹಿತಿಯನ್ನು ಆಧರಿಸಿ
ರೂಪುಗೊಂಡಿರುವ ದಾನಮ್ಮ ತಾಯಿಯ ಚರಿತೆಗೊಂದು ನಮನ.



ಶಿವಯೋಗ ಸಾಧಕಿ ಶರಣೆ ದಾನಮ್ಮ



ದಾನಮ್ಮನವರ ಪತಿ ಸೋಮನಾಥ



ವಚನ ಸಾಹಿತ್ಯದ ಸಂರಕ್ಷಣೆಯಲ್ಲಿ
ಖಡ್ಗ ಹಿಡಿದು ಹೋರಾಡಿದ ವೀರಗಣಾಚಾರಿಣಿ ದಾನಮ್ಮ.

ತ್ರಿಕಾಲ ಪೂಜೆಯಲ್ಲಿನ ಶರಣೆ ದಾನಮ್ಮತಾಯಿ



ಶರಣೆ ದಾನಮ್ಮತಾಯಿಯವರ ದೇವಸ್ಥಾನ, ಗುಡ್ಡಾಪುರ





ಶರಣೆ ದಾನಮ್ಮನವರ ದೇವಸ್ಥಾನದ ದ್ವಾರ, ಗುಡ್ಡಾಪುರ





ಶರಣೆ ದಾನಮ್ಮನವರ ದೇವಸ್ಥಾನದ ಪಕ್ಷಿನೋಟ



ಭಕ್ತಾಧಿಗಳಿಂದ ತುಂಬಿರುವ ಶರಣೆ ದಾನಮ್ಮನವರ ದೇವಸ್ಥಾನ


ಶರಣೆ ದಾನಮ್ಮನವರ ದೇವಸ್ಥಾನ – ಸೂರ್ಯಾಸ್ತಮಾನದ ವಿಹಂಗಮ ನೋಟ

ಸಂದೇಶ

ವಿಶ್ವಗುರು ಬಸವಣ್ಣನವರಿಂದ ಬೆಳೆದು ಬಂದ ಶರಣ ಪರಂಪರೆ ನಮ್ಮ ನಾಡಿನ ಅಸ್ಮಿತೆ ಹಾಗೂ ಹೆಮ್ಮೆಯ ಐತಿಹಾಸಿಕ ಪರಂಪರೆಯಾಗಿದೆ. ಶರಣರು ನಡೆದ ನೆಲ ಅವಿಮುಕ್ತಕ್ಷೇತ್ರವಾಗಿ ಕಂಗೊಳಿಸುತ್ತಿದೆ. ಅವರ ದರ್ಶನ, ವಾಸ್ತವ್ಯದಿಂದ ಪಾವನವಾದ ಕ್ಷೇತ್ರಗಳು ನಮ್ಮ ಭಕ್ತಿಯ ಹಾಗೂ ಪ್ರೇರಣೆಯ ಶಕ್ತಿಕೇಂದ್ರಗಳಾಗಿ ಪರಿಣಮಿಸುತ್ತಿವೆ. ಇದರಲ್ಲಿ ವಿಶೇಷವಾಗಿ ಬಸವಕಲ್ಯಾಣ, ಕೂಡಲಸಂಗಮ, ಸೊಲ್ಲಾಪುರ, ಉಳವಿ ಹಾಗೂ ಗುಡ್ಡಾಪುರ. ಇವು ನಮ್ಮ ನಾಡಿನ ಐತಿಹಾಸಿಕ ಭಕ್ತಿ ಕ್ಷೇತ್ರಗಳಾಗಿ ಬೆಳೆದು ಬಂದಿವೆ. ಆ ಕ್ಷೇತ್ರದ ಶರಣರು ಕುಲದೈವರಾಗಿ ಮನೆ. ಮನೆಗಳಲ್ಲಿ ಆರಾಧಿಸಲ್ಪಟ್ಟಿವೆ. ಅದರಲ್ಲಿ ಗುಡ್ಡಾಪುರದ ಶರಣೆ ದಾನಮ್ಮ ತಾಯಿಯವರು ಲಕ್ಷಾಂತರ ಭಕ್ತರ ಹೃದಯದಲ್ಲಿ ಬೆಳಗುತ್ತಿದ್ದಾರೆ. ಅವರ ಸಮಗ್ರ ಜೀವನ ದರ್ಶನ ಮಾಡಿಸುವ ಕೃತಿ ಇದಾಗಿದೆ. ಇದನ್ನು ಬರೆದ ಶರಣೆ ಜಯಶ್ರೀ ಸುಕಾಲೆ ಅವರಿಗೆ ಅಭಿನಂದನೆಗಳು.

ಲಿಂಗಾಯತ ಪರಂಪರೆಯ ಶರಣರ ಸತ್ಯನಿಷ್ಠವಾದ ಇತಿಹಾಸ ನಮಗೆ ದೊರೆಯುವುದು ಬಹಳ ಕಷ್ಟ. ಕೆಲವು ಪ್ರಮುಖ ಶರಣರು ಬಿಟ್ಟರೆ ಇನ್ನಿತರ ಶರಣರ ಕುರಿತು ನಮ್ಮ ಇತಿಹಾಸ ಮೌನ ತಾಳುತ್ತದೆ. ಅದಕ್ಕಾಗಿಯೇ ಶರಣ ಪರಂಪರೆ ಬೆಳಕಿಗೆ ಬರಲು ಬಹಳ ತಡವಾಯಿತು. ಇತ್ತೀಚಿನ ದಿನಗಳಲ್ಲಿ ಶರಣರ ಕುರಿತು ವಿಶೇಷ ಅಧ್ಯಯನ, ಸಂಶೋಧನ ನಡೆದಿರುವುದು ಹೆಮ್ಮೆಪಡುವ ಸಂಗತಿಯಾಗಿದೆ. ಜಯಶ್ರೀ ಸುಕಾಲೆ ಅವರು ಬಸವ ಸಮಕಾಲೀನ ಶರಣೆ ದಾನಮ್ಮ ಅವರ ಕುರಿತು ಆಳವಾದ ಅಧ್ಯಯನ, ಚಿಂತನವನ್ನು ಮಾಡಿ ಈ ಕೃತಿಯನ್ನು ಸಿದ್ಧಪಡಿಸಿದ್ದಾರೆ. ಗುಡ್ಡಾಪುರದ ದಾನಮ್ಮನ ಮೊದಲ ಹೆಸರು ಲಿಂಗಮ್ಮ. ಲಿಂಗಮ್ಮನನ್ನು ದಾನಮ್ಮನಾಗಿಸಿದ ಪರಿ ಅದ್ಭುತವಾಗಿದೆ. ಅದು ಈ ಕೃತಿಯಲ್ಲಿ ಸೊಗಸಾಗಿ ಮೂಡಿಬಂದಿದೆ. ಬಸವತತ್ತ್ವ ಪ್ರಸಾರಕ್ಕಾಗಿ ದಾನಮ್ಮ ಅವರು ಮಾಡಿರುವ ಸೇವೆ ಅನುಪಮವಾದದ್ದು. ರಾಜ್ಯ ಹೊರರಾಜ್ಯಗಳಲ್ಲಿ ಬಸವಧರ್ಮದ ಧ್ವಜವನ್ನು ಹಾರಿಸಿದ ಕೀರ್ತಿ ದಾನಮ್ಮತಾಯಿಯವರದು. ಲಕ್ಷಾಂತರ ಜನರಿಗೆ ಲಿಂಗದೀಕ್ಷೆ ಮಾಡುವ ಮೂಲಕ

ಲಿಂಗತತ್ತ್ವವನ್ನು ಜನಮನಕ್ಕೆ ಮುಟ್ಟಿಸಿ, ಬಸವಪ್ರಜ್ಞೆಯನ್ನು ಜಾಗೃತಗೊಳಿಸಿದ ಮಹಾತಾಯಿ ದಾನಮ್ಮ. ಅದಕ್ಕಾಗಿಯೇ ಅವರು ಇಂದು ಸಾವಿರಾರು ಕುಟುಂಬದ ಕುಲದೈವವಾಗಿ ಕಂಗೊಳಿಸುತ್ತಿದ್ದಾರೆ.

ಶರಣೆ ಜಯಶ್ರೀ ಸುಕಾಲೆ ಅವರ ಬರವಣಿಗೆಯ ಶೈಲಿ ಕಾದಂಬರಿ ಹಾಗೆ ಇದ್ದರೂ ಚಾರಿತ್ರಿಕ ಅಂಶಗಳನ್ನು ವಸ್ತುನಿಷ್ಠವಾಗಿ ಮೂಡಿಬಂದಿದೆ. ವಚನಗಳನ್ನು ಆಧಾರವಾಗಿಟ್ಟುಕೊಂಡ ಕಾರಣ ಶರಣತತ್ತ್ವ ನಿಷ್ಠೆಯು ಎದ್ದು ಕಾಣುತ್ತದೆ. ಶರಣೆ ಜಯಶ್ರೀ ಸುಕಾಲೆ ಅವರು ಗೃಹಿಣಿಯಾಗಿ ಆದರ್ಶ ಶರಣ ಜೀವನ ನಡೆಸುತ್ತಲೇ ಸಾಹಿತ್ಯ ಕೃಷಿ ಮಾಡುತ್ತಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ. ಅವರ ಈ ಕಾರ್ಯಕ್ಕೆ ಅವರ ಪತಿದೇವರ ಸಹಕಾರ ಇರುವುದು ಶರಣ ಜೀವನಕ್ಕೆ ಸಾಕ್ಷಿಯಾಗಿದೆ. ಅವರಿಂದ ಹೀಗೆ ಇನ್ನೂ ಅನೇಕ ಕೃತಿಗಳು ಹೊರಬರಲಿ ಎಂದು ಆಶಿಸುತ್ತೇವೆ.

ಪೂಜ್ಯ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು
ಹಿರೇಮಠ ಸಂಸ್ಥಾನ, ಭಾಲ್ಕಿ
ಅಧ್ಯಕ್ಷರು, ಅನುಭವಮಂಟಪ, ಬಸವಕಲ್ಯಾಣ

ಶುಭನುಡಿ

ಭಾರತೀಯರು ಪುರಾಣ ಮತ್ತು ಪವಾಡ ಪ್ರಿಯರು. ಇದಕ್ಕೆ ಮುಖ್ಯ ಕಾರಣವೆಂದರೆ ಮನುವಾದಿ ವ್ಯವಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಕಟ್ಟಳೆಗಳು. ದೇಶದ ಶೇಕಡಾ ೯೦ರಷ್ಟು ಜನರನ್ನು ಅವು ಇಂಥ ಬೌದ್ಧಿಕಮಟ್ಟಕ್ಕೆ ತಂದಿವೆ. ಹೀಗಾಗಿ ಸಹಸ್ರಾರು ವರ್ಷಗಳಿಂದ ಕಷ್ಟಕ್ಕೊಳಗಾಗಿರುವ ಜನಸಮುದಾಯಗಳು ತಮಗೆ ಒಂದಿಷ್ಟು ಒಳ್ಳೆಯದಾದರೆ ಪವಾಡ ಎಂದೇ ಭಾವಿಸುತ್ತಿದ್ದರು. ನಿಸ್ವಾರ್ಥದಿಂದ ನಿರಂತರ ಸೇವೆ ಮಾಡುವವರು ಅವರ ದೃಷ್ಟಿಯಲ್ಲಿ ಪವಾಡ ಪುರುಷರಾಗುತ್ತಿದ್ದರು. ಅವರು ನೀಡುತ್ತಿದ್ದ ಸಾಂತ್ವನದ ಭರವಸೆಗಳು ಮತ್ತು ಅಂತಃಕರಣದ ಮಾತುಗಳು, ಅವರನ್ನು ನಂಬಿದವರ ಮಾನಸಿಕ ಮತ್ತು ದೈಹಿಕ ಸಮಸ್ಯೆಗಳನ್ನು ಪರಿಹರಿಸುತ್ತಿದ್ದವು. ಕ್ರೈಸ್ತರಲ್ಲಿ 'ಫೇತ್ ಹೀಲಿಂಗ್' ಅಂತಾರಲ್ಲಾ ಹಾಗೆ ಈ ಪವಾಡಗಳು ನಮ್ಮ ಜನಮಾನಸದಲ್ಲಿ ಬೇರೂರಿದ್ದವು.

ಬಸವಣ್ಣನವರು ತಮ್ಮ ೮೮ ಪವಾಡಗಳ ಕುರಿತು ನಾಲ್ಕು ವಚನಗಳಲ್ಲಿ ಹೇಳಿದ್ದಾರೆ. "ಎಂಬತ್ತೆಂಟು ಪವಾಡವ ಮೆರೆದು ಹಗರಣದ ಚೋಹದಂತಾಯಿತೆನ್ನ ಭಕ್ತಿ" ಎಂದು ತಿಳಿಸಿದ್ದಾರೆ. ಅವರಿಗೆ ಪವಾಡಗಳು ನಾಟಕದ ಸೋಗಿನಂತೆ ಅನಿಸಿವೆ. ಬಸವಣ್ಣನವರು ಜನಸಮುದಾಯಕ್ಕೆ ತಮ್ಮನ್ನೇ ಸಮರ್ಪಿಸಿಕೊಂಡಿದ್ದರು. ಪ್ರತಿಯೊಬ್ಬರಿಗಾಗಿ ಅವರ ಅಂತಃಕರಣ ಮಿಡಿಯುತ್ತಿತ್ತು. ಕಟ್ಟಕಡೆಯ ಮನುಷ್ಯರ ದೃಷ್ಟಿಯಲ್ಲಿ ಅವರು ಪವಾಡಪುರುಷರೇ ಆದರು. ಆದರೆ ಪಟ್ಟಭದ್ರ ಹಿತಾಸಕ್ತಿಗಳು ಅವರ ಮೇಲೆ ದ್ವೇಷ ಸಾಧಿಸುತ್ತಿದ್ದವು.

ಶರಣೆ ಗುಡ್ಡಾಪುರ ದಾನಮ್ಮ ಗಣಾಚಾರಿಯೂ ಸೇವಾಕಾಂಕ್ಷಿಯೂ ಆಗಿದ್ದಳು. ಧೈರ್ಯ ಮತ್ತು ಜೀವಕಾರುಣ್ಯ ಆಕೆಯ ಧೀರೋದಾತ್ತ ವ್ಯಕ್ತಿತ್ವಕ್ಕೆ ಕಾರಣವಾಗಿದ್ದವು. 'ಬಡವನ ಸಿಟ್ಟು ದವಡೆಗೆ ಮೂಲ' ಎಂದು ಬದುಕುವ ಜನಸಾಮಾನ್ಯರಿಗೆ ಈ ಎರಡೂ ಗುಣಗಳು ಬಹಳ ಹಿಡಿಸುತ್ತವೆ. ವೀರಗುಣ ಮತ್ತು ಸೇವಾಗುಣ ಒಂದಕ್ಕೊಂದು ಪೂರಕವಾಗಿದ್ದಾಗ ಪವಾಡಸದೃಶವಾಗುತ್ತವೆ. ಅಂಥ ವೀರರಿಂದ ಜನತೆಗೆ ರಕ್ಷಣೆ ಸಿಗುತ್ತದೆ ಮತ್ತು ಸಹಾಯಹಸ್ತದಿಂದಾಗಿ ಬದುಕಿನ ಬವಣೆ ಕಡಿಮೆಯಾಗುತ್ತದೆ.

ಇಂಥವರ ಪರಿಸರದಲ್ಲಿ ಮನೋಸ್ಥೈರ್ಯ ಬೆಳೆಯುತ್ತದೆ. ಹೀಗಾಗಿ ದಾನಮ್ಮ ವಿಶಿಷ್ಟ ಶರಣೆಯಾಗಿ ಬೆಳೆದಳು. ಸಕಾರಾತ್ಮಕ ಚಿಂತನೆಗಳಿಂದ ಕೂಡಿದ ಆಕೆಯ ಸಮರ್ಪಣಾ ಭಕ್ತಿ ಜನರ ಬದುಕಿನಲ್ಲಿ ಹೊಸ ಭರವಸೆ ಮೂಡಿಸಿತು. ಈ ಕಾರಣದಿಂದಲೇ ದಾನಮ್ಮ ವರದಾನಿಯಾಗಿ ಜನಮನದಲ್ಲಿ ನೆಲೆಸಿದ್ದಾಳೆ.

ಅವಳದು ಚರಜಂಗಮ ಪ್ರಜ್ಞೆ, ಶರಣ ತತ್ತ್ವವನ್ನು ಪ್ರಸಾರ ಮಾಡುತ್ತ ಆಂಧ್ರ ಮತ್ತು ತಮಿಳುನಾಡಿನವರೆಗೂ ಹೋದಳು. ೧೨ನೇ ಶತಮಾನದಲ್ಲಿ ಯಾವುದೇ ರೀತಿಯ ಸಂಚಾರ ಸೌಕರ್ಯಗಳು ಇಲ್ಲದ ಸಂದರ್ಭದಲ್ಲಿ ಅವಳು ಅಷ್ಟುದೂರ ಧರ್ಮಕಾರ್ಯಕ್ಕಾಗಿ ಪ್ರಯಾಣ ಬೆಳೆಸಿದ್ದು ಕೂಡ ಪವಾಡ ಸದೃಶವಾಗಿದೆ. ಆಂಧ್ರ ಮತ್ತು ತಮಿಳುನಾಡಿನ ಎರಡು ಘಟನೆಗಳು ಆಕೆಯ ಗಣಾಚಾರದ ಪ್ರತೀಕವಾಗಿವೆ.

ಆಂಧ್ರದ ಅಲಂಪುರದಲ್ಲಿ, ನದಿತೀರದ ಮೇಲೆ ಬ್ರಹ್ಮೇಶ್ವರ ದೇವಾಲಯವಿದೆ. ಆ ಗ್ರಾಮದೇವತೆಯಾದ ಬ್ರಹ್ಮೇಶ್ವರಲಿಂಗವನ್ನು ಪರಮತೀಯರು ಕಿತ್ತು ನದಿಯಲ್ಲಿ ಎಸೆದರು. ನಂತರ ಅವರು ಅಲ್ಲಿಯೆ ನಾರಾಯಣಮೂರ್ತಿಯ ಪ್ರತಿಷ್ಠಾಪನೆ ಮಾಡಿದರು.

ಆ ಸಂದರ್ಭದಲ್ಲಿ ಸಮಾಜೋಧಾರ್ಮಿಕ ಕಾರ್ಯಗಳಿಂದ ಪ್ರಸಿದ್ಧಳಾಗಿದ್ದ ದಾನಮ್ಮ, ತನ್ನ ಪತಿ ಸೋಮನಾಥನೊಂದಿಗೆ ಸಮೀಪದ ಆದವಾನಿಯಲ್ಲಿ ಲಿಂಗಾಯತ ಧರ್ಮಪ್ರಸಾರ ಕಾರ್ಯದಲ್ಲಿ ತೊಡಗಿದ್ದಳು. ಆಗ ಬ್ರಹ್ಮೇಶ್ವರ ಮಂದಿರದ ಪೂಜಾರಿ ವೀರಮಾಚಯ್ಯ ಎಂಬಾತ ದಾನಮ್ಮನ ಬಳಿ ಬಂದು, ನಡೆದ ಘಟನೆಯನ್ನು ವಿವರಿಸಿ ಸಹಾಯ ಯಾಚಿಸಿದ. ಆಗ ದಾನಮ್ಮ ಕೂಡಲೆ ಶಸ್ತ್ರಧಾರಿಯಾಗಿ ಅಲಂಪುರಕ್ಕೆ ಧಾವಿಸಿದಳು. ಅವಳ ಘರ್ಜನೆಗೆ ಹೆದರಿದ ಪರಮತೀಯರು ಓಡಿ ಹೋದರು. ವೀರ ದಾನಮ್ಮ ಅದೇ ಮಂದಿರದಲ್ಲಿ ಬ್ರಹ್ಮೇಶ್ವರ ಲಿಂಗವನ್ನು ಮರಳಿ ಸ್ಥಾಪಿಸಿದಳು. ಹೀಗೆ ಇದೊಂದು ಪವಾಡವಾಗಿ ಜನಮನದಲ್ಲಿ ಉಳಿಯಿತು.

ಶರಣೆ ದಾನಮ್ಮ ದಕ್ಷಿಣ ಭಾರತದಲ್ಲಿ ಧರ್ಮಪ್ರಸಾರ ಮಾಡುತ್ತ ಚೋಳರ ರಾಜಧಾನಿ ಕಂಚಿ ನಗರಕ್ಕೆ ಹೋದಳು. ಅಲ್ಲಿನ ಕಣಗಿಲ ಮಹಾರಾಜನು ಭವ್ಯವಾದ ವಿಷ್ಣುದೇವಾಲಯ ಕಟ್ಟಿಸಿ ವಿಷ್ಣುಪಂಥದವರಿಗೆ ಮಾತ್ರ ಮಂದಿರ ಪ್ರವೇಶಕ್ಕೆ ಅನುಮತಿ ನೀಡಿದ್ದನು. ಇದನ್ನರಿತ ದಾನಮ್ಮ ಆ ರಾಜನ ಅರಮನೆಗೆ ಹೋಗಿ 'ರಾಜನಿರುವುದು ಸರ್ವ ಜನಾಂಗಗಳ ಕಲ್ಯಾಣಕ್ಕಾಗಿ. ಇದುವೆ ರಾಜಧರ್ಮ' ಎಂದಳು. ಇದರಿಂದ ಕೋಪಿಷ್ಠನಾದ ರಾಜ ಅವಳನ್ನು ಬಂಧಿಸಲು ಮುಂದಾದನು. ಆಗ ಅವನ ದೇಹ ನಡುಗಿ ಕಣ್ಣು ಕಾಣಿಸದ ಹಾಗೆ ಆಯಿತು. ಆತ ಕೊನೆಗೆ ದಾನಮ್ಮನಿಗೆ ಶರಣೆಂದು

ಕ್ಷಮೆ ಕೇಳಿದ. ಅಲ್ಲದೆ ಅವಳ ದಿವ್ಯ ವ್ಯಕ್ತಿತ್ವಕ್ಕೆ ಮಾರುಹೋಗಿ ಅವಳಿಂದ ಇಷ್ಟಲಿಂಗ ದೀಕ್ಷೆ ಪಡೆದುಕೊಂಡ. ಹೀಗೆ ಈ ಎರಡು ಘಟನೆಗಳು ಅವಳ ಸಹಾಯಹಸ್ತ, ವೀರಗುಣ, ಧರ್ಮ ರಕ್ಷಣೆ ಮತ್ತು ಪ್ರಸಾರದಿಂದ ಕೂಡಿದ ಗಣಾಚಾರತ್ವದ ಪ್ರತೀಕವಾಗಿವೆ.

ಇಂಥ ಧೈರ್ಯ ಮತ್ತು ಸಹಾಯದ ಗುಣಗಳಿಂದಲೇ ದಾನಮ್ಮ ಪ್ರಸಿದ್ಧಳಾಗಿದ್ದಾಳೆ. ೧೨ನೇ ಶತಮಾನದಲ್ಲಿ ಅದೇ ಆಗ ಭರದಿಂದ ಪ್ರಾರಂಭವಾದ ಸಕಲಜೀವಾತ್ಮರಿಗೆ ಲೇಸನ್ನೇ ಬಯಸುವ ಲಿಂಗಾಯತ ಧರ್ಮವನ್ನು ಕಷ್ಟಕ್ಕೊಳಗಾದ ಜನಸಮುದಾಯಗಳ ಜನರು ಬಹಳ ಉತ್ಸಾಹದಿಂದ ಸ್ವೀಕರಿಸಿದರು. ಪ್ರಜ್ಞಾವಂತ ಸವರ್ಣೀಯರು ಕೂಡ ಈ ಹೊಸ ಧರ್ಮದ ಅನುಯಾಯಿಗಳಾದರು.

ಕಡಿಮೆ ಅವಧಿಯಲ್ಲಿ ಲಿಂಗಾಯತ ಧರ್ಮ ಭಾರಿ ಪ್ರಚಾರಕ್ಕೆ ಬಂದದ್ದು ಕೂಡ ಒಂದು ಪವಾಡದ ಹಾಗೆಯೆ ಆಗಿದೆ. ಆದರೆ ಬಸವಣ್ಣನವರು ಹೇಳಿದಂಥ ಅಗಮ್ಯ, ಅಗೋಚರ, ಅಪ್ರತಿಮ ಲಿಂಗದೇವರ ಪರಿಕಲ್ಪನೆ ಇನ್ನೂ ಜನಮಾನಸದಲ್ಲಿ ಆಳವಾಗಿ ಬೇರೂರಿರಲಿಲ್ಲ. ಹೀಗಾಗಿ ಬಸವಣ್ಣನವರ ಗುಡಿ ನಿರಾಕರಣೆ ಚಳವಳಿಯ ಮಹತ್ವ ಜನಸಮುದಾಯಕ್ಕೆ ಇನ್ನೂ ಗೊತ್ತಾಗಿರಲಿಲ್ಲ.

ಈ ಕಾರಣದಿಂದಲೇ ದಾನಮ್ಮ ಬ್ರಹ್ಮಲಿಂಗದ ಸ್ಥಾಪನೆ ಮಾಡಿದಳು ಮತ್ತು ಕಂಚಿಯ ರಾಜ ಕಟ್ಟಿಸಿದ ದೇವಸ್ಥಾನದಲ್ಲಿ ಎಲ್ಲರಿಗೂ ಪ್ರವೇಶ ಇರಬೇಕೆಂದು ವಾದಿಸಿದಳು. ಹೀಗೆ ಅವಳು ಮಾಡಿದ ವೀರೋಚಿತ ಕಾರ್ಯಗಳಿಗೂ ಪವಾಡದ ಲೇಪ ಹಚ್ಚಲಾಯಿತು.

ದಾನಮ್ಮ ಶರಣೆಯನ್ನು ಜನರು ದಾನಮ್ಮದೇವಿಯಾಗಿಸಿ ಭಕ್ತಿಭಾವದಿಂದ ನೋಡತೊಡಗಿದರು. ಗುಡ್ಡಾಪುರದಲ್ಲಿನ ದಾನಮ್ಮ ದೇವಿಯ ಸಮಾಧಿಗೆ ನೂರಾರು ಮೈಲಿ ದೂರದಿಂದ ಪಾದಯಾತ್ರೆ ಮಾಡುತ್ತ ಬಂದು ಹರಕೆ ತೀರಿಸುವ ಮತ್ತು ಹರಕೆ ಹೊರುವ ಸಾವಿರಾರು ಭಕ್ತರು ಕೂಡ ಇಂದಿಗೂ ಇದ್ದಾರೆ.

ಈ ಪುಸ್ತಕದ ವೈಶಿಷ್ಟ್ಯವೆಂದರೆ ಸರಾಗವಾಗಿ ಓದಿಸಿಕೊಂಡು ಹೋಗುವುದು. ೧೨ನೇ ಶತಮಾನದ ಶರಣ ಪರಿಸರದ ವಾತಾವರಣವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುವುದು. ಸಂದರ್ಭೋಚಿತ ವಚನ, ಜನಪದ ಸಾಹಿತ್ಯ ಮತ್ತು ಶಾಸನ ಸಾಹಿತ್ಯವನ್ನು ಬಳಸುವುದು. ಇತಿಹಾಸದ ಪ್ರಜ್ಞೆ ಮೂಡಿಸುವುದು. ಜನಮನದಲ್ಲಿ ಆಳವಾಗಿ ಬೇರೂರಿದ ಪವಾಡಗಳ ಹಿಂದಿನ ಭೌತಿಕ ಕಾರಣಗಳನ್ನು ಸೂಚ್ಯವಾಗಿ ಗುರುತಿಸುವುದು. ಸಮಾಜೋ

ಧಾರ್ಮಿಕ ಚಿಂತನೆಗಳನ್ನು ಸಮತೋಲನದಿಂದ ಮಂಡಿಸುವುದು. ಪವಾಡಗಳ ಮೇಲೆ ನಂಬಿಕೆ ಇಲ್ಲದವರು ಕೂಡ ಈ ಪುಸ್ತಕವನ್ನು ಓದಿ ದಾನಮ್ಮ ಶರಣೆಯ ಬಗ್ಗೆ ಅಭಿಮಾನ ತಾಳುವಂಥ ಶೈಲಿ ಮತ್ತು ವೈಚಾರಿಕತೆ ಹೊಂದಿರುವುದು ದಾನಮ್ಮಳ ವ್ಯಕ್ತಿತ್ವಕ್ಕೆ ನೈಜ ಮೆರುಗು ಕೊಟ್ಟ ಲೇಖಕಿ ಶ್ರೀಮತಿ ಜಯಶ್ರೀ ಸುಕಾಲೆ ಅವರು ಅಭಿನಂದನಾರ್ಹರು.

– ರಂಜಾನ್ ದರ್ಗಾ

ನಲ್ನುಡಿ

ಕನ್ನಡಮ್ಮನ ಕುವರಿಯಾಗಿ, ವಿಶೇಷವಾಗಿ ಬಸವನಾಡಿನ ಮಗಳಾಗಿ, ವಚನದೈಸಿರಿಯ ಬೆಳಕಾಗಿ, ಸದಾಕಾಲ ಇವುಗಳ ಚಿಂತನೆಯಲ್ಲೆ ಸಮಯವನ್ನು ಕಳೆಯುತ್ತಿರುವ ಲೇಖಕಿ ಬಗ್ಗೆ ತಿಳಿಯದಂತೆ ಗೌರವ ಮೂಡುವುದು. ಏತನ್ಮಧ್ಯೆ ದೊರೆತ ಕಾಲದಲ್ಲಿ ಶರಣ ಚಿಂತನೆಗೆ ಸಂಬಂಧಿಸಿದಂತೆ ನಾಟಕಗಳು, ರೂಪಕಗಳು, ಶರಣರ ಚರಿತ್ರೆ, ಶರಣರ ಜೀವಿತ ಕಾಲದ ಜಾಗಗಳನ್ನು ಹುಡುಕಿ ಅಲ್ಲಿ ದೊರೆತ ಕೆಲವೊಂದು ಐತಿಹ್ಯಗಳನ್ನು ಆಧರಿಸಿ, ಆ ಶರಣರ ಬಗ್ಗೆ ವಿಶೇಷ ರೂಪುರೇಶೆಯನ್ನು ಸಂಪಾದಿಸಿ ಪ್ರಕಟಿಸುವ ಹವ್ಯಾಸ ಹಾಗೂ ಹನಿಗವನಗಳನ್ನು ಪುಸ್ತಕ ರೂಪದಲ್ಲಿ ಹೊರತರುತ್ತಿರುವುದು ಅತ್ಯಂತ ಶ್ಲಾಘನೀಯ. ಪ್ರಸ್ತುತದಲ್ಲಿ ಗುಡ್ಡಾಪುರದ ದಾನಮ್ಮನ ಚರಿತ್ರೆಯನ್ನು ಬೆಳಕಿಗೆ ತರುತ್ತಿರುವುದು ಅಭಿನಂದಾರ್ಹ.

ಶರಣೆ ದಾನಮ್ಮ ಪೌರಾಣಿಕ ವ್ಯಕ್ತಿಯೂ ಅಲ್ಲ ಅಥವಾ ಕವಿಗಳ ಕಲ್ಪನೆಯ ಕೂಸೂ ಅಲ್ಲ. ಅವರು ಹನ್ನೆರಡನೇ ಶತಮಾನದಲ್ಲಿ ಬಸವಾದಿ ಶಿವಶರಣ ಸಮಾಕಾಲೀನರಾಗಿ ಬಾಳಿ ಶರಣ ಜೀವನವನ್ನು ನಡೆಸಿ ಐತಿಹಾಸಿಕ ವ್ಯಕ್ತಿಯೆನಿಸಿದ್ದಾರೆ. ಶರಣೆ ದಾನಮ್ಮನವರನ್ನು ಕುರಿತ ನಾಲ್ಕಾರು ಶಿಲಾಶಾಸನಗಳನ್ನು ನಾವು ಇಂದಿಗೂ ನೋಡಬಹುದಾಗಿದೆ. 'ಶಿವತತ್ವಚಿಂತಾಮಣಿ'ಯಂಥ ಕಾವ್ಯದಲ್ಲಿ ಧರ್ಮರಕ್ಷಕಳಾಗಿ, ವೀರಗಣಾಚಾರ ವೃತ್ತಿಯ ವೀರನಾರಿಯಾಗಿ ಕಂಗೊಳಿಸಿರುವುದನ್ನು ಕಾಣುತ್ತೇವೆ.

ಈ ಗುಡ್ಡವ್ವೆಯು ಷೋಡಶಗಣಕ್ಕೆ ಸಂಬಂಧಿಸಿದವರಾಗಿದ್ದು ಅದರ ನಾಯಕಿಯಾಗಿ ಕಾರ್ಯತತ್ಪರರಾಗಿದ್ದುದನ್ನು ಪಂಡಿತರ ಮತ. "ಕರಿಕರನಂ ಸೆಂಡಾಡುವರ್..." ಎಂಬ ಪದ್ಯವು ಅವರ ಕಲಿತನವನ್ನು ವ್ಯಕ್ತಪಡಿಸುತ್ತದೆ. ಶರಣೆ ದಾನಮ್ಮನವರ ಜೀವನವು ಚಲನಚಿತ್ರದ ಮೂಲಕ ಮಾಧ್ಯಮದಲ್ಲಿ ಚಿತ್ರೀಕರಣಗೊಂಡಿರುವುದು ಸ್ತುತ್ಯಾರ್ಹವಾಗಿದೆ. ಗುಡ್ಡಾಪುರದ ದೇವಾಲಯದಲ್ಲಿ ಸರ್ವಧರ್ಮ ಜಾತಿಯವರು ಒಪ್ಪುವ ಹಾಗೆ ಕಲ್ಯಾಣ ಮಹೋತ್ಸವವನ್ನು ಕೈಕೊಳ್ಳುತ್ತಿರುವುದು ಅಭಿನಂದಾರ್ಹವಾಗಿದೆ.

ಇಂದಿನ ಆಧುನಿಕ ಜಗತ್ತಿನಲ್ಲಿ ಕೂಡ ಶರಣೆ ದಾನಮ್ಮ ಬೋಧಿಸಿದ ಮೌಲ್ಯಗಳು ಅವಶ್ಯವೆಂದು ತೋರುತ್ತವೆ. ಶರಣೆ ದಾನಮ್ಮ ಬಸವಧರ್ಮದಲ್ಲಿ ಮಹಿಳೆಗೆ ನೀಡಿರುವ ಸ್ವಾತಂತ್ರ್ಯದ ಬಗ್ಗೆ ಪ್ರಾಮುಖ್ಯತೆಯನ್ನಿತ್ತು ಅದನ್ನು ಮುಂದುವರಿಸುವಂತೆ ಪ್ರತಿಪಾದಿಸಿದ್ದಾರೆ. ಶರಣೆ ದಾನಮ್ಮನವರು ಮನುಕುಲದ ಏಳ್ಗೆಗೆ ಅನನ್ಯವಾದ ಮಾನವೀಯತೆ ಮೆರೆದಿರುವುದನ್ನು ಅವರು ಕೈಗೊಂಡ ಸಾಮಾಜಿಕ ಕಾರ್ಯಗಳ ಮೂಲಕ ತಿಳಿಯಬಹುದು.

ಶರಣೆ ದಾನಮ್ಮನವರ ವಿಗ್ರಹವನ್ನು ನೋಡಿದಾಗ ಹಣೆಯ ಮೇಲೆ ವಿಭೂತಿ ಮೈತುಂಬ ರುದ್ರಾಕ್ಷಿಯ ಸರಗಳು ರಾರಾಜಿಸುತ್ತವೆ. ಎದೆಯ ಮೇಲೆ ಇಷ್ಟಲಿಂಗವಿರುವ ಕರಡಿಗೆ (ಕೊರಳಲ್ಲಿ ಧರಿಸುವ ಲಿಂಗದ ಪೆಟ್ಟಿಗೆ) ಎದ್ದು ಕಾಣುತ್ತದೆ. ವಿಶೇಷವಾಗಿ ಶರಣೆ ದಾನಮ್ಮನವರ ಬಲಭಾಗದಲ್ಲಿ ಗಣಾಚಾರದ ಸಂಕೇತವಾಗಿ ಚಿಕ್ಕ ಬೆತ್ತವನ್ನು ಇಟ್ಟಿರುತ್ತಾರೆ. ಆಗ ದಾನಮ್ಮ ಶರಣೆಯಂತೆ, ವಾತ್ಸಲ್ಯ ಮಾತೆಯಂತೆ, ತಪ್ಪಿತಸ್ಥರಿಗೆ ಓಜುಗಟ್ಟಿಗೆಯಿಂದ ಬೆದರಿಸಿ ಸರಿ ದಾರಿಗೆ ತರುವವಳಂತೆ ಕಾಣುತ್ತಾರೆ.

ಬಸವಾದಿ ಶರಣರು ತ್ರಿಕಾಲ ಇಷ್ಟಲಿಂಗ ಪೂಜೆಯನ್ನು ಮಾಡುತ್ತಿದ್ದರು. ಅದನ್ನೇ ಶರಣೆ ದಾನಮ್ಮ ತಾಯಿಯವರೂ ಪರಿಪಾಲಿಸುತ್ತಿದ್ದರು. ಇದರ ಪ್ರತೀಕವಾಗಿ ಅವರ ದೇವಾಲಯದಲ್ಲಿಯೂ ತ್ರಿಕಾಲ ಇಷ್ಟಲಿಂಗ ಪೂಜೆಯನ್ನು ಸಹಜವಾಗಿ ಮಾಡುತ್ತಿರುವುದು ಅತ್ಯಂತ ಸ್ವಾಗತಾರ್ಹ. ಶರಣೆ ದಾನಮ್ಮನವರು ಶರಣಧರ್ಮದ ಗಣಾಚಾರ ಪರಿಪಾಲನೆಯ ಜೊತೆಗೆ ತ್ರಿಕಾಲ ಪೂಜಾ ನಿಷ್ಠೆಯೊಂದಿಗೆ ಶಿವಯೋಗಿಣಿ ಯಾಗಿದ್ದರೆಂಬುದನ್ನು ಕಾಣಬಹುದು.

ಶರಣಳಾಗಿ ಬಾಳಿ ಬದುಕಿದ ಗುಡ್ಡಾಪುರದ ದಾನಮ್ಮನವರಿಗೆ ಮೌಢ್ಯತೆಯ ರೀತಿಯಲ್ಲಿ ವೈದಿಕ ಆಚರಣೆಗಳನ್ನು ಏತಕ್ಕಾಗಿ ಪಾಲಿಸುತ್ತಿರುವರು ಎಂಬ ವಿಚಾರ ಮನಸ್ಸಿಗೆ ಬೇಸರವುಂಟು ಮಾಡಿದೆ. ಶರಣೆ ದಾನಮ್ಮನವರ ಚರಿತ್ರೆಯನ್ನು ಓದಿದಾಗ ವಚನಗಳನ್ನು ಹಾಡುವುದು ಇರಬಹುದು, ಶಿವಯೋಗಿ ಸಿದ್ಧರಾಮೇಶ್ವರರೊಂದಿಗೆ ಮಾತನಾಡಿ ತನ್ನ ಮನದಲ್ಲಿದ್ದ ಕಳವಳವನ್ನು ಪರಿಹರಿಸಿಕೊಂಡಿದ್ದಲ್ಲದೆ ಅವರಿಂದ ಲಿಂಗದೀಕ್ಷೆಯನ್ನೂ ಪಡೆದಿರುವುದು ಅತ್ಯಂತ ಮಹತ್ವದ್ದಾಗಿದೆ. ಸಿದ್ಧರಾಮೇಶ್ವರರಿಂದ ರಚಿತವಾಗಿರುವ ಮಿಶ್ರಸ್ತೋತ್ರ ತ್ರಿವಿಧಿಯಲ್ಲಿ ಧೀರ ಗುಡ್ಡವ್ವೆ ಎಂದು ನಮೂದಿಸಿರುವುದನ್ನು ಕಾಣುತ್ತೇವೆ. ಒಂದು ದಿನ ಬಸವ ಕಲ್ಯಾಣದ ಉದ್ಯಾನವನದಲ್ಲಿ ನೀಲಾಂಬಿಕಾ ತಾಯಿಯವರೊಂದಿಗೆ ಬಸವೇಶ್ವರರನ್ನು ಭೇಟಿಯಾದ ಸಂದರ್ಭದಲ್ಲಿ ಅನುಭವ ಮಂಟಪಕ್ಕೆ ಬರಬೇಕೆಂದು ಅವರಿಂದ ಆಹ್ವಾನ ಪಡೆದದ್ದು ಸಾಮಾನ್ಯ ವಿಚಾರವಲ್ಲ.

ಕಾಶ್ಮೀರದಿಂದ ಬಂದಂತಹ ಮೋಳಿಗೆ ಮಾರಯ್ಯನವರಿಂದ ವಚನಗಳನ್ನು ಅರಿತಿದ್ದು, ಮಹಾದೇವಿಯವರ ಹಸ್ತದಿಂದ ತಯಾರಿಸಿದ ಅಂಬಲಿಯನ್ನು ಸ್ವೀಕರಿಸಿದ್ದು, ಅಕ್ಕ ಮಹಾದೇವಿಯವರೊಂದಿಗೆ ಮದುವೆಯ ವಿಚಾರದ ಬಗ್ಗೆ ದುಗುಡವನ್ನು ಪರಿಹರಿಸಿಕೊಂಡಿದ್ದು, ಅನುಭವ ಮಂಟಪದಲ್ಲಿ ಅಲ್ಲಮ ಪ್ರಭುದೇವರು ಮತ್ತು ಉಳಿದೆಲ್ಲರಿಂದಲೂ ಮಹಾದಾನಿ, ದಾನಶಿರೋಮಣಿ, ವರದಾನಿ ಗುಡ್ಡವ್ವೆ ಎಂಬ ಬಿರುದಾಂಕಿತವನ್ನು ಪಡೆದದ್ದು ಇವೆಲ್ಲವೂ ಅವರ ಸಾಧನೆಯ ಫಲವಲ್ಲದೆ ಮತ್ತೇನು???? ಇಂತಹ ವಿಚಾರಗಳನ್ನು ಏಕೆ ಪರಿಗಣಿಸುವುದಿಲ್ಲ ಎಂಬುದು ದುರ್ದೈವವೆನಿಸುವುದು.

ಸಾಧನೆಯ ಮೂಲಕ ಪರುಷ ದೃಷ್ಟಿಯನ್ನು ಪಡೆದಂತಹ ದಾನಮ್ಮನವರಿಂದ ಅನೇಕ ರೋಗರುಜಿನಗಳಿಗೆ ತುತ್ತಾಗಿದ್ದವರನ್ನು ಗುಣಪಡಿಸಿದ್ದು, ನಿರ್ಗತಿಕರಿಗೆ ಆಶ್ರಯ ನೀಡಿದ್ದೂ ಮುಂತಾದ ಕಾರ್ಯಗಳೆಲ್ಲವೂ ವಿಶ್ವಗುರು ಬಸವಣ್ಣನವರು ತೋರಿಸಿದ ಹಾದಿ. ಅದನ್ನು ಅನುಸರಿಸಿಯೇ ಮುನ್ನಡೆದವರು ಶರಣೆ ದಾನಮ್ಮತಾಯಿಯವರು. ಅವರ ಆಚಾರ ವಿಚಾರಗಳೆಲ್ಲವೂ ಶರಣರು ತೋರಿಸಿದ ಮಾರ್ಗವಾಗಿತ್ತೇ ವಿನಃ ಬೇರೆಯದಲ್ಲ.

ಆದರೆ, ತತ್ಕಾಲದಲ್ಲಿ ಆಚರಿಸುತ್ತಿರುವ ಆಚರಣೆಗಳು ಕೆಲವೊಂದನ್ನು ಹೊರತುಪಡಿಸಿ ಶರಣೆ ದಾನಮ್ಮನವರು ಬಾಳಿ ಬದುಕಿದ ಹಾದಿಗೆ ವಿರುದ್ಧವಾದ ಆಚರಣೆಗಳಿಗೆ ಇತಿಶ್ರೀ ಹಾಡಿ ಇನ್ನು ಮುಂದೆಯಾದರೂ ಸರಳವಾಗಿ ಶರಣರ ಪಥದಲ್ಲಿ ನಡೆಯಬಹುದೆಂಬ ಮಹದಾಸೆಯಿಂದ ಕೆಲವೊಂದು ನುಡಿಗಳನ್ನು ಅರ್ಪಿಸಿದೆ.

– ಭಾರತೀ ಎಂ ಕೆಂಪಯ್ಯ
ಬೆಂಗಳೂರು.

ಮುನ್ನುಡಿ

ಹನ್ನೆರಡನೆಯ ಶತಮಾನದ ಕರ್ನಾಟಕದ ಧಾರ್ಮಿಕ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡುವ ಕಾಲ. ಧರ್ಮಗುರು ಬಸವಣ್ಣನವರ ನೇತೃತ್ವದಲ್ಲಿ ಸಾವಿರಾರು ಶರಣ-ಶರಣೆಯರು ನಡೆಸಿದ ಸಮಾಜೋ-ಧಾರ್ಮಿಕ ಚಳುವಳಿಯಿಂದ ಪ್ರಜಾಸತ್ತಾತ್ಮಕ ಮೌಲ್ಯಗಳು ಆ ಕಾಲದಲ್ಲಿ ತಲೆ ಎತ್ತಿ ನಿಲ್ಲುವಂತಾದವು. ಜಾತಿ, ಮತ-ಪಂಥ, ವರ್ಗ-ವರ್ಣ ಭೇದಗಳನ್ನು ನಿರಾಕರಿಸಿ ಸರ್ವರಿಗೂ ಸಮಾನ ಅವಕಾಶಗಳು ಲಭ್ಯವಾಗುವಂತಾಯಿತು ಮಹಿಳೆಯರಿಗೂ ಪುರುಷರಷ್ಟೇ ಧಾರ್ಮಿಕ ಸ್ವಾತಂತ್ರ್ಯ ಲಭಿಸಿ, ಅವರಲ್ಲಿ ಅನೇಕರು ಸಾಧನೆಯ ಉತ್ತುಂಗಕ್ಕೇರಿ ಅನುಭಾವಿಗಳಾಗಿ ಬದುಕು ಸಾರ್ಥಕಪಡಿಸಿಕೊಳ್ಳಲು ಸಾಧ್ಯವಾಯಿತು. ಇಂತಹ ಅನುಭಾವಿ ಶರಣೆಯರಲ್ಲಿ 'ಗುಡ್ಡಾಪುರದ ದಾನಮ್ಮ' ಅಗ್ರಗಣ್ಯಳಾಗಿದ್ದಾಳೆ.

ಸಂಸಾರವು ವ್ಯಕ್ತಿಯ ಆಧ್ಯಾತ್ಮಿಕ ಸಾಧನೆಗೆ ಬಂಧನಕಾರಿಯಲ್ಲ. ಸಂಸಾರದಲ್ಲಿದ್ದೂ ಸದ್ಗತಿಯನ್ನು ಸಾಧಿಸಬಹುದು ಎಂಬುದನ್ನು ಶಿವಶರಣೆ ಗುಡ್ಡಾಪುರದ ದಾನಮ್ಮ ತನ್ನ ಬದುಕಿನಿಂದ ತೋರಿಸಿಕೊಟ್ಟಿದ್ದಾಳೆ. ಸಂಸಾರ ಮತ್ತು ಆಧ್ಯಾತ್ಮಗಳೆರಡನ್ನೂ ಜೊತೆ ಜೊತೆಯಾಗಿಯೇ ಸರಿದೂಗಿಸಿಕೊಂಡು ಹೋದುದು ಈ ಶರಣೆಯ ಹಿರಿಮೆ. ನಿಸ್ವಾರ್ಥ ಮನೋಭಾವ, ಮಾನವೀಯ ಅನುಕಂಪಗಳ ಜೊತೆಗೆ ಆಚಾರ ಮತ್ತು ವಿಚಾರ ಶುದ್ಧಿಯನ್ನು ಪ್ರತಿಪಾದಿಸಿದ ದಾನಮ್ಮ ಪ್ರಾಮಾಣಿಕ, ಪಾರದರ್ಶಕ ವ್ಯಕ್ತಿತ್ವವನ್ನು ರೂಪಿಸಿಕೊಂಡಿರುವುದು ವಿಶೇಷ. ಇತಿಹಾಸದಲ್ಲಿ ಲಿಂಗಮ್ಮ, ಗುಡ್ಡವ್ವೆ, ಗುಡ್ಡಾಂಬಿಕೆ ಎಂಬ ನಾಮಾಂಕಿತಗಳಿಂದ ಗುರುತಿಸಿಕೊಂಡಿರುವ ಶರಣೆ ದಾನಮ್ಮನನ್ನು ಹನ್ನೆರಡನೆಯ ಶತಮಾನದ ವಚನಕಾರರು, ಹರಿಹರಾದಿ ಕವಿಗಳು ಮುಕ್ತವಾಗಿ ಪ್ರಶಂಸಿಸಿದ್ದಾರೆ. ಪಾಲ್ಕುರಿಕೆ ಸೋಮನಾಥ ಹಾಗೂ ಭೀಮಕವಿಯ ಬಸವ ಪುರಾಣಗಳಲ್ಲಿ, ಲಕ್ಕಣ್ಣ ದಂಡೇಶನ ಶಿವತತ್ತ್ವ ಚಿಂತಾಮಣಿಯಲ್ಲಿ, ಪದ್ಮಣಾಂಕನ ಪದ್ಮರಾಜ ಪುರಾಣಗಳಲ್ಲಿ ಶರಣೆ ದಾನಮ್ಮನ ವ್ಯಕ್ತಿಚಿತ್ರಣದ ವಿವರಗಳು ಲಭ್ಯವಾಗುತ್ತವೆ. ಚೆನ್ನಬಸವ ಪುರಾಣದಲ್ಲಿ ಕವಿ ವಿರುಪಾಕ್ಷ ಪಂಡಿತನು ಗುಡ್ಡಾಪುರದ ದಾನಮ್ಮನನ್ನು ಸಾಂದರ್ಭಿಕವಾಗಿ

ಉಲ್ಲೇಖಿಸಿದ್ದಾನೆ. ಬಸವಲಿಂಗ ಕವಿ, ಷಡಕ್ಷರದೇವ, ಶಾಂತಲಿಂಗ ದೇಶಿಕ, ಸಿದ್ಧನಂಜೇಶನಂತಹ ಕವಿಗಳು ತಮ್ಮ ಕಾವ್ಯಗಳಲ್ಲಿ ಸ್ತುತಿಸುವಲ್ಲಿ ನಮ್ಮ ಜನಪದರೂ ಹಿಂದೆ ಬಿದ್ದಿಲ್ಲ. ಜಾನಪದ ತ್ರಿಪದಿಗಳಲ್ಲಿ, ಕೋಲಾಟ ಮತ್ತು ಜೋಗುಳ ಪದಗಳಲ್ಲಿ, ಹಂತಿ ಹಾಡುಗಳಲ್ಲಿ ಜನಪದರು ದಾನಮ್ಮನನ್ನು ಮನದುಂಬಿ ಕೊಂಡಾಡಿರುವುದನ್ನು ಕಾಣಬಹುದಾಗಿದೆ. ಆಧುನಿಕ ಕೃತಿಗಳಲ್ಲಿ ಶಿವಶಂಕರ ಕವಿಯ 'ವೀರಗುಡ್ಡಾಂಬಿಕೆ ಚರಿತ್ರೆ' ಶಿವಶರಣೆ ದಾನಮ್ಮನನ್ನು ಕುರಿತು ವಿವರಣೆ ನೀಡಿದ ಪ್ರಥಮ ಕೃತಿಯಾಗಿದೆ. ಡಾ. ಫ.ಗು. ಹಳಕಟ್ಟಿ, ಡಾ.ಎಸ್.ಎಂ. ಹುಣಸ್ಯಾಳ, ತ.ಸು.ಶಾಮರಾಯರು ಈ ಶಿವಶರಣೆಯ ಉದಾತ್ತ ಬದುಕನ್ನು ಕುರಿತು ಬರೆದು ಪ್ರಕಟಿಸಿದ್ದಾರೆ. ಪುಟ್ಟರಾಜ ಕವಿ ಗವಾಯಿಗಳು, ರಾಮಣ್ಣ ಬ್ಯಾಟಿ ಅವರೂ ದಾನಮ್ಮನನ್ನು ಕುರಿತು ಷಟ್ಪದಿಗಳಲ್ಲಿ ಕಾವ್ಯ ರಚಿಸಿದ್ದಾರೆ. 'ದಾನದಾಸೋಹಿ ದಾನಮ್ಮ' ಕಾದಂಬರಿ ಶೈಲಿಯ ಕೃತಿ ರಚಿಸಿದ ಶ್ರೀಮತಿ ಶಾಂತಾದೇವಿ ಮಾಳವಾಡ, 'ವೀರಗಣಾಚಾರಿ ಗುಡ್ಡಾಪುರ ದಾನಮ್ಮ' ಎಂಬ ಹೆಸರಿನಲ್ಲಿ ಚರಿತ್ರೆ ಬರೆದ ಸಿದ್ಧಣ್ಣ ಉತ್ನಾಳ ಅವರೀರ್ವರೂ ಸರಳವಾಗಿ ದಾನಮ್ಮನ ಬದುಕಿನ ವಿವರಗಳನ್ನು ಓದುಗರಿಗೆ ಒದಗಿಸಿದ್ದಾರೆ. ಆ ಮೂಲಕ ಅವರು ಭಕ್ತ ಜನಸಂದೋಹಕ್ಕೆ ಮಹದುಪಕಾರ ಮಾಡಿದ್ದಾರೆ.

ಕರ್ನಾಟಕ, ಆಂಧ್ರ, ತೆಲಂಗಾಣ ಮತ್ತು ಮಹಾರಾಷ್ಟ್ರಗಳಲ್ಲಿ ಅಪಾರ ಭಕ್ತಸಮುದಾಯವನ್ನು ಹೊಂದಿದ ದಾನದಾಸೋಹಿ ದಾನಮ್ಮದೇವಿ ಬರೆದಷ್ಟು ಬರೆಯಿಸಿಕೊಳ್ಳುವ, ಓದಿದಷ್ಟು ಓದಿಸಿಕೊಳ್ಳುವ ಅಪರೂಪದ ವ್ಯಕ್ತಿತ್ವದ ಶಿವಶರಣೆ. ಪ್ರಾರ್ಥಿಸಿದವರ ಇಷ್ಟಾರ್ಥ ಸಿದ್ಧಿಯನ್ನು ಈಗಲೂ ಈಡೇರಿಸುವವಳು ಎಂಬ ಪ್ರತೀತಿಯನ್ನು ಹೊಂದಿದ ಈ ಶರಣೆಯನ್ನು ಕುರಿತು ಆಧುನಿಕರು ಭಕ್ತಿ ಭಾವದಿಂದ, ಐತಿಹಾಸಿಕ ಪ್ರಜ್ಞೆಯಿಂದ ಕೃತಿಗಳನ್ನು ರಚಿಸಿ ಕೃತಾರ್ಥರಾಗಿದ್ದಾರೆ. ಹಾಗೆ ಇತ್ತೀಚೆಗೆ ರಚನೆಯಾದ ಕೃತಿಗಳಲ್ಲಿ ಶರಣೆ ಜಯಶ್ರೀ ಸುಕಾಲೆ ರಚಿಸಿದ 'ವೀರಶರಣೆ ಗುಡ್ಡಾಪುರ ದಾನಮ್ಮ' ಪ್ರತಿಯೊಬ್ಬರೂ ಅವಲೋಕಿಸಲೇಬೇಕಾದ ಮಹತ್ಕೃತಿ. ತನ್ನ ಕರ್ಣಾಟ ಭಾರತ ಕಥಾಮಂಜರಿಯನ್ನು ಕುರಿತು ಕುಮಾರವ್ಯಾಸನು 'ಅರಸುಗಳಿಗಿದು ವೀರ, ದ್ವಿಜರಿಗೆ ಪರಮ ವೇದದ ಸಾರ, ಯೋಗೀಶ್ವರರ ತತ್ತ್ವವಿಚಾರ' ಎಂದು ಹೇಳಿದಂತೆ ಪ್ರಸ್ತುತ ಜಯಶ್ರೀ ಸುಕಾಲೆ ಅವರ ಕೃತಿಯೂ ಕೂಡ ಎಲ್ಲ ವರ್ಗದವರಿಗೂ ಪ್ರಿಯವಾದ ಮತ್ತು ಅವಶ್ಯಕವಾದ ಕೃತಿ ಎನಿಸಿದೆ. ಭಕ್ತರಿಗೆ, ಸಾಮಾನ್ಯ ಓದುಗರಿಗೆ, ಸಾಹಿತಿ ಸಂಶೋಧಕರಿಗೆ ಈ ಕೃತಿ ಅತ್ಯುಪಯುಕ್ತವಾಗಿದೆ. ಭಕ್ತಿಯ ಪಾರಮ್ಯ, ತತ್ತ್ವಗಳ ವಿವರಣೆ, ಇತಿಹಾಸದ ಅವಲೋಕನ, ಶಿವಶರಣರ ಚರಿತ್ರೆ, ಸಂಭಾಷಣೆ ನುಡಿಮುತ್ತು ಹೀಗೆ ಏನೆಲ್ಲವನ್ನೂ ಒಳಗೊಂಡಿರುವ ಕೃತಿ ಅನೇಕ ದೃಷ್ಟಿಯಲ್ಲಿ ಓದುಗರ ಸ್ಪಂದನೆಗೂ ಒಳಗಾಗುತ್ತದೆ.

ಬಸವಾದಿ ಶರಣರ ಖ್ಯಾತಿಯನ್ನು ತಿಳಿದ ಲಿಂಗಮ್ಮ ಕಲ್ಯಾಣದತ್ತ ಬೆಳೆಸುವ ಪಯಣ, ಅಲ್ಲಿರುವ ಅನುಭವ ಮಂಟಪ, ಅಲ್ಲಿ ನಡೆಯುವ ಕಾಯಕ–ದಾಸೋಹ, ಸಮಾನತೆಗಳ ಚಿಂತನೆ ಮುಂತಾದ ವಿಷಯಗಳನ್ನು ವಸ್ತುನಿಷ್ಠವಾಗಿ ತಿಳಿಸುವ ಶರಣೆ ಜಯಶ್ರೀ ಸುಕಾಲೆ ಅವರು ಚರಿತ್ರೆಯ ಮೂಲಕ ಲಿಂಗಾಯತ ಧರ್ಮದ ಬಹುಮುಖ್ಯ ಅಂಗಗಳಾಗಿರುವ ಅಷ್ಟಾವರಣ, ಪಂಚಾಚಾರ, ಷಟ್ಸ್ಥಲಗಳನ್ನು ವಿವರಿಸಿರುವುದಲ್ಲದೆ ಇಷ್ಟಲಿಂಗ ದೀಕ್ಷೆ ಹೊಂದಿದ ಲಿಂಗಮ್ಮ ಶರಣ ಸಂಗದಲ್ಲಿ ಅನುಭಾವಿಯಾಗಿರುವುದನ್ನು, ಆತ್ಮೋನ್ನತಿಯ ಮಾರ್ಗವನ್ನು ಕಂಡುಕೊಂಡಿರುವುದನ್ನು, ದಾನಮ್ಮಳಾಗಿ ಬಸವಾದಿ ಶರಣರಿಂದ ನಾಮಕರಣಗೊಂಡಿರುವುದನ್ನು ತುಂಬ ವಿವರವಾಗಿ ತಿಳಿಸಿದ್ದಾರೆ. ಶಿವಯೋಗ ಸಾಧನೆಯ ಉನ್ನತ ಸ್ಥಿತಿಯನ್ನು ತಲುಪಿದ ದಾನಮ್ಮ ರೋಗಿಗಳ ರೋಗ ನಿವಾರಿಸಿರುವುದನ್ನು ಗಮನಿಸಿದರೆ ಅವಳು ಕರುಣಾಮಯಿ ಎಂದೆನಿಸದಿರದು. ಶಿವಭಕ್ತ ಸೋಮನಾಥನನ್ನು ಮದುವೆಯಾದ ಈ ಶರಣೆ ಮದುವೆಯೂ ಸದ್ಗತಿಗೆ, ಆಧ್ಯಾತ್ಮ ಸಾಧನೆಗೆ ಪೂರಕವಾದುದೆಂಬುದನ್ನು ತನ್ನ ಬದುಕಿನಿಂದ ತೋರಿಸಿಕೊಟ್ಟಿದ್ದಾಳೆ. ಶರಣರ ತತ್ತ್ವಪ್ರಸಾರ ಮತ್ತು ರಕ್ಷಣೆಗಾಗಿ ವೀರಗಣಾಚಾರ ವ್ರತಿಯಾಗಿ ಆಸೇತು ಹಿಮಾಚಲದವರೆಗೆ ಸಂಚರಿಸಿದ ಈ ಮಹಾತಾಯಿ ಭಕ್ತರ ಕಾಮಧೇನು, ಕಲ್ಪವೃಕ್ಷವಾಗಿ ಇಷ್ಟಾರ್ಥಗಳನ್ನು ನೆರವೇರಿಸುತ್ತ ಗುಡ್ಡಾಪುರದಲ್ಲಿ ನೆಲೆನಿಂತ ವಿವರಗಳು ಕೃತಿಯಲ್ಲಿ ಮನೋಜ್ಞವಾಗಿ ಮೂಡಿಬಂದಿವೆ. ಅಪ್ಪ ಬಸವಣ್ಣನವರ ಪರಿಕಲ್ಪನೆಯ ಇಷ್ಟಲಿಂಗವನ್ನು ಭಕ್ತರ ಕರಕಮಲದಲ್ಲಿಟ್ಟು ಮಹಾಮಂತ್ರವನ್ನು ಅನುಗ್ರಹಿಸಿದ ದಾನಮ್ಮ ಇಷ್ಟಲಿಂಗಯೋಗದ ನೆಲೆ–ಕಲೆಗಳನ್ನು ತಿಳಿಸುತ್ತ ತಾನೇ ಸ್ವತಃ ಆನಂದವದನೆಯಾಗಿ, ಲಿಂಗದಲ್ಲಿ ನೆಟ್ಟನೋಟವಾಗಿ ಗಾಳಿ ಗಂಧವನಪ್ಪಿದಂತೆ, ಬಯಲು ಬಯಲನಪ್ಪಿದಂತೆ ಬೆಳಗು ಬೆಳಗನಪ್ಪಿದಂತೆ, ಬೆಳಗು ಬೆಳಗನಪ್ಪಿ ಮಹಾಬೆಳಗಾದಂತೆ ಲಿಂಗೈಕ್ಯ ಸ್ಥಿತಿಯನ್ನು ಹೊಂದುವ ಆ ಸನ್ನಿವೇಶವು ಜಯಶ್ರೀ ಅವರ ಸಮರ್ಥ ಅಭಿವ್ಯಕ್ತಿಗೆ ನಿದರ್ಶನವಾಗಿದೆ. "ತನುವನ್ನು ಜನಕಲ್ಯಾಣಕ್ಕೆ, ಮನವನ್ನು ದೇವನೆನಹಿಗೆ ಅರ್ಪಿಸಿ ಸೋಮೇಶ್ವರನ ಪಾದಕ್ಕೆ ಅರ್ಪಿತಳಾದ ದಾನಮ್ಮ ನಿನ್ನ ಪಾದಕ್ಕೆ ನಮೋ ನಮೋ" ಎನ್ನುವ ಪತಿ ಸೋಮನಾಥನ ನುಡಿಗಳು ಶರಣಧರ್ಮಕ್ಕೆ ಅನುಗುಣವಾಗಿವೆ.

ಶರಣೆ ಜಯಶ್ರೀ ಸುಕಾಲೆ ಅವರ ಈ ಕೃತಿಯ ಮತ್ತೊಂದು ವೈಶಿಷ್ಟ್ಯವೆಂದರೆ – ಗುಡ್ಡಾಪುರ ಕ್ಷೇತ್ರದ ಭವ್ಯ ಪರಂಪರೆ, ತ್ರಿಕಾಲ ಪೂಜೆ, ಹೋಳಿಗೆ ನೈವೇದ್ಯ, ದಾನಮ್ಮನನ್ನು ಮನೆಯ ದೇವತೆಯಾಗಿಸಿಕೊಂಡಿರುವ ಮನೆಗಳಲ್ಲಿ ನಡೆದು ಬಂದಿರುವ ಆಚರಣೆಗಳು ಹಾಗೂ ಶ್ರಾವಣಮಾಸದ ಆಚರಣೆಗಳು, ಛಟ್ಟಿ ಅಮವಾಸ್ಯೆಯ ಜಾತ್ರೆ–ದೀಪೋತ್ಸವಗಳು, ಕ್ಷೇತ್ರದಲ್ಲಿ ಇಂದಿಗು ನಡೆಯುತ್ತಿರುವ ಹರಕೆ, ದೀಡನಮಸ್ಕಾರ, ಉರುಳು ಸೇವೆಗಳು,

ಹಾಗೆಯೇ ತುಲಾಭಾರ ಮತ್ತು ಪಲ್ಲಕ್ಕಿ ಸೇವೆಗಳ ಮಾರ್ಮಿಕ ವಿವರಣೆ ನೀಡಿರುವುದು. ಭಕ್ತರು ಶ್ರೀಶೈಲ ಕ್ಷೇತ್ರಕ್ಕೆ ಪಾದಯಾತ್ರೆ ಕೈಕೊಳ್ಳುವಂತೆ ಗುಡ್ಡಾಪುರ ಕ್ಷೇತ್ರಕ್ಕೂ ಪಾದಯಾತ್ರೆ ಕೈಕೊಳ್ಳುತ್ತಿರುವುದನ್ನು ಭಕ್ತರು ಅಲ್ಲಲ್ಲಿ ದಾನಮ್ಮನ ಹೆಸರಿನಲ್ಲಿ ಕ್ಷೇತ್ರಗಳನ್ನು ನಿರ್ಮಿಸಿಕೊಂಡು ಪೂಜಾದಿ ಕೈಂಕರ್ಯಗಳನ್ನು ನೆರವೇರಿಸುತ್ತಿರುವುದನ್ನು ವಿಸ್ತೃತವಾಗಿ ತಿಳಿಸಿಕೊಡಲಾಗಿದೆ. ಕೃತಿಯ ಕೊನೆಯಲ್ಲಿರುವ ಶಾಸನಗಳ ವಿವರ ಸಂಶೋಧಕರ ಗಮನಸೆಳೆದರೆ, ನೂರೆಂಟು ನಾಮಾವಳಿ, ಮಂಗಳಾರತಿಯ ಪದಗಳು ಭಕ್ತರಿಗೆ ಅತ್ಯುಪಯುಕ್ತವೆನಿಸಿವೆ.

ಶರಣೆ ಜಯಶ್ರೀ ಸುಕಾಲೆ ಅವರು ಕೃತಿಯುದ್ದಕ್ಕೂ ಸಾಂದರ್ಭಿಕವಾಗಿ ಬಳಸಿಕೊಂಡಿರುವ ಶರಣ–ಶರಣೆಯರ ವಚನಗಳು ಕವಿ–ಸಾಹಿತಿಗಳ ಮೌಲಿಕ ನುಡಿಮುತ್ತುಗಳು ಅತ್ಯಂತ ಪ್ರಸ್ತುತವಾಗಿವೆ. ಕೃತಿಯು ಕಾದಂಬರಿಯಂತೆ ಸರಾಗವಾಗಿ ಓದಿಸಿಕೊಂಡು ಹೋಗುವುದಲ್ಲದೆ ಪ್ರವಾಸಕಥನವಾಗಿ ವಿವಿಧ ಕ್ಷೇತ್ರಗಳನ್ನು ಓದುಗರಲ್ಲಿ ಪರಿಚಯಿಸುತ್ತದೆ. ಲೇಖಕಿಯ ನಿರೂಪಣೆಯ ಶೈಲಿ ಲಾಲಿತ್ಯಪೂರ್ಣ ಪದಪುಂಜಗಳಲ್ಲಿ ನಿರರ್ಗಳವಾಗಿ ಹರಿದು ಓದುಗರನ್ನು ಶಿವಶರಣರ ಲೋಕದತ್ತ ಕೊಂಡೊಯ್ಯುತ್ತದೆ. ಇದಕ್ಕೆ ಕಾರಣ ಇದು ಶರಣೆ ದಾನಮ್ಮನ ಚರಿತ್ರೆಯೊಂದಿಗೆ ಇತರ ಶರಣರನ್ನೂ ಮತ್ತು ಅವರ ಜೀವನಾದರ್ಶಗಳನ್ನು ಪರಿಚಯಿಸುವಲ್ಲಿ ಸಮರ್ಥವಾಗಿರುವುದು. ಅತ್ಯಂತ ಸತ್ವಪೂರ್ಣವಾದ ಕೃತಿಯನ್ನು ರಚಿಸಿ ಶರಣಸಾಹಿತ್ಯವನ್ನು ಮತ್ತಷ್ಟು ಶ್ರೀಮಂತಗೊಳಿಸಿದ ಶರಣೆ ಜಯಶ್ರೀ ನಮ್ಮೆಲ್ಲರ ಅಭಿನಂದನೆಗೆ ಅರ್ಹರಾಗಿದ್ದಾರೆ. ಅವರಿಗೆ ಉತ್ತರೋತ್ತರ ಶುಭವನ್ನು ಹಾರೈಸುತ್ತೇವೆ.

ಜಯಬಸವ

ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು
ಎಡೆಯೂರು ಶ್ರೀ ಜಗದ್ಗುರು ತೋಟದಾರ್ಯ ಸಂಸ್ಥಾನಮಠ,
ಡಂಬಳ–ಗದಗ

ಪ್ರಕಾಶಕರ ನುಡಿ

ಬಸವಾದಿ ಶರಣರು ಒಂದೆಡೆ ಇಷ್ಟಲಿಂಗ ಪೂಜೆ, ಪ್ರಾಣಲಿಂಗ ಪೂಜೆ, ಭಾವಲಿಂಗ ಪೂಜೆಯೊಂದಿಗೆ ಸಾಧನೆಗೈವ ಸಾಧಕರಾದರೆ ಇನ್ನೊಂದೆಡೆ ವರ್ಗ, ವರ್ಣ, ಲಿಂಗ ಭೇದವಿಲ್ಲದ ಮತ್ತು ಶೋಷಣೆಯಿಂದ ಮುಕ್ತವಾದ ಸಮಾಜವನ್ನು ಕಟ್ಟುವುದು, ಸಕಲಜೀವಾತ್ಮರಿಗೆ ಲೇಸನೆ ಬಯಸುವುದು ಬದುಕಿನ ದಾರಿಯಾಗಿಸಿಕೊಂಡಿದ್ದರು. ಆತ್ಮಕಲ್ಯಾಣದ ಜೊತೆಗೆ ಲೋಕಕಲ್ಯಾಣ ಸಾಧಿಸಿದ ಬಸವಾದಿ ಶರಣರು ತಮ್ಮ ಗುರಿಯನ್ನು ಸಾಧಿಸಲು ಬಳಸಿಕೊಂಡಿರುವ ಮಾಧ್ಯಮವೇ ವಚನಗಳು. ವೀರಶರಣೆ ಗುಡ್ಡಾಪುರ ದಾನಮ್ಮತಾಯಿಯವರು ಮಹಾನ್ ಶಿವಯೋಗ ಸಾಧಕಿಯಾಗಿ, ದೀನ–ದುಃಖಿಗಳ ಸೇವೆಯೆ ತನ್ನ ಕಾಯಕವಾಗಿಸಿಕೊಂಡು, ವಚನಗಳ ರಕ್ಷಣೆಯಲ್ಲಿ ವೀರಗಣಾಚಾರಿಣಿಯಾಗಿ ಭಾಗವಹಿಸಿದ ಧೀರಶರಣೆಯು ಬಸವಣ್ಣನವರ ಸಮಕಾಲೀನ ವೀರಶರಣೆ ಎಂಬುದು ಅಷ್ಟೊಂದು ಬೆಳಕಿಗೆ ಬರದೆ ಇದ್ದರೂ, ಭಕ್ತರ ಇಷ್ಟಾರ್ಥವನ್ನು ಪೂರೈಸುವ ದೇವತೆಯಾಗಿ ಗುಡ್ಡಾಪುರದಲ್ಲಿ ಕಂಗೊಳಿಸುತ್ತಿದ್ದಾರೆ.

ದಾನಮ್ಮದೇವಿಯವರನ್ನು ಕುರಿತು ಅನೇಕ ಪವಾಡಪ್ರಿಯರು ಪೌರಾಣಿಕವಾಗಿ ದಾನಮ್ಮನವರ ಪವಾಡಗಳನ್ನು ವರ್ಣಿಸಿದ್ದಾರೆ. ಸಂಶೋಧಕರು ದಾನಮ್ಮನವರ ಚರಿತ್ರೆಯನ್ನು ಹುಡುಕಲು ಮನಪೂರ್ವಕವಾಗಿ ಪ್ರಯತ್ನಿಸಿದ್ದಾರೆ. ಜನಪದ ಸಾಹಿತಿಗಳು, ಕವಿಗಳು ತಮ್ಮದೇ ಆದ ಭಾವನಾತ್ಮಕ ಚಿತ್ರಣ ನೀಡಿದ್ದಾರೆ. ಯಾವುದೇ ರೀತಿಯಿಂದ ನೋಡಿದರೂ ಗುಡ್ಡಾಪುರದ ದಾನಮ್ಮನವರ ಔನತ್ಯ ಎದ್ದು ಕಾಣುತ್ತದೆ. ಸಾಹಿತ್ಯಲೋಕದಲ್ಲಿ ಶಿವಯೋಗಿಣಿ ಅಕ್ಕಮಹಾದೇವಿಯವರು ಪ್ರಸಿದ್ಧರಾದರೆ, ಪವಾಡ ಲೋಕದಲ್ಲಿ ಗುಡ್ಡಾಪುರದ ದಾನಮ್ಮ ಪ್ರಸಿದ್ಧರಾಗಿದ್ದಾರೆ.

ಶರಣರ ತತ್ತ್ವಸಿದ್ಧಾಂತಗಳನ್ನು ಕರ್ನಾಟಕ ಮತ್ತು ಮಹಾರಾಷ್ಟ್ರದಾಚೆಗೂ ಪ್ರಸಾರ ಮಾಡುವುದರ ಮೂಲಕ ಶರಣೆ ದಾನಮ್ಮತಾಯಿವರು ಲಕ್ಷಾಂತರ ಭಕ್ತರ ಆರಾಧ್ಯದೈವಳಾಗಿರುವುದು ವೈಶಿಷ್ಟ್ಯವಾಗಿದೆ. ಶ್ರೀಮತಿ ಜಯಶ್ರೀ ಸುಕಾಲೆಯವರು

ವೀರಶರಣೆ ಗುಡ್ಡಾಪುರ ದಾನಮ್ಮನವರ ಕುರಿತು ಅದ್ಭುತವಾಗಿ ಆದರ್ಶಮಯವಾದ ಜೀವನ ದರ್ಶನ ಮಾಡಿಸುವ ಮಹತ್ವದ ಕೃತಿಯನ್ನು ಬರೆದು ಪ್ರಕಟಿಸಲು ಅನುವು ನೀಡಿದ ಅವರಿಗೆ ಕೃತಜ್ಞತೆಗಳು ಸಲ್ಲಿಸುತ್ತೇವೆ. ಬದುಕಿನಲ್ಲಿ ವಚನಗಳನ್ನೇ ಉಸಿರಾಗಿಸಿಕೊಂಡು ಬದುಕಲು ಆಶಿಸುತ್ತಾ ಅದೇ ಪ್ರಯತ್ನದಲ್ಲಿ ಶರಣರ ತತ್ತ್ವ ಪ್ರಸಾರ ಮಾಡಬೇಕೆಂಬ ನಿಟ್ಟಿನಲ್ಲಿ ಜಯಶ್ರೀ ಸುಕಾಲೆಯವರು ರಚಿಸಿದ ಅಮೂಲ್ಯವಾದ ಭಕ್ತಿಭರಿತ 'ವೀರಶರಣೆ ಗುಡ್ಡಾಪುರ ದಾನಮ್ಮ' ಗ್ರಂಥ ಪ್ರಕಟಣೆಯ ಮೂಲಕ 'ಜಯ ಬಸವ ಭಾರತಿ' ಎಂಬ ಪ್ರಕಾಶನ ಪ್ರಾರಂಭಿಸಲು ಅತ್ಯಂತ ಧನ್ಯತೆಯ ಜೊತೆಗೆ ಹೆಮ್ಮೆ ಅನಿಸುತ್ತಿದೆ. ಈ ಗ್ರಂಥವನ್ನು ಅತ್ಯಂತ ಅಚ್ಚುಕಟ್ಟಾಗಿ ಪುಸ್ತಕ ಮುದ್ರಣಕಾರ್ಯದಲ್ಲಿ ಸ್ವಾಮಿ ಬದ್ರಿ ದೊಣೇಹಳ್ಳಿಯವರಿಗೂ, ಮುದ್ರಿಸಿದ ಪದ್ಮಶ್ರೀ ಪ್ರಿಂಟರ್ಸ್, ರಾಜಾಜಿನಗರ, ಬೆಂಗಳೂರು ಇವರಿಗೂ ಅನಂತ ಶರಣುಗಳು. ಮತ್ತು ಈ ಗ್ರಂಥ ಪ್ರಕಟಿಸಲು ಪ್ರೇರಕರಾದ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಸರ್ವ ಆತ್ಮೀಯ ಬಂಧುಗಳಿಗೆ ಸಹೃದಯ ಕೃತಜ್ಞತೆಗಳು.

ಶರಣು-ಶರಣಾರ್ಥಿ

– ಜಯಭಾರತೀ
ಬೆಂಗಳೂರು

ಭಾರತೀ ಎಂ. ಕೆಂಪಯ್ಯ
ನಂ. ೬೭, ೨ನೇ ಅಡ್ಡರಸ್ತೆ, ಮೊದಲನೇ ಹಂತ
ಆತ್ಮೀಯ ಗೆಳೆಯರ ಬಳಗ ಬಡಾವಣೆ,
ಮಹಾಲಕ್ಷ್ಮೀಪುರಂ, ಬೆಂಗಳೂರು-೫೬೦೦೮೬
೯೪೪೮೦೫೩೩೬೬

ನಿವೇದನೆ

ಭಾರತೀಯ ಪರಂಪರೆಯಲ್ಲಿ ಧಾರ್ಮಿಕ ಕ್ಷೇತ್ರದಲ್ಲಿಯ ಇತಿಹಾಸವೇ ಅತ್ಯಂತ ಸಂಕೀರ್ಣವಾದದ್ದು; ವೈವಿಧ್ಯದಿಂದ ಕೂಡಿದ್ದು. ಸಾವಿರಾರು ವರ್ಷಗಳಿಂದ ಇಂದಿನವರೆಗೂ ಬೆಳೆದು ಬರುತ್ತಿರುವ ಇತಿಹಾಸ ಎಂಥವರನ್ನು ತಬ್ಬಿಬ್ಬುಗೊಳಿಸಿ ದಿಕ್ಕುಗೆಡಿಸುವುದೆಂಬುದರಲ್ಲಿ ಸಂಶಯವಿಲ್ಲ. ಧಾರ್ಮಿಕ ಸ್ವಾತಂತ್ರ್ಯ, ಅಭಿಪ್ರಾಯ ಸ್ವಾತಂತ್ರ್ಯ ಹೊಂದಿದವರೆಲ್ಲ ತಮ್ಮ ತಮ್ಮ ಅಭಿಪ್ರಾಯಗಳಿಗೆ ಅನುಗುಣವಾಗಿ ಬಲವಾಗಿ ನಂಬಲರ್ಹವಾದ ಸಾಹಿತ್ಯವಾಗಲಿ, ಆಚರಣೆಗಳಾಗಲಿ, ವೇದ ಕಾಲದಿಂದ ಇಂದಿನವರೆಗೆ ಜಗತ್ತಿನ ಯಾವ ದೇಶದಲ್ಲೂ ಕಾಣದಷ್ಟು ನಮ್ಮಲ್ಲಿ ಬೆಳೆದುನಿಂತಿದೆ.

ಬಸವಾದಿ ಶರಣರ ನೂತನ ಸಿದ್ಧಾಂತ ನಡೆ–ನುಡಿಯನ್ನು ಅನುಸರಿಸಿದ ಪ್ರತ್ಯಕ್ಷ ಕಲ್ಪನೆಯ ಶರಣತತ್ತ್ವ ಸಿದ್ಧಾಂತವಾಗಿದೆ. ಶರಣರ ಹೊಸತನವನ್ನು ಅವರ ಆಚರಣೆಗಳು ಹಿಂದಿನ ಕಾಲಕ್ಕಿಂತ ಹೇಗೆ ಮತ್ತು ಯಾವ ಅಂಶಗಳಲ್ಲಿ ಹೊಸದಾಗಿದ್ದವು, ಇಂದಿನ ಸಂದರ್ಭಗಳಲ್ಲಿ ಕೂಡ ಶರಣತತ್ತ್ವದ ಆಚರಣೆಗಳು ಹೇಗೆ ಮತ್ತು ಎಷ್ಟರಮಟ್ಟಿಗೆ ಪ್ರಸ್ತುತವಾಗಿವೆ ಎಂಬುದಾಗಿ ನೋಡಬಹುದು. ಶರಣರು ಮೂಲತಃ ಮಾನವತಾವಾದಿಗಳು. ಅವರು ಮನುಷ್ಯನ ಪ್ರಕೃತಿ ಧರ್ಮವನ್ನು ಚೆನ್ನಾಗಿ ಬಲ್ಲವರಾಗಿದ್ದರು. ಮಾನವನ ಗುಣ ಸ್ವಭಾವ, ಮಾನಸಿಕ ಸ್ಥಿತಿಯನ್ನು ಆಳವಾಗಿ ಪರಿಶೀಲಿಸಿದರು. ಸಾಮಾಜಿಕ ಧರ್ಮದ ಸ್ವರೂಪವನ್ನು ಅರಿತವರು. ಆಧ್ಯಾತ್ಮಿಕ ಸಾಧನೆಗಳನ್ನೂ ಅಂತರಂಗದ ಪ್ರೇರಣೆಯ ಸ್ವರೂಪವನ್ನೂ ಅನುಭಾವ ರೂಪದಲ್ಲಿ ಅರಗಿಸಿಕೊಂಡವರು. ಮಾನವಕುಲದ ಹಿತದೃಷ್ಟಿ ಬಯಸಿದ ಶರಣರು ಮಾನವನ ಜೀವನದ ಅಭಿವೃದ್ಧಿಗೆ ಸಾಧಕವಾಗುವಂತಹ ಸಾಮಾಜಿಕ ಧರ್ಮ ರೂಪಿಸಿದರು. ಮಾನವಕುಲವು ಅಭಿವೃದ್ಧಿಯತ್ತ ಸಾಗುವಂತೆ ಮಾಡಿದ ಶರಣರ ಆದರ್ಶ ಜೀವನ ಅವರ ಆಚಾರ ವಿಚಾರ ಕಾಯಕಗಳು ಸರ್ವಕಾಲಕ್ಕೂ ಹೊಸತನದಿಂದ ಕೂಡಿ ಜನಮನದ ಚಿತ್ತವನ್ನು ಸೆಳೆಯುತ್ತವೆ.

ವೀರಶರಣೆ ಗುಡ್ಡಾಪುರ ದಾನಮ್ಮತಾಯಿ ಮಾನವಕುಲದ ಬದುಕು ಹಸನಗೊಳಿಸುವ ನಿಟ್ಟಿನಲ್ಲಿ ಸರ್ವಜನಾಂಗವು ಸಮಸ್ಯೆಗೊಳಗಾಗದಂತೆ ಉದ್ಧರಿಸಿದವರು. ಇಷ್ಟಲಿಂಗ ಪೂಜೆಯಲ್ಲಿ ಲಿಂಗಾಂಗ ಸಾಮರಸ್ಯ ಹೊಂದಿದ ಶರಣೆ ದಾನಮ್ಮತಾಯಿಯವರು ಬಡವ– ಶ್ರೀಮಂತರೆನ್ನದೆ ಯಾವ ಭೇದ– ಭಾವವಿಲ್ಲದೆ . ಭಕ್ತಿ–ಶ್ರದ್ಧೆಯಿಂದ ಬಯಸಿ ಬರುವ ಭಕ್ತರೆಲ್ಲರ ಇಷ್ಟಾರ್ಥವನ್ನು ಪೂರೈಸುವ ಮಹಾಶರಣೆಯಾಗಿದ್ದಾರೆ. ನಾಡಿನ ಅನೇಕ ಮನೆತನದವರ ಮನೆದೇವರಾಗಿದ್ದಾರೆ. ಎಂದಿನಿಂದಲೂ ಎಲ್ಲಾ ಕಡೆಗಳಿಂದ ಭಕ್ತಸಮೂಹ ಹರಿದು ಬರುತ್ತದೆ. ತ್ರಿಕಾಲಪೂಜೆಯಲ್ಲಿ, ನಿರಂತರ ದಾಸೋಹದಲ್ಲಿ ಜನರು ಇನ್ನೂ ತಮ್ಮ ತಮ್ಮ ಅನುಕೂಲಕ್ಕೆ ತಕ್ಕಂತೆ ಅನೇಕ ರೀತಿಯ ಪೂಜೆ ಕೈಗೊಂಡು ಧನ್ಯತೆಪಡೆಯುವ ನಿಟ್ಟಿನಲ್ಲಿ ಸಾಗಿದ್ದಾರೆ. ಆದರೆ ವೀರಗಣಾಚಾರಿಣಿ ಶರಣೆ ದಾನಮ್ಮತಾಯಿಯವರ ಅತ್ಯಂತ ಅಮೂಲ್ಯವಾದ ಆದರ್ಶ ಜೀವನದ ತತ್ತ್ವ ಅರಿಯುವ ಕಾರ್ಯಕ್ಕೆ ಹಿಂದೇಟು ಬೀಳದೆ ಭರದಲ್ಲಿ ಸಾಗುವಂತಾಗಲಿ ಎಂದು ಅಂತರಾಳದಿಂದ ಭಕ್ತಿಪೂರ್ವಕವಾಗಿ ಆಶಿಸುತ್ತೇನೆ.

ಗುಡ್ಡಾಪುರದಲ್ಲಿ ನೆಲೆಸಿರುವ ವೀರಶರಣೆ ದಾನಮ್ಮನವರು ನಮ್ಮ ಸುಕಾಲೆ ಮನೆತನದ ಮನೆದೇವರು. ನಮ್ಮ ಮನೆತನದಲ್ಲಿ ಹಿಂದಿನಿಂದಲೂ ಹೇಳುತ್ತಿದ್ದರಂತೆ, ಆದರೆ ಯಾರು ಗುಡ್ಡಾಪುರಕ್ಕೆ ಹೋಗಿರಲಿಲ್ಲ. ನಮ್ಮ ಎರಡನೆ ಮಗಳು ಸ್ವಾತಿಯ ಜಡೆ(ಜಾವುಳ) ತೆಗೆಯಲು ಜೀಪು ಕಟ್ಟಿಕೊಂಡು ಹೊರಟಾಗ ನಮ್ಮ ಮನೆಯವರ ಅಜ್ಜಿಗೆ ತುಂಬಾ ವಯಸ್ಸಾದರೂ ನಮ್ಮ ಮನೆ ದೇವತೆ ಗುಡ್ಡಾಪುರದ ದಾನಮ್ಮನ ಬಳಿ ನಾನು ಬರುತ್ತೇನೆ. ಪ್ರಕಾಶ, ನೀನಾದರೂ ನನಗೆ ಕರೆದುಕೊಂಡು ಹೋಗು, ನಾನು ದಾನಮ್ಮನ ನೋಡದೆ ಸಾಯವುದಿಲ್ಲ. ನಿಮ್ಮ ಅಜ್ಜ ಚನ್ನಮಲ್ಲಪ್ಪ ಆರ್ಯಸಮಾಜ ಮನುಷ್ಯ, ಅದಕ್ಕಾಗಿ ಯಾವ ದೇವರುಗಳಿಗೂ ಕರೆದುಕೊಂಡು ಹೋಗಲಿಲ್ಲ. ಇತ್ತೀಚೆಗೆ ನಿಮ್ಮವ್ವನಿಗೆ ಯಾರೋ ಹೇಳಿದರಂತೆ, ಅದಕ್ಕಾಗಿ ಮನೆಯಲ್ಲಿ ದೀಪಾವಳಿ ಹಬ್ಬದಂದು ದೀಪ ಹಾಕುವುದು, ಮುತ್ತೈದೆಯರು ಹೀಗೆ ಅನೇಕ ರೀತಿಯಲ್ಲಿ ತಮಗೆ ತಿಳಿದಂತೆ ಬೆಂಕಿಯಂತ ದೇವಿ ಎಂದು ಮುಟ್ಟಿ–ತಟ್ಟಿ ಮಡಿ–ಮೈಲಿಗೆ ಎನ್ನುತ್ತಾ ಆಚರಣೆ ಮಾಡುತ್ತಿದ್ದಾರೆ. ನಾನು ಅದನ್ನೆಲ್ಲ ಏನೂ ಮಾಡಲಿಲ್ಲ ಆದರೆ ದಾನಮ್ಮನ ನೋಡುವುದಕ್ಕಾಗಿಯೇ ಬದುಕಿದ್ದೇನೆ ಎಂದಳು. ನಮ್ಮ ಮನೆಯವರೆಲ್ಲರೂ ಭಯದಿಂದಲೇ ಅಜ್ಜಿಯವರನ್ನು ಕರೆದುಕೊಂಡು ಹೋದೆವು. ಗುಡ್ಡಾಪುರದಿಂದ ಮರಳಿಬಂದ ಮೇಲೆ ಜಯಾ, ಈ ಮಗುವಿನಿಂದಾಗಿ ನನಗೆ ದಾನಮ್ಮನ ನೋಡುವ ಭಾಗ್ಯ ಸಿಕ್ಕಿತು. ನನ್ನ ಮನಸ್ಸಿಗೆ ತುಂಬಾ ನೆಮ್ಮದಿಯಾಗಿದೆ ಎಂದ ಪಾರಮ್ಮಜ್ಜಿ, ಒಂಬತ್ತನೇ ದಿನಕ್ಕೆ ಓಡಾಡುತ್ತಲೇ ಜೀವಬಿಟ್ಟಳು.

ಒಮ್ಮೆ ನಮ್ಮ ಮನೆಯಲ್ಲಿ ಗುರು ಬಸವಣ್ಣನವರ ಪೂಜೆ ವಚನಾಭಿಷೇಕ ಮಾಡುತ್ತಿರುವಾಗ ಗುಡ್ಡಾಪುರ ದಾನಮ್ಮನವರ ಭಾವಚಿತ್ರ ಇಟ್ಟಾಗ ಜನರು ಬಸವಣ್ಣನವರ ಪೂಜೆಯಲ್ಲಿ ದೇವಿಯ ಭಾವಚಿತ್ರ ಏಕೆ ಎಂದು ನಮ್ಮ ಬೀದರಿನಲ್ಲಿ ಬಸವತತ್ತ್ವ ಅನುಯಾಯಿಗಳ ಪ್ರಶ್ನೆಯಾಗಿತ್ತು. ಏಕೆಂದರೆ ನಮ್ಮ ಕಡೆಗೆ ದಾನಮ್ಮತಾಯಿಯವರು ವೀರಶರಣೆ ಇಷ್ಟಲಿಂಗ ಪೂಜೆಯಲ್ಲಿ ಅತ್ಯಂತ ಅತ್ಯುನ್ನತ ಸ್ಥಾನಕ್ಕೇರಿದವರು. ಶಿವಯೋಗ ಸಾಧನೆಯಿಂದ ದೀನದುಃಖಿಗಳ ನೋವು ನಿವಾರಣೆ ಮಾಡಿದ ಮಹಾನ್ ಶರಣೆ ಎಂಬುದರ ಬಗ್ಗೆ ಯಾವುದೆ ಮಾಹಿತಿ ಇರಲಿಲ್ಲ. ನಾವು ನಮ್ಮ ಮೂರು ಮಕ್ಕಳನ್ನು ಕರೆದುಕೊಂಡು ಹಲವಾರು ಬಾರಿ ಗುಡ್ಡಾಪುರಕ್ಕೆ ಹೋಗಿ ಬರುತ್ತಿದ್ದೆವು. ಅಲ್ಲಿಗೆ ಹೋಗಲು ಸರಿಯಾದ ರಸ್ತೆ ಇರಲಿಲ್ಲ. ಅಲ್ಲಿ ಮೊದಲಿಗೆ ಅಷ್ಟೊಂದು ವ್ಯವಸ್ಥೆ ಇರಲಿಲ್ಲ. ಆದರೂ ಜನ ನಸುಕಿನಲ್ಲಿಯೇ ಮುತ್ತೈದೆಯರಿಗೆ ಹೋಳಿಗೆ ಪ್ರಸಾದ ಎಂದು ಕರೆಯುತ್ತಿದ್ದರು. ಎಲ್ಲಾ ಕಡೆ ಭಯ ಭಕ್ತಿಯ ವಾತಾವರಣ ತುಂಬಿರುತ್ತಿತ್ತು. ವರ್ಷಕ್ಕೊಮ್ಮೆ ನಮ್ಮ ಮಗ ಅಶುತೋಷನ ಹುಟ್ಟು ಹಬ್ಬಕ್ಕೆಂದು ಶಾಶ್ವತಪೂಜೆಗೆಂದು ಹೋಗುತ್ತಿದ್ದೆವು. ಮೊದಲ ಮಗಳು ಶ್ವೇತಾಳ ಕಿರು ಓಡನಿ ದಾನಮ್ಮತಾಯಿ ಎದುರು ಕುಳಿತು ಮಾಡಿದ್ದೆವು. ಆಗ ಗರ್ಭಗುಡಿಯೊಳಗೆ ಪ್ರವೇಶ ಇತ್ತು. ಕೈಯಲ್ಲಿ ಇಷ್ಟಲಿಂಗ ಹಿಡಿದು ಕುಳಿತಿರುವ ಶಿಲೆಯ ಮೂರ್ತಿಯನ್ನು ಕಣ್ಣಾರೆ ನೋಡಬಹುದಾಗಿತ್ತು. ರಾತ್ರಿಯ ವೇಳೆ ದೇವಸ್ಥಾನದಲ್ಲಿ ತುಂಬಾ ಪ್ರಶಾಂತವಾದ ವಾತಾವರಣವಿರುತ್ತಿತ್ತು. ಶರಣೆಯ ರೂಪಧರಿಸಿ, ಬೆತ್ತ ಹಿಡಿದು ನಿಂತ ದಾನಮ್ಮ ತಾಯಿಯನ್ನು ಕಂಡಾಗ ಮನಸ್ಸಿನಲ್ಲಿ ಏನೋ ಒಂದು ರೀತಿಯ ಆನಂದದ ಭಾವ ಮೂಡುತ್ತಿತ್ತು. ಸರಳ ಸಹಜತೆಯಿಂದ ಕೂಡಿದ ವಾತಾವರಣದಲ್ಲಿ ಭಕ್ತಿಯ ಸೆಲೆ ಹರಿಯುತ್ತಿರುವಂತೆ ಭಾಸವಾಗುತ್ತಿತ್ತು.

ಗುಡ್ಡಾಪುರ ದಾನಮ್ಮದೇವಿ ಎಂದು ಭಾವಿಸುತ್ತಿದ್ದವರಿಗೆ ದಾನಮ್ಮನವರು ಶರಣೆಯಂತೆ ಎಂದು ಅರಿವಿಗೆ ಬರುತ್ತಿದ್ದಂತೆ ಅನೇಕ ಕಡೆಗಳಲ್ಲಿ ಚರ್ಚೆಯಾಗುತ್ತಿತ್ತು. ಶ್ರೀ ಹಣಮಂತರಾವ ವಲ್ಯಾಪುರೆಯವರು (ಹಂಶಕವಿ) ಅವರು ಬಂದು ಅಕ್ಕನವರೆ ನಿಮ್ಮ ಮನೆದೇವರು ಗುಡ್ಡಾಪುರ ದಾನಮ್ಮನಂತೆ ನಮಗೆ ಆ ತಾಯಿಯ ಬಗ್ಗೆ ಏನೂ ಗೊತ್ತಿಲ್ಲ. ಅದಕ್ಕೆ ನಾನು ಶರಣರ ಕುರಿತು ಒಂದು ಪುಸ್ತಕ ಮಾಡುತ್ತಿದ್ದೇನೆ ತಾವು ದಾನಮ್ಮನ ಕುರಿತು ಲೇಖನ ಬರೆದುಕೊಡಿ ಎಂದರು. ನನ್ನ ಬಳಿಯು ಅಷ್ಟೊಂದು ವಿಷಯ ಸಂಗ್ರಹವಿರಲಿಲ್ಲ. ಇರುವುದರಲ್ಲಿಯೇ ನನಗೆ ತಿಳಿದಿರುವ ಕೆಲ ವಿಷಯ ಸಂಗ್ರಹಿಸಿ ಲೇಖನ ಬರೆದುಕೊಡುವಷ್ಟರಲ್ಲಿಯೇ ಪೂಜ್ಯ ಶ್ರೀ ಬಸವಲಿಂಗ ಪಟ್ಟದ್ದೇವರು ಫೋನ್ ಮಾಡಿ ಶರಣೆ ದಾನಮ್ಮನವರ ಕುರಿತು ಪುಸ್ತಕ ಬರೆಯಿರಿ ಎಂದು ಹೇಳಿದ್ದರು.

ಅದನ್ನೇ ಮನದಲ್ಲಿ ಧ್ಯಾನವಾಗಿಟ್ಟುಕೊಂಡು, ನನ್ನ ಅನುಭವಕ್ಕೆ ನಿಲುಕಿದಂತೆ ಈ ಕೃತಿಯನ್ನು ಬರೆಯಲು ಪ್ರಾರಂಭಿಸಿದೆ.

ಪೌರಾಣಿಕವಾಗಿ ದಾನಮ್ಮತಾಯಿಯವರ ವಿಷಯ ಬಹಳಷ್ಟು ಕಂಡುಬರುವದರಿಂದ ಶರಣತತ್ತ್ವದಲ್ಲಿನ ವೀರಶರಣೆಯ ಜೀವನದ ಬಗ್ಗೆ ಬರೆಯಬೇಕೆಂಬ ಹಂಬಲಕ್ಕೆ ವಿಷಯಗಳು ಸಂಗ್ರಹಿಸುವಲ್ಲಿ ಸಹಕರಿಸಿದ ಸಹೋದರ ಹಂಶಕವಿಯವರಿಗೆ ಧನ್ಯವಾದಗಳು. ಗ್ರಂಥ ರಚನೆಯು ಮಾಡುವಂತೆ ಸೂಚಿಸಿ, ಸಂದೇಶದ ರೂಪದಲ್ಲಿ ಆಶೀರ್ವಾದದ ನುಡಿಗಳು ಬರೆದು ಪ್ರೋತ್ಸಾಹಿಸಿದ ಪೂಜ್ಯಶ್ರೀ ಡಾ. ಬಸವಲಿಂಗ ಪಟ್ಟದ್ದೇವರು. ಹೀರೆಮಠ ಸಂಸ್ಥಾನ ಭಾಲ್ಕಿ, ಅಧ್ಯಕ್ಷರು, ಅನುಭವಮಂಟಪ, ಬಸವಕಲ್ಯಾಣ ಇವರಿಗೆ ಭಕ್ತಿಪೂರ್ವಕ ಶರಣು-ಶರಣಾರ್ಥಿ. ಶ್ರಾವಣ ಮಾಸದಲ್ಲಿನ ಬಿಡುವಿಲ್ಲದ ಕಾರ್ಯಗಳ ಮಧ್ಯೆಯು ಪೂಜ್ಯ ಶ್ರೀ ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು, ಎಡೆಯೂರು ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಡಂಬಳ-ಗದಗ ಇವರು ಮುನ್ನುಡಿ ಬರೆದು ಗ್ರಂಥದ ಘನತೆ ಹೆಚ್ಚಿಸಿದಕ್ಕಾಗಿ ಇವರಿಗೆ ಭಕ್ತಿಪೂರ್ವಕ ಶರಣು-ಶರಣಾರ್ಥಿ. ಸದಾ ಬಸವಣ್ಣನವರೆ ಎಂದು ನಗುನಗುತ್ತಾ ಮಾತಾಡಿಸುತ್ತಾ ಪ್ರೋತ್ಸಾಹಿಸಿ, ಕೃತಿಗೆ ಸಂತೋಷದಿಂದ ಬೆನ್ನುಡಿ ಬರೆದು ಕೊಟ್ಟ, ಪೂಜ್ಯ ಶ್ರೀ ಗುರುಬಸವ ಪಟ್ಟದ್ದೇವರು, ಹೀರೆಮಠ ಸಂಸ್ಥಾನ ಭಾಲ್ಕಿ. ಇವರಿಗೆ ಭಕ್ತಿಪೂರ್ವಕ ಶರಣು ಶರಣಾರ್ಥಿ. ನನಗೆ ಪೌರಾಣಿಕತೆಯಲ್ಲಿ ನಂಬಿಕೆಯಿಲ್ಲ, ಎನ್ನುವ ಶರಣತತ್ತ್ವವನ್ನು ಮೈಮನ ತುಂಬಿಕೊಂಡಿರುವ ಶ್ರೀ ರಂಜಾನ ದರ್ಗಾರವರು ದಾನಮ್ಮ ಎಂದರೆ ದೇವಿಯಂತೆ ಅವರ ಬಗ್ಗೆ ನನಗೇನು ಹೆಚ್ಚಾದ ಮಾಹಿತಿ ಇಲ್ಲ ಎಂದಿದ್ದರು. ಕೃತಿಯು ಬರೆಯುತ್ತಿದ್ದಂತೆ ನೋಡೋಣ ಎಂದು ಹೇಳಿದ್ದಕ್ಕಾಗಿ ಕಳುಹಿಸಿದೆ. ಅವರು ತಮ್ಮ ಬಿಡುವಿಲ್ಲದ ಕಾರ್ಯದಲ್ಲಿಯೂ ಬಿಟ್ಟು ಬಿಡದೆ ಓದಿ ಬಹಳ ಸಂತೋಷದಿಂದ ಶುಭನುಡಿ ಬರೆದು ಮುನ್ನಡೆಯಲು ಪ್ರೋತ್ಸಾಹಿಸಿದ್ದಾರೆ ಇವರಿಗೆ ಭಕ್ತಿಯ ಶರಣು-ಶರಣಾರ್ಥಿ.

ಈ ಕೃತಿಯನ್ನು ಹೊರತರಲು ಎಲ್ಲಾ ರೀತಿಯಿಂದ ಕೈಜೋಡಿಸಿ, ಕರಡು ಪ್ರತಿಯನ್ನು ಓದುತ್ತಲೇ ಭಾವುಕರಾಗಿ ಕಣ್ಣೀರು ಬರುತ್ತಿತ್ತು ನನಗೆ ಎಷ್ಟು ಸಲ ಬಸವಕಲ್ಯಾಣದಲ್ಲಿ ಇರುವಂತೆ ಭಾಸವಾಗುತ್ತಿದೆ ಎಂದು ಅತ್ಯಂತ ಪ್ರೀತಿಯಿಂದ ಹೇಳತ್ತಾ ಬೇಸರಿಸದೆ ಪ್ರತಿ ಸಲವೂ ಓದುತ್ತಾ, ಬೆನ್ನು ತಟ್ಟಿ ನಲ್ನುಡಿಯ ಮೂಲಕವಾಗಿ ಪ್ರೋತ್ಸಾಹಿಸಿದ ತಾಯಿಸ್ವರೂಪಿ ಅವ್ವ ಭಾರತೀ ಎಂ. ಕೆಂಪಯ್ಯ, ಬೆಂಗಳೂರು ಇವರಿಗೆ ಭಕ್ತಿಯ ಶರಣು ಶರಣಾರ್ಥಿ. ದಾನಮ್ಮನ ಕೃತಿಯು ಹೊರ ಬರುವ ನಿರೀಕ್ಷಣೆಯಲ್ಲಿರುವ ನನ್ನ ಅಪ್ಪ ಶಂಕರರಾವ ಆನಂದೆ ಅವರು ಓದಿದರೆ ಕೇಳುವ ಅಪೇಕ್ಷೆಯಲ್ಲಿರುವ ಅಮ್ಮ ಮಹಾದೇವಿಯವರಿಗೂ ಶರಣುಗಳು. ನಿರಂತರ ನನ್ನ ಬರವಣಿಗೆಗೆ ಸಹಕರಿಸಿದ

ಪತಿ ಪ್ರಕಾಶ ಸುಕಾಲೆಯವರಿಗೂ ಮಕ್ಕಳಾದ ಶ್ವೇತಾ-ಗಿರಿಜಾನಂದನ್ ನುಚ್ಚಾ, ಸ್ವಾತಿ-ಸಂತೋಷ ದಂಡೆ, ಮಗನಾದ ಅಶುತೋಷ ಸುಕಾಲೆ, ಮೊಮ್ಮಗ ಧ್ರುವ ನುಚ್ಚಾ ಸ್ವಕುಟುಂಬ ವರ್ಗದವರೆಲ್ಲರಿಗೂ ಮನದುಂಬಿ ಶರಣುಗಳು. "ಜಯ ಬಸವ ಭಾರತಿ" ಹೊಸದಾಗಿ ಪ್ರಕಾಶನ ಪ್ರಾರಂಭಿಸಿ ಅಂದವಾದ ನುಡಿಗಳು ಬರೆದ ಜಯಭಾರತೀ ಬೆಂಗಳೂರು ಅವರು ಈ ಕೃತಿಯ ಪ್ರಕಟಿಸುತ್ತಿರುವ ಪ್ರಕಾಶಕರಿಗೆ ಅನಂತ ಶರಣುಗಳು. ಕಡಿಮೆ ಸಮಯದಲ್ಲಿ ಅತೀವ ಸುಂದರವಾಗಿ ಮುದ್ರಿಸಿಕೊಟ್ಟ ಪದ್ಮಶ್ರೀ ಪ್ರಿಂಟರ್ಸ್, ರಾಜಾಜಿನಗರ ಬೆಂಗಳೂರು ಇವರಿಗೂ ಅಂದವಾದ ಮುಖಪುಟದೊಂದಿಗೆ ಗ್ರಂಥಕ್ಕೆ ಮೆರಗು ಬರುವಂತೆ ಚಿತ್ರಗಳ ಜೋಡಣೆಯಲ್ಲಿ ಸಹಕರಿಸಿ ಕಾರ್ಯನಿರ್ವಹಿಸಿದ ಸಹೋದರ ಸ್ವಾಮಿ ಬದ್ರಿ ದೊಣೆಹಳ್ಳಿ ಇವರಿಗೂ ತುಂಬು ಹೃದಯದ ಧನ್ಯವಾದಗಳು. ಕೃತಿಯ ರಚನೆಯಲ್ಲಿ ಸಹಕರಿಸಿದ ಸಹೃದಯರೆಲ್ಲರಿಗೂ ಶರಣುಗಳು. ಪ್ರೀತಿಯಿಂದ, ಭಕ್ತಿಯಿಂದ ವೀರಶರಣೆ ಗುಡ್ಡಾಪುರ ದಾನಮ್ಮ ತಾಯಿಯವರ ಗ್ರಂಥ ಓದುವಿರೆಂದು ಭಾವನೆಗಳೊಂದಿಗೆ ಧನ್ಯವಾದಗಳು.

ಶರಣು-ಶರಣಾರ್ಥಿ

- ಜಯಶ್ರೀ ಪಿ. ಸುಕಾಲೆ

ಪರಿವಿಡಿ

*****

ಜೀವನ ಚರಿತ್ರೆ

ಭಾರತದ ಇತಿಹಾಸದಲ್ಲಿ ಕರ್ನಾಟಕದ ಹನ್ನೆರಡನೆಯ ಶತಮಾನವು ಮಾನವ ಘನತೆಯ ಪರ್ವಕಾಲ. ಬಸವಣ್ಣನವರ ಮಾರ್ಗ ದರ್ಶನದಲ್ಲಿ ಮಾನವ ಕುಲೋದ್ಧಾರದ ಸಮಾಜೋಧಾರ್ಮಿಕ ಆಂದೋಲನ ನಡೆಯಿತು. ಈ ಆಂದೋಲನ ಶರಣರ ವಚನ ಚಳವಳಿಯೆಂದು ಪ್ರಸಿದ್ಧವಾಗಿದೆ. ಶಿಕ್ಷಣ/ ಚಿಂತನ/ ಆಂದೋಲನದ ಮೂಲಕ ಬಸವಣ್ಣನವರು ನವಸಮಾಜದ ನಿರ್ಮಾಣಕ್ಕಾಗಿ ಅಸಂಖ್ಯಾತ ಕಾಯಕಜೀವಿಗಳನ್ನು ಸಂಘಟಿಸಿ ಅನನ್ಯ ಚಳವಳಿಯನ್ನು ಆರಂಭಿಸಿದರು. ಈ ಚಳವಳಿಗಾಗಿ ನಿರಕ್ಷರಿಗಳನ್ನು ವಯಸ್ಕರ ಶಿಕ್ಷಣದ ಮೂಲಕ ಸಾಕ್ಷರರನ್ನಾಗಿಸಿದರು. ಅವರು ಅಷ್ಟಕ್ಕೇ ನಿಲ್ಲಿಸದೆ ಕಾಯಕಜೀವಿಗಳ ಅನುಭವವನ್ನು ಕ್ರಿಯಾಶೀಲವಾಗಿಸುವ ಮೂಲಕ ವಚನ ಸಾಹಿತ್ಯ ಸೃಷ್ಟಿಗೆ ವಾತಾವರಣ ಕಲ್ಪಿಸಿದರು. ವಚನ ಸಾಹಿತ್ಯ ವಿಶಿಷ್ಟ ಸಾಹಿತ್ಯವಾಗಿದೆ. ಕಾಯಕ ಜೀವಿಗಳ ಅನುಭವದ ಮೂಲಕ ಸೃಷ್ಟಿಯಾಗುವ ಅನುಭಾವದ ಜೊತೆಗೆ ಮಾನವ ಸಂಸ್ಕಾರ ಹಾಗೂ ಸಾಹಿತ್ಯದ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಬಳಕೆಯಲ್ಲಿರುವ ಶಬ್ದಗಳಿಗೆ ಹೊಸ ಅರ್ಥವನ್ನು ಕೊಡುತ್ತಾ ಕನ್ನಡ ಭಾಷೆಯನ್ನು ದರ್ಶನ ಮತ್ತು ಧರ್ಮದ ಭಾಷೆಯಾಗಿ ರೂಪಿಸಿದರು. ಹೀಗೆ ಶಿಕ್ಷಣ ಮತ್ತು ಚಿಂತನವನ್ನು ನವಸಮಾಜಕ್ಕಾಗಿ ನಡೆಯುವ ಸಂಘಟನಾತ್ಮಕವಾದ ಚಳವಳಿಗೆ ಬಳಸಿದರು. ಈ ಕಾರಣದಿಂದಲೆ ಲಿಂಗಾಯತವು ಮಾನವ ಹಕ್ಕುಗಳ ಚಳವಳಿಯ ಧರ್ಮವಾಗಿದೆ. ಈ ಚಳವಳಿಯ ಧರ್ಮಕ್ಕೆ ಬಸವಣ್ಣನವರಲ್ಲದೆ ಅಲ್ಲಮಪ್ರಭುದೇವರು, ಅಕ್ಕನಾಗಮ್ಮನವರು, ಚನ್ನಬಸವಣ್ಣನವರು, ಸಿದ್ಧರಾಮೇಶ್ವರರು, ಅಕ್ಕಮಹಾದೇವಿ ಮತ್ತು ಮಡಿವಾಳ ಮಾಚಿದೇವರು ಈ ಸಪ್ತ ಗಣಾಧೀಶರನ್ನೊಳಗೊಂಡಂತೆ, ಏಳುನೂರೆಪ್ಪತ್ತು ಅಮರಗಣಂಗಳು ನಾಯಕರಾಗಿದ್ದರು. ಶರಣೆ ಗುಡ್ಡಾಪುರದ ದಾನಮ್ಮ ಈ ಏಳುನೂರೆಪ್ಪತ್ತು ಗಣಂಗಳಲ್ಲಿ ಒಬ್ಬಳಾಗಿದ್ದಾಳೆ.

ಕಲ್ಯಾಣದ ಅಂತರಂಗದಲ್ಲಿ ಬಸವಾದಿ ಶರಣರು ಉದಾತ್ತ ಮೌಲ್ಯಗಳನ್ನು ಅಳವಡಿಸಿಕೊಂಡು ಆತ್ಮೋನ್ನತಿಯ ಪರಿಪೂರ್ಣ ವ್ಯಕ್ತಿತ್ವವನ್ನು ಸಾಧಿಸಿದರು. ಲೌಕಿಕ ಪ್ರಲೋಭನೆಗಳನ್ನು ದೂರವಿಟ್ಟು ಆತ್ಮ ಪರಮಾತ್ಮನನ್ನು ಸಮೀಕರಿಸಿ ಕಾಯಕ, ದಾಸೋಹ,

ಸಮಾನತೆಯಂಥ ಹಲವಾರು ವೈಚಾರಿಕ ಸಿದ್ಧಾಂತಗಳನ್ನು ವಚನ ಮಾಧ್ಯಮದ ಮೂಲಕ ಪ್ರಚಾರಪಡಿಸಿದರು. ಶರಣರು ನಡೆದರೆ ನುಡಿದರೆ ನಿಂದರೆ ನೆಲೆಸಿದರೆ ನೆಲದ ಹೃದಯದಲ್ಲಿ, ಗಾಳಿಯ ಎದೆಯಲ್ಲಿ, ನೀರಿನ ತಂಪಿನಲ್ಲಿ ಪಾವನ ಪವಿತ್ರಗಳು ಪುಣ್ಯತೀರ್ಥಗಳು ಅವಿಮುಕ್ತ ಕ್ಷೇತ್ರಗಳು ಉದ್ಭವವಾಗಿದ್ದವು.

ಧಾರ್ಮಿಕ ಕ್ರಾಂತಿಯಿಂದ ಜನಜೀವನಕ್ಕೆ ಶರಣರು ಹೊಸ ತಿರುವು ನೀಡಿದರು. ಮಾನವನ ಬದುಕಿಗೆ ಸಮಗ್ರ ಮಹಾನ್ ಕ್ರಾಂತಿಗೈದು ಸಮಾಜ ಪರಿವರ್ತನೆ ಮಾಡಿದರು. ವ್ಯಷ್ಟಿ ಪ್ರಜ್ಞೆಯಲ್ಲಿದ್ದ ಧರ್ಮವನ್ನು ಸಮಷ್ಟಿ ಪ್ರಜ್ಞೆಯತ್ತ ಮುನ್ನಡೆಸಿದರು. ಸಮಾಜದಲ್ಲಿದ್ದ ಭೇದಭಾವದ ವಿಷಬೀಜವನ್ನು ಕಿತ್ತೊಗೆದು ಸಮತೆಯ ಸಾಧಿಸಿ ಧರ್ಮಕ್ಕೆ ಪುನರ್ಜನ್ಮ ನೀಡಿದರು. ಬಸವಣ್ಣನವರು ಅನುಭವ ಮಂಟಪವನ್ನು ನಿರ್ಮಿಸಿ, ಅಶಿಕ್ಷಿತರನ್ನು ಸುಸಂಸ್ಕೃತರನ್ನಾಗಿಸಿದರು. ಶಿಸ್ತುಬದ್ಧ ಸಮಾಜ ನಿರ್ಮಿಸಲು ತತ್ತ್ವಸಿದ್ಧಾಂತದ ತಳಹದಿಯ ಕಲ್ಪನೆಯನ್ನು ನೀಡಿದರು. ಜನಮಾನಸದಲ್ಲಿಯ ಪ್ರಾಚೀನ ಕುರುಡು ನಂಬಿಕೆಗಳನ್ನು ತೊಡೆದು ನೈಜ ಸಿದ್ಧಾಂತ ಪ್ರತಿಪಾದಿಸಿದರು. ನಡೆ-ನುಡಿ ಒಂದಾಗಿಸಿಕೊಂಡು ತಮ್ಮ ಬದುಕಿನ ಅನುಭವದಿಂದ ವಚನಗಳನ್ನು ರಚಿಸಿ ಆಚರಿಸಿ ತೋರಿಸಿದರು. ಅಂತೆಯೇ ಜನರ ಮನಸ್ಸಿನ ಮೇಲೆ ಗಾಢವಾದ ಪರಿಣಾಮ ಬೀರಿತು. ಶರಣರು ಧರ್ಮಸಿದ್ಧಾಂತಕ್ಕಿಂತ ಅದರ ಆಚರಣೆಗೆ ಪ್ರಾಶಸ್ತ್ಯ ನೀಡಿದರು.

ಬಸವಣ್ಣನವರು ಸ್ತ್ರೀಯರಿಗೆ ಪುರುಷರಷ್ಟೇ ಸಮಾನ ಸ್ಥಾನಮಾನಗಳನ್ನು ಕಲ್ಪಿಸಿಕೊಟ್ಟಿದ್ದೆ ಹೆಣ್ಣುಮಕ್ಕಳಿಗೆ ಅತ್ಯಂತ ಮಹತ್ವಪೂರ್ಣವಾದದು. ಅಕ್ಕನಾಗಮ್ಮ, ನೀಲಾಂಬಿಕೆ, ಗಂಗಾಂಬಿಕೆ, ಅಕ್ಕಮಹಾದೇವಿ, ಬೊಂತಾದೇವಿ, ಮುಕ್ತಾಯಕ್ಕ, ಅಮುಗಿರಾಯಮ್ಮ, ಸತ್ಯಕ್ಕ, ಅಕ್ಕಮ್ಮ, ಮೋಳಿಗೆ ಮಹಾದೇವಿ, ಧೂಪದಗೊಗ್ಗವ್ವೆ, ಸೋಮವ್ವೆ, ಕಾಳವ್ವೆ, ವರದಾನಿ ಗುಡ್ಡವ್ವೆ ಮೊದಲಾದ ಶರಣೆಯರು ಅನುಭವ ಮಂಟಪದ ಚರ್ಚೆಯಲ್ಲಿ ಭಾಗವಹಿಸಿ ಸಮಾಜೋದ್ಧಾರಕ ಮನ್ವಂತರವನ್ನೇ ಸೃಷ್ಟಿಸಿದರು. ಜಗತ್ತಿನ ಇತರ ಯಾವುದೇ ಧರ್ಮದಲ್ಲಿ ಇಷ್ಟೊಂದು ಸಂಖ್ಯೆಯಲ್ಲಿ ಸ್ತ್ರೀಯರು ಏಕಕಾಲಕ್ಕೆ ಧರ್ಮದ ಕಾರ್ಯಕಲಾಪಗಳಲ್ಲಿ ಭಾಗವಹಿಸಿಲ್ಲವೆಂದು ಹೇಳಬಹುದು. ಶರಣೆಯರಲ್ಲಿ ಹಲವರು ಅಧ್ಯಾತ್ಮ ಜೀವಿಗಳಾಗಿದ್ದರೆ, ಕೆಲವರು ಕ್ರೀಯಾಶೀಲರಾಗಿದ್ದರು. ಕಲ್ಯಾಣದಲ್ಲಿ ನಡೆದ ಹತ್ಯಾಕಾಂಡದ ತರುವಾಯ ಶರಣರ ಗುಂಪಿನೊಂದಿಗೆ ಹೋರಾಡಿದ ವೀರ ಗಣಾಚಾರರಲ್ಲಿ ಗುಡ್ಡಾಪುರದ ದಾನಮ್ಮದೇವಿ ಒಬ್ಬರು. ಬಸವಾದಿ ಶರಣರ ಜೊತೆಯಲ್ಲಿದ್ದು ತನ್ನ ವ್ಯಕ್ತಿತ್ವ ರೂಪಿಸಿಕೊಂಡು, ಸಮಾಜಕ್ಕೆ ತನ್ನನ್ನೇ ಅರ್ಪಿಸಿಕೊಂಡ ವೀರಗಣಾಚಾರಿಣಿ ದಾನಮ್ಮ ನಿಷ್ಠಾವಂತ ಸಮಾಜಸೇವಕಿ. ಶೈವ-ವೈಷ್ಣವ ಸಂಘರ್ಷದ

ಸಂದರ್ಭದಲ್ಲಿ ಮುಂಚೂಣಿಯಲ್ಲಿ ನಿಂತು ಹೋರಾಡಿದ ಧೀಮಂತೆ. ದೀನ ದಲಿತರ ಪಾಲಿನ ಕಾಮಧೇನು. ಅಂತೆಯೇ ದಾನಮ್ಮನ ಹೆಸರು ಮತ್ತು ಕಾರ್ಯಗಳು ಹಲವಾರು ಶಾಸನಗಳಲ್ಲಿ ಉಲ್ಲೇಖವಾಗಿರುವುದನ್ನು ಕಾಣಬಹುದು.

ಶರಣಧರ್ಮದಲ್ಲಿ ಆಚರಣೆಯ ದೃಷ್ಟಿಯಿಂದ ಪಂಚಾಚಾರಗಳು ನೈತಿಕನಿಷ್ಠೆಯ ತತ್ತ್ವಗಳಾಗಿವೆ. ಯಾವುದೇ ಧರ್ಮವಾಗಲಿ ಕೇವಲ ತತ್ತ್ವಸಿದ್ಧಾಂತ ಪ್ರತಿಪಾದಿಸಿದರೆ ಸಾಲದು. ಜನಮನ್ನಣೆಗೆ ಆ ಧರ್ಮದ ಆಚರಣೆಯು ಸಹ ಪ್ರಮುಖ ಪಾತ್ರವಹಿಸುವುದು. ಗುರು ಬಸವಣ್ಣನವರು ನೀಡಿರುವ ಅಷ್ಟಾವರಣ, ಷಟಸ್ಥಲ, ಪಂಚಾಚಾರಗಳಲ್ಲಿ ಒಂದಾದ ಪಂಚತತ್ತ್ವದ ಈ ಪಂಚ ಆಚರಣೆಗಳು ಮನುಕುಲದ ಸರ್ವಾಂಗೀಣ ಬೆಳವಣಿಗೆಗೆ ಬೇಕಾದ ಅಮೂಲ್ಯ ಸೂತ್ರದಂತಿವೆ. ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ, ಭೃತ್ಯಾಚಾರ, ಹೀಗೆ ಪಂಚಾಚಾರಗಳು ಶಿವಯೋಗ ಸಾಧಕನ ಪ್ರಾಣವಾಗಿವೆ. ಇವುಗಳಲ್ಲಿ ಗಣಾಚಾರತತ್ತ್ವವು ವಿಶಿಷ್ಟ ಲಕ್ಷಣಗಳಿಂದ ಕೂಡಿದೆ. ವೀರಧರ್ಮ ಪಾಲಿಸಿ, ವೀರವ್ರತ– ವೀರಭಕ್ತಿಯಿಂದ ಒಡಗೂಡಿದ ಆತ್ಮರಕ್ಷಣೆಯ ತತ್ತ್ವವಾಗಿದೆ. ಶರಣರ ತತ್ತ್ವವನ್ನು ನಂಬಿದ್ದ ವೀರಗಣಾಚಾರಣಿ ದಾನಮ್ಮ 'ತತ್ತ್ವದ್ರೋಹ' ಒಪ್ಪಿಕೊಳ್ಳದೆ ಗಣಾಚಾರ ತತ್ತ್ವವನ್ನು ತನ್ನ ಬದುಕಿನುದ್ದಕ್ಕೂ ಅಳವಡಿಸಿಕೊಂಡು ಆತ್ಮಾಭಿಮಾನಕ್ಕೆ ಧಕ್ಕೆ ಬಂದಾಗ ಹೋರಾಡುತ್ತಾಳೆ.

ಸತ್ಯ, ನಿಷ್ಠೆ, ಪ್ರಾಮಾಣಿಕತೆ, ದಯೆಯ ಪರಿಪಾಲನೆಯ ತತ್ತ್ವದಡಿಯಲ್ಲಿ ಬಂಧುಬಾಂಧವರ ಉಳಿವಿಗಾಗಿ ಸಂಕಷ್ಟದಲ್ಲಿ ಇರುವವರನ್ನು ಸಂರಕ್ಷಿಸಲು ವೀರವ್ರತಧಾರಿಯಾಗಿ ಕೇವಲ ಆತ್ಮಸಂರಕ್ಷಣೆಗೆ ಗಣಾಚಾರದಿಂದ ವ್ರತತೊಟ್ಟು ಹೋರಾಡದೆ ಅನೇಕ ಸಂದರ್ಭದಲ್ಲಿ ಪಣತೊಟ್ಟು ನಾನಾ ರೀತಿಯಿಂದ ಹೋರಾಡಿದ ಶರಣರ ಗಣಾಚಾರರ ಸಾಲಿನಲ್ಲಿ ಬರುವಳು ವೀರಶರಣೆ ಗುಡ್ಡಾಪುರ ದಾನಮ್ಮ.

ಜನನ ಮತ್ತು ಬಾಲ್ಯ

ವಿಜಾಪುರ ಪಟ್ಟಣದಿಂದ ಪಶ್ಚಿಮಕ್ಕೆ ೨೦ ಮೈಲುಗಳ ಮೇಲೆ ಇರುವ ಮಹಾರಾಷ್ಟ್ರದ ಸಾಂಗಲಿ ಜಿಲ್ಲೆಯ ಜತ್ತ ತಾಲೂಕಿನ 'ಉಮರಾಣಿ' ಎಂಬ ಗ್ರಾಮದಲ್ಲಿ ಸದ್ಭಕ್ತ ದಂಪತಿಗಳಾದ ಅನಂತರಾಯ ಮತ್ತು ಸಿರಸಮ್ಮನವರದು ಶ್ರದ್ಧಾಭಕ್ತಿಯ ಮನೆತನವಾಗಿತ್ತು. ವಿಶ್ವಕರ್ಮ (ಪಂಚಾಳ) ಸಮಾಜದ ಅನಂತರಾಯರು ಅಕ್ಕಸಾಲಿಗ ವೃತ್ತಿಯನ್ನು ಮಾಡುತ್ತಿದ್ದವರು. ಇವರಿಗೆ ಬಹಳ ದಿನಗಳವರೆಗೆ ಮಕ್ಕಳಾಗಿರಲಿಲ್ಲ. ನೆರೆ ಹೊರೆಯವರ ವ್ಯಂಗ ಮಾತುಗಳು ಕೇಳಿಸುತ್ತಿದ್ದವು 'ಹೊಸದಾಗಿ ಮದುವೆಯಾದವರ ಕುಬಸ

ಕಾರ್ಯಗಳು ನಡದಾವ ಆದರ ನೋಡು ನಮ್ಮ ಸಿರಸವ್ವನದು ಮದುವೆಯಾಗಿ ಇಷ್ಟು ವರ್ಷ ಆದರೂ ಕೂಡ ಇನ್ನೂ ಮಕ್ಕಳು ಆಗಲಿಲ್ಲ' ಎಂದು ಒಬ್ಬರು ಹೇಳಿದರೆ ಇನ್ನೊಬ್ಬರು ಹೋಗಲಿ ಬಿಡ್ರಿ ಪಾಪ, ಸಿರಸವ್ವ ದಿವಸಾ ನಸುಕಿನಲ್ಲೆ ವೀರಮಲ್ಲಯ್ಯನ ಗುಡಿಗೆ ಹೋಗಿ ಪೂಜೆ ಮಾಡಿ ಬರತಾಳ, ಇಂದಿಲ್ಲ ನಾಳೆ ಮಕ್ಕಳು ಆಗತಾವ ಎಂದರು. ಈ ಕೊಂಕು ನುಡಿಗಳ ವಾತಾವರಣದಲ್ಲಿ ಕುಳಿತುಕೊಳ್ಳಲಾರದೆ ಸಿರಸಮ್ಮ ಮನೆಯ ಕಡೆಗೆ ಧಾವಿಸಿದಳು.

ಅನಂತರಾಯ ಪತ್ನಿಯ ಜೊತಗೂಡಿ ತಮ್ಮ ಗ್ರಾಮದ ಆರಾಧ್ಯದೈವ ಎಂದು ನಂಬಿರುವ ವೀರಮಲ್ಲಯ್ಯ ದೇವರನ್ನು ಭಕ್ತಿ, ನಿಷ್ಠೆಯಿಂದ ಪೂಜೆ ಮಾಡಿ "ದೇವರೆ ಒಂದೇ ಒಂದು ಮಗುವನ್ನು ದಯಪಾಲಿಸು ತಂದೆ", ಅದು ಹೆಣ್ಣಾಗಲಿ, ಗಂಡಾಗಲಿ, ಏನಾದರೂ ಸರಿಯೇ ಎಂದು ಬೇಡಿಕೊಂಡರು. ಇಬ್ಬರೂ ಗುಡಿಯಲ್ಲಿ ಇರುವ ವೀರಮಲ್ಲಯ್ಯನ ಲಿಂಗವನ್ನು ಏಕಾಗ್ರತೆಯಿಂದ ನೋಡುತ್ತಾ ಕುಳಿತರು. ಆಗ ಶಿವಲಿಂಗದ ಮೇಲಿನ ಹೂವು ಕೆಳಗೆ ಬಿದ್ದಿತು. ಸಿರಸವ್ವ ಸಂತಸದಿಂದ ಆ ಹೂವನ್ನು ಎತ್ತಿ ತನ್ನ ಉಡಿಯಲ್ಲಿಟ್ಟುಕೊಂಡಳು. ದಂಪತಿಯರು ಗುಡಿಯ ಹೊರಬರುವಷ್ಟರಲ್ಲಿ ಚರಜಂಗಮರೊಬ್ಬರು ಎದುರಿಗೆ ಬಂದರು. ಸತಿಪತಿಯರು ಜಂಗಮರಿಗೆ ಭಕ್ತಿಯಿಂದ ವಂದಿಸಿದರು. ಇವರನ್ನು ನೋಡಿದ ಜಂಗಮರು ನಿಮ್ಮ ಮುಖವನ್ನು ಕಂಡರೆ ಜೀವನದಲ್ಲಿ ಏನೋ ದುಃಖದ ಛಾಯೆ ಆವರಿಸಿದಂತೆ ಅನಿಸುತ್ತಿದೆ ಎನ್ನುತ್ತಾ, ತನ್ನ ಜೋಳಿಗೆಯಲ್ಲಿಯ ಭಸ್ಮದ ಗಟ್ಟಿಯನ್ನು ತೆಗೆದು ಅನಂತರಾಯರ ಕೈಯಲ್ಲಿಟ್ಟರು. ಅಂತರಂಗದ ಮತ್ತು ಬಹಿರಂಗದ ಶುದ್ಧಿಯೊಂದಿಗೆ ಹಣೆಗೆ ಭಸ್ಮಧರಿಸಿಕೊಳ್ಳಿರಿ, ನಿಮ್ಮ ದುಃಖ ದೂರಾಗಿ ಬಯಕೆ ಪೂರೈಸುವ ದೇವಕರುಣೆ ಸದಾ ನಿಮ್ಮನ್ನು ಕಾಪಾಡಲಿ ಎಂದು ಹರಸಿದರು.

ಅನಂತರಾಯ ಸಿರಸಮ್ಮನವರ ಮೇಲೆ ಶಿವಕೃಪೆ ಪ್ರಾಪ್ತವಾಗುತ್ತದೆ. ಅಂದು ರಾತ್ರಿ ಕನಸಿನಲ್ಲಿ ಸಿರಸಮ್ಮಳಿಗೆ ವೀರಮಲ್ಲಯ್ಯನ ರೂಪದಲ್ಲಿ ಶಿವನ ದರ್ಶನವಾಗುತ್ತದೆ. ಶಿವಚೈತನ್ಯದ ದಿವ್ಯ ತೇಜಸ್ಸೊಂದು ಬಂದು ತನ್ನ ಮಡಿಲೊಳಗೆ ಅಡಗಿದಂತೆ ಭಾಸವಾಗಿ ತಟ್ಟನೆ ಎಚ್ಚರಗೊಂಡು, ಕಣ್ತೆರೆದು ಸುತ್ತಲೂ ಕಣ್ಣಾಡಿಸುತ್ತಾಳೆ. ಈ ಹೊಳಪು ಎಲ್ಲಿಯದೋ ಎಂದು ಗದ್ಗದಿತಳಾಗಿ ರೋಮಾಂಚನಗೊಂಡು ಸ್ವಾಮಿ! ಸ್ವಾಮಿ! ಇದೇನು? ಇದೇನು?' ಎನ್ನುವಷ್ಟರಲ್ಲಿಯೆ ಅನಂತರಾಯರಿಗೆ ಎಚ್ಚರವಾಗುತ್ತದೆ. ಸಿರಸಮ್ಮ ತನಗಾದ ಅಲೌಕಿಕ ಅನುಭವವನ್ನು ಪತಿಯ ಮುಂದೆ ವಿವರಿಸುತ್ತಾಳೆ. ಆಗ ಅನಂತರಾಯರು, 'ನೀನು ಪುಣ್ಯವಂತೆ,' ನಿನ್ನ ಸಂಕಲ್ಪದಂತೆ ನಮ್ಮ ಎಲ್ಲಾ ಇಷ್ಟಾರ್ಥ ಪೂರೈಸುವಂತಾಗಲಿ

ಎಂದುಕೊಂಡು ಸತಿಪತಿಗಳು ಒಂದಾಗಿ ವೀರಮಲ್ಲಯ್ಯನ ದೇವಸ್ಥಾನಕ್ಕೆ ಹೋಗಿ ಪೂಜೆ ಸಲ್ಲಿಸುವರು.

ವರ್ಷ ತುಂಬುವುದರೊಳಗೆ ಸಿರಸಮ್ಮ ಗರ್ಭಿಣಿಯಾದಳು. ಸಿರಸಮ್ಮನ ಮುಖ ಉಲ್ಲಾಸಭರಿತವಾಯಿತು, ಸಂಭ್ರಮದಿಂದ ನಲಿಯುತ್ತಿದ್ದಳು. ನವಮಾಸ ತುಂಬಿದ ಮೇಲೆ ಸೂರ್ಯನಂತೆ ಪ್ರಕಾಶಮಾನವಾದ ಹೆಣ್ಣು ಮಗುವಿಗೆ ಜನ್ಮವಿತ್ತಳು. ದಷ್ಟಪುಷ್ಟ ಮಗುವಿನ ಮಿಂಚುವ ಕಣ್ಣು, ಮುದ್ದು ಮಗುವಿನ ನಗುಮುಖ ನೋಡಿದವರನ್ನೆಲ್ಲಾ ಆಕರ್ಷಿಸುವಂತ್ತಿತ್ತು. ಆ ಮಗುವಿನ ಮುಖ ಕಂಡೊಡನೆ ಸಿರಸಮ್ಮ ಅನಂತರಾಯರಿಗೆ ಹಿಡಿಸಲಾರದಷ್ಟು ಸಂತೋಷವಾಗುತ್ತದೆ. ತಮ್ಮ ಜನ್ಮ ಸಾರ್ಥಕವಾಯಿತು ಸಾಕ್ಷಾತ್ ಪಾರ್ವತಿಯೆ ನಮ್ಮ ಮಡಿಲಿಗೆ ಬಂದಿರುವಳೆಂದು ಆನಂದಿಸಿದರು.

ವೀರಮಲ್ಲಯ್ಯನ ಶಿವಲಿಂಗದ ಕೃಪೆಯಿಂದ ಹುಟ್ಟಿದ ಮಗುವೆಂದು ಭಾವಿಸಿ, ಮಗುವಿಗೆ ಲಿಂಗಮ್ಮ ಎಂದು ನಾಮಕರಣ ಮಾಡಿದರು. ಸಿರಸಮ್ಮ ಶಿಶುವಿಗೆ ಪಂಚಾಕ್ಷರಿ ಮಂತ್ರ ಜಪಿಸುತ್ತ ಭಸ್ಮಧಾರಣೆ ಮಾಡಿಸಿ ಹಾಲುಣಿಸುತ್ತಿದ್ದಳು. ಅಂದ ಚಂದದ ಕಸೂತಿಯಿಂದ ಕೂಡಿದ ಜರಿಯ ಕುಂಚಿಗೆಗಳನ್ನು ಕಟ್ಟುತ್ತಿದ್ದಳು. ಮೌನವಾಗಿದ್ದ ಮನೆ ಮಗುವಿನ ನಗೆಯ ಕಿಲಕಿಲ ನಾದದಿಂದ ಉಲ್ಲಾಸಭರಿತವಾಗಿತ್ತು.

ಲಿಂಗಮ್ಮ ಬಿದಿಗೆಯ ಚಂದಿರನಂತೆ ಬೆಳೆಯುತ್ತಿದ್ದಳು. ಹೆತ್ತವರಿಗೆ ಜೀವಾಳವಾದ ಮುದ್ದು ಮಗಳು ಮಡಿಲನ್ನು ಮನೆಯನ್ನು ತುಂಬಿದಳು. ಚೇತನದ ಚಿಲುಮೆಯಂತಿದ್ದ ಲಿಂಗಮ್ಮ ಹುಣ್ಣಿಮೆಯ ಬೆಳದಿಂಗಳಿನಂತೆ ಮನೆತುಂಬಾ ತಿರುಗಾಡುತ್ತಿದ್ದಾಗ ತಂದೆ-ತಾಯಿಗಳ ಮನ ತುಂಬುತ್ತಿತ್ತು. ಓಣಿಯ ಮಕ್ಕಳೆಲ್ಲಾ ಗೊಂಬೆಯಂಥ ಆಟದ ಸಾಮಾನುಗಳು ತೆಗೆದುಕೊಂಡು ಆಡುತ್ತಿದ್ದರೆ, ಲಿಂಗಮ್ಮ ಮಾತ್ರ ಲಿಂಗ ಪೂಜೆಯ ಆಟವನ್ನು ಆಡುತ್ತಿದ್ದಳು. ಯಾರಾದರೂ ಜಂಗಮರು, ಭಿಕ್ಷುಕರು ಬಂದರೆ ಕೈಗೆ ಸಿಕ್ಕಿರುವುದನ್ನು ಕೊಟ್ಟು ಬರುತ್ತಿದ್ದಳು. ಭಕ್ತಿಲತೆಯಂತೆ ಬೆಳೆಯುತ್ತಿದ್ದ ಲಿಂಗಮ್ಮನ ಅಂತರಂಗದಲ್ಲಿ ದೇವರ ಮೇಲಿನ ಶ್ರದ್ಧೆ ಹೆಚ್ಚುತ್ತಲಿತ್ತು. ದಾನಮ್ಮ ಕಾರಣಿಕ ಶಿಶುವಾಗಿ ಜನಿಸಿದ ಹಾಗೂ ಬಾಲ್ಯ ಜೀವನವನ್ನು ರಾಮಕವಿಗಳು ತಮ್ಮ ಕಾವ್ಯದಲ್ಲಿ ಪುರಾಣ ಶೈಲಿಯಲ್ಲಿ ವರ್ಣಿಸಿದ್ದಾರೆ.

ಧರಿಸಿ ಬಾಲೆಯು ಕಣಕ ಲಿಂಗವ
ಸ್ಮರಿಸಿಕೊಳ್ಳುತಲೇನೋ ಮನದೊಳು
ಅರಿತಳಾಕ್ಷಣ ವೀರಮಲ್ಲಯ್ಯನ ತೆರನಂತೇ

ಲಿಂಗಮ್ಮನ ಬಾಲ್ಯ ಜೀವನದಲ್ಲಿ ತಾಯಿ ಸಿರಸಮ್ಮ ತನ್ನ ಮಗಳು ಲಿಂಗಮ್ಮನ ಕೈಯಲ್ಲಿ ಕಣಕದ ಶಿವಲಿಂಗ ಮಾಡಿ ಕೊಡುವ ಪ್ರಸಂಗವನ್ನು ಹೇಳಿದ್ದಲ್ಲದೆ ಮತ್ತೊಂದೆಡೆಗೆ;

ಇಂಥ ಪಾವನ ಪಾಠ ಶಾಲೆಯ
ಲಂತು ತಾಲಿಂಗಮ್ಮನೊಬ್ಬಳು
ಎಂತು ಹೇಳಲಿ ಅವಳ ಜಾಣ್ಮೆಯನ್ನು ಬುದ್ಧಿವಂತಿಕೆಯಾ

ಲಿಂಗಮ್ಮನು ಬಾಲ್ಯದಲ್ಲಿ ವಿದ್ಯಾಭ್ಯಾಸ ಕೈಕೊಂಡ ಜಾಣ್ಮೆಯನ್ನು, ಅವಳ ಪಾದದ ಕಿರುಗೆಜ್ಜೆಗಳ ಸಪ್ಪಳದಿಂದ ಪರಮತೀಯರ ಎದೆ ಝಲ್ ಎಂದಿತೆಂಬ ಅವಳ ಬಾಲ್ಯದ ಸಾಧನೆಯ ಪೂರ್ವಸೂಚನೆಯನ್ನು ಕವಿಗಳು ತಮ್ಮ ಕಾವ್ಯದಲ್ಲಿ ವರ್ಣಿಸಿರುವುದು ವೈಶಿಷ್ಟ್ಯವಾಗಿದೆ.

ಅನಂತರಾಯರು ಪ್ರತಿದಿನ ಸಾಯಂಕಾಲ ಶಿವಪುರಾಣ ಓದುತ್ತಿದ್ದರು. ಅದನ್ನು ನೋಡಿ ಲಿಂಗಮ್ಮ "ಅಪ್ಪ ನಾನೂ ಓದುತೀನಿ" ಎಂದು ಹಠ ಮಾಡುತ್ತಿದ್ದ ಪುಟ್ಟ ಮಗಳಿಗೆ ಓದು ಬರಹ ಕಲಿಸಬೇಕು ಅನಿಸುತ್ತಿತ್ತು. ಲಿಂಗಮ್ಮ ತಾಯಿಯ ಜೊತೆಗೆ ಪುರಾಣ ಪುಣ್ಯಕಥೆಗಳನ್ನು ಕೇಳಲು ಹೋಗುತ್ತಿದ್ದಳು. ತಾಯಿ ಸಿರಸಮ್ಮ ಹಾಡುತ್ತಿದ್ದರೆ ತಾನು ದನಿಗೂಡಿಸಿ ಹಾಡುತ್ತಿದ್ದಳು. ಚಿಕ್ಕಂದಿನಿಂದಲೂ ಸದಾಚಾರದ ಕಡೆಗೆ ಒಲವು ತಾಳಿದವಳಾಗಿದ್ದಳು. ತಂದೆಯಾದ ಅನಂತರಾಯರು ಶಿವಪುರಾಣದ ಜೊತೆಗೆ ಶೂರ, ವೀರ, ಧೀರರ ಚರಿತ್ರೆಗಳನ್ನು ಹೇಳಿಕೊಡುತ್ತಿದ್ದರು. ಅಪರೂಪಕ್ಕೆ ಒಬ್ಬಳೆ ಮಗಳಿದ್ದುದರಿಂದ ಅವಳನ್ನು ಮಗನಂತೆ ಕಂಡು ಕುದುರೆ ಹತ್ತುವುದನ್ನು, ಖಡ್ಗ ತಿರುಗಿಸುವುದನ್ನು ಕಲಿಸುತ್ತಿದ್ದರು. ಓರಿಗೆಯ ಗೆಳತಿಯರ ಜೊತೆಗೆ ಆಟವಾಡಿ ಬರುತ್ತಿದ್ದ ಲಿಂಗಮ್ಮ ತುಂಬಾ ದಿಟ್ಟ ಸ್ವಭಾವದವಳಾಗಿದ್ದಳು.

ಕಲ್ಯಾಣದ ಅನುಭವ ಮಂಟಪದಲ್ಲಿ ಶರಣತತ್ತ್ವ ಪ್ರಚಾರದ ಶಿಕ್ಷಣ ಪಡೆದವರಲ್ಲಿ ಒಬ್ಬರಾದ ವೀರಯ್ಯನವರು ಸೊಲ್ಲಾಪುರದ ಮಾರ್ಗವಾಗಿ ವಿಜಾಪುರಕ್ಕೆ ಹೊರಟ್ಟಿದ್ದಾಗ ಅವರನ್ನು 'ಉಮರಾಣಿ' ಆಕರ್ಷಿಸಿತು. ಹಳ್ಳದ ದಂಡೆ ಬಾಳಿಯ ತೋಟ ಹೂವು ಹಣ್ಣಿನ ವಿಸ್ತಾರವಾದ ಪ್ರಾಂಗಣದ ಮಧ್ಯದಲ್ಲಿ ವೀರಮಲ್ಲಯ್ಯನ ದೇವಸ್ಥಾನವಿತ್ತು. ವೀರಮಲ್ಲಯ್ಯನ ದರ್ಶನಕ್ಕೆಂದು ಪ್ರತಿದಿನ ಭಕ್ತಿ ಭಾವದಿಂದ ಬರುವ ಜನರನ್ನು ಕಂಡು ವೀರಯ್ಯನವರ ಮನಸ್ಸು ಮುದಗೊಂಡಿತು. ಉಮರಾಣಿಯ ಜನ ಸತ್ಯ ಸಾತ್ವಿಕರೆನಿಸಿದರು. ಇಲ್ಲಿ ಶರಣತತ್ತ್ವದ ಬೀಜ ಬಿತ್ತಿದರೆ, ಭಕ್ತಿಯ ಬೆಳೆ ಹುಲುಸಾಗಿ

ಬರಬಹುದು ಎಂದು ಅಲ್ಲಿ ಕೆಲವು ದಿವಸ ಉಳಿದುಕೊಳ್ಳುತ್ತಾರೆ. ಸಾತ್ವಿಕ ಸ್ವಭಾವದ ತೇಜಸ್ವಿ ಮುಖದ ವೀರಯ್ಯನವರು ಸ್ನಾನ ಪೂಜೆಯ ನಂತರ ಕಂತಿ ಭಿಕ್ಷೆ ಎತ್ತಿ ಪ್ರಸಾದ ಮಾಡುತ್ತಿದ್ದರು. ಸಾಯಂಕಾಲ ದೇವಸ್ಥಾನದಲ್ಲಿ ವಚನಗಳು ಹಾಡುತ್ತಾ ಅದರ ವಿವರಣೆಯನ್ನು ಹೇಳಿ ಕೊಡುತ್ತಿದ್ದರು. ಉಮರಾಣಿಯ ಜನರು ತಮ್ಮೂರಿನ ಮಾರ್ಗವಾಗಿ ಕಲ್ಯಾಣದಿಂದ ಸಂಚರಿಸುತ್ತಿರುವ ಚರಜಂಗಮರ ಬಾಯಿಂದ ಕಲ್ಯಾಣದ ಶರಣರು ಮಾಡುತ್ತಿರುವ ಕಾಯಕ, ದಾಸೋಹದ ಕಾರ್ಯಗಳು ಮತ್ತು ವಚನಗಳ ಸವಿಯನ್ನು ಪಡೆದವರಾಗಿದ್ದರು. ವೀರಯ್ಯನವರು ಕೆಲವು ವರ್ಷಗಳ ಕಾಲ ಕಲ್ಯಾಣದಲ್ಲಿದ್ದು ಶರಣ ತತ್ತ್ವದ ಬಗೆಗೆ ಶಿಕ್ಷಣ ಪಡೆದಂಥವರು ಎಂಬುದನ್ನು ಕೇಳಿ ಊರಗೌಡರನ್ನೊಳಗೊಂಡು ಎಲ್ಲ ಜನರ ಪ್ರೀತಿಗೆ ಪಾತ್ರರಾಗಿದ್ದರು. ಎಲ್ಲರಿಗೂ ತಮ್ಮ ಮಕ್ಕಳಿಗೆ ಅಕ್ಷರಜ್ಞಾನ ಮಾಡಿಸುವ ಹಂಬಲವಿದ್ದರೂ ಗ್ರಾಮದಲ್ಲಿ ಯಾವ ಮಠವಿರಲಿಲ್ಲ ಮತ್ತು ಕಲಿಸುವವರೂ ಯಾರೂ ಇರಲಿಲ್ಲ. ಅದಕ್ಕಾಗಿ ಚರಜಂಗಮರಾಗಿ ಬಂದಿರುವ ವೀರಯ್ಯನವರಿಗೆ ಬೇಕಾದ ಅನುಕೂಲವನ್ನು ಮಾಡಿಕೊಟ್ಟು 'ಉಮರಾಣಿಯಲ್ಲಿಯೇ' ಇರಿಸಿಕೊಳ್ಳಬೇಕೆಂದು ನಿರ್ಧರಿಸಿದರು.

ಗ್ರಾಮದ ಪ್ರಮುಖರೆಲ್ಲ ಕೂಡಿ ವೀರಯ್ಯನವರಿಗೆ "ಸ್ವಾಮಿ' ತಾವು ನಮ್ಮ ಉದ್ಧಾರಕ್ಕಾಗಿ ಬಂದಿರುವ ಜಂಗಮಮೂರ್ತಿಗಳು. ದಯವಿಟ್ಟು ನಮ್ಮ ಊರಿನಲ್ಲೇ ನೆಲೆ ನಿಂತು ನಮ್ಮ ಮಕ್ಕಳಿಗೆ ಅಕ್ಷರಾಭ್ಯಾಸದ ಜೊತೆಗೆ ಶರಣರ ವಚನಗಳು ಮತ್ತು ಇಷ್ಟಲಿಂಗದ ಮಹತ್ವವನ್ನು ನಮ್ಮೆಲ್ಲರಿಗೂ ತಿಳಿಸಿಕೊಡಬೇಕು. ತಮಗೆ ಬೇಕಾದ ವ್ಯವಸ್ಥೆಯನ್ನು ಮಾಡಿಕೊಡುತ್ತೇವೆ" ಎಂದರು. ಆಗ ವೀರಯ್ಯನವರು ನಿಮ್ಮೆಲ್ಲರ ಭಕ್ತಿ ಪ್ರೀತಿ ಕಂಡು ನನಗೂ ಇಲ್ಲೇ ಇರಬೇಕೆನಿದೆ. ತಾವೆಲ್ಲರೂ ಸಾಯಂಕಾಲ ದೇವಸ್ಥಾನದಲ್ಲಿ ಸೇರಬೇಕು. ಕಲ್ಯಾಣದ ಶರಣರ ಬಗೆಗೆ ನಮ್ಮಪ್ಪ ಬಸವಣ್ಣನವರ ಮಹತ್ವದ ಉದ್ದೇಶವನ್ನು ತಿಳಿಸುತ್ತೇನೆ. ಆಗಲಿ ಸ್ವಾಮಿ ಕಲ್ಯಾಣದ ಶರಣರ ಸುದ್ದಿ ಕೇಳಬೇಕೆಂಬ ಹಂಬಲದಲ್ಲಿದ್ದೇವೆ, ಅವರ ವಚನಗಳು ಕಲಿಯಲು ಆತುರ ಪಡುತ್ತಿದ್ದೇವೆ.

ಕಲ್ಯಾಣದ ಅನುಭವ ಮಂಟಪದಲ್ಲಿ ಬಸವಾದಿ ಪ್ರಮಥರು ಮಾನವರಾಗಿ ಹುಟ್ಟಿದ ಮೇಲೆ ಪ್ರತಿಯೊಬ್ಬರೂ ಸತ್ಯಶುದ್ಧ ಕಾಯಕ ಮಾಡಬೇಕು ಎಂದು ಹೇಳುತ್ತಿದ್ದರು. ದೇಶದ ನಾನಾ ಭಾಗಗಳಿಂದ ಜನರು ನದಿಯ ಪ್ರವಾಹದಂತೆ ಹರಿದು ಮಹಾಮನೆಗೆ ಬರುತ್ತಿದ್ದರು. ಅವರಲ್ಲಿ ಆಧ್ಯಾತ್ಮದ ಜ್ಞಾನ ಪಡೆಯಬೇಕು ಎಂದು ಬರುವವರು ಕೆಲವರಾದರೆ, ಕುತೂಹಲದಿಂದ ಹಲವರು ಬರುತ್ತಿದ್ದರು. ಇನ್ನೂ ಕೆಲವರು ಮಹಾಮನೆಯಲ್ಲಿ ಪ್ರಸಾದದ ಸವಿಯನ್ನು ಸವಿಯಬೇಕೆಂಬ ಹಂಬಲದಿಂದಲೂ

ಬಂದವರು. ಮೃಷ್ಟಾನ್ನ ಬೋಜನ ಸವಿದು ಹರಟೆಹೊಡೆಯ ಬೇಕೆಂದು ಬಂದವರು ಮಹಾಮನೆಯಲ್ಲಿ ನೀಲಾಂಬಿಕಾ, ಅಕ್ಕನಾಗಲಾಂಬಿಕಾ, ಗಂಗಾಂಬಿಕಾ ತಾಯಂದಿರ ಪ್ರೀತಿ ವಾತ್ಸಲ್ಯದ ಮಮತೆಯ ಮಡಿಲಲ್ಲಿ ಬದಲಾವಣೆಗೊಂಡು, ಅಂಗದ ಮೇಲೆ ಲಿಂಗಧರಿಸಿಕೊಂಡು ಕಾಯಕದಲ್ಲಿ ತೊಡಗುತ್ತಾರೆ. ಶರಣರು ಕೇವಲ ಕಾಯಕ ಮಾಡಿದರೆ ಸಾಲದು ಜೊತೆಗೆ ಸಾಧನೆಯನ್ನೂ ಮಾಡಬೇಕು ಎಂದು ತಿಳಿಸುತ್ತಾರೆ.

ಅನುಭವ ಮಂಟಪದಲ್ಲಿ ಒಂದು ದಿನ, ಶರಣ ತತ್ತ್ವಗಳ ಪ್ರಚಾರದ ವಿಷಯಗಳ ಬಗ್ಗೆ ತಾವು ಪಡೆದ ಶಿವಯೋಗದ ಆನಂದವನ್ನು ಕುರಿತು ಪ್ರಸ್ತಾಪ ನಡೆದಿತ್ತು. ಆಗ ಹಿರಿಯ ಶರಣರೊಬ್ಬರು ಹೇಳಿದರು. ಇಲ್ಲಿ ಬಂದು ಲಿಂಗಧಾರಿಗಳಾಗಿ ಕಾಯಕ ಕೈಗೊಂಡವರು ನೂರಾರು ಜನರಿದ್ದಾರೆ. ಶಿವಯೋಗ ಮಾರ್ಗದಲ್ಲಿ ಸಾಧಕರಾಗಿ ಸಾಗಿದವರಾಗಿದ್ದಾರೆ. ಇನ್ನೂ ಕೆಲವರು ಅನುಭವ ಮಂಟಪದಲ್ಲಿ ಶಿವಾನುಭವ ಗೋಷ್ಠಿಗಳನ್ನು ಆಲಿಸುತ್ತಾ, ಮಹಾಮನೆಯಲ್ಲಿ ನೀಲಮ್ಮತಾಯಿಯವರ ದಾಸೋಹದ ಮೃಷ್ಟಾನ್ನ ಭೋಜನದ ಸವಿಯನ್ನು ಸವಿದವರು ತ್ರಿಪುರಾಂತಕ ಕೆರೆಯ ಸುತ್ತ ಹರಟೆ ಹೊಡೆಯುತ್ತ ಕಾಲಕಳೆಯಬಾರದು ಎಂಬುದರ ಬಗ್ಗೆಯು ಚರ್ಚೆಯಾಗುತ್ತಿತ್ತು.

ಅಲ್ಲಮಪ್ರಭುಗಳು, ಬಸವಣ್ಣನವರು, ಚನ್ನಬಸವಣ್ಣನವರು, ಮಡಿವಾಳ ಮಾಚಿದೇವರೊಡಗೂಡಿ ಸಪ್ತಗಣಾಧೀಶರೆಲ್ಲರೂ ಸೇರಿ ಮಹತ್ವದ ಕಾರ್ಯಕ್ಕೆ ಮುಂದಾಗುತ್ತಾರೆ. ಎಲ್ಲ ಭಾಗದ ಜನ ಬಂದು ಕಲ್ಯಾಣದಲ್ಲಿಯೇ ಇದ್ದರೆ ಸಾಲದು. ಎರಡು–ಮೂರು ವರ್ಷಗಳು ಶರಣರ ಪರಿಸರದಲ್ಲಿದ್ದು, ನಿಷ್ಠೆಯಿಂದ ಕಾಯಕ ಮಾಡುತ್ತ ಶಿವಯೋಗ ಸಾಧನೆಯನ್ನು ಅಚ್ಚುಕಟ್ಟಾಗಿ ಅರಿತವರು, ಮಧುರ ಕಂಠದಿಂದ ವಚನ ಗಾಯನ ಮಾಡುವಂಥವರನ್ನು ಆಯ್ಕೆಮಾಡಿ ಅವರಿಗೆ ಇಷ್ಟಲಿಂಗಧಾರಣೆಯ ವಿಧಾನವನ್ನು ಕಲಿಸಬೇಕು. ಅಷ್ಟಾವರಣ, ಪಂಚಾಚಾರ ಷಟಸ್ಥಲಗಳ ಆಚರಣೆಯನ್ನು ಜನತೆಗೆ ಬೋಧಿಸುವ ರೀತಿಯನ್ನು ಅರಿತುಕೊಂಡಿರುವಂಥ ಶರಣರನ್ನು ನಾಡಿನ ಎಲ್ಲಾ ಕಡೆಗೂ ಶರಣತತ್ತ್ವದ ಪ್ರಚಾರಕ್ಕೆ ಕಳಿಸಬೇಕಾಗಿದೆ. ಆಗ ಹೊಸ ಸಮಾಜದ ರಚನೆಯ ಕೆಲಸ ಸುಲಭವಾಗುವುದು. ಜನರು ಅನುಭಾವದ ನುಡಿಗಳಿಂದ ಮತ್ತು ಸತ್ಸಂಗದ ಪ್ರಭಾವದಿಂದ ಕೆಟ್ಟದ್ದನ್ನು ಮರೆತು ಒಳ್ಳೆಯವರಾಗುವರು ಎಂದು ನಿರ್ಣಯ ಮಾಡಿದರು. ಇಡೀ ಮಾನವಕುಲಕ್ಕೆ ಪ್ರಯೋಜನಕಾರಿಯಾಗುವ ಅಪ್ಪ ಬಸವಣ್ಣನವರ ಸತ್ಯಶುದ್ಧಕಾಯಕದಲ್ಲಿ, ಅಳಿಲುಸೇವೆ ಮಾಡಲು ಬಸವಾದಿ ಶರಣರ ವಚನಗಳ ಕಟ್ಟುಗಳನ್ನು ಹಿಡಿದು ಸಂಚರಿಸುತ್ತಾ ನಿಮ್ಮಲ್ಲಿಗೆ ಬಂದಿರುವೆ. ತಾವೆಲ್ಲರೂ ಶರಣತತ್ತ್ವವನ್ನು ಅರಿತುಕೊಳ್ಳುವಿರೆಂದು ಆಶಿಸುತ್ತೇನೆ ಎಂದು ತಿಳಿಸಿದರು. ಅದರಂತೆ ವೀರಯ್ಯನವರೂ

ದಿನಾಲೂ ಸಂಜೆಯ ವೇಳೆಯಲ್ಲಿ ಒಂದೊಂದು ವಚನವನ್ನು ಹಾಡುತ್ತಾ ಬಯಸಿದವರಿಗೆ ಇಷ್ಟಲಿಂಗಧಾರಣೆ ಮಾಡುತ್ತಿದ್ದರು.

ಅನಂತರಾಯ ಸಿರಸಮ್ಮರು ಅತ್ಯಂತ ಆಸಕ್ತಿಯಿಂದ ಲಿಂಗಮ್ಮನನ್ನು ಕರೆದುಕೊಂಡು ವಚನಾನುಭಾವದಲ್ಲಿ ಪಾಲ್ಗೊಳ್ಳುತ್ತಿದ್ದರು. ಲಿಂಗಮ್ಮ ತದೇಕ ಚಿತ್ತದಿಂದ ವೀರಯ್ಯನವರ ನುಡಿಗಳನ್ನು ಆಲಿಸುತ್ತಿದ್ದಳು. ಮನೆಗೆ ಬರುತ್ತಿದ್ದಂತೆ ಇಷ್ಟಲಿಂಗ ಪೂಜೆಯೊಂದಿಗೆ ವಚನ ಸಂಗೀತವನ್ನು ಭಾವಪೂರ್ಣವಾಗಿ ಹಾಡುತ್ತಿದ್ದಳು. ಉಮರಾಣಿ ಗ್ರಾಮದಲ್ಲಿ ಲಿಂಗಮ್ಮನ ಗೆಳತಿ ಊರಗೌಡನ ಮಗಳು ಗೌರಮ್ಮನಿಗೆ ಪೂಜಿಸಲು ಲಿಂಗವೊಂದನ್ನು ಕೊಟ್ಟಳು. ಆ ಲಿಂಗವು ಗೌಡರ ಮನೆಯ ಜಗುಲಿಯ ಮೇಲೆ ಪೂಜಿಸಿಕೊಳ್ಳುತ್ತಿತ್ತು. ಗೌಡನ ಮಗಳಾದ ಗೌರಮ್ಮ ಆತ್ಮಸಂರಕ್ಷಣೆಗೆ ಕುದುರೆ ಸವಾರಿ, ಕತ್ತಿವರಸೆ ಕಲಿಯುವುದರ ಜೊತೆಗೆ ಸಂಗೀತ, ನೃತ್ಯ, ಅಕ್ಷರಭ್ಯಾಸ ಮಾಡುತ್ತಿದ್ದಳು. ಗೆಳತಿ ಗೌರಮ್ಮನೊಂದಿಗೆ ಲಿಂಗಮ್ಮ ಸದಾ ಒಡನಾಡಿಯಾಗಿದ್ದಳು. ಪ್ರಾಚೀನ ಕಾಲದಲ್ಲಿ ಸಾಮಾನ್ಯ ಮಹಿಳೆಯರಿಗೆ ವಿದ್ಯಾಭ್ಯಾಸ ನೀಡುತ್ತಿರಲಿಲ್ಲ. ಆದರೆ ಸಮಾಜದ ಮೇಲ್ವರ್ಗದ ಜನಗಳಲ್ಲಿ ಅಂದರೆ ದೊಡ್ಡ ದೊಡ್ಡ ಧನಿಕರ, ಅಧಿಕಾರಿಗಳ ಮನೆಗಳಲ್ಲಿ ಮತ್ತು ಅರಮನೆಗಳಲ್ಲಿ ಮಾತ್ರ ಹೆಣ್ಣು ಮಕ್ಕಳಿಗೆ ಬಾಲ್ಯದಲ್ಲಿ ತಕ್ಕಮಟ್ಟಿಗೆ ವಿದ್ಯಾಭ್ಯಾಸ ಮಾಡಿಸುತ್ತಿದ್ದರು. ಹೀಗಾಗಿ ಲಿಂಗಮ್ಮ ಗೆಳತಿ ಗೌರಮ್ಮನ ಜೊತೆಯಲ್ಲಿ ಇದ್ದು, ಅಕ್ಷರಜ್ಞಾನ ಪಡೆದು ವಚನಗಳನ್ನು ಓದುವ ಅವುಗಳನ್ನು ಅರಿತುಕೊಳ್ಳುವ ಪ್ರಯತ್ನದಲ್ಲಿರುತ್ತಿದ್ದಳು.

ಲಿಂಗಮ್ಮನ ತಂದೆ-ತಾಯಿಯರು ಶಿವನ ಆರಾಧಕರಾದ್ದರಿಂದ ಲಿಂಗಮ್ಮನು ಬಾಲ್ಯದಿಂದಲೆ ತದೇಕ ದೃಷ್ಟಿಯಿಂದ ಪೂಜಿಸುವುದು, ದೀನ ದಲಿತರ ಬಗ್ಗೆ ಸಂಪ್ರೀತಿ, ಅನುಕಂಪದಿಂದ ಸಮಾಜೋಧಾರ್ಮಿಕ ನಡತೆಗಳಿಂದ ಆಧ್ಯಾತ್ಮಿಕ ಒಲವು ಜಾಗೃತವಾಗುತ್ತ ದಿನೇ ದಿನೇ ಮೌನಿಯಾಗಿ ಶಿವಚಿಂತನೆಯಲ್ಲಿಯೆ ಇರುತ್ತಿದ್ದಳು. ಚಿಕ್ಕವಳಿದ್ದರೂ ಪೂಜೆ ಧ್ಯಾನಾದಿಗಳಲ್ಲಿ ತೊಡಗಿ ಅಂತರ್ಮುಖಿಯಾಗುತ್ತಿದ್ದಳು. ಶಿವಯೋಗದ ಆಚರಣೆಯಲ್ಲಿ ನಿರತಳಾದ ಲಿಂಗಮ್ಮ, ಕಲ್ಯಾಣದ ಮಹತ್ವವನ್ನು ಮತ್ತು ಶರಣರು ಕೈಕೊಂಡ ಕಾಯಕದ ಘನತೆಯನ್ನು ವೀರಮಲ್ಲಯ್ಯನ ದೇವಸ್ಥಾನದಲ್ಲಿ ಶಿವಾನುಭವ ನಡೆಸುತ್ತಿದ್ದ ವೀರಯ್ಯನವರಿಂದ ಅರಿತಿದ್ದಳು.

ಲಿಂಗಮ್ಮ ಮನೆಯಲ್ಲಿ ಒಬ್ಬಳೆ ಇರುತ್ತಿದ್ದಳು ಹೊರಗಡೆ ಹೋಗುವುದು ಗೆಳತಿಯರ ಜೊತೆಗೆ ಬೆರೆಯುವುದು ತುಂಬಾ ವಿರಳ. ಒಮ್ಮೆ ಲಿಂಗಮ್ಮ, ಲಿಂಗಮ್ಮ, ಎಂದು ಗೆಳತಿಯರೆಲ್ಲ ಬಂದು ಕರೆದರು. ಆಗ ಸಿರಸವ್ವ ಲಿಂಗಮ್ಮ, ನೀನು ಇಷ್ಟಲಿಂಗ ಪೂಜೆ, ವಚನಗಳು ಎನ್ನುತ್ತಾ ಹಾಡುವುದರಲ್ಲೆ ಸಮಯ ಕಳೆಯುತ್ತಿಯಲ್ಲ ಮಗಳೆ!

ಒಮ್ಮೆಯಾದರೂ ಗೆಳತಿಯರ ಕರೆಗೆ ಓಗೊಟ್ಟು ಹೋಗಬಾರದೆ, ನಿನ್ನ ಗೆಳತಿಯ ದೊಡ್ಡವ್ವನವರಾದ ಸಿದ್ದವ್ವನವರು ದೂರದ ಸೊಲ್ಲಾಪುರದಿಂದ ಬಂದಿದ್ದಾರಂತೆ ಹೋಗಿ ಮಾತಾಡಿಸಿಕೊಂಡು ಬಾರವ್ವ ಎಂದರು. ಲಿಂಗಮ್ಮ ಸೊಲ್ಲಾಪುರ ಎಂಬುದನ್ನು ಕೇಳಿದ ತಕ್ಷಣವೇ ತಟ್ಟನೆ ಎದ್ದು ಬರುತ್ತಾಳೆ. ಗೆಳತಿಯ ಮನೆಯಲ್ಲಿ ಸಿದ್ದವ್ವನನ್ನು ಕಂಡು ದೊಡ್ಡವ್ವ ನೀವು ತುಂಬಾ ಚೆನ್ನಾಗಿ ಹಾಡುತ್ತೀರಂತೆ ಯಾವ ಹಾಡ ಹಾಡುತ್ತೀರಿ? ಎಂದು ಕೇಳಿದಾಗ ಅವರು "ತಂಗೀ, ನಮ್ಮ ಸೊಲ್ಲಾಪುರದ ಸಿದ್ಧರಾಮೇಶ್ವರರು ಅಂದರೆ ನಮ್ಮೂರ ಜನರಿಗೆ ಸಾಕ್ಷಾತ್ ಶಿವನಂಗ ಕಾಣ್ತಾರ" ಅವರು ಸೊಲ್ಲಾಪುರದಲ್ಲಿ ಮಾಡಿದ ಕಾರ್ಯಗಳನ್ನು ನೋಡಿದ್ರ ಕೈಲಾಸಕ್ಕ ಹೋದಂಗ ಆಗ್ತದ, ಅವರ ನುಡಿಗಳನ್ನು ಕೇಳುದ ನಮಗ ಒಂದು ಆನಂದ, ಅದಕ್ಕ ನಮಗ ಬಂದ್ಹಂಗ ಪದ ಕಟ್ಟಿ ನಾವೆಲ್ಲಾ ಬೀಸೂಕಲ್ಲಿನ ಪದಾ ಮೂರನಾಲ್ಕ ಸಾಲಿನವು ಇರತಾವ ಹಾಡತೇವಿ. "ಲಿಂಗಮ್ಮ, ದೊಡ್ಡವ್ವ ನಾನು ಕಲಿಬೇಕು ಹಾಡವ್ವ.

ಜಾಜಿಮಲ್ಲಿಗಿ ಜೂಜಮಲ್ಲಿಗಿ ಅರಳಮಲ್ಲಿಗಿ ಶಾವಂತಿಗ್ಹೂವಾ
ನಿಮ್ಮ ಪೂಜೆಗೆ ಬಂದಾವೇಳಯ್ಯಾ ಸಿದ್ಧರಾಮಾ
ನಿಮಗೆ ಪೂಜೆ ಮಾಡ್ಯಾರೇಳಯ್ಯಾ.

ಶರಣರ ಸುಳಿಗಾಳಿ ನೆರಳ ನಮ್ಮಮ್ಯಾಲ
ಹಾರೆ ಹೊತ್ತಿಲೆದ್ದು ಹರದ್ಯಾನ। ಗುರುಧ್ಯಾನ
ಇನ್ನೊಬ್ಬರ ಧ್ಯಾನ ನಮಗಿಲ್ಲ। ಸಿದ್ಧರಾಮಾ
ನಿಮ್ಮ ಧ್ಯಾನದಲ್ಲಿ ಬೆಳಗಾಗಿ.

ಹೀಗೆಯೇ ಹದಿನಾಲ್ಕು ನುಡಿಯನ್ನು ಹಾಡಿದಳು ಸಿದ್ದವ್ವ. ಲಿಂಗಮ್ಮ ಮಂತ್ರಮುಗ್ಧಳಾಗಿ ನೋಡುತ್ತಿದ್ದಳು. ಅಲ್ಲಿ ಕುಳಿತವರೆಲ್ಲರೂ ಸಿದ್ದಕ್ಕನ ಹಾಡ ಕೇಳುತ್ತಾ ಕುಳಿತರೆ ಹೊತ್ತು ಹೋಗುವುದು ಗೊತ್ತಾಗುವುದಿಲ್ಲ. ಸಿದ್ಧರಾಮರು ಸೊಲ್ಲಾಪುರದಲ್ಲಿ ಕಲ್ಯಾಣದ ಶರಣರ ಪ್ರಭಾವದ ವಾತಾವರಣ ಹರಡಿಸಿ ಬಿಟ್ಟಿದ್ದಾರಂತೆ ಎಂದು ಹೇಳುತ್ತಾ ಹೊರಡುತ್ತಾರೆ.

ಲಿಂಗಮ್ಮ ತಂದೆಯನ್ನು ಕುರಿತು "ಅಪ್ಪ ಬಹಳ ಜನರ ಬಾಯಿಂದ ಸಿದ್ಧರಾಮೇಶ್ವರರ ಕಾರ್ಯಗಳು, ಕೆರಿಯ ವಿಸ್ತಾರ ಗುಡಿಯ ವೈಭವ ಅಲ್ಲದೆ ಅವರು ಅಪ್ಪ ಬಸವಣ್ಣನವರ ಬಗ್ಗೆ ರಚಿಸಿದ ತ್ರಿಪದಿಗಳ ವರ್ಣನೆಯನ್ನು ಕೇಳಿ, ಕೇಳಿ ಸೊಲ್ಲಾಪುರ ನೋಡಬೇಕು, ಕಲ್ಯಾಣದ ಶರಣರ ದರ್ಶನ ಪಡೆಯಬೇಕು ಅನಿಸುತ್ತಿದೆ". ಅನಂತರಾಯರು,

ನಮಗಿಬ್ಬರಿಗೂ ಕಲ್ಯಾಣ, ಸೊಲ್ಲಾಪುರ ನೋಡಬೇಕು ಎಂಬ ಆಸೆಯಿದ್ದರೂ ಕಲ್ಯಾಣ ದೂರದ ದಾರಿ ಅಲ್ಲಿಗೆ ಹೋಗುವುದು ಅನುಕೂಲ ಆಗುವುದಿಲ್ಲ. ಆದರೆ ನಿನ್ನಿಷ್ಟದಂತೆ ನಾವೆಲ್ಲರೂ ವೀರಯ್ಯನವರ ಜೊತೆಗೂಡಿ ಒಮ್ಮೆ ಸೊಲ್ಲಾಪುರಕ್ಕೆ ಹೋಗಿ ಬರೋಣ ಎನ್ನುತ್ತಾರೆ.

ವೀರಯ್ಯನವರು ಉಮರಾಣಿಗೆ ಬಂದಮೇಲೆ ಅವರ ಶಿವಾನುಭವದ ನುಡಿಗಳು ಕೇಳಿ, ಲಿಂಗಧಾರಿಗಳಾಗಿ ಇದ್ದವರಲ್ಲಿ ಎಲ್ಲರಿಗಿಂತಲೂ ಲಿಂಗಮ್ಮ ಇಷ್ಟಲಿಂಗ ನಿಷ್ಠಾವಂತಳಾಗಿದ್ದಳು. ಆಕೆಯ ಪಾಲಿಗೆ ಇಷ್ಟಲಿಂಗ ದೊರೆತದ್ದು ಬಡವನಿಗೆ ಭಾಗ್ಯ ದೊರತಂತೆ, ಹಸಿದವನಿಗೆ ಅಮೃತ ಸಿಕ್ಕಂತೆ ಆಗಿತ್ತು. ಪ್ರತಿದಿನ ನಸುಕಿನ ಜಾವದಲ್ಲಿ ಎದ್ದು ಸೂರ್ಯೋದಯಕ್ಕೆ ಮೊದಲು ಲಿಂಗಪೂಜೆಗೆ ಕುಳಿತು, ಅಂಗೈಯ ಲಿಂಗದಲ್ಲಿ ನೆಟ್ಟ ದೃಷ್ಟಿಯನ್ನಿರಿಸಿ ಧ್ಯಾನಮಗ್ನಳಾದರೆ, ತನ್ನನ್ನು ತಾನೇ ಮರೆತು ಬಿಡುತ್ತಿದ್ದಳು. ನಿಸರ್ಗ ನಿಯಮದಂತೆ ಲಿಂಗಮ್ಮನ ದೈಹಿಕ ಬೆಳವಣಿಗೆಯು ಹದಿನಾಲ್ಕು ವರ್ಷ ಎಂದರೆ ನಂಬಲಾರದಂತೆ, ವಯಸ್ಸಿಗೆ ಮೀರಿದ ಬೆಳವಣಿಗೆಯಾಗಿತ್ತು. ಜೊತೆಗೆ ಭಕ್ತಿ-ಜ್ಞಾನಗಳೂ ಬೆಳೆಯುತ್ತಿದ್ದವು. ಅಂತರಂಗ ಶಾಂತಸಾಗರವಾಗಿ, ದೈವೀಕರಣದ ಆನಂದದಲ್ಲಿ ಓಲಾಡುತ್ತಿದ್ದಳು.

ಸತ್ಯಶುದ್ಧ ಕಾಯಕದಲ್ಲಿ ನಿರತ ಅಕ್ಕಸಾಲಿಗ ವೃತ್ತಿಯ ಅನಂತರಾಯರು ಬಂಗಾರದ ಆಭರಣ ಸಿದ್ಧಗೊಳಿಸುವಲ್ಲಿ ಕುಶಲರಾಗಿದ್ದು, ತನ್ನ ಪ್ರಾಮಾಣಿಕತನದಿಂದ ಸುತ್ತಲಿನ ಹಳ್ಳಿಗರ ಪ್ರೀತಿ ವಿಶ್ವಾಸಗಳಿಸಿದ್ದರು. ಲಿಂಗಮ್ಮ ತಂದೆಯು ಆಭರಣ ಮಾಡಲು ಬಂಗಾರ ಕರಗಿಸುತ್ತಿರುವಾಗ, ಅಚ್ಚರಿಯಿಂದ ನೋಡುತ್ತಿದ್ದಳು. "ಅಪ್ಪಾ ಈ ಬಂಗಾರ ಯಾಕೆ ಕಾಯಿಸಿದ್ರಿ" ಎಂದು ಕೇಳುತ್ತಾಳೆ. "ಲಿಂಗಮ್ಮ, ಬಂಗಾರ ಕಾಯಿಸಿ ಮೆತ್ತಗೆ ಮಾಡಿ ಬಡಿದಾಗಲೇ ಬೇಕಾದ ಆಕಾರದಲ್ಲಿ ರೂಪ ಕೊಡಬಹುದವ್ವ, "ಅಪ್ಪಾ, ಹೋದ ತಿಂಗಳು ಜಂಗಮರು ಬಂದಿದ್ದರಲ್ಲ, ಅವರು ಹೇಳಿದ ವಚನವೊಂದು ಹಾಡಬೇಕು ಅನಿಸುತ್ತಿದೆ.

ಕರಗಿಸಿ ಎನ್ನ ಮನದ ಕಾಳಿಕೆಯ ಕಳೆಯಯ್ಯಾ;
ಒರೆಗೆ ಬಣ್ಣಕ್ಕೆ ತಂದೆನ್ನ ಪುಟವಿಕ್ಕಿ ನೋಡಯ್ಯಾ.
ಕಡಿಹಕ್ಕೆ ಬಡಿಹಕ್ಕೆ ತಂದೆನ್ನ ಕಡೆಯಾಣಿಯ ಮಾಡಿ,
ನಿಮ್ಮ ಶರಣರ ಪಾದಕ್ಕೆ ತೊಡಿಗೆಯ ಮಾಡಿ ಸಲಹಯ್ಯಾ,
ಕೂಡಲಸಂಗಮದೇವಾ

– ಬಸವಣ್ಣನವರು

ಭಕ್ತಿಭಂಢಾರಿ ಅಪ್ಪ ಬಸವಣ್ಣನವರು ಮಂತ್ರಿಯ ಸ್ಥಾನದಲ್ಲಿದ್ದವರು. ಅವರಿಗೆ ನಮ್ಮ ಅಕ್ಕಸಾಲಿಗರ ಕೆಲಸಾನೂ ಗೊತ್ತಲ್ಲವ್ವ! ಎಂಥ ಚೆಂದದ ವಚನ ಬರೆದಿದ್ದಾರೆ ಲಿಂಗಮ್ಮ ಎಂದರು. "ಈ ವಚನದ ಅರ್ಥ ಹೇಳಿ ಅಪ್ಪ" "ತಾಯಿ, ನಮ್ಮಂಥವರಿಗೆ ವಚನಗಳ ಅರ್ಥ ಹೇಗೆ ಗೊತ್ತಾಗುತ್ತವ್ವ, ನಮ್ಮ ಕೆಲಸದಲ್ಲಿ ನಾವು ಮಾಡುವುದು ತಿಳಿಯುತ್ತದೆ ಅಷ್ಟೆ. ಅಕ್ಕಸಾಲಿಗರು ಬಂಗಾರದೊಳಗಿನ ಕಸರ ತೆಗೆಯಲಿಕ್ಕೆ ಬಂಗಾರ ಅಗ್ಗಿಷ್ಟಿಕೆ ಬೆಂಕಿಯೊಳಗೆ ಹಾಕುತ್ತಾರೆ. ಕಸರೆಲ್ಲವೂ ಹೋದ ಮೇಲೆ ಪುಟಕ್ಕಿಟ್ಟ ಚೊಕ್ಕ ಚಿನ್ನ ಆಗುತ್ತದೆ. ಆಗ ಅದರಿಂದ ತಮಗೆ ಬೇಕಾದ ರೂಪ ಕೊಟ್ಟು ಆಭರಣ ಮಾಡಬಹುದು. ಅಕ್ಕಸಾಲಿಗರ ಕುಶಲಕಾರ್ಯಕ್ಕೆ ಅದನ್ನು ಹೋಲಿಸಿದ್ದಾರೆ ಎನಿಸಿತು. ಅದಕ್ಕೆ ಬಸವಣ್ಣನವರು ಚಿನ್ನದಂಥ ಮನುಷ್ಯರು, ಪರಿಶುದ್ಧ ಪರಿಪೂರ್ಣಗುರು ಅಪ್ಪ ಬಸವಣ್ಣನವರನ್ನು ಕಾಣುವುದು ಸಾಕ್ಷಾತ್ ದೇವರನ್ನು ಕಂಡಂತೆ ಅಲ್ಲವೆ ಲಿಂಗವ್ವ

ಹೌದಪ್ಪ, ದೇವರ ಸ್ವರೂಪವೇ ಅವರು **"ಉತ್ತಿಬಿತ್ತುವ ಮಂತ್ರ ಬಿತ್ತಿ ಬೆಳೆಯುವ ಮಂತ್ರ ಸತ್ಯ ಶಿವ ಮಂತ್ರ ನಿನ್ಹೆಸರು । ಬಸವಯ್ಯ ಮರ್ತ್ಯದೊಳು ಮಂತ್ರ ಜೀವನಕೆ."** ಎಂದು ಜನರೆಲ್ಲರು ಕೊಂಡಾಡುತ್ತಾರೆ. ಎಲ್ಲ ಕಾಯಕದ ಬಗೆಗೆ ಬಲ್ಲಿದವರು ಬಸವಣ್ಣನವರು. ಅದಕ್ಕೆ ಈ ವಚನದಲ್ಲಿ ಸಾಧನೆಯ ಮೂಲವಾದ ಈ ಮನಸ್ಸನ್ನು ಅನುಭವದ ಮೂಸೆಯಲ್ಲಿಟ್ಟು ಕರಗಿಸಿ ಅದರ ದೋಷಗಳನ್ನೆಲ್ಲ ಕಳೆಯಯ್ಯಾ, ಮನದ ಅವಗುಣವೆಂಬ ಅಜ್ಞಾನದ ಗಟ್ಟಿಯ ಕಿಲುಬನ್ನು ಕಳೆದು ಅಲ್ಪ ಭಾವನೆಗಳು ಅಳಿಯುವಂತೆ ಮಾಡಯ್ಯಾ, ಚಿನ್ನ ಶುದ್ಧವಾದರೆ ಅದಕ್ಕೆ ಬಣ್ಣ ಬರುವಂತೆ, ಮನಸ್ಸಿಲ್ಲಿ ಭ್ರಮೆಯುಳ್ಳ ವಿಷಮ ಭಾವಗಳು ಅಳಿದಾಗ ಮಾತ್ರ ಭಕ್ತಿಭಾವ ಅಳವಡುತ್ತದೆ. 'ಕಡೆಯಾಣಿಯ ಮಾಡಿ' ನಿಶ್ಚಿತವಾದ ರೂಪಕೊಟ್ಟು ಶರಣರ ಪಾದಕ್ಕೆ ಅರ್ಪಿತವಾಗಬೇಕಾದರೆ ಅಂತರಂಗ, ಬಹಿರಂಗಗಳು ಪರಿಶುದ್ಧವಾಗಿರಬೇಕು. ಅಂದರೆ ಕರಗಿಸುವುದು, ಒರೆಗೆ ಹಚ್ಚುವುದು, ನಿಶ್ಚಿತ ರೂಪವನ್ನು ಕೊಡುವುದು ಈ ಮೂರು ಕ್ರಿಯೆಗಳಿಂದ ಪರಿವರ್ತನೆ ಪೂರ್ಣಗೊಂಡು ದೇವರಿಗೆ ಸಮರ್ಪಿತವಾಗುತ್ತದೆ ಎಂದು ಪ್ರಾರ್ಥನಾರೂಪವಾಗಿ ನಿವೇದಿಸಿಕೊಂಡಿದ್ದಾರೆ.

ಸಿರಸಮ್ಮ ಮಗಳನ್ನು ಕರೆದುಕೊಂಡು ದಿನಾಲೂ ಸಾಯಂಕಾಲ ದೇವಸ್ಥಾನದಲ್ಲಿರುವ ವೀರಯ್ಯನವರ ಬಳಿಗೆ ಹೋಗುತ್ತಾರೆ. ಅಲ್ಲಿ ಕಲ್ಯಾಣದಿಂದ ಬಂದು ಹೋಗುವವರು ಹೊಸ ಹೊಸ ವಚನಗಳು ತರುತ್ತಿದ್ದರು. ವೀರಯ್ಯನವರು ಅವುಗಳನ್ನು ಬರೆದುಕೊಂಡು ಲಿಂಗಮ್ಮನಿಗೆ ಕಲಿಸುತ್ತಿದ್ದರು. "ಅನಂತರಾಯರು ಮಾತಿಗೊಂದು ವಚನ ಹೇಳುತ್ತೀಯಲ್ಲವ್ವ ಲಿಂಗಮ್ಮ, ಸಣ್ಣ ವಯಸ್ಸಿನೊಳಗೆ ದೇವರ ಮೇಲೆ ಇಷ್ಟೊಂದು

ಭಕ್ತಿಯಿರೊ ಮಕ್ಕಳನ್ನು ನಾವೆಂದು ಕಾಣಲಿಲ್ಲ. ಏಕೆಂದರೆ ಎಲ್ಲರೂ ಹತ್ತು-ಹನ್ನೆರಡು ವರ್ಷದೊಳಗೆ ಹೆಣ್ಣುಮಕ್ಕಳನ್ನು ಮದುವೆ ಮಾಡಿ ಕಳುಹಿಸುತ್ತಾರೆ. ಆದರೆ ನಾನಿನ್ನೂ ನನ್ನ ಚಿನ್ನದಂಥ ಮಗಳಿಗೆ ಯೋಗ್ಯವರನನ್ನು ಹುಡುಕುತ್ತಲೆ ಇದ್ದೇನೆ. ಲಿಂಗಮ್ಮ ಮಾತನ್ನು ತಿರುಗಿಸುತ್ತಾ, ಅಪ್ಪ ವೀರಯ್ಯನವರು ಸೊಲ್ಲಾಪುರಕ್ಕೆ ಯಾವಾಗ ಹೋಗಬೇಕೆಂದರು ಎಂದು ಕೇಳುತ್ತಾಳೆ. ಅನಂತರಾಯರು ನಸುನಕ್ಕು ಎರಡು ದಿವಸಗಳಲ್ಲಿ ಹೋಗೋಣ ತಾಯಿ ಎನ್ನುತ್ತಾರೆ.

ವೀರಯ್ಯನವರೊಂದಿಗೆ ಅನಂತರಾಯ, ಸಿರಸಮ್ಮ ಲಿಂಗಮ್ಮ, ಇನ್ನೂ ಕೆಲವರು ಕೂಡಿಕೊಂಡು ಸೊಲ್ಲಾಪುರದ ಕಡೆಗೆ ಮೂರು ದಿವಸದ ಪ್ರಯಾಣ ಬೆಳೆಸುತ್ತಾರೆ. ದಾರಿಯಲ್ಲಿ ವೀರಯ್ಯನವರು ತಾವು ಕಲ್ಯಾಣದಲ್ಲಿದ್ದಾಗ ಅಲ್ಲಮಪ್ರಭುದೇವರು, ಸಿದ್ಧರಾಮೇಶ್ವರರೊಂದಿಗೆ ಮೊದಲ ಸಲ ಬಂದು ಬಸವಣ್ಣನವರ ಭಕ್ತಿಯ ಪರೀಕ್ಷೆ ಮಾಡಿದುದನ್ನು ದಾರಿಯುದ್ದಕ್ಕೂ ಹೇಳುತ್ತಲಿದ್ದರು. ಮಧ್ಯದಲ್ಲಿ ಲಿಂಗಮ್ಮ ಹಾಡುವ ವಚನಗಳು, ಭಕ್ತಿಗೀತೆಗಳನ್ನು ಆಲಿಸುತ್ತಾ ಎಲ್ಲರೂ ಆನಂದದಿಂದ ದೀರ್ಘಪ್ರವಾಸದ ನಂತರ ಸೊಲ್ಲಾಪುರ ತಲುಪಿದರು.

ಹಾವಿನಹಾಳ ಕಲ್ಲಯ್ಯನವರನ್ನು ಹುಡುಕುತ್ತ ವೀರಯ್ಯನವರು ಎಲ್ಲರನ್ನು ಕರೆದುಕೊಂಡು ಕೆರೆಯ ಬಳಿಗೆ ಬಂದರು. ಕೆರೆಯ ಮಧ್ಯದಲ್ಲಿ ಕಂಗೊಳಿಸುವ ಸಿದ್ಧರಾಮೇಶ್ವರರ ಧ್ಯಾನಮಂದಿರ, ಸುತ್ತಲಿನ ಹೂದೋಟ ಅವರನ್ನು ಬೇರೆ ಲೋಕಕ್ಕೆ ಕರೆದೊಯ್ದಂತೆ ಭಾಸವಾಯಿತು. ಶ್ರೀಶೈಲದ ಮಲ್ಲಿಕಾರ್ಜುನನನ್ನು ಕರೆದುಕೊಂಡು ಬಂದು ಸೊಲ್ಲಾಪುರದಲ್ಲಿ ಪ್ರತಿಷ್ಠಾಪಿಸಿದ ಸಿದ್ಧರಾಮೇಶ್ವರರು ಸಾಮಾನ್ಯರಲ್ಲ, ಅವರ ದರ್ಶನ ಪಡೆಯಬೇಕು ಎಂಬುದು ಉಮರಾಣಿಯಲ್ಲಿ ಮನೆ ಮನೆ ಮಾತಾಗಿತ್ತು. ಅದಕ್ಕಾಗಿ ಎಲ್ಲರ ಮನಸ್ಸು ಅವರ ಬಳಿಗೆ ಓಡುತ್ತಲಿತ್ತು. ಕೆರೆಯ ಹೊರ ಭಾಗದಲ್ಲಿ ಬೇರೆ ಊರಿನಿಂದ ಬಂದವರ ವಸತಿಗಾಗಿ ಕೋಣೆಗಳನ್ನು ಕಟ್ಟಿಸಿ ಅನ್ನದಾಸೋಹದ ವ್ಯವಸ್ಥೆ ಮಾಡಿದ್ದರು. ಅಲ್ಲಿ ವೀರಯ್ಯನವರಿಗೆ ಹಾವಿನಹಾಳ ಕಲ್ಲಯ್ಯನವರು ಭೆಟ್ಟಿಯಾದರು.

ದಾಸೋಹದ ಮನೆಯ ಮೇಲ್ವಿಚಾರಕರಾಗಿ ಅಲ್ಲಿಗೆ ಬರುವ ಅತಿಥಿಗಳಿಗೆ ಅತ್ಯಂತ ಪ್ರೀತಿ ಆದರದಿಂದ ಸ್ವಾಗತಿಸುತ್ತಿದ್ದ ಕರುಣಾಳು ಕಲ್ಲಯ್ಯನವರು ಇವರನ್ನು ಕಂಡು ತಮ್ಮೂರ ಸನಿಹದವರು ಬಂದಿದ್ದಾರೆಂದು ಸಂತೋಷದಿಂದ ಧಾವಿಸಿ ಬಂದರು. ಅನಂತರಾಯರು "ಅಣ್ಣ, ನಮಗೆ ಸಿದ್ಧರಾಮೇಶ್ವರರ ದರ್ಶನ ಮಾಡಿಸಿರಿ. ಅವರ ದರ್ಶನ ಪಡೆಯಬೇಕೆಂದು ನನ್ನ ಮಗಳು ಎರಡು ವರ್ಷದಿಂದ ಹಂಬಲಿಸುತ್ತಿದ್ದಾಳೆ.

ಅವಳಿಗಾಗಿ ನಾವೆಲ್ಲರೂ ಬಂದಿದ್ದೇವೆ. ಕಲ್ಲಯ್ಯನವರು ಓ ! ಬನ್ನಿ ಬನ್ನಿ, ದೂರದ ಪ್ರವಾಸ ಮಾಡಿ ಬಂದಿದ್ದೀರಿ ಮೊದಲು ಈ ಕೋಣೆಯಲ್ಲಿ ಇಳಿದುಕೊಳ್ಳಿರಿ. ಸ್ನಾನ ಲಿಂಗಪೂಜೆ ಮಾಡಿಕೊಂಡು ಸಮೀಪದಲ್ಲಿರುವ ದಾಸೋಹ ಮಂದಿರದಲ್ಲಿ ಪ್ರಸಾದ ಸ್ವೀಕರಿಸಿರಿ ನಂತರ ಕರೆದುಕೊಂಡು ಹೋಗುತ್ತೇನೆ ಎಂದರು.

ದಣಿದ ದೇಹಕ್ಕೆ ಕೆರೆಯ ನೀರಿನ ಸ್ನಾನ ಇಷ್ಟಲಿಂಗ ಪೂಜೆ ಬಿಸಿ ಬಿಸಿ ಪ್ರಸಾದ ಮುಗಿದ ನಂತರದ ವಿಶ್ರಾಂತಿಯು ಪ್ರವಾಸದ ಆಯಾಸವನ್ನೆಲ್ಲ ನೀಗಿಸಿತ್ತು. ಎಲ್ಲರೂ ಸಿದ್ಧರಾಮೇಶ್ವರರ ದರ್ಶನಕ್ಕಾಗಿ ಆತುರರಾಗಿ ಕುಳಿತಿದ್ದರು. ಕಲ್ಲಯ್ಯನವರು ಬಂದು, ಧ್ಯಾನಮಂದಿರದ ಮುಂದಿನ ಕೈತೋಟದ ಕಡೆಗೆ ಕರೆದುಕೊಂಡು ಹೋದರು. ಹೂದೋಟದ ಮಧ್ಯದಲ್ಲಿ ಮರದ ಕೆಳಗಿನ ಕಟ್ಟೆಯ ಮೇಲೆ ಸಿದ್ಧರಾಮೇಶ್ವರರು ಕುಳಿತುಕೊಂಡಿದ್ದರು. ಸರಳ ಸಜ್ಜನಿಕೆಯ ಭವ್ಯ ವ್ಯಕ್ತಿತ್ವದಿಂದ ಕೂಡಿದ ಸಿದ್ಧರಾಮೇಶ್ವರರ ಕಣ್ಣುಗಳು ಕಾಂತಿಯುಕ್ತ ತೇಜಸ್ಸಿನಿಂದ ಹೊಳೆಯುತ್ತಿದ್ದವು. ಅವರನ್ನು ನೋಡುತ್ತಿದ್ದಂತೆ ಇವರೆಲ್ಲರ ಹೃದಯದುಂಬಿ ಆನಂದದ ಹೊನಲು ಹರಿದು ಮೂಕವಿಸ್ಮಿತರಾದರು.

ಸಿದ್ಧರಾಮೇಶ್ವರರು ತನ್ನ ಎದುರಿಗೆ ನಿಂತವರನ್ನು ಕಂಡು ಮಂದಸ್ಮಿತರಾಗಿ, "ಯಾವ ಊರಿಂದ ಬಂದಿರಿ" ಎಂದು ಕೇಳಿದರು. ವೀರಯ್ಯನವರು ಮುಂದೆ ಬಂದು, 'ಉಮರಾಣಿಯಿಂದ. ಅಪ್ಪಾ ನನ್ನ ಹೆಸರು ವೀರಯ್ಯ, ತಾವು ಮೊದಲ ಸಲ ಅಲ್ಲಮಪ್ರಭುಗಳವರೊಂದಿಗೆ ಕಲ್ಯಾಣಕ್ಕೆ ಬಂದಾಗ ನಾನು ಕೂಡ ಕಲ್ಯಾಣದಲ್ಲಿಯೇ ಇದ್ದೆ. ಈಗ ಕೆಲವು ವರ್ಷಗಳಿಂದ ಉಮರಾಣಿಯಲ್ಲಿದ್ದೇನೆ. ಅಲ್ಲಿಯ ಜನರೆಲ್ಲರೂ ಕೂಡಿಕೊಂಡು ನನಗೆ ವೀರಮಲ್ಲೇಶ್ವರ ದೇವಸ್ಥಾನದ ಆವರಣದಲ್ಲಿ ವಾಸಿಸಲು ವ್ಯವಸ್ಥೆ ಮಾಡಿಕೊಟ್ಟಿದ್ದಾರೆ. ಬೆಳಿಗ್ಗೆ ಮಕ್ಕಳಿಗೆ ಅಕ್ಷರಾಭ್ಯಾಸ, ವಚನಗಳು, ಭಕ್ತಿಗೀತೆಗಳನ್ನು ಕಲಿಸುತ್ತೇನೆ. ಸಾಯಂಕಾಲ ಶಿವಾನುಭವದಲ್ಲಿ ವಚನ ಚಿಂತನೆ ನಡೆಯುತ್ತದೆ. ಆ ಊರಿನವರು ಮತ್ತು ನೆರೆಹೊರೆಯ ಊರಿನವರು ಕೂಡ, ಇಷ್ಟಲಿಂಗ ಧರಿಸಿ ಕೊಂಡಿದ್ದಾರೆ. ಶರಣಧರ್ಮ ಪ್ರಚಾರವೆ ನನ್ನ ಕಾಯಕವಾಗಿದೆ.

"ತುಂಬಾ ಸಂತೋಷವಾಯಿತು ವೀರಯ್ಯನವರೆ" ನಿಮ್ಮನ್ನು ನೋಡಿದೊಡನೆ ಎಲ್ಲೋ ನೋಡಿದ ನೆನಪಾಯಿತು. ಪರಿಚಿತ ಮುಖದಂತೆ ತೋರಿತು ಎಂದವರೆ ಸಿದ್ಧರಾಮರ ದೃಷ್ಟಿ ಲಿಂಗಮ್ಮನ ಕಡೆಗೆ ತಿರುಗಿತು.

ಅನಂತರಾಯರು "ಸ್ವಾಮಿ, ಇವಳು ನನ್ನ ಮಗಳು ಲಿಂಗಮ್ಮ. ಚಿಕ್ಕ ಮಗುವಿದ್ದಾಗಿನಿಂದಲೂ ಕಲ್ಯಾಣದಿಂದ ನಮ್ಮೂರಿನ ದಾರಿಯಲ್ಲಿ ಓಡಾಡುವ

ಚರಜಂಗಮರು ವಚನಗಳು ಹೇಳುತ್ತಿರುವುದನ್ನು ಹಾಡುತ್ತಿರುವುದನ್ನು ತನ್ಮಯಳಾಗಿ ಕೇಳುತ್ತಿದ್ದಳು. ಆಮೇಲೆ ವೀರಯ್ಯನವರು ನಮ್ಮೂರಿಗೆ ಬಂದ ನಂತರವಂತೂ ಯಾವಾಗಲೂ ವಚನಗಳು ಓದುವುದು, ಹಾಡುವುದು ಮತ್ತು ಕಲ್ಯಾಣದಲ್ಲಿನ ಬಸವಾದಿ ಶರಣರನ್ನು ಕಾಣಬೇಕು ಎಂಬುದೆ ಇವಳ ಆಶಯವಾಗಿದೆ. ಆದರೆ ಎರಡು ವರುಷ ಅಕ್ಕಸಾಲಿಗರ ಉದ್ಯೋಗ ಮಾಡಿ ಕೂಡಿಟ್ಟಿದ್ದ ಹಣದಿಂದ ಇಲ್ಲಿಗೆ ಕರೆದುಕೊಂಡು ಬಂದಿದ್ದೇವೆ, ಕಲ್ಯಾಣದವರೆಗೆ ಹೋಗುವುದು ನಮ್ಮ ಶಕ್ತಿಗೆ ಮೀರಿದ್ದು. ಎಂದು ಅನಂತರಾಯರು ವಿನಯಪೂರ್ವಕವಾಗಿ ಸಿದ್ಧರಾಮೇಶ್ವರರಿಗೆ ವಂದಿಸುತ್ತಾ ನುಡಿದರು. ಲಿಂಗಮ್ಮ ಭಕ್ತಿಭಾವದಿಂದ ಸಿದ್ಧರಾಮೇಶ್ವರರ ಪಾದಕ್ಕೆರಗಿದಾಗ ಲಿಂಗಮ್ಮನ ದೇಹದಲ್ಲಿ ವಿದ್ಯುತ್ ಸಂಚಾರವಾದಂತಾಯಿತು. ಲಿಂಗಮ್ಮನತ್ತ ಯೋಗದೃಷ್ಟಿಹರಿಸಿದ ಸಿದ್ಧರಾಮರು ಲಿಂಗಮ್ಮನಲ್ಲಿ ಹುದುಗಿರುವ ಅಲೌಕಿಕ ಶಕ್ತಿಯನ್ನರಿತರು. ಕಲ್ಲಯ್ಯನವರು "ಗುರುಗಳೆ, ಈ ವೀರಯ್ಯನವರನ್ನು ಕಲ್ಯಾಣದಲ್ಲಿ ನೋಡಿದ್ದೆವು ಇವರೀಗ ಉಮರಾಣಿಯಲ್ಲಿ ನೆಲೆಸಿದ್ದಾರೆ. ಲಿಂಗಮ್ಮ ವೀರಯ್ಯನವರಿಂದ ಹಲವಾರು ವಚನಗಳನ್ನು ಕಲಿತು ರಾಗಬದ್ಧವಾಗಿ ಹಾಡುತ್ತಾಳಂತೆ", ಅಪ್ಪಾವರ ಮುಂದೆ ವಚನವೊಂದು ಹಾಡವ್ವ ತಾಯಿ ಎನ್ನುತ್ತಿದ್ದಂತೆ, ಹಾಡಲು ಆರಂಭಿಸಿದಳು.

ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಫಟಿಕದ ಸಲಾಕೆಯಂತಿಬೇಕು
ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು.
ನುಡಿಯೊಳಗಾಗಿ ನಡೆಯದಿದ್ದರೆ
ಕೂಡಲಸಂಗಮದೇವನೆಂತೊಲಿವನಯ್ಯಾ

–ಬಸವಣ್ಣನವರು

ಲಿಂಗಮ್ಮ, ಇಂಪಾದ ಸ್ವರದಲ್ಲಿ ರಾಗಬದ್ಧವಾಗಿ ಭಾವಪೂರ್ಣದಿಂದ ಭಕ್ತಿಭರಿತಳಾಗಿ ಹಾಡಿದೆಯವ್ವ. ಅಣ್ಣ ಬಸವಣ್ಣನವರು ನುಡಿಯೊಳಗಾಗಿ ನಡೆಯದಿದ್ದರೆ ಕೂಡಲಸಂಗಮದೇವ ಒಲಿಯುವುದಿರಲಿ, "ನುಡಿದಂತೆ ನಡೆಯದಿದ್ದರೆ ಕೈಯಲ್ಲಿ ಹಿಡಿದಿರ್ದ ಲಿಂಗ ಘಟಸರ್ಪ" ಎಂದು ಎಚ್ಚರಿಸಿದ್ದಾರೆ. ಕಲ್ಲಯ್ಯನವರೇ ಈ ತಾಯಿಗೆ ವಚನಗಳು, ಭಕ್ತಿಗೀತೆಗಳು ಅಂದರೆ ಬಹಳ ಪ್ರೀತಿ, ಭಕ್ತಿಯಿಂದ ಹಾಡುತ್ತಾಳಂತೆ. ಈಗ ಹೊಸದಾಗಿ ಮಿಶ್ರಸ್ತೋತ್ರದ ತ್ರಿಪದಿಗಳನ್ನು ಬರೆದು ಪ್ರತಿ ಮಾಡಿಸಿ ಇಟ್ಟಿರುವ ಒಂದೆರಡು ಪ್ರತಿಗಳನ್ನು ತಂದು ಕೊಡಿ. "ಎಮ್ಮಪ್ಪ ಬಸವಣ್ಣ ಎಮ್ಮವ್ವೆ ನೀಲಮ್ಮ,

ಎಮ್ಮಯ್ಯ ಪ್ರಭುರಾಯ ಚನ್ನಬಸವ ಇನ್ನುಳಿದ ಶರಣರ ಚರಣಕ್ಕೆ ಶರಣೆಂದು ಧನ್ಯನಾದೆನು ಗುರುವೆ ಯೋಗಿನಾಥ" ಎಂಬ ನುಡಿಗಳನ್ನು ಸಿದ್ಧರಾಮೇಶ್ವರರು ರಾಗಬದ್ಧವಾಗಿ ಹಾಡಿದರು. ಅಷ್ಟರಲ್ಲಿ ಕಲ್ಲಯ್ಯನವರು ತಾಡೋಲೆ ಪ್ರತಿಗಳನ್ನು ತಂದು ಸಿದ್ಧರಾಮೇಶ್ವರರ ಕೈಯಲ್ಲಿ ಕೊಟ್ಟರು. ಸಿದ್ಧರಾಮೇಶ್ವರರು ಲಿಂಗಮ್ಮ, ನಿಮ್ಮ ಊರಿಗೆ ಹಿಂದಿರುಗುವುದರೊಳಗಾಗಿ ಆ ತ್ರಿಪದಿಗಳನ್ನು ಕಲಿತುಕೊಂಡು ಹಾಡಿ ತೋರಿಸಬೇಕವ್ವ ಎಂದರು.

ಉಮರಾಣಿಯನ್ನು ಬಿಟ್ಟು, ಬೇರೆ ದೊಡ್ಡ ಪಟ್ಟಣಗಳನ್ನು ನೋಡದೆ ಇರುವವರು ಸೊಲ್ಲಾಪುರದ ವೈಭವವನ್ನು ಕಂಡು ಬೆರಗಾದರು. ವೀರಯ್ಯನವರು ನಾವೀಗ ಬಂದು ನಾಲ್ಕೈದು ದಿವಸಗಳಾಯಿತು ನಾಳೆ ಬೆಳಗಿನ ಜಾವದಲ್ಲಿ ನಾವೆಲ್ಲ ಉಮರಾಣಿಗೆ ಹೊರಡಬೇಕಾಗಿದೆ. ಊರಲ್ಲಿ ಜನರಿಗೆ ಹಂಚಲು ಪೇಟೆಯಲ್ಲಿನ ಬತ್ತಾಸೆಯನ್ನು, ಮಲ್ಲಿಕಾರ್ಜುನ ಗುಡಿಯಲ್ಲಿ ಸಿಗುವ ಭಸ್ಮದ ಗಟ್ಟಿಗಳನ್ನು ತೆಗೆದುಕೊಂಡು ಬರೋಣ ಎಂದು ದೇವಸ್ಥಾನದ ಕಡೆಗೆ ಹೊರಡಲು ಸಿದ್ದರಾದರು. ಲಿಂಗಮ್ಮ ನನಗೆ ಹೊರಗೆ ಬರಲು ಮನಸ್ಸಿಲ್ಲ ನಾನು ಕೋಣೆಯಲ್ಲಿಯೆ ಇರುತ್ತೆನೆ ಎಂದಳು.

ಲಿಂಗಮ್ಮ ಧೈರ್ಯಮಾಡಿ ಸಿದ್ಧರಾಮೇಶ್ವರರ ಧ್ಯಾನಮಂದಿರದ ಕಡೆಗೆ ಹೋದಳು. ವಚನಗಳು ಓದುತ್ತಾ ಕುಳಿತಿದ್ದ ಸಿದ್ಧರಾಮರ ಪಾದಕ್ಕೆರಗಿದಳು. ನಿನ್ನ ತಂದೆ-ತಾಯಿ ಬರಲಿಲ್ಲವೇನವ್ವ ಎಂದರು. ನಾಳೆ ಬೆಳಿಗ್ಗೆ ಹೊರಡುತ್ತಾ ಇದ್ದೇವೆ ಅದಕ್ಕಾಗಿ ಅವರೆಲ್ಲರೂ ದೇವಸ್ಥಾನದ ಕಡೆಗೆ ಹೋಗಿದ್ದಾರೆ.

"ಯಾಕೆ ತಾಯಿ ನೀನು ಮಲ್ಲಿಕಾರ್ಜುನನ ದರ್ಶನಕ್ಕೆ ಹೋಗಲಿಲ್ಲವೇ?"

ಗುರುಗಳೇ, ನನಗೆ ಜೀವಂತ ದೇವರ ದರ್ಶನ ಮಾಡಬೇಕಾಗಿತ್ತು. ಏಕೆಂದರೆ ನನ್ನ ಮನದಲ್ಲಿನ ಕೆಲವು ಆತಂಕಗಳನ್ನು ನನ್ನೊಳಗಿನ ದುಗುಡವನ್ನು ದೂರ ಮಾಡುವಂಥ ಮಾತಾಡುವ ದೇವರ ಬಳಿಗೆ ಬರುವ ತವಕ ಇತ್ತು ಅದಕ್ಕಾಗಿ ಬಂದಿರುವೆ ತಂದೆ.

"ಬಾರವ್ವ ಕುಳಿತುಕೊ ನಿನ್ನೊಳಗೆ ಅಡಗಿರುವ ಆತಂಕಗಳು ಹೇಳು ತಾಯಿ"?

"ಅಪ್ಪಾ, ತಾವು ದೀನ ದಲಿತರಿಗೆ, ಹಸಿದವರಿಗೆ ಅನ್ನದಾಸೋಹ ನಡೆಸುತ್ತಿರುವುದನ್ನು ಕಂಡು ನನಗೆ ಮಹದಾನಂದವಾಗಿದೆ. ನನ್ನ ತಂದೆ ಶ್ರೀಮಂತರಲ್ಲ, ಆದರೆ ನಮ್ಮ ಹೊಟ್ಟೆ ಬಟ್ಟೆಗೆ ಕೊರತೆಯಿಲ್ಲ. ನನಗೆ ಹಸಿದವರಿಗೆ ಅನ್ನದಾಸೋಹ ಮಾಡಬೇಕು, ನೊಂದವರನ್ನು ಸಂತೈಸಬೇಕು ಮತ್ತು ಅಂಗವಿಕಲರಿಗೆ ಅವರ ಕೊರತೆಯನ್ನು

ನೀಗಿಸಬೇಕು, ವೃದ್ಧರನ್ನು ಅನಾಥರನ್ನು ಜೋಪಾನಮಾಡಬೇಕೆಂಬ ಆಸೆ ಮನದಲ್ಲಿ ಬಹಳ ಬಲವತ್ತರವಾಗುತ್ತಿದೆ. ಅದಕ್ಕಾಗಿ ನಾನೇನು ಮಾಡಲಿ ತಂದೆ." ದಯವಿಟ್ಟು ತಾವು ಅಂತಃಕರುಣೆಯಿಂದ ಮಾರ್ಗದರ್ಶನ ಮಾಡಬೇಕು ಎಂದು ಭಾವಪೂರ್ವಕವಾಗಿ ಬೇಡಿಕೊಂಡಳು.

ಸಿದ್ಧರಾಮೇಶ್ವರರಿಗೆ ಹೃದಯತುಂಬಿ ಬಂತು. ಪುಟ್ಟ ಹೃದಯದಲ್ಲಿ ಬೆಟ್ಟದಷ್ಟು ಸೇವಾಭಾವನೆಗಳು ತುಂಬಿಕೊಂಡಿರುವದನ್ನು ಅರಿತರು. "ಲಿಂಗಮ್ಮ, ಚಿಕ್ಕ ವಯಸ್ಸಿನಲ್ಲಿ ಮಹತ್ತರವಾದ ಸಾಧನೆಯ ಗುರಿಯನ್ನು ಇಟ್ಟುಕೊಂಡು ಸಾಗುತ್ತಿರುವಿಯವ್ವ, ಆ ದೇವರು ನಿನ್ನ ಬಯಕೆಗಳನ್ನು ಈಡೇರಿಸಲಿ. ತ್ರಿಕಾಲ ಇಷ್ಟಲಿಂಗ ಪೂಜೆ ಮಾಡಿಕೊ ಪೂಜೆಮಾಡುವಾಗ ದೃಷ್ಟಿಯೋಗ ಸಾಧನೆ ಮಾಡುತ್ತ ಹೋಗು. ಇಷ್ಟಲಿಂಗದಲ್ಲಿ ದೃಷ್ಟಿನೆಟ್ಟು ಏಕಾಗ್ರತೆಯ ಸಾಧನೆಯಿಂದ ಪಡೆದ ಶಿವನಕರುಣೆಯನ್ನು ಸತ್ ಕಾರ್ಯಕ್ಕೆ ಬಳಸಿಕೊಂಡರೆ ನಿನ್ನ ಜೊತೆಗೆ ಜಗತ್ ಕಲ್ಯಾಣವಾಗುವುದು, ನೀನಿಚ್ಛಿಸಿದ ಫಲಗಳೆಲ್ಲಾ ದೊರೆಯುವವು ತಾಯೇ".

ಗುರುವೇ, ಜೀವಾತ್ಮ ಪರಮಾತ್ಮರು ನಮ್ಮ ಹೃದಯದಲ್ಲಿದ್ದಾರೆ. ನಮ್ಮಲ್ಲಿ ಇಷ್ಟಲಿಂಗಪೂಜೆ ಶಕ್ತಿಯುತವಾದಾಗ, ಪ್ರಾಣಲಿಂಗದೊಡನೆ ಅನುಸಂಧಾನ- ವಾಗುವುದು. ನಂತರ ಅದೇ ಭಾವಲಿಂಗ ಪೂಜೆಯಾಗಿ ಆವರಿಸುವುದು ಅಲ್ಲವೆ ಗುರುದೇವಾ?

ಲಿಂಗಮ್ಮ, ಬಸವಾದಿ ಪ್ರಮಥರು ಇಷ್ಟಲಿಂಗ ಪೂಜೆಯ ಮೂಲಕ ಶಿವಸಾಕ್ಷಾತ್ಕಾರ ಪಡೆದವರು. "ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗಗಳು ಬೇರೆ ಬೇರೆ ಅಲ್ಲ. ದೇಹಕ್ಕೆ ಇಷ್ಟಲಿಂಗ ಅಂದರೆ ಸ್ಥೂಲಶರೀರಕ್ಕೆ ಅವಶ್ಯಕವಾದುದು, ಸೂಕ್ಷ್ಮಶರೀರಕ್ಕೆ ಪ್ರಾಣಲಿಂಗಬೇಕು, ಕಾರಣಶರೀರಕ್ಕೆ ಭಾವಲಿಂಗಬೇಕು. ಹೀಗೆ ಶರಣರು ಯಾವ ಮಾರ್ಗದಿಂದ ಶಿವಪಥ ಸುಲಭವಾಗಿ ಸಾಧ್ಯವಾಗುವುದು ಎಂಬುದನ್ನು ಪ್ರಯೋಗ ಮಾಡಿ ಅದನ್ನು ಅನುಭವಿಸಿ ಆಚರಿಸಿದ ನಂತರ ಜನತೆಯ ಮುಂದಿಟ್ಟಿದ್ದಾರೆ. ಅದನ್ನರಿತ ಎನ್ನ ದೀಕ್ಷಾಗುರು ಚನ್ನಬಸವಣ್ಣನವರು ತಮ್ಮ ವಚನದಲ್ಲಿ ಅಣ್ಣ ಬಸವಣ್ಣನವರ ಬಗೆಗೆ ಹೇಳಿರುವ ಸಾಲುಗಳು ನೆನಪಾಗುತ್ತಿದೆ.

ಮರ್ತ್ಯಲೋಕ ಶಿವಲೋಕವೆಂಬುದೊಂದು ನಿಚ್ಚಣಿಕೆಯಾದವು.
ದೇವಾ, ನೀವೀ ಕಲ್ಯಾಣಕ್ಕೆ ಬಂದವತರಿಸಿದಲ್ಲಿ,
ಸತ್ಯ ಶರಣರೆಲ್ಲರನು ಪಾವನವ ಮಾಡಲೆಂದು ಬಂದಡೆ,
ಜನ್ಮದಲ್ಲಿ ಬಂದನೆಂದೆನಬಹುದೆ?

ಕರ್ತನ ನಿರೂಪು ಭೃತ್ಯಂಗೆ ಬಂದಲ್ಲಿ,
ಆ ಭೃತ್ಯ ಕರ್ತನನರಸಿ ಬಂದನಲ್ಲಾ!
ಸತ್ಯ ಸದಾಚಾರ ಹರಡಿ, ಮರ್ತ್ಯರ
ಪಾವನವ ಮಾಡಿ ನಿಜಲಿಂಗ ಸಮಾಧಿಯೊಳು,
ನಿಲ್ಲುವರಿನ್ನಾರು ಹೇಳಾ, ನೀವಲ್ಲದೆ ?
ಕೂಡಲಚನ್ನಸಂಗಮದೇವರು ಸಾಕ್ಷಿಯಾಗಿ
ನಿಮಗೆ ಭವವುಟೆಂದು ಮನದಲ್ಲಿ ಹಿಡಿದಡೆ
ಸಂಗನಬಸವಣ್ಣಾ ನಿಮ್ಮ ಶ್ರೀಪಾದದಾಣೆ!

– ಚನ್ನಬಸವಣ್ಣನವರು.

ಎಂದು ಹೇಳಿದ್ದಾರೆ.

ಅಪ್ಪ, ತಮ್ಮ ಶರಣವಾಣಿಯನ್ನು ಕೇಳಿ ನನ್ನ ಮನೋಮಂದಿರದಲ್ಲಿ ದೈವೀಶಕ್ತಿಯ ಅನುಭವದ ಆನಂದವನ್ನುಂಟು ಮಾಡಿದೆ. ಇನ್ನೂ ಹೆಚ್ಚು ಹೆಚ್ಚು ಕಲ್ಯಾಣ ಶರಣರ ವಚನಗಳನ್ನು ಕೇಳಬೇಕು ಎನ್ನುವ ಹೆಬ್ಬಯಕೆ, ತಾವು ತಮ್ಮ ಕಂಠದಿಂದ ಹೇಳುತ್ತಿದ್ದರೆ ನನ್ನ ಮನಸ್ಸಿಗೆ ನವೋಲ್ಲಾಸ ದೊರೆಯುತ್ತಿದೆ ಗುರುದೇವಾ.

ಅನುಭವ ಮಂಟಪದ ಶೂನ್ಯ ಸಿಂಹಾಸನದ ಅಧ್ಯಕ್ಷರಾಗಿ ಕಲ್ಯಾಣದ ಪ್ರತಿಯೊಬ್ಬ ಶರಣರನ್ನು ಒರೆಗಲ್ಲಿಗೆ ಹಚ್ಚಿನೋಡುವ ಅಲ್ಲಮಪ್ರಭುದೇವರು. ಅವರಿಗೆ ಒಡಲಿದ್ದರೂ ಬಯಲೊಡಲಿಗನೆಂದೂ, ವ್ಯೋಮಕಾಯ– ಸಿದ್ಧನೆಂದೂ, ತನ್ನ ಅಂಗಗುಣಗಳೆಲ್ಲ ಲಿಂಗಗುಣಗಳಾಗಿ ಮಾರ್ಪಟ್ಟ ಮಹಾಜಂಗಮ ಲಿಂಗಮೂರ್ತಿಯೆಂದೂ ಶರಣರು ಕೊಂಡಾಡುತ್ತಾರೆ. ಕರ್ಮಯೋಗಿಯಾದ ನನ್ನನ್ನು ಅಹಂಕಾರ ನಿರ್ಮೂಲನಗೊಳಿಸಿದರು. ಅಂತಹ ವೈರಾಗ್ಯಮೂರ್ತಿ ಅಲ್ಲಮಪ್ರಭುಗಳು ಅಣ್ಣ ಬಸವಣ್ಣನವರನ್ನು ಕುರಿತಾಗಿ ತಮ್ಮ ವಚನದಲ್ಲಿ ಹೇಳಿದ್ದು ಕೇಳವ್ವ.

ಮರ್ತ್ಯಲೋಕದ ಮಹಾಮನೆ ಹಾಳಾಗಿ
ಹೋಗಬಾರದೆಂದು ಕರ್ತನಟ್ಟಿದನಯ್ಯಾ ಒಬ್ಬ ಶರಣನ !
ಆ ಶರಣ ಬಂದು ಕಲ್ಯಾಣವೆಂಬ ಶಿವಪುರವ
ಕೈಲಾಸವ ಮಾಡಿ ರುದ್ರಗಣ ಪ್ರಮಥಗಣಂಗಳೆಲ್ಲರ
ಹಿಡಿತಂದು ಅಮರಗಣಂಗಳೆಂದು ಹೆಸರಿಟ್ಟು ಕರೆದು,
ಅಗಣಿತಗಣಂಗಳೆಲ್ಲರ ಹಿಡಿತಂದು,

**ಅಸಂಖ್ಯಾತರೆಂದು ಹೆಸರಿಟ್ಟು ಕರೆದು,
ಭಕ್ತಿಯ ಕುಳಸ್ಥಲವ ಶ್ರುತದೃಷ್ಟಪವಾಡದಿಂದ
ಮರೆದು ತೋರಿ, ಜಗವರಿಯಲು ಶಿವಾಚಾರವ
ಧ್ವಜವನೆತ್ತಿಸಿ ಮರ್ತ್ಯಲೋಕ ಶಿವಲೋಕವೆರಡಕ್ಕೆ
ನಿಚ್ಚಣಿಗೆಯಾದನು. ಆ ಶಿವಶರಣನ ಮನೆಯೊಳಗಿಪ್ಪ
ಶಿವಗಣಂಗಳ ತಿಂಥಿಣಿಯ ಕಂಡು, ಎನ್ನ ಮನ
ಉಬ್ಬಿಕೊಬ್ಬಿ ಓಲಾಡುತ್ತಿದ್ದೆನಯ್ಯಾ !
ನಮ್ಮ ಗುಹೇಶ್ವರನ ಶರಣ ಸಂಗನಬಸವಣ್ಣನ ದಾಸೋಹದ
ಘನವನೇನೆಂದೆನಬಹುದು ನೋಡಾ ಸಿದ್ಧರಾಮಯ್ಯಾ.**

–ಅಲ್ಲಮಪ್ರಭುದೇವರು

ಎಂದು ಹೇಳಿದರವ್ವ ನಮ್ಮ ಪ್ರಭುದೇವರು. ನಿಚ್ಚಣಿಗೆಯಾದರು ಎಂದರೆ ಏಣಿಗೆ ಜೋಡಿಸುವ ಕೋಲುಗಳಂತೆ ಮೇಲೇರಲು ಆಧಾರಕ್ಕಾಗಿ ಇರುವದು. ಅದರಂತೆಯೆ ಈ ನಮ್ಮ ಅಂಗ–ಲಿಂಗ ಎನ್ನಬಹುದು. ಅದನ್ನು ಸಾಧಿಸಲು ಜೋಡಿಸಿದ ಏಣಿಗಳೇ ಅಷ್ಟಾವರಣ, ಪಂಚಾಚಾರ, ಷಟಸ್ಥಲದ ಆಚರಣೆಗಳು ಸಾಧಕನಿಗೆ ತನ್ನ ಸಾಧನೆಗಾಗಿ ನೀಡಿದರು ಬಸವಾದಿ ಶರಣರು.

"ಗುರುಗಳೇ ಶಿವಯೋಗ ಸಾಧನೆಯ ಮಾರ್ಗ ಮತ್ತು ನನ್ನೆದುರಿಗೆ ಬಂದವರ ದುಃಖ, ನೋವುಗಳ ನಿವಾರಣೆಗಾಗಿ ನಾನೇನು ಮಾಡಲಿ ಎಂದು ದಯವಿಟ್ಟು ತಿಳಿಸಿರಿ ತಂದೆ."

ತಾಯಿ ಶಿವಯೋಗ ಸಾಧನೆಯ ಮಾರ್ಗದತ್ತ ನೀನೀಗ ಸಾಗುತ್ತಿರುವೆ. ತ್ರಿಕಾಲ ಲಿಂಗ ಪೂಜೆಯಿಂದ ನಿನ್ನ ಇಷ್ಟಾರ್ಥ ಸಿದ್ಧಿಸುವದು. ಸ್ಥೂಲಶರೀರ ಪರಿಶುದ್ಧವಾಗಿರಬೇಕು. ಸೂಕ್ಷ್ಮಶರೀರ ಸದ್ಗುಣಗಳ ಆಗರವಾಗಿರಬೇಕು. ಕಾರಣಶರೀರ ಸದ್ಭಾವನಾ ಭರಿತವಾಗಿರಬೇಕು. ನೋಡವ್ವಾ, ಮನಸ್ಸು ಪ್ರಾಣ ದೃಷ್ಟಿ ಇವು ಮೂರು ಒಂದಕ್ಕೊಂದು ಸಂಬಂಧಪಟ್ಟಿವೆ. ನೀನು ಏಕಾಗ್ರತೆಯಿಂದ ಶುದ್ಧ ಭಾವದಿಂದ ನಿರ್ಮಲ ಅಂತಃಕರಣದಿಂದ ಇಷ್ಟಲಿಂಗದಲ್ಲಿ ದೃಷ್ಟಿಯಿರಿಸಿ ತ್ರಿಕಾಲ ಪೂಜೆಯನ್ನು ನಿಯಮಿತ ವೇಳೆಗೆ ಒಂದು ವ್ರತದಂತೆ ಮಾಡುತ್ತ ಹೋದರೆ ದೃಷ್ಟಿಯೋಗ ಸಿದ್ಧಿಸುವುದು. ಅಷ್ಟಮಹಾಸಿದ್ಧಿಗಳು ನಿನ್ನವಾಗುವುವು. ಪಡೆದ ದೈವೀಶಕ್ತಿಯಿಂದ ನಿನ್ನಲ್ಲಿಗೆ ಸಹಾಯ ಬಯಸಿ ಬರುವ ಜನರಿಗೆ ಫಲಕಾರಿಯಾಗುವಂಥ ಕಾಯಕವನ್ನು ಮಾಡಬೇಕು. ನಿನ್ನಿಂದ ಬಸವಧರ್ಮ ಬೆಳೆಯಲಿ ಜನರ ಬಾಳು ಬೆಳಗಲಿ ಎಂದು ಆಶೀರ್ವದಿಸಿದರು.

ಲಿಂಗಮ್ಮನ ಮನಸ್ಸು ಸಂತಸದ ಚಿಲುಮೆಯಾಗಿ ದೇಹದಲ್ಲಿ ಹೊಸ ಶಕ್ತಿಯೊಂದು ವ್ಯಾಪಿಸಿದಂತಾಯಿತು. ಸಿದ್ಧರಾಮೇಶ್ವರರ ನುಡಿಗಳನ್ನು ಆಲಿಸಿದ ಅವಳ ಮನ ಅರಳಿತು. ಕಣ್ಣಳಿಂದ ಆನಂದಾಶ್ರಗಳು ಉದುರಿದವು. "ಗುರುವೆ ತಮ್ಮ ದರ್ಶನದಿಂದ ಧನ್ಯಳಾದೆ" ನೀವು ಅಸಾಧ್ಯ ಸಾಧಕರು ಎಂಬುದಕ್ಕೆ ಶ್ರೀಶೈಲಮಲ್ಲಿಕರ್ಜುನ ನಿಮ್ಮ ಭಕ್ತಿಗೊಲಿದು ಇಲ್ಲಿಗೆ ಬಂದುದೇ ಸಾಕ್ಷಿ ಎನ್ನುತ್ತಾರೆ. ನೀವು ಕಟ್ಟಿಸಿದ ಗುಡಿಗೋಪುರಗಳು, ಕೆರೆಭಾವಿಗಳು, ತಾವು ನಡೆಸುತ್ತಿರುವ ಅನ್ನದಾಸೋಹ, ಜ್ಞಾನದಾಸೋಹ ನಿತ್ಯ ನಿರಂತರ. ದುಃಖಿತ ಜನರಿಗೆ ಪರಿಹಾರ ನೊಂದ ಜೀವಿಗಳಿಗೆ ಸಾಂತ್ವನ ನೀಡುವುದನ್ನು ಕಂಡು ಪುನೀತಳಾದೆ. ನಾನು ಬಾಳಿನಲ್ಲಿ ಸಾಧಿಸಬೇಕಾದ ಸಿದ್ಧಿಗೆ ಮಾರ್ಗದರ್ಶನ ಮಾಡಿದ್ದೀರಿ. ಎನ್ನುತ್ತಾ ಲಿಂಗಮ್ಮ ಭಕ್ತಿಯಿಂದ ಶಿರಬಾಗಿ ನಮಸ್ಕರಿಸಿದಳು.

ಅಷ್ಟರಲ್ಲಿ ಅನಂತರಾಯ ಸಿರಸಮ್ಮನವರೆಲ್ಲರೂ ಮಗಳನ್ನು ಹುಡುಕುತ್ತ ಅಲ್ಲಿಗೆ ಬಂದರು. "ಲಿಂಗಮ್ಮ ಕೋಣೆಯಲ್ಲಿ ಕಾಣಲಿಲ್ಲ ಅದಕ್ಕಾಗಿ ಹುಡುಕುತ್ತ ಇಲ್ಲಿಗೆ ಬಂದೆವು. ಎಂದವರೆ ಸಿದ್ಧರಾಮೇಶ್ವರರ ಪಾದಕ್ಕೆರಗಿದರು. "ಸ್ವಾಮಿ, ಲಿಂಗಮ್ಮನಿಂದಾಗಿ ನಮಗೆ ತಮ್ಮ ದರ್ಶನದ ಭಾಗ್ಯ ದೊರೆಯಿತು. ತಾವು ನಿರ್ಮಿಸಿದ ಈ ಕ್ಷೇತ್ರದಲ್ಲಿ ನಾಲ್ಕಾರು ದಿನಗಳಿಂದ ವಾಸವಾಗಿ ಇದ್ದದ್ದು ಕೈಲಾಸದಲ್ಲಿ ಇರುತ್ತಿದ್ದೇವೆ ಎಂಬಂತೆ ಅನಿಸುತ್ತಿತ್ತು. ತಮ್ಮ ದರ್ಶನದಿಂದ ನಮ್ಮ ಜನ್ಮ ಸಾರ್ಥಕವಾಯಿತು ನಾಳೆ ಬೆಳಿಗ್ಗೆ ನಾವೆಲ್ಲ ಉಮರಾಣಿಗೆ ಹೊರಡುತ್ತೇವೆ ತಂದೆ, ಎಂದರು ಅನಂತರಾಯರು.

ಹೋಗಿ ಬನ್ನಿರಿ, ನಿಮ್ಮ ಮಗಳು ಸಾಮಾನ್ಯಳಲ್ಲ ದೈವೀಶಕ್ತಿಯೊಂದು ಅವಳಲ್ಲಿದೆ. ಅವ್ಯಕ್ತವಾದ ಶಕ್ತಿ ವ್ಯಕ್ತವಾದಾಗ ಅವಳ ಹಿರಿಮೆಯ ಅರಿವು ನಿಮಗಾಗುವುದು. ನೀವಿಬ್ಬರೂ ಅವಳ ಮೇಲಿನ ವ್ಯಾಮೋಹವನ್ನು ನಿಮ್ಮ ಅಂಗೈಯೊಳಗಿನ ಇಷ್ಟಲಿಂಗದ ಮೇಲಿರಿಸಿರಿ. ಅದರಿಂದ ಲೋಕಕಲ್ಯಾಣವಾಗುವುದು. ಎಂದು ಸಿದ್ಧರಾಮೇಶ್ವರರು ಹರಸಿದರು.

"ಎಲ್ಲವೂ ನಿಮ್ಮ ಕೃಪೆ ಸ್ವಾಮೀ" ಎಂದು ಧನ್ಯತೆಯ ಭಾವನೆಯಿಂದ ಶಿರಬಾಗಿ ಭಕ್ತಿಯಿಂದ ವಂದಿಸಿದರು.

ಹಾವಿನಹಾಳ ಕಲಯ್ಯನವರು, "ಹಾಂ ಮರೆತಿದ್ದೆ ತಾಯಿ, ಸಿದ್ದರಾಮೇಶ್ವರರು "ಯೋಗಿನಾಥ" ಅಂಕಿತದಲ್ಲಿ ರಚಿಸಿದ ನಾಲ್ಕು ಸಾಲಿನ ಪದ್ಯಗಳಿವೆ. ಆ ತ್ರಿವಿಧಿಯ ತಾಡೋಲೆಯನ್ನು ನಿನಗೆ ಆಶೀರ್ವದಿಸಿದ್ದರಲ್ಲ, ಅವುಗಳಲ್ಲಿ ಒಂದೆರಡು ನೀನು ಊರಿಗೆ ಹೊರಡುವ ಮೊದಲು ನಮ್ಮೆದುರು ಯೋಗಿನಾಥ ತ್ರಿವಿಧಿಗಳನ್ನು ಹಾಡಿ ತೋರಿಸಬೇಕೆಂದು ಹೇಳಿದ್ದರಲ್ಲ, ಒಂದೆರಡು ನುಡಿಗಳು ಹಾಡಿ ಬಿಡವ್ವ" ಎಂದರು.

ಶ್ರೀಗುರುವೆ ಶ್ರೀಗುರುವೆ ಭವಪಾಶದೂರನೆ
ಶ್ರೀಗುರುವೆ ಆದಿ ಅಂತರ ಶೂನ್ಯನೆ
ಶ್ರೀಗುರುವೆ ಆನಂದಮಯರೂಪ ಗತಿಯೆಂದು
ಆನತವನೈದುವೆ ಯೋಗಿನಾಥ.

ಶಿವಭಕ್ತಿ ಶರಧಿಯಲಿ ನೆಲೆಗೊಳಿಸಿದಾತ ಗುರು
ಪರಿಕ್ಷೀಸಿ ಭವವ ಹರಿದಾದ ಗುರುವೈ
ಶ್ರೀಗುರುವೆ ಎಂಬ ನಾಮಾಕ್ಷರತ್ರಯದಲ್ಲಿ
ಆನು ಪ್ರಜ್ವಲಿತನೈ ಯೋಗಿನಾಥ.

'ಬಸವಸ್ತೋತ್ರ ತ್ರಿವಿಧಿ' ಯಲ್ಲಿನ ಒಂದೆರಡು ನುಡಿಗಳನ್ನು ಲಿಂಗಮ್ಮ ಏಕಾಗ್ರತೆಯಿಂದ ಹಾಡುವಾಗ ಮನದಲ್ಲಿ ಸಿದ್ಧರಾಮೇಶ್ವರರ ಮೂರ್ತಿ ಸ್ಥಿರವಾಗಿ ನೆಲೆಸಿತು. ಈ ಹಾಡನ್ನು ಕೇಳುತ್ತಿದ್ದ ಸಿದ್ಧರಾಮೇಶ್ವರರ ಮನ ಚನ್ನಬಸವಣ್ಣನವರ ನೆನಹಿನಲ್ಲಿ ಧ್ಯಾನಸ್ಥವಾಗಿತ್ತು. ಮೆಲ್ಲನೆ ಕಣ್ದೆರೆದು ಲಿಂಗಮ್ಮನನ್ನು ನೋಡಿ ಆನಂದದಿಂದ ಕಣ್ಣಿನಿಂದಲೆ ಹಾರೈಕೆಯ ನೋಟ ಬೀರಿದರು.

ಬೆಳಗಿನ ಜಾವದಲ್ಲಿ ಹಾವಿನಹಾಳ ಕಲ್ಲಯ್ಯನವರು ಹೊರಡುವ ಮುನ್ನವೆ ದಾರಿಯಲ್ಲಿ ಪ್ರಸಾದ ಮಾಡಲಿಕ್ಕೆಂದು ದಾಸೋಹದ ಮನೆಯಿಂದ ಬುತ್ತಿಯನ್ನು ಕಟ್ಟಿಕೊಂಡು ತಂದುಕೊಟ್ಟರು. ಲಿಂಗಮ್ಮ ಅಣ್ಣ ನಿಮ್ಮ ವಚನಗಳು ಕೆಲವು ವೀರಯ್ಯನವರಿಂದ ನನಗೆ ದೊರೆತಿವೆ. ಮತ್ತೆ ಹೊಸದಾಗಿ ಬರೆದರೆ ಕಳಿಸಿಕೊಡಬೇಕು ಎಂದು ವಂದಿಸಿ ಉಮರಾಣಿಗೆ ಹೊರಟರು.

ಚಕ್ಕಡಿಯ ಪ್ರಯಾಣದಲ್ಲಿ ವಚನಗಳನ್ನು ಹಾಡುತ್ತಾ ದಾರಿ ಮಧ್ಯದಲ್ಲಿ ಅಲ್ಲಲ್ಲಿ ಸ್ನಾನ ಪೂಜೆ ಪ್ರಸಾದಗಳನ್ನು ಮಾಡುತ್ತಾ ಸಾಗುತ್ತಿದ್ದರು. ರಾತ್ರಿಯ ವೇಳೆಯಲ್ಲಿ ನಕ್ಷತ್ರಗಳು ವಿನುಗುತ್ತಿದ್ದವು.ಎತ್ತಿನ ಕೊರಳ ಗೆಜ್ಜೆ ಮಂಜುಳ ನಾದ ನಿನದಿಸುತ್ತಿತ್ತು. ಚಕ್ಕಡಿಯಲ್ಲಿ ಶಬ್ದದ ಸುಳಿವೆ ಇಲ್ಲ. ಶಾಂತವಾಗಿರುವುದನ್ನು ಗಮನಿಸಿದ ಗಾಡಿ ಹೊಡೆಯುತ್ತಿದ್ದ ನಿಂಗಣ್ಣ ಮನಬಿಚ್ಚಿ ಹಾಡಲು ಪ್ರಾರಂಭಿಸಿದ.

ಅಲ್ಲಿಯ ಬಹುರೂಪ ಇಲ್ಲಿಗೆ ಬಂದಿತ್ತು.
ಇಲ್ಲಿಯ ಬಹುರೂಪ ಎಲ್ಲಿ ಅಡಗಿತ್ತೋ?
ಎನ್ನ ಬಹುರೂಪ ಬಲ್ಲವರಾರೋ?
ನಾದ ಹರಿದು ಸ್ವರವು ಸೂಸಿದ ಬಳಿಕ

ಈ ಬಹುರೂಪ ಬಲ್ಲವರಾರೋ?
ರೇಕಣ್ಣಪ್ರಿಯ ನಾಗಿನಾಥನಲ್ಲಿ ಬಸವಣ್ಣನಿಂದ
ಬದುಕಿತೀ ಲೋಕವೆಲ್ಲ."

–ಬಹುರೂಪಿ ಚೌಡಯ್ಯನವರು

ವೀರಯ್ಯನವರು ಭಲೆ! ಭಲೆ ನಿಂಗಣ್ಣ, ಕಲ್ಯಾಣದ ಗಾಳಿ ನಿನಗೂ ಬೀಸಿದ ಹಾಗೆ ಕಾಣುತ್ತಿದೆ. ಬಹುರೂಪಿ ಚೌಡಯ್ಯನವರು ಆನಂದದಿಂದ ಕುಣಿದಾಡುತ್ತಾ ಹಾಡುವ ವಚನವಿದು ನೀನು ಎಲ್ಲಿಂದ ಹೇಗೆ ಕಲಿತೆ ಎಂಬುದೇ ನನಗೆ ಆಶ್ಚರ್ಯವುಂಟು ಮಾಡಿತು. ನಿಂಗಣ್ಣ ಅಯ್ಯನವರೆ, ಕಲ್ಯಾಣಕ್ಕ ಹೋಗುವವರು, ಬರುವವರೆಲ್ಲ ನಮ್ಮ ವೀರಮಲ್ಲಯ್ಯನವರ ಗುಡಿಯೊಳಗೆ ಇಳಿದುಕೊಳ್ಳುತ್ತಾರಲ್ಲ ಅವರಲ್ಲಿ ಒಬ್ಬರು ಕಲ್ಯಾಣದಾಗ ಈ ಹಾಡ ಕಲಿತಿದ್ದರಂತೆ, ರಾತ್ರಿದಾಗ ಹಾಡುತ್ತಿದ್ದರು ನಾನು ಕೇಳಿ ಕಲಿತುಕೊಂಡೆ ಸ್ವಾಮಿ.

ನಿಂಗಣ್ಣ, ನನಗೆ ಈ ಹಾಡ ಕೇಳಿ ಬಹುರೂಪಿ ಚೌಡಯ್ಯನವರನ್ನು ನೋಡಿದಷ್ಟು ಸಂತೋಷವಾಯಿತು. ನೋಡು ಲಿಂಗಮ್ಮ, ಎಲ್ಲಿ ನೋಡಿದಲ್ಲಿ ವಚನಗಳ ಝೇಂಕಾರದ ಸದ್ದು ಕೇಳಿಸುತ್ತಿದೆ. **"ಎಲ್ಲ ಬಲ್ಲಿದನಯ್ಯಾ ಕಲ್ಯಾಣ ಬಸವಯ್ಯ, ಚೆಲ್ಲಿದನು ತಂದು ಶಿವ ಬೆಳಕ। ನಾಡೊಳಗೆ ಸೊಲ್ಲೆತ್ತಿ ಜನವು ಹಾಡುವುದು"**. ಶರಣರ ಶಿವಾನುಭವದ ಗಾಳಿ ಎಲ್ಲಾ ಕಡೆಗೂ ಬೀಸುತ್ತಲಿರುವುದನ್ನು ಕಂಡು ಮನಸ್ಸಿಗೆ ಬಹಳ ಆನಂದವೆನಿಸುತ್ತಿದೆ ಎಂದು ವೀರಯ್ಯನವರು ಹೇಳಿದರು.

ಸಿರಸಮ್ಮ ಹೌದು ನಮ್ಮ ಸುತ್ತಲಿನ ಹಳ್ಳಿಯಲ್ಲೂ ಎಲ್ಲಿ ಹೋದರೂ ಶರಣರ ವಚನಗಳ ನುಡಿಗಳು ಕೇಳಿಸುತ್ತವೆ. **"ಎಲ್ಲ ದಿಕ್ಕಿನ ಗಾಳಿ ನಿಲದಲೆ ಬೀಸ್ಯಾವ, ಕಲ್ಯಾಣಗಾಳಿ ಬಲು ಬೀಸಿ ಎಲ್ಲಾರೊಕ್ಕ್ಯಾರ ಶಿವನುಡಿಯ"**. ಎಂದು **"ಆಡಿದರು ಶಿವಲೀಲೆ ನಾಡೆಲ್ಲ ಹೂವಾಯ್ತು, ಮೂಡಿ ಶಿವಭಕ್ತಿ ಹಣ್ಣಾಯ್ತು। ಶಿವನುಡಿಯ, ಕೋಡಿರಸ ಹರಿದು ಜನ ದುಡಿದು"**. ಎಂದು ಬೀಸುವಾಗ, ಕುಳಿತಲ್ಲಿ ನಿಂತಲ್ಲಿ ಹಾಡುತ್ತಿದ್ದಾರೆ. ಎಲ್ಲರೂ ಮಾತನಾಡುತ್ತ ಹಾಡುತ್ತ ಸಂತಸದಿಂದ ಮೂರನೆಯ ದಿವಸಕ್ಕೆ ಉಮರಾಣಿ ತಲುಪಿದರು.

ಅನಂತರಾಯ ಸಿರಸಮ್ಮ, ಬಳಗದವರಿಗೆಲ್ಲರಿಗೂ ಲಿಂಗಮ್ಮನಿಗೆ ಯೋಗ್ಯ ವರನನ್ನು ಹುಡುಕಬೇಕೆಂಬ ಬಗೆಗೆ ಹೇಳುತ್ತಿದ್ದರು. ವರ ಲಿಂಗಧಾರಿಯಾಗಿರಬೇಕು, ಸದ್ಗುಣ ಸಂಪನ್ನನಿರಬೇಕು, ಎಂಬೆಲ್ಲಾ ವಿಚಾರಗಳ ಮಾತುಕತೆಗಳು ನಡೆದಿದ್ದವು. ಆದರೆ ಲಿಂಗಮ್ಮ ಸೊಲ್ಲಾಪುರದಿಂದ ಬಂದಾಗಿನಿಂದ ಮಾತಾಡುವುದು ತುಂಬಾ ಕಡಿಮೆಯಾಗಿತ್ತು.

ಸದಾಕಾಲ ತಾನು ದೃಷ್ಟಿಯೋಗ, ಮನಮಗ್ನಯೋಗದ ಸಾಧನೆಯನ್ನು ಹೇಗೆ ಸಾಧಿಸಲಿ ಎನ್ನುವ ಯೋಚನೆಯಲ್ಲಿ ಲಿಂಗಪೂಜೆಗೆ ಕುಳಿತುಕೊಳ್ಳುತ್ತಿದ್ದಳು.

ಅಂಗೈಯ್ಯ ಒಳಗಣ ಲಿಂಗವ ನೋಡುತ್ತ,
ಕಂಗಳು ಕಡೆಗೋಡಿವರಿಯುತ್ತ
ಸುರಿಯುತ್ತ ಎಂದಿಪ್ಪೆನೊ ನೋಟವೆ ಪ್ರಾಣವಾಗಿ ಎಂದಿಪ್ಪೆನೊ
ಕೂಟವೇ ಪ್ರಾಣವಾಗಿ ಎಂದಿಪ್ಪೆನೊ
ಎನ್ನ ಅಂಗವಿಕಾರದ ಸಂಗವಳಿದು,
ಕೂಡಲಸಂಗಯ್ಯಾ, ಲಿಂಗ ಲಿಂಗವೆನ್ನುತ್ತ.

– ಬಸವಣ್ಣನವರು

ಬಸವಣ್ಣನವರ ವಚನವನ್ನು ಲಿಂಗಮ್ಮ ಮನದ ತುಂಬೆಲ್ಲಾ ತುಂಬಿಕೊಂಡು ಅಂಗೈಯಲ್ಲಿ ಲಿಂಗಹಿಡಿದು, ಒಳಹೊರಗೆಲ್ಲ ಬೆಳಕನ್ನು ಕಂಡಂತೆ ಭಾಸವಾಗಿ ಮನಮಗ್ನಳಾಗುತ್ತಿದ್ದಳು. ಕುಳಿತರೂ ನಿಂತರೂ ಸಾಧನೆಗೈದು ಸಿದ್ಧಿಯನ್ನು ಪಡೆಯಬೇಕೆನ್ನುವ ತವಕ ದಿನ ದಿನಕ್ಕೆ ಹೆಚ್ಚಾಗುತ್ತಿತ್ತು. ಸಿದ್ಧರಾಮೇಶ್ವರರು ಹೇಳಿದ ನುಡಿಗಳು ಕಿವಿಯಲ್ಲಿ ಝೇಂಕರಿಸುತ್ತಿದ್ದವು. ಕಲ್ಯಾಣದಲ್ಲಿನ ಬಸವಣ್ಣನವರು, ಅಲ್ಲಮಪ್ರಭುದೇವರು, ಚನ್ನಬಸವಣ್ಣನವರನ್ನು ನೆನೆಯುತ್ತಿದಂತೆ, ಕಲ್ಯಾಣ ಕೈಮಾಡಿ ಕರೆದಂತಾಗುತ್ತಿತ್ತು. ಅನುಭವ ಮಂಟಪದಲ್ಲಿನ ಶರಣರ ಅನುಭಾವದ ನುಡಿಗಳನ್ನು ಆಲಿಸಿದಂತೆ ಮತ್ತು ಕಲ್ಯಾಣ ಹತ್ತಿರವೇ ಕಾಣಿಸಿದಂತಾಗಿ ಬಸವಾದಿ ಶರಣರ ದರ್ಶನದ ಹಂಬಲ ತೀವ್ರವಾಗುತ್ತಿತ್ತು.

ಲಿಂಗಮ್ಮನಲ್ಲಿ ಅಂತರಂಗದ ಕರೆ ಬಲವತ್ತರವಾಗಹತ್ತಿತ್ತು. ಅದಕ್ಕಾಗಿ ಒಂದು ದಿವಸ ಲಿಂಗಮ್ಮ ತನ್ನ ಗೆಳತಿಯರೊಂದಿಗೆ ವೀರಮಲ್ಲಯ್ಯನ ದೇವಸ್ಥಾನದ ಕಡೆಗೆ ಹೋದಳು. ವೀರಯ್ಯನವರು ಹತ್ತಿರದ ಮರದ ಕೆಳಗೆ ಗುಂಪುಕಟ್ಟಿಕೊಂಡು ಕುಳಿತ್ತಿರುವುದು ಕಂಡು ಅವರಿದ್ದಲ್ಲಿಗೆ ಹೆಜ್ಜೆಹಾಕಿದರು. ವೀರಯ್ಯನವರು ಅವರೆಲ್ಲರನ್ನು ಕಂಡು ಬನ್ನಿ ಬನ್ನಿ ಲಿಂಗಮ್ಮ, ಇವರೆಲ್ಲ ಕೂಡಲಸಂಗಮದಿಂದ ಕಲ್ಯಾಣದ ಕಡೆಗೆ ಹೊರಟ ಯಾತ್ರಿಕರು. ಇವರಲ್ಲಿಯ ಹಿರಿಯರು ಬಸವಣ್ಣನವರನ್ನು ಬಾಲ್ಯದಲ್ಲಿ ಕಂಡಿದ್ದರಂತೆ. ಇತ್ತೀಚಿಗೆ ಚರಜಂಗಮರಿಂದ ಬಸವಣ್ಣನವರ ಕೀರ್ತಿ ವಾರ್ತೆ ಕೇಳಿ ಅವರ ದರ್ಶನ ಪಡೆಯಲು ಹೊರಟಿದ್ದಾರೆ. ಲಿಂಗಮ್ಮ ಇವರೆಲ್ಲರು ಸಾಮೂಹಿಕ ಭಜನೆಗಳನ್ನು ಹೇಳುತ್ತಾರೆ, ನಮ್ಮ ಲಿಂಗಮ್ಮ ಸೊಗಸಾಗಿ ಶರಣರ ವಚನಗಳನ್ನು ಭಕ್ತಿಯಿಂದ ಹಾಡುತ್ತಾಳೆ. ನೀನು ವಚನಗೀತವನ್ನು ಹಾಡವ್ವ.

ಕಲ್ಯಾಣ ಕೈಲಾಸವೆಂಬ ನುಡಿ ಹಸನಾಯಿತ್ತು.
ಒಳಗೂ ಕಲ್ಯಾಣ ಹೊರಗೂ ಕಲ್ಯಾಣ.
ಇದರಂತುವನಾರು ಬಲ್ಲರಯ್ಯಾ?
ನಿಮ್ಮ ಸತ್ಯಶರಣರ ಸುಳುಹು ತೋರುತ್ತಿದೆಯಯ್ಯಾ.
ನಿಮ್ಮ ಶರಣ ಬಸವಣ್ಣನ ಕಾಂಬೆನೆಂಬ ತವಕವೆನಗಾಯಿತು ಕೇಳಾ
ಚೆನ್ನಮಲ್ಲಿಕಾರ್ಜುನಾ.

–ಅಕ್ಕಮಹಾದೇವಿಯವರು

ಸುಶ್ರಾವ್ಯವಾಗಿ ಅಕ್ಕಮಹಾದೇವಿಯವರ ವಚನವನ್ನು ತದೇಕಚಿತ್ತದಿಂದ ಹಾಡುತ್ತಿದ್ದ ಲಿಂಗಮ್ಮನನ್ನು ಕಂಡು ಬಸವಾದಿ ಶರಣರ ದರ್ಶನ ನಮಗೆ ಇಲ್ಲಿಯೇ ಮಾಡಿಸಿದಿಯವ್ವ ತಾಯೇ..ಎಂದು ಕುಳಿತವರೆಲ್ಲರೂ ಲಿಂಗಮ್ಮ ಹಾಡಿದ ರೀತಿಯನ್ನು ಹೊಗಳಿದರು. ಲಿಂಗಮ್ಮ ಯಾತ್ರಿಕರೊಂದಿಗೆ ಇರುವ ಹೆಣ್ಣುಮಕ್ಕಳೊಂದಿಗೆ ಮಾತಾಡುತ್ತಾ ಸ್ವಲ್ಪ ದೂರ ಬಂದರು. ಅವರ ಮುಂದಿನ ಪ್ರಯಾಣ ಮರುದಿವಸ ನಸುಕಿನಲ್ಲಿಯೇ ಸೊಲ್ಲಾಪುರದ ಮಾರ್ಗವಾಗಿ ಕಲ್ಯಾಣದ ಕಡೆಗೆ ಸಾಗುತ್ತದೆ ಎಂಬ ಸಮಾಚಾರ ಗೊತ್ತಾಗುತ್ತದೆ. ಲಿಂಗಮ್ಮ ಮನೆಗೆ ಹೋಗಿ ಸಾಯಂಕಾಲದ ಇಷ್ಟಲಿಂಗಪೂಜೆಯಲ್ಲಿ ಏಕಾಗ್ರತೆಯಿಂದ ನಿರತಳಾದಾಗ "ಹೊರಡು ಮಗಳೇ ಹೊರಡು, ಕಲ್ಯಾಣಕ್ಕೆ ಹೊರಡುವ ಸಮಯವಾಗಿದೆ" ಎಂಬ ಅಂತರ್ವಾಣಿ ಕೇಳಿಸಿದಂತಾಯಿತು.

ಕಲ್ಯಾಣದ ಕಡೆಗೆ

ಲಿಂಗಮ್ಮನ ಬೆಳವಣಿಗೆಯು ಅಧ್ಯಾತ್ಮದಲ್ಲಾಗಿತ್ತೇ ವಿನಾ ಐಹಿಕವಾದ ಬೆಳವಣಿಗೆಗಳಲ್ಲಿ ಬಾಲ ಬ್ರಹ್ಮಚರ್ಯದಂತಿತ್ತು. ಇದನ್ನು ಕಂಡ ಲಿಂಗಮ್ಮಳ ತಂದೆ–ತಾಯಿಯರಿಗೆ ಬಿಡಿಸದ ಕಗ್ಗಂಟು. ಮಗಳ ಮದುವೆಗಾಗಿ ಹಗಲಿರುಳು ಚಿಂತಿಸುತ್ತಿರುವ ಅವರು ಈ ವರ್ತನೆ ಕಂಡು ಆತಂಕಗೊಂಡರು. ಅವರು ತಮ್ಮ ದುಗಡವನ್ನು ಮಗಳಿಗೆ ವಿವರಿಸುತ್ತಾರೆ. ಆದರೆ ಲಿಂಗಮ್ಮನಿಗೆ ಲೌಕಿಕ ಬಂಧನ ಬೇಡವಾಗಿ ಕಲ್ಯಾಣದ ಶರಣರನ್ನು ಕಾಣುವ ಬಯಕೆಯೆ ಹೆಚ್ಚಾಗುತ್ತಿತ್ತು. ಅದಕ್ಕಾಗಿ ಲಿಂಗಮ್ಮ ತಂದೆ–ತಾಯಿಯರಿಗೆ ಹೇಳುತ್ತಾಳೆ. ಅಮ್ಮ ನೀವು ನನ್ನನ್ನು ಪ್ರೀತಿ ಮಾಡುವಷ್ಟು, ನಮ್ಮೆಲ್ಲರನ್ನು ಹುಟ್ಟಿಸಿದ ಸೃಷ್ಟಿಕರ್ತನನ್ನು ಪ್ರೀತಿಯಿಂದ, ಭಕ್ತಿಯಿಂದ ಪೂಜೆ ಮಾಡಬೇಕವ್ವ, ಭೂಮಿಯ ಮೇಲಿರುವ ಅನೇಕ ಧರ್ಮದವರು ಕಣ್ಣಿಗೆ ಕಾಣುವ ಲೋಕವನ್ನು ಬಿಟ್ಟು, ಸ್ವರ್ಗವನ್ನು ಮೇಲೆ ತೋರಿಸುತ್ತಾರೆ. ಆದರೆ ಮಹಾನುಭಾವಿ ಅಣ್ಣ ಬಸವಣ್ಣನವರು ಆ ಸ್ವರ್ಗವನ್ನು ಭೂಮಿಗೆ ತಂದಿದ್ದಾರೆಂದು ಕಲ್ಯಾಣದಿಂದ ಬಂದ ಚರಜಂಗಮರು ಹಾಡುತ್ತಿರುವ ವಚನದಲ್ಲಿ ಕೇಳಿದ್ದೇನೆ. ನಾನು

ನನ್ನ ಆತ್ಮಕಲ್ಯಾಣಕ್ಕಾಗಿ ಬಸವಾದಿ ಶರಣರಲ್ಲಿಗೆ ಹೋಗಲೇಬೇಕು ಎಂದಳು.

ಅನಂತರಾಯ, ಸಿರಸಮ್ಮರು ಮಗಳ ಮದುವೆ ಮಾಡಬೇಕೆಂದು ಯೋಚಿಸಿತ್ತಿರುವಾಗ ಲಿಂಗಮ್ಮನು ಕಲ್ಯಾಣಕ್ಕೆ ಹೋಗುವ ನಿರ್ಧಾರ ತೆಗೆದುಕೊಂಡಿದ್ದಳು. ಮನೆಯಲ್ಲಿ ತಂದೆ ತಾಯಿಯರಿಗೆ ತಿಳಿಸಿದರೆ, ಅವರು ತನಗೆ ಅನುಮತಿ ಕೊಡುವುದಿಲ್ಲ ಎಂಬ ಆತಂಕದಿಂದ ಯಾರಿಗೂ ಹೇಳದೆ ಲಿಂಗಮ್ಮ ತಂದೆ-ತಾಯಿಗೆ ನಿದ್ರೆ ಹತ್ತಿದೊಡನೆ ಸದ್ದಾಗದಂತೆ ಎದ್ದು ತನಗೆ ಬೇಕಾದ ಅತ್ಯವಶ್ಯಕವಾದ ಕೆಲ ಸಾಮಗ್ರಿಗಳನ್ನು ಗಂಟು ಕಟ್ಟಿಕೊಂಡು ದೇವರೇ ಅಪ್ಪ ಬಸವಣ್ಣನವರ ಬಳಿಗೆ ಕಳುಹಿಸು, ನನ್ನ ಹೆತ್ತವರ ಮನಸ್ಸಿಗೆ ನೋವಾಗದಂತೆ ನೋಡಿಕೊ ಎಂದು ಪ್ರಾರ್ಥಿಸಿದಳು. ಕಲ್ಯಾಣಕ್ಕೆ ಹೊರಟ ಯಾತ್ರಿಕರೊಡನೆ ಹೊರಟರೆ ಅಲ್ಲಿ ವೀರಯ್ಯನವರು ಅವರನ್ನು ಬೀಳ್ಕೊಡಲು ಬರುತ್ತಾರೆ. ವೀರಯ್ಯನವರ ಆಶೀರ್ವಾದ ಪಡೆಯಲು ಹೋದರೆ ಅವರು ನನ್ನ ಹೆತ್ತವರಿಗೆ ತಿಳಿಸುತ್ತಾರೆ ಆಗ ಅವರು ತನ್ನನ್ನು ಕಲ್ಯಾಣಕ್ಕೆ ಕಳಿಸಲಾರರು ಎಂದು ಗಂಭೀರವಾಗಿ ಯೋಚಿಸುತ್ತಾ, ನಿಧಾನವಾಗಿ ನಡೆಯುತ್ತಾ ಒಬ್ಬಳೇ ಕಲ್ಯಾಣದ ಕಡೆಗೆ ಪಯಣ ಬೆಳೆಸಿದಳು.

ಲಿಂಗಮ್ಮ ಉಮರಾಣಿಯಿಂದ ಬಹುದೂರ ನಡೆದಿದ್ದಳು. ಆಗ ಹಿಂದಿನಿಂದ ಕಲ್ಯಾಣಕ್ಕೆ ಹೊರಟಿರುವ ಜನರು ಬರುತ್ತಿರುವುದು ಕಾಣಿಸಿತು. ತನ್ನ ತಂದೆ ತಾಯಿಯರು ತಾನು ಮನೆಯಲ್ಲಿ ಇಲ್ಲದಿರುವುದನ್ನು ಕಂಡು ಎಷ್ಟು ನೊಂದುಕೊಳ್ಳುವರೋ ಎಂದು ಒಂದು ಕ್ಷಣ ಯೋಚಿಸಿದರೆ, ಮರುಕ್ಷಣಕ್ಕೆ ಕಲ್ಯಾಣದ ಶರಣರನ್ನು ಕಾಣಬೇಕೆಂಬ ಅಂತರಂಗದ ಹೆಬ್ಬಯಕೆಯಿಂದ ನಿಧಾನವಾಗಿ ನಡೆಯುತ್ತ ಆ ಗುಂಪಿನವರ ಹಿಂದೆ ಸಾಗಿದಳು. ನಸುಕಿನ ಮಂಜಿನಲ್ಲಿ ಅವರಿಗೆ ಇವಳಾರೆಂದು ಗೊತ್ತಾಗಲಿಲ್ಲ. ಸೂರ್ಯೋದಯವಾದೊಡನೆ ಬೆಳಕಿನಲ್ಲಿ ಕಂಡವರೇ ನಿನ್ನೆ ದೇವಸ್ಥಾನದಲ್ಲಿ ಅಕ್ಕಮಹಾದೇವಿಯವರ ವಚನ ಹಾಡಿದ ತಾಯಿ, ವೀರಯ್ಯನವರು ಪರಿಚಯಿಸಿದ ಲಿಂಗಮ್ಮನಲ್ಲವೇ! ಒಬ್ಬಳೇ ಎಲ್ಲಿಗೆ ಹೊರಟಿರುವೆಯವ್ವಾ? ಎಂದರು ಗುಂಪಿನವರೆಲ್ಲರು. "ನೀವು ಹೊರಟಲ್ಲಿಗೆ ನಾನು ಹೊರಟ್ಟಿದ್ದೇನೆ" ಎಂದಳು ಲಿಂಗಮ್ಮ.

ಕಲ್ಯಾಣಕ್ಕೆ ಹೊರಟಿರುವ ಯಾತ್ರಿಕರಲ್ಲಿನ ಹಿರಿಯರೊಬ್ಬರು ಮಗಳೇ ಮನೆಯಿಂದ ಒಬ್ಬಳೇ ಹೊರಟಿರುವೆಯಾ, ನಿನ್ನ ಜೊತೆಗೆ ಯಾರು ಬರಲಿಲ್ಲವೇನವ್ವ ಎಂದರು. "ನೀವೆಲ್ಲರೂ ಬಸವಣ್ಣನವರ ದರ್ಶನಕ್ಕೆ ಹೊರಟಿದ್ದೀರಿ, ನಾನೂ ಅಲ್ಲಿಗೆ ಹೊರಟಿರುವೆ, ನಾವೆಲ್ಲ ಒಂದೆಕಡೆಗೆ ಸಾಗುತ್ತಿದ್ದವರೆಂದ ಮೇಲೆ ಒಂದೆ ಮನೆಯ ಜನರು ಅಲ್ಲವೆ ದೊಡ್ಡಪ್ಪಾ". ಇನ್ನೂ ಸದಾಕಾಲ ನನ್ನ ಎದೆಯ ಮೇಲೆ ಧರಿಸಿರುವ ಇಷ್ಟಲಿಂಗವೇ

ನನ್ನ ಜೊತೆಗಿರುವಾಗ ನನಗಿನ್ನಾರು ಬೇಕು ನೀವೆ ಹೇಳಿ ಎಂದಳು. ಲಿಂಗಮ್ಮ, ಇಷ್ಟು ಚಿಕ್ಕ ವಯಸ್ಸಿನಲ್ಲಿ ನಿನಗಿರುವಷ್ಟು ಧೈರ್ಯ ನಮಗಿನ್ನು ಇಲ್ಲವಮ್ಮಾ. ಕಳೆದ ಎಷ್ಟೋ ತಿಂಗಳಿಂದ ಪ್ರಯತ್ನಿಸಿ, ಬಳಗದವರೆಲ್ಲರು ಕೂಡಿ ಈಗ ಹೋರಟಿದ್ದೇವೆ ಎಂದರು ಗುಂಪಿನ ಹಿರಿಯರು. ದಾರಿಯುದ್ದಕ್ಕೂ ಅಲ್ಲಲ್ಲಿ ವಿಶ್ರಾಂತಿ ಪಡೆಯುತ್ತಾ ಸ್ನಾನಪೂಜೆ, ಇತ್ಯಾದಿಗಳನ್ನು ಮುಗಿಸಿಕೊಂಡು, ವಚನಗಳನ್ನು, ಭಕ್ತಿಗೀತೆಗಳನ್ನು ಹಾಡುತ್ತಾ. ಸೊಲ್ಲಾಪುರದ ಮಾರ್ಗವಾಗಿ ಸಾಗುತ್ತಿದ್ದರು. ಲಿಂಗಮ್ಮ ಈ ಹಿಂದೆ ಸೊಲ್ಲಾಪುರಕ್ಕೆ ಹೋಗಿ ಬಂದಿದ್ದರಿಂದ ಆ ಗುಂಪಿಗೆ ಮಾರ್ಗದರ್ಶಿಯಾದಳು.

ಸಿದ್ಧರಾಮೇಶ್ವರರ ದರ್ಶನ ಪಡೆದುಕೊಂಡು ಮುಂದೆ ಪ್ರಯಾಣ ಬೆಳಸೋಣ ಎಂಬ ಕಲ್ಯಾಣಕ್ಕೆ ಹೊರಟಿರುವವರ ಬಯಕೆಯಂತೆ, ಲಿಂಗಮ್ಮ ಕೆರೆಯ ಮಧ್ಯದಲ್ಲಿರುವ ಸಿದ್ಧರಾಮೇಶ್ವರರ ಧ್ಯಾನಮಂದಿರದ ಕಡೆಗೆ ಕರೆದುಕೊಂಡು ಹೋದಳು. ಸಿದ್ಧರಾಮೇಶ್ವರರು ಜನರಿಗೆ ದರ್ಶನ ಕೊಡುವ ಕಟ್ಟೆಯ ಮೇಲೆ ಕುಳಿತ್ತಿದ್ದರು. ಲಿಂಗಮ್ಮನನ್ನು ಕಂಡೊಡನೆ ಪರಿಚಯದ ಮುಖದಂತೆ ಅನ್ನಿಸಿತು. ಹಾವಿನಹಾಳ ಕಲ್ಲಯ್ಯರನ್ನು ಕರೆದು ಕೇಳಿದರು.

"ಗುರುಗಳೇ ಕಳೆದ ವರುಷ ಉಮರಾಣಿಯಿಂದ ಭಕ್ತರು ಬಂದಿದ್ದರಲ್ಲ ಅವರೊಂದಿಗೆ ಬಂದಿದ್ದವರು. ವಚನಗಳು, ತಾವು ಕೊಟ್ಟ ತ್ರಿಪದಿಗಳನ್ನು ಇಂಪಾಗಿ ಹಾಡಿದ್ದೀರಲ್ಲವೇ ತಾಯಿ ಎಂದರು. "ಹೌದು ಅಪ್ಪಾವರೆ" ಎಂದಳು ಲಿಂಗಮ್ಮ. ತಾಯಿ ನಿನ್ನ ತಂದೆ-ತಾಯಿಯರು ಬರಲಿಲ್ಲವೇನವ್ವ ಎಂದು ವಿಚಾರಿಸಿದರು.

ಅಪ್ಪಾವರೇ ಇವರೆಲ್ಲರೂ ಕೂಡಲಸಂಗಮದಿಂದ ಕಲ್ಯಾಣಕ್ಕೆ ಹೊರಟಿದ್ದವರು. ತಮ್ಮ ದರ್ಶನ ಪಡೆದುಕೊಂಡು ಕಲ್ಯಾಣಕ್ಕೆ ಹೋಗುತ್ತಾರೆ. ಬಹಳ ವರುಷಗಳಿಂದ ಕಲ್ಯಾಣಕ್ಕೆ ಹೋಗಬೇಕು ಬಸವಾದಿ ಶರಣರ ದರ್ಶನ ಪಡೆಯಬೇಕೆಂಬ ಮನದಿಚ್ಛೆಯನ್ನು ತಡೆದುಕೊಳ್ಳಲಾರದೆ ನಾನು ಇವರ ಜೊತೆಗೆ ಹೊರಟ್ಟಿದ್ದೇನೆ. ಹಲವಾರು ಬಾರಿ ಕಲ್ಯಾಣಕ್ಕೆ ಹೋಗೋಣವೆಂದು ನನ್ನ ಹೆತ್ತವರಿಗೆ ಕೇಳಿದ್ದೆ, ಊರು-ಊದ್ಯೋಗ, ಹೊಲ-ಮನೆಯ ವ್ಯಾಮೋಹದಿಂದ ಅಷ್ಟು ದೂರ ಹೇಗೆ ಹೋಗುವುದು ಎಂದು ಅನ್ನುತ್ತಿದ್ದರು. ನನ್ನ ಮೇಲಿನ ಮಮತೆಯಿಂದ ನನಗೆ ಒಬ್ಬಳಿಗೆ ಹೋಗುವುದಕ್ಕೆ ಬಿಡುವುದಿಲ್ಲ. ಅದಕ್ಕಾಗಿ ನಾನು ನನ್ನ ಹೆತ್ತವರಿಗೂ ತಿಳಿಸದೆ ಹೊರಟಿರುವೆ ನನ್ನ ತಪ್ಪನ್ನು ಮನ್ನಿಸಬೇಕು ಗುರುವೆ, ಎಂದು ಕೈಮುಗಿಯುತ್ತಾಳೆ.

ಸಿದ್ಧರಾಮೇಶ್ವರರು ಚಿಂತಿಸಬೇಡ ಲಿಂಗಮ್ಮ, "ಕಲ್ಲಯ್ಯನವರೆ, ಉಮರಾಣಿಯ

ಕಡೆಗೆ ಹೋಗುವ ಯಾತ್ರಿಕರಿದ್ದರೆ ಹುಡುಕಿರಿ, ಇಲ್ಲವಾದರೆ ಆ ಕಡೆಯ ಸಮೀಪದೂರಿಗೆ ಹೋಗುವವರಿದ್ದರೂ ಉಮರಾಣಿಯವರೆಗೆ ಹೋಗಿ, ಸಿರಸಮ್ಮ, ಅನಂತರಾಯರಿಗೆ ಲಿಂಗಮ್ಮ ಕ್ಷೇಮವಾಗಿ ಕಲ್ಯಾಣಕ್ಕೆ ಹೊರಟಿರುವ ಸಮಾಚಾರ ತಿಳಿಸಲು ಹೇಳಿರೆಂದು ಕಲ್ಲಯ್ಯನವರಿಗೆ ಕಳಿಸಿದರು. ಹೆತ್ತವರಿಗೆ ಸುದ್ದಿ ತಿಳಿದರೆ ಶಾಂತರಾಗುತ್ತಾರೆ. ಈಗ ನೀನು ವಚನಗೀತವನ್ನು ನಿನ್ನ ಕಂಠದಿಂದ ಕೇಳಿಸವ್ವ, ಎಂದರು.

ಹುಟ್ಟುಗೆಟ್ಟಾಸೀಮೆ ಬಟ್ಟಬಯಲಾಯಿತ್ತು
ಇಷ್ಟಲಿಂಗವು ಎನ್ನ ಕರಕೆ ಬರಲು
ಕಷ್ಟ ಸಂಸಾರದಲಿ ಹುಟ್ಟುವದು ಕೆಟ್ಟೀಗ
ನಿತ್ಯ ಪದಕಾನಾದೆ ಯೋಗಿನಾಥ.

ಲಿಂಗಮ್ಮ ಸಿದ್ಧರಾಮೇಶ್ವರರು ರಚಿಸಿದ ತ್ರಿಪದಿಯ ನುಡಿಗಳನ್ನು ಸುಶ್ರಾವ್ಯವಾಗಿ ಭಕ್ತಿಭರಿತಳಾಗಿ ಹಾಡುತ್ತಿದ್ದಾಗ ಅಲ್ಲಿ ಕುಳಿತವರೆಲ್ಲ ತಲೆದೂಗುತ್ತ ತಾಳಹಾಕುವಂತಾಗಿತ್ತು. ಅದನ್ನು ಕಂಡ ಸಿದ್ಧರಾಮೇಶ್ವರರು "ಲಿಂಗಮ್ಮ ನಿನ್ನ ಹೊಳೆಯುತ್ತಿರುವ ಕಣ್ಣುಗಳಲ್ಲಿನ ಮಿಂಚು, ನೀನು ಇಷ್ಟಲಿಂಗದಲ್ಲಿ ದೃಷ್ಟಿಯಿಟ್ಟು ದೃಷ್ಟಿಯೋಗ ಸಾಧನೆಯನ್ನು ಮಾಡಿದಂತಿದೆ." ಹೌದು ಗುರುದೇವಾ, ತಮ್ಮ ಕೃಪಾಶೀರ್ವಾದದ ಬಲದಿಂದ ವರುಷಗಳಿಂದ ದೃಷ್ಟಿಯೋಗ ಸಾಧನೆ ಮಾಡುತ್ತಿದ್ದೇನೆ. ಇತ್ತೀಚೆಗೆ ಸಿದ್ಧಿ ದೊರೆತಂತೆ ಭಾಸವಾಗುತ್ತಿದೆ. ಹಲವಾರು ಜನರು ತಮ್ಮ ರೋಗಾದಿಗಳಿಂದ ದುಃಖಿಸುತ್ತ ಬಂದಾಗ, ದೃಷ್ಟಿಯೋಗದ ಬಲದಿಂದ ನೀವು ಕೊಟ್ಟ ಭಸ್ಮವನ್ನು ಪ್ರಣವ ಪಂಚಾಕ್ಷರಿ ಮಂತ್ರಜಪಿಸುತ್ತ ಧರಿಸಿದಾಗ, ಅವರು ಗುಣಮುಖರಾದರು. ಇದೆಲ್ಲಾ ನಿಮ್ಮ ಮಾರ್ಗದರ್ಶನದ ಫಲವಾಗಿದೆ.

ಸಿದ್ಧರಾಮೇಶ್ವರರು ಲಿಂಗಮ್ಮ, ಕಲ್ಯಾಣದಲ್ಲಿ ನಾನು ಕಂಡ ತಾಯಿ ಅಕ್ಕನಾಗಲಾಂಬಿಕೆ, ಅಕ್ಕಮಹಾದೇವಿ, ಗಂಗಾಂಬಿಕೆಯವ್ವ, ನೀಲಲೋಚನೆಯಮ್ಮ, ಇನ್ನೂ ಅನೇಕ ಶರಣೆಯರು ಅತ್ಯುನ್ನತ ಸ್ಥಾನಕ್ಕೇರಿದವರು ಅಂಥ ಮಹನೀಯರ ಸಾಲಿನಲ್ಲಿ ನಿಲ್ಲುವ ಸ್ತ್ರೀ ರತ್ನ ತಾಯಿ, ಎಂದರು.

"ಗುರುದೇವ, ಆ ಮಹಾಮಹಿರೆತ್ತ, ನಾನೆತ್ತ , ನಾನು ಕಲ್ಯಾಣಕ್ಕೆ ಹೋಗಿ, ಅವರೆಲ್ಲರ ದರ್ಶನಕ್ಕಾಗಿ ಕಾತುರಳಾಗಿದ್ದೇನೆ. ನಾನು ಅವರೆಲ್ಲರ ಪಾದಕ್ಕೆ ಯೋಗ್ಯಳಾದರೆ ಸಾಕು, ತಂದೆ ನನ್ನನ್ನು ಆಶೀರ್ವದಿಸಿರಿ".

"ಲಿಂಗಮ್ಮ, ನೀನು ಸಾಮಾನ್ಯಳಲ್ಲ, ಸತ್ಯ ದಯೆಗಳೇ ಮೂರ್ತಿವೆತ್ತು ಹೆಣ್ಣಾಗಿ

ಹುಟ್ಟಿರುವಿಯವ್ವ, ನಿನ್ನನ್ನು ಕಂಡರೆ ಸಾಕ್ಷಾತ್ ಪ್ರತ್ಯಕ್ಷ ಕಪಿಲಸಿದ್ಧಮಲ್ಲಿಕಾರ್ಜುನನ್ನು ಕಂಡಂತಾಗುವುದು".

ಗುರುವೆ ನಿಮ್ಮ ದೃಷ್ಟಿ ವಿಶಾಲವಾಗಿ ಪವಿತ್ರವಾಗಿದೆ. ಅದಕ್ಕಾಗಿಯೇ ತಮ್ಮ ದೃಷ್ಟಿಯಲ್ಲಿ ಜಗತ್ತಿನ ಮಹಿಳೆಯರೆಲ್ಲ ನಿಮಗೆ ದೇವಸ್ವರೂಪರಾಗಿಯೇ ಕಾಣುತ್ತಿದ್ದಾರೆ. ನಿಮ್ಮ ಶರಣರ ಕರುಣೆಯ ಕಂದನಾಗಲು ಹಾತೊರೆಯುವವಳು ನಾನಪ್ಪಾ.

ಸಿದ್ಧರಾಮೇಶ್ವರರು ಲಿಂಗಮ್ಮ, ಚಿಕ್ಕ ವಯಸ್ಸಿನ ನೀನು ಜಗದ ಜನರ ಹಿತಕ್ಕಾಗಿ, ದೃಷ್ಟಿಯೋಗವನ್ನು ಕರಗತ ಮಾಡಿಕೊಂಡಿರುವಿ, ಮನೆಯನ್ನು, ಹೆತ್ತವರನ್ನು, ಹುಟ್ಟಿದ ಊರನ್ನು ತೊರೆದು, ಶರಣರ ದರ್ಶನದ ಅಪೇಕ್ಷಿಯಾಗಿ ಕಲ್ಯಾಣಕ್ಕೆ ಹೊರಟಿರುವುದು ಸಾಮಾನ್ಯ ಸಂಗತಿಯಲ್ಲವ್ವ, ಕಲ್ಯಾಣ ದೂರದ ದಾರಿ, ತಾವೆಲ್ಲರೂ ಒಂದೆರಡು ದಿವಸ ಇಲ್ಲಿ ವಿಶ್ರಾಂತಿ ಪಡೆದು ಮುಂದಿನ ಪ್ರಯಾಣ ಬೆಳೆಸಿರಿ ಎಂದರು.

ಲಿಂಗಮ್ಮ ಪೂಜೆಗೆ ಕುಳಿತಾಗ ಮಾತ್ರ ಮನಸ್ಸು ಏಕಾಗ್ರತೆ ಸಾಧಿಸುತ್ತಿತ್ತು. ಬೇರೆ ಸಮಯದಲ್ಲಿ ತಂದೆ-ತಾಯಿಯರತ್ತ ಹರಿಯುತ್ತಿತ್ತು. ತನ್ನನ್ನು ಬಿಟ್ಟು ಅರೆಗಳಿಗೆಯೂ ಇರಲಾರದ ಅವರಿಬ್ಬರೂ ಅದೆಷ್ಟು ದುಃಖಿಸುತ್ತಿರಬೇಕು ಎಂಬ ಯೋಚನೆಯಲ್ಲಿಯೇ ನಿದ್ದೆಗೆ ಜಾರಿದಳು. ಆ ರಾತ್ರಿ ಗಾಢನಿದ್ರೆಯಲ್ಲಿರುವಾಗ ಹೆತ್ತವರ ಬಳಿಗೆ ಹೋದಂತಾಯಿತು. "ಅವ್ವಾ-ಅಪ್ಪಾ, ನೀವು ಹೀಗೆ ದುಃಖಿಸುತ್ತಿದ್ದರೆ ನನ್ನ ಸಾಧನೆ ಮುಂದುವರಿಯುವುದಿಲ್ಲ. ನಿಮಗೆ ಹೇಳದೆ ಬಂದ ನನ್ನ ತಪ್ಪನ್ನು ಕ್ಷಮಿಸಿರಿ, ಬಸವಾದಿ ಶರಣರ ದರ್ಶನ ಪಡೆದು, ಅವರೊಂದಿಗೆ ಕೆಲಕಾಲ ಕಲ್ಯಾಣದಲ್ಲಿದ್ದು ಶಿವಯೋಗ ಸಾಧನೆಯ ಸಂಪೂರ್ಣ ಸಿದ್ಧಿಪಡೆದುಕೊಂಡು ನಿಮ್ಮ ಬಳಿಗೆ ಬರುತ್ತೇನೆ.ಜನರ ಸ್ತುತಿನಿಂದೆಗಳಿಗೆ ಹೆದರಬೇಡಿರಿ ನಿಷ್ಠೆಯಿಂದ ಇಷ್ಟಲಿಂಗಪೂಜೆಯಲ್ಲಿ ಮನಸ್ಸನ್ನು ನಿಲ್ಲಿಸಿ, ನಾನು ಅಲ್ಲಿಯೇ ನಿಮಗೆ ಕಾಣಿಸುತ್ತೇನೆ, ಅಳಬೇಡಿರಿ ಎಂಬ ಸಮಾಧಾನದ ನುಡಿಗಳನ್ನು ನುಡಿದಂತೆಯೇ ಎಚ್ಚರವಾಯಿತು. ಅಷ್ಟರಲ್ಲಿ ಲಿಂಗಮ್ಮನ ಅಂತರಂಗದಲ್ಲಿ ಶಾಂತಿಯುಂಟಾಯಿತು.

ಇತ್ತ ಉಮರಾಣಿಯಲ್ಲಿ ಅನಂತರಾಯ-ಸಿರಸಮ್ಮ ಮುಂಜಾನೆ ಮಗಳು ಇಲ್ಲದಿರುವುದನ್ನು ಕಂಡು ತಂದೆ-ತಾಯಿ ಭಯಭೀತರಾದರು. ಲಿಂಗಮ್ಮ ಕಲ್ಯಾಣದ ಕಡೆಗೆ ಹೋಗಿದ್ದಾಳೆಯೊ ಅಥವಾ ಏನಾಗಿದೆಯೊ ಎಂದು ಅವರಿಗೆ ಗೊಂದಲವುಂಟಾಗಿ ಅತ್ಯಂತ ಚಿಂತೆಯಲ್ಲೆ ಕೆಲವು ದಿನಗಳು ಕಳೆದರು. ತನ್ನ ತಂದೆ ತಾಯಿಗೆ ಆಗುತ್ತಿರುವ ದುಃಖವನ್ನು ಲಿಂಗಮ್ಮ ಅಂತಃಕರಣದಿಂದ ಅರಿತು, ತಂದೆಯ ಸ್ವಪ್ನದಲ್ಲಿ ಕಾಣಿಸಿಕೊಂಡು, 'ನಾನು ಕಲ್ಯಾಣದ ಕಡೆಗೆ ಹೊರಟಿರುವೆ ಶಿವಶರಣರ ಸನ್ನಿಧಿಯಲ್ಲಿದ್ದೇನೆ. ತಾವು

ದುಃಖಿಸಬೇಡಿರಿ, ಅಳಬೇಡಿರಿ ನಾನು ಹಿಂದಿರುಗಿ ಬರುವವರೆಗೆ ನೀವು ಇಷ್ಟಲಿಂಗದಲ್ಲಿ ನನ್ನನ್ನು ಕಾಣಿರಿ ಎಂದು ಹೇಳಿ ಬಯಲಾದ ಹಾಗೆ ಅನಂತರಾಯರಿಗೆ ಭಾಸವಾಯಿತು. ದುಃಖಿಸುತ್ತ ಮಲಗಿದ್ದ ದಂಪತಿಯರಿಗೆ ಮಗಳು ಮಾತನಾಡಿದಂತಾಯಿತು. ಮಾರನೆದಿವಸ ಸೊಲ್ಲಾಪುರದಿಂದ ಬಂದ ಯಾತ್ರಿಕರು ಇವರ ಮನೆಗೆ ಬಂದರು. ಲಿಂಗಮ್ಮ ಸೊಲ್ಲಾಪುರದ ಮಾರ್ಗವಾಗಿ ಕಲ್ಯಾಣಕ್ಕೆ ಹೊರಟಿದ್ದ ಯಾತ್ರಿಕರೊಂದಿಗೆ ಬಸವಾದಿ ಶರಣರ ದರ್ಶನಕ್ಕಾಗಿ ಹೊರಟಿದ್ದಾಳೆ. ಸುಖವಾಗಿ ಕ್ಷೇಮವಾಗಿದ್ದಾಳೆ ಚಿಂತಿಸಬೇಡಿರಿ ಎಂದು ಹೇಳಿದರು. ಈ ಸಮಾಚಾರ ತಿಳಿದು ಅವರಿಬ್ಬರ ಮನಸ್ಸಿಗೆ ನೆಮ್ಮದಿ ಎನಿಸಿತು.

ಲಿಂಗಮ್ಮನಿಗೆ ಸಿದ್ಧರಾಮೇಶ್ವರರ ದರ್ಶನದ ಪ್ರಭಾವದಿಂದ, ದೈವೀ ಆನಂದದ ಅನುಭವವಾಯಿತು. ದಕ್ಷಿಣ ಕಾಶಿ ಎನಿಸುವ ಸೊಲ್ಲಾಪುರ ಪಟ್ಟಣ ಸುಂದರವಾಗಿದೆ. ಅಂದಮೇಲೆ ಇನ್ನು ಕೈಲಾಸದಂತಿರುವ ಕಲ್ಯಾಣ ಹೇಗಿರಬಹುದು? ಎಂಬ ಕಲ್ಪನೆಯಲ್ಲಿ ಶರಣರನ್ನು ಕಾಣುವ ಹಂಬಲ ಹೊತ್ತು ಕಲ್ಯಾಣದ ಕಡೆಗೆ ಹೆಜ್ಜೆಹಾಕಿದಳು.

ಬಸವ ಬಸವೇಶ, ಬಸವಯ್ಯ ನಿಮ್ಮಡಿಗೆ ಶರಣು ಶರಣು, ಎಂದು ಸಾಮೂಹಿಕವಾಗಿ ಬಸವಸ್ತುತಿಯನ್ನು ಹಾಡುತ್ತ ಸಾಗಿದಾಗ ಸುತ್ತಲಿನ ವಾತಾವರಣವೆಲ್ಲಾ ಬಸವ ನಾಮಾಮೃತದಿಂದ ತುಂಬಿತು. ಮಾರ್ಗದಲ್ಲಿ ಸ್ನಾನ, ಪೂಜೆ, ಪ್ರಸಾದ, ಅಲ್ಪ ವಿಶ್ರಾಂತಿ ಪಡೆದು ಹೊರಟಾಗ ಆರೇಳು ದಿವಸದಲ್ಲಿ ಕಲ್ಯಾಣ ಸಮೀಪಿಸಿತು.

ಕಲ್ಯಾಣ ಸಮೀಪಿಸುತ್ತಿದ್ದಂತೆ ಲಿಂಗಮ್ಮನಿಗೆ ಮಹದಾನಂದವಾಯಿತು. ತನ್ನ ಜೀವನ ಸಾರ್ಥಕವಾಯಿತೆಂದು ಹುಮ್ಮಸ್ಸಿನಿಂದ ಮುನ್ನಡೆದರು. ಸ್ವಲ್ಪ ಮುಂದೆ ಹೋದಂತೆ ಗವಿಯೊಂದು ಕಾಣಿಸಿತು. ಅದು ಯಾರ ಗವಿ ಎಂದು ವಿಚಾರಿಸಿದಾಗ, ಮೋಳಿಗೆ ಮಾರಯ್ಯನವರ ಗವಿ ಎಂದು ತಿಳಿಯಿತು. ಅವರ ದರ್ಶನ ಪಡೆಯಬೇಕೆಂದು ಗವಿಯ ಮುಂದೆ ಹೋದರು. "ಅವ್ವಾ ತಾವು ಮೋಳಿಗೆ ಮಹಾದೇವರಸರ ಪತ್ನಿ ಮಾಹಾದೇವಿಯಮ್ಮನವರಲ್ಲವೇ?"

"ಹೌದು ಶರಣು-ಶರಣಾರ್ಥಿ ಬನ್ನಿರಿ, ಬನ್ನಿರಿ, ನಿಮ್ಮನ್ನು ನೋಡಿದರೆ ದೂರದ ಊರಿನಿಂದ ಪ್ರಯಾಣಿಸುತ್ತ ಕಲ್ಯಾಣದ ಕಡೆಗೆ ಹೊರಟಂತಿದೆ. ಆದರೆ ನಿಮಗೆ ನಮ್ಮ ಪರಿಚಯ ಹೇಗಾಯಿತು? ಹೌದು ತಾಯಿ, ನಾವು ವಿಜಯಪುರದ ಭಾಗದಿಂದ ಬಂದಿದ್ದೇವೆ. "ಈ ಭಾಗದಿಂದ ಬಂದ ಚರಜಂಗಮರ ಬಾಯಿಂದ ಕೇಳಿದ್ದೇನೆ. ಕಾಶ್ಮೀರದ ಅರಸೊತ್ತಿಗೆಯನ್ನು ಬಿಟ್ಟು ಬಂದಿರುವಿರಂತೆ" ಎಂಬುದರ ಬಗ್ಗೆ ನಿಮ್ಮ

ಘನವ್ಯಕ್ತಿತ್ವವನ್ನು ಪರಿಚಯಿಸಿದರು. "ಅವೆಲ್ಲ ಗತಕಾಲದ ಮಾತುಗಳು. ಮಹಾನುಭಾವಿ ಅಪ್ಪ ಬಸವಣ್ಣನವರ ದಿವ್ಯಶಕ್ತಿಯ ಪ್ರಭಾವಕ್ಕೊಳಗಾಗಿ ಈಗ ನಾವು ಕಟ್ಟಿಗೆ ಮಾರುವ ಕಾಯಕದೊಂದಿಗೆ ಮೋಳಿಗೆಮಾರಯ್ಯ-ಮಹಾದೇವಿಯಾಗಿ ಶರಣರ ಸಂಗದೊಳಗೆ ಆನಂದದಿಂದ ಇದ್ದೇವೆ. ಬನ್ನಿರಿ ದಣಿದಿದ್ದೀರಿ ಸ್ನಾನ ಪೂಜೆಯ ಪ್ರಸಾದದ ನಂತರ ಸ್ವಲ್ಪ ಹೊತ್ತು ಚಿಂತನೆ ಮಾಡೋಣ ಎಂದರು.

"ತಾಯೇ, ರಾಜವೈಭವವನ್ನು ತೊರೆದು ಕಾಯಕ ನಿರತರಾದ ತಮ್ಮ ದರ್ಶನ ದೊರತದ್ದು ನಮ್ಮ ಭಾಗ್ಯ. ನಿಮ್ಮ ತ್ಯಾಗ ಕಾಯಕನಿಷ್ಠೆ, ನೀವು ಶ್ರದ್ಧಾಭಕ್ತಿಯಿಂದ ಮಾಡುವ ದಾಸೋಹ, ತಮ್ಮ ಅತ್ಯಮೂಲ್ಯವಾದ ಅನುಭವದ ವಚನಗಳನ್ನು ಕುರಿತು ಸಾಕಷ್ಟು ಕೇಳಿದ್ದೇನೆ. ತಮ್ಮ ಬಾಯಿಂದಲೆ ಒಂದು ವಚನ ಕೇಳಬೇಕೆಂಬ ಬಯಕೆ" ಎಂದಳು ಲಿಂಗಮ್ಮ.

ಸಕಲದಲ್ಲಿ ಅಳಿದು ನಿಃಕಲದಲ್ಲಿ ಉಳಿದ ಮತ್ತೆ,
ಸಕಲವ ಕೂಡಿಹೆನೆಂಬ ನಿಃಕಲವುಂಟೆ ಅಯ್ಯಾ?
ನಿಃಕಲದೊಳಗೆ ಸಕಲವಡಗಿ,
ಆ ಗುಣ ಉಪದೃಷ್ಟಕ್ಕೆ ಈಡಿಲ್ಲದಲ್ಲಿ,
ಅಖಿಲಜಗವೆಂಬುದು ಹೊರಗು.
ಆ ಗುಣ ನಿನ್ನ ಸದ್ಭಾವಬೀಜವಾದಲ್ಲಿ ನಿನ್ನಂಗವೆ ಕೈಲಾಸ:
ಆ ಲಿಂಗದ ಕೂಟವೆ ನಿರ್ಯಾಣ,
ಇದು ನಿಸ್ಸಂಗದ ಸಂಗ; ನಿಮ್ಮ ನೀವೇ ತಿಳಿದುಕೊಳ್ಳಿ,
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನಾ.

– ಮೋಳಿಗೆ ಮಹಾದೇವಿಯವರು.

ಲಿಂಗಮ್ಮ, ನಾವು ಕಾಶ್ಮೀರದಲ್ಲಿದ್ದಾಗ ಧನ, ಧಾನ್ಯ, ವಜ್ರ ವೈಡೂರ್ಯಕ್ಕೆ ಕೊರತೆಯಿರಲಿಲ್ಲ. ಆದರೆ ಅಂತರಂಗದ ಸಂತೃಪ್ತಿ, ಸಮಾಧಾನ ನಮಗಿರಲಿಲ್ಲ. ಎಲ್ಲದಕ್ಕೂ ಮನದ ಸಂತೃಪ್ತಿಯೇ ಮುಖ್ಯವಾದುದು. ಸಕಲದಲ್ಲಿ ಸದ್ಭಾವದ ಗುಣವನ್ನು ಮೈಗೂಡಿಸಿಕೊಂಡು, ಅಂಗಲಿಂಗವಾದಾಗ ಎಲ್ಲದರಲ್ಲೂ ನಿಷ್ಕಳಂಕವಾದ ಆ ದೇವನ ಕೈಲಾಸವೇ ಕಂಡು ಬರುತ್ತದೆ. ನಮ್ಮ ಅಣ್ಣ ಬಸವಣ್ಣನವರು ಅರ್ಚನೆ, ಅರ್ಪಣೆ ಮತ್ತು ಅನುಭಾವಗಳ ಬಗೆಗೆ ನಮಗೆಲ್ಲ ತಿಳಿಸಿ ಹೇಳಿದ್ದಾರೆ. ಆ ಮೂರು ಮೂಲ ಮಂತ್ರ ನಮ್ಮಿಬ್ಬರ ಜೀವನವನ್ನು ಸಾರ್ಥಕಗೊಳಿಸಿದೆ. ಮೊದಲು 'ತನ್ನ ತಾನರಿಯಬೇಕು' ಎಂದು ಹೇಳುವಂತೆ ನಮ್ಮನ್ನು ನಾವು ಅರಿಯಲು ಕಾಯಕ, ದಾಸೋಹ, ಲಿಂಗಪೂಜೆ

ಈ ಮೂರು ಮಹತ್ವದ್ದಾಗಿವೆ. ಎಂದರು ಮಹಾದೇವಿಯಮ್ಮ.

ಪೂಜೆ ಮುಗಿಸಿ ಎದ್ದು ಹೊರಗೆ ಬಂದ ಮೋಳಿಗೆಮಾರಯ್ಯನವರನ್ನು ಕಂಡು, ಲಿಂಗಮ್ಮ ಭಕ್ತಿಭಾವದಿಂದ ಶರಣು– ಶರಣಾರ್ಥಿ ಹೇಳುತ್ತಾ ತಮ್ಮಿಬ್ಬರ ದರ್ಶನ ಪಡೆದು ಧನ್ಯಳಾದೆ. "ತಂದೆ ತಾವು ಪೂಜೆಯಲ್ಲಿ ಹೇಳುತ್ತಿರುವ ವಚನದಲ್ಲಿ ತಮ್ಮ ಮನ ಶರಣರನ್ನು ನೆನೆಯುತ್ತಿದ್ದಂತಿತ್ತು. ಆ ವಚನವನ್ನು ನನಗೂ ಹೇಳಿಕೊಡಿಯಪ್ಪಾ."

ತಾಯಿ, ಎನ್ನ ಮನಸ್ಸು ಸದಾ ಸದಾ ಶರಣರ ಬಳಿಯಲ್ಲೆ ಇರುವುದು.

ಎನ್ನ ತನುವಿನಲ್ಲಿ ಗುರುಮೂರ್ತಿ ಸಂಗನಬಸವಣ್ಣನ ಕಂಡೆನು.
ಎನ್ನ ಮನದಲ್ಲಿ ಲಿಂಗಮೂರ್ತಿ ಚನ್ನಬಸವಣ್ಣನ ಕಂಡೆನು.
ಎನ್ನ ಭಾವದಲ್ಲಿ ಜಂಗಮಮೂರ್ತಿಯ ಸಿದ್ಧರಾಮಯ್ಯನ ಕಂಡೆನು.
ಎನ್ನ ತೃಪ್ತಿಮುಖದಲ್ಲಿ ಪ್ರಸಾದಮೂರ್ತಿ ಮರುಳಶಂಕರದೇವರ ಕಂಡೆನು.
ಎನ್ನ ಅರಿವಿನ ಮುಖದಲ್ಲಿ ನೈಷ್ಠಿಕಾಮೂರ್ತಿ ಮಡಿವಾಳಯ್ಯನ ಕಂಡೆನು.
ಎನ್ನ ಹೃದಯಮುಖದಲ್ಲಿ ಜ್ಞಾನಮೂರ್ತಿ ಪ್ರಭುದೇವರ ಕಂಡೆನು.
ಇಂತೀ ಷಟ್‌ಸ್ಥಲವ ಎನ್ನ ಸರ್ವಾಂಗದಲ್ಲಿ ಪ್ರತಿಷ್ಠೆಯ ಮಾಡಿ ತೋರಿದ
ನಿಃಕಳಂಕ ಮಲ್ಲಿಕಾರ್ಜುನಾ,
ನಿಮ್ಮ ಶರಣರ ಕಂಡು, ಪರಮಸುಖಿಯಾದೆನು.

– ಮೋಳಿಗೆ ಮಾರಯ್ಯನವರು.

ಮೋಳಿಗೆ ಮಾರಯ್ಯನವರು ತನ್ಮಯತೆಯಿಂದ ಈ ವಚನವನ್ನು ಹೇಳುತ್ತಾ ತಾಯಿ, ನಮ್ಮ ಬಸವಣ್ಣ, ಅಲ್ಲಮಪ್ರಭುದೇವರು, ಸಿದ್ಧರಾಮೇಶ್ವರರು, ಚನ್ನಬಸವಣ್ಣಾದಿ ಶರಣರ ದೃಷ್ಟಿ ಬಹಳ ವಿಶಾಲವಾದುದು. ಶರಣರು ದೀನ ದುರ್ಬಲರ ಬಗೆಗೆ ಹೆಚ್ಚಿನ ಗಮನ ಕೊಡುತ್ತಿದ್ದಾರೆ. ಶರಣ ತತ್ತ್ವದಲ್ಲಿ ಪ್ರಸಾದಕ್ಕೆ ಬಹಳ ಮಹತ್ವವಿದೆ. ಮಾನವನ ಮನಸ್ಸು, ಪ್ರಾಣ, ದೇಹ ಒಂದಕ್ಕೊಂದು ಸಂಬಂಧಪಟ್ಟಿವೆ. ಪ್ರತಿಯೊಬ್ಬರು ಶುದ್ಧ ಮನಸ್ಸಿನಿಂದ ಕಾಯಕ ಮಾಡುವುದರಿಂದ ಹಣದ ಮಹತ್ವ ಗೊತ್ತಾಗುವುದು. ಅಂಥ ಸತ್ಯ ಶುದ್ಧತೆ ಮತ್ತು ನಡೆ–ನುಡಿ ಒಂದಾಗಿಸಿಕೊಂಡ ಶರಣರನ್ನು ನೆನೆಯುವುದರಲ್ಲೆ ಮನಸ್ಸಿಗೆ ಶಾಂತಿ ನೆಮ್ಮದಿಯಾಗುವುದವ್ವ, ತಾವೆಲ್ಲ ಬಹಳ ದೂರದಿಂದ ಬಂದಿರುವಿರೆಂದು ಮಹಾದೇವಿ ಹೇಳಿದಳು. ನಡೆಯಿರಿ ಸ್ವಲ್ಪ ಫಲಹಾರ ಸೇವಿಸಿ ವಿಶ್ರಾಂತಿ ಪಡೆಯಿರಿ, ನಾಳೆ ಬೆಳಿಗ್ಗೆ ಕಲ್ಯಾಣಕ್ಕೆ ಹೋಗುವಿರಂತೆ ಎಂದರು.

ಮಾರಯ್ಯ ತಂದೆ, ಮಧ್ಯಾಹ್ನದ ಹೊತ್ತಿಗೆ ಎಲ್ಲರೂ ಹೊಟ್ಟೆತುಂಬಾ ರುಚಿಕರವಾದ ಅಂಬಲಿ ಪ್ರಸಾದ ಸೇವಿಸಿ ಸಂತೃಪ್ತರಾಗಿದ್ದೇವೆ. ಕಾಶ್ಮೀರದ ಮಹಾದೇವರಸ, ಮಹಾದೇವಿಯಮ್ಮನವರು ಬರುವಾಗ ತಂದ ಧನಕನಕವನ್ನೆಲ್ಲ ಮಹಾಮನೆಯ ದಾಸೋಹಕ್ಕಾಗಿ ಅರ್ಪಿಸಿ, ಕಲ್ಯಾಣದ ಭಾಗದಲ್ಲಿ ಸತ್ಯ ಶುದ್ಧ ಕಾಯಕ ಮಾಡುವ ನಿಟ್ಟಿನಲ್ಲಿ ಕಟ್ಟಿಗೆ ಮಾರಿ ಬಂದ ಹಣದಿಂದ ಗುರು ಲಿಂಗ ಜಂಗಮ ದಾಸೋಹ ಕೈಗೊಂಡು ಕೈಲಾಸದ ಸುಖ ಸಂತೃಪ್ತಿಯನ್ನು ಅನುಭವಿಸುತ್ತಿದ್ದಾರೆ. ಎಂದು ತಮ್ಮ ವ್ಯಕ್ತಿತ್ವದ ಪರಿಚಯ ನಮ್ಮ ಉಮರಾಣಿಯಲ್ಲಿ ನೆಲೆಸಿರುವ ಗುರು ವೀರಯ್ಯನವರಿಂದ ಕೇಳುತ್ತಿದ್ದೆ. ಆದರೆ ಇಂದು ತಾವು ಕಾಯಕದಿಂದ ತಂದ ಧಾನ್ಯವನ್ನು ಮಹಾದೇವಿಯಮ್ಮ ಭಕ್ತಿ, ಪ್ರೀತಿ ಅರ್ಪಣಭಾವದಿಂದ ಬೀಸಿ ಅಂಬಲಿ ಮಾಡಿ ಶಿವಧ್ಯಾನಗೈಯುತ್ತ ನಮಗೆಲ್ಲ ಉಣಬಡಿಸಿದಾಗ, ಆ ಪ್ರಸಾದದ ಘನವನೇನೆಂಬೆ ತಂದೆ, ಹಬ್ಬ ಹುಣ್ಣಿಮೆಗಳಲ್ಲಿ ನಾನಾ ಬಗೆಯ ಭಕ್ಷ್ಯಭೋಜ್ಯನಗಳನ್ನು ಸೇವಿಸಿದರೂ ಇಂದಿನ ಪ್ರಸಾದದ ತೃಪ್ತಿ ನಮಗೆಂದಿಗೂ ಆಗಿರಲಿಲ್ಲ. 'ಅದಕ್ಕೆಂದೇ ಕಲ್ಯಾಣದ ಶರಣರು ತಮ್ಮ ಮನೆಯ ಅಂಬಲಿಯ ರುಚಿಯನ್ನು ಸವಿಯಲು ಆಗಾಗ ಇಲ್ಲಿಗೆ ಬರುವರಂತೆ' ಎಂದು ನಮ್ಮ ಗುರುಗಳು ಹೇಳುತ್ತಿದ್ದರು.

ಲಿಂಗಮ್ಮ, ನೀನು ಶರಣರಿರುವ ಕೈಲಾಸಕ್ಕೆ ಹೊರಟಿರುವಿ, ಅಲ್ಲಿ ನಿನ್ನ ತನುಮನ, ಆತ್ಮಗಳಿಗೆ ಬೇಕಾದುದೆಲ್ಲ ದೊರೆಯುವದು. ನೀವು ನಡೆಯಿರಿ ನಾವಿಬ್ಬರೂ ಅನುಭವ ಮಂಟಪಕ್ಕೆ ಬರುತ್ತೇವೆ ಸಾಧ್ಯವಾದರೆ ಅಲ್ಲಿ ಮತ್ತೆ ಕೂಡೋಣ ಎಂದರು.

ತಾಯಿ ನೀವಿಬ್ಬರೂ ಅನುಭಾವಿಗಳು, ಪುಣ್ಯಜೀವಿಗಳು ನಿಮ್ಮ ಕೈಯ ಪ್ರಸಾದದ ರುಚಿಯನ್ನುಣಿಸಿದಿರಿ, ನಿಮ್ಮ ಅನುಭವದಮೃತವ ಕರುಣಿಸಿದಿರಿ, ನಿಮ್ಮಿಬ್ಬರಿಗೂ ನಾವೆಲ್ಲರೂ ಚಿರಋಣಿಯಾಗಿದ್ದೇವೆ. ಹೋಗಿ ಬರುತ್ತೇವೆ ಶರಣು- ಶರಣಾರ್ಥಿ ಎಂದು ಮುಂದೆ ಹೊರಟರು.

ಲಿಂಗಮ್ಮನ ನೇತೃತ್ವದಲ್ಲಿ ಸೂರ್ಯೋದಯದ ಸೊಬಗನ್ನು ಸವಿಯುತ್ತ, ಮಧ್ಯಾಹ್ನದ ವೇಳೆಗೆ ಕಲ್ಯಾಣದ ಹೊರವಲಯ ತಲುಪಿದರು. ಲಿಂಗಮ್ಮ ತನ್ನ ಜೊತೆಗೆ ಪ್ರಯಾಣಿಸುತ್ತಿರುವ ಯಾತ್ರಿಕರಲ್ಲಿ ಹಿರಿಯರೊಬ್ಬರನ್ನು ಕುರಿತು ದೊಡ್ಡಪ್ಪಾ ತಾವೆಲ್ಲರೂ ಮಹಾಮನೆಯ ಕಡೆಗೆ ನಡೆಯಿರಿ. ನಾನು ನಂತರ ಬರುತ್ತೇನೆ ಎಂದು ಕಳುಹಿಸಿದಳು.

ಶರಣರ ಪಾದಧೂಳಿಯಿಂದ ಪಾವನವಾದ ಆ ಪುಣ್ಯ ಭೂಮಿ ಕೈಲಾಸದಂತೆ ಗೋಚರವಾಯಿತು. ಆನಂದದಿಂದ ಮಧ್ಯಾಹ್ನದ ಲಿಂಗ ಪೂಜೆ ಮಾಡಿಕೊಂಡಳು.

ಹಾಗೆಯೇ ಮುಂದೆ ಸಾಗುವಾಗ, ಎಲ್ಲಾ ಕಡೆಯಿಂದ ಕಾಯಕ ಮುಗಿಸಿಕೊಂಡು ಹೊರಟ ಇಷ್ಟಲಿಂಗಧಾರಿ ಶರಣಸಂಕುಲವನ್ನು ನೋಡುವ ಭಾಗ್ಯ ದೊರೆಯಿತೆಂದು ಅತ್ಯಂತ ಸಂತೋಷಪಟ್ಟಳು.

ಬಸವಣ್ಣನವರ ಮಹಾಮಹಿಮೆಗೆ ಮನಸೋತು ಕಾಶ್ಮೀರ, ಕೇರಳ, ಉತ್ತರಭಾರತ, ಮುಂತಾದ ಅನೇಕ ಕಡೆಗಳಿಂದಲೂ ಶರಣರು ತಂಡೋಪತಂಡವಾಗಿ ಬಂದು ಕಲ್ಯಾಣದಲ್ಲಿದ್ದು, ಕಾಯಕ-ದಾಸೋಹದ ಮೂಲಕ ಜೀವನ ಸಾಗಿಸುತ್ತಿರುವುದನ್ನು ಕೇಳಿದ್ದ ಲಿಂಗಮ್ಮ ಇದೆಲ್ಲವನ್ನು ಕಣ್ಣಾರೆ ಕಂಡು ಆನಂದಸಾಗರದಲ್ಲಿ ತೇಲಾಡಿದಳು. ಹಾಗೆಯೇ ಬಂದವರ ಓಣಿಯನ್ನು ತಲುಪಿದಳು.

ತ್ರಿಪುರಾಂತಕ ಕೆರೆಯ ಬಳಿಯಲ್ಲಿ ವಾಸವಾಗಿದ್ದ ಶರಣರ ದಾಸೋಹ ಮಮಕಾರದ ಆಲಯದಲ್ಲಿ ನಡೆಯುತ್ತಿತ್ತು. ಅಲ್ಲಿ ಒಂದು ಚಿಕ್ಕ ಗುಡಿಸಲಿನ ಮನೆಯೊಂದು ಕಂಡಿತು. ಆ ಮನೆಯ ಕಟ್ಟೆಯ ಮೇಲೆ ಮಧ್ಯಮ ಮಯಸ್ಸಿನ ಮಹಿಳೆಯೊಬ್ಬಳು ಚಿಂತೆಯ ಭಾರದಿಂದ ಬಾಗಿ ಅಳುತ್ತ ಕುಳಿತ್ತಿದ್ದಳು. ಬಿಸಿಗೆ ಬೆಣ್ಣೆ ಕರಗುವಂತೆ, ಪರರ ದುಃಖವನ್ನು ನೋವನ್ನು ಕಂಡರೆ ಕರಗುವ ಮನಸ್ಸಿನ ಲಿಂಗಮ್ಮನಿಗೆ ಮುಂದೆ ಹೆಜ್ಜೆಯಿಡಲು ಆಗಲಿಲ್ಲ. "ಯಾಕೆ ತಾಯಿ ಅಳುತ್ತ ಕುಳಿತಿರುವಿ" ನಿನ್ನ ಹೆಸರೇನು, ಎಂದಳು ಲಿಂಗಮ್ಮ. ಆ ಮಹಿಳೆ ಅಳುತ್ತಾ ಮಹಾದೇವಿ ಎಂದಳು.

ಮಹಾದೇವಿ, ದೇಶದ ಜನರೆಲ್ಲ ನಿಜವಾದ ಆನಂದ ಪಡೆಯಲು ಕಲ್ಯಾಣವೇ ಕೈಲಾಸವೆಂದು ಭಾವಿಸಿ ಬಸವಣ್ಣನವರ ದರ್ಶನಕ್ಕೆ ಹಾತೊರೆದು ಬರುತ್ತಿರುವಾಗ, ನೀನೇಕೆ ಹೀಗೆ ದೀಪದ ಕೆಳಗೆ ಕತ್ತಲೆಯಂತೆ, ಕಲ್ಯಾಣದಲ್ಲಿದ್ದೂ ಸಂಸಾರದ ತಾಪತ್ರಯದಿಂದ ಬಳಲುತ್ತಿರುವೆ? ನೀನು ಹೀಗೆ ಚಿಂತೆಯೆಂಬ ಚಿತೆಯಲ್ಲಿ ಬೇಯುತ್ತಿರುವುದನ್ನು ಕಂಡರೆ ನನಗೆ ಮುಂದೆ ಹೋಗಲು ಆಗುತ್ತಿಲ್ಲ. ಚಿಂತಿಸಬೇಡ ಅಳಬೇಡ ನಿನ್ನ ದುಃಖಕ್ಕೆ ಏನು ಕಾರಣ ಎಂಬುದು ತಿಳಿಸು ನಾನು ಕೆಲಕಾಲ ನಿನ್ನ ಜೊತೆಗೆ ಇರುತ್ತೇನೆ ಎಂದಳು.

ಬಾರವ್ವ, ಬಾ ತಾಯಿ ಕುಳಿತುಕೊ, ನನ್ನ ದುಃಖವನ್ನು ಹೇಳಿಕೊಳ್ಳಲು ನೀನು ಜೊತೆಗಿದ್ದರೆ ನನಗೂ ಸಮಾಧಾನ. ವರುಷದೊಳಗೆ ಮೂವರು ಮಕ್ಕಳು ರೋಗಕ್ಕೆ ಬಲಿಯಾಗಿ ಮಸಣ ಸೇರಿದರು. ಆ ದುಃಖದಲ್ಲಿ ಒದ್ದಾಡುತ್ತಿರುವಾಗ ಮತ್ತೇ ದುಡಿಯುವ ಗಂಡ ಕೂಡ ಶಿವನ ಪಾದ ಸೇರಿದರು. ನಾನೇನು ಮಾಡಲಿ ಅಳುವದನ್ನು ಬಿಟ್ಟರೆ ನನಗೆ ಬೇರೇನಿದೆ. ಎಲ್ಲರೂ ಕೈಬಿಟ್ಟು ಹೋದ ಮೇಲೆ ದೇವರೆ ಇಲ್ಲ ಎಂದು

ತಿಳಿದುಕೊಂಡಿದ್ದೆ, ನೀನು ನನ್ನ ಪಾಲಿನ ದೇವರಾಗಿ ಬಂದಿರುವಿ. ಮೊನ್ನೆಯಿಂದ ಒಲೆ ಹೊತ್ತಿಸಿಲ್ಲ, ಒಳಗೆ ಹೋಗಿಲ್ಲ. ಮನಸ್ಸಿನ ದುಃಖದೊಂದಿಗೆ ಹೊಟ್ಟೆಯ ಹಸಿವೆ ನನ್ನನ್ನೇ ಕಿತ್ತು ತಿನ್ನುತ್ತಿದೆ.

ಲಿಂಗಮ್ಮ, ನಾನು ವಿಜಾಪುರದ ಕಡೆಗೆ ಬರುವ ಉಮರಾಣಿಯಿಂದ ಅಣ್ಣ ಬಸವಣ್ಣನವರ ದರ್ಶನದ ಹಂಬಲದಿಂದ ಬಂದಿದ್ದೇನೆ. ನೋಡು ಮಹಾದೇವಿ, ಮನುಷ್ಯನಿಗೆ ನೋವು ನಲಿವುಗಳು ಬರುವುದು ಸಹಜ. ಹೊಟ್ಟೆ ಬಟ್ಟೆಗಾಗಿ ದುಃಖಿಸಕೂಡದು. ಎಂಥ ಕಷ್ಟ ಬಂದರೂ ಶ್ರದ್ಧೆ ಭಕ್ತಿಯಿಂದ ದೇವರನ್ನು ಸ್ಮರಿಸಿದರೆ, ಸೂರ್ಯನ ಬಿಸಿಲಿಗೆ ಮಂಜು ಕರಗುವಂತೆ, ದುಃಖಗಳು ಮಾಯಾವಾಗುತ್ತವೆ. ನಡೆ ಒಳಗೆ ಸ್ನಾನಮಾಡಿ ಲಿಂಗಪೂಜೆ ಮಾಡಿಕೊ, ಎಲ್ಲ ಒಳ್ಳೆಯದಾಗುತ್ತದೆ ಎಂದು ಸಾಂತ್ವನ ನೀಡಿದಳು ಲಿಂಗಮ್ಮ.

ಅವ್ವ, ನಮ್ಮ ಮನೆಯಲ್ಲಿ ಎಷ್ಟೇ ಕೆಲಸವಿದ್ದರೂ ಸ್ನಾನ ಲಿಂಗಪೂಜೆ ಮಾಡಿಕೊಂಡು ಮುಂದಿನ ಕೆಲಸದಲ್ಲಿ ತೊಡಗುತ್ತಿದ್ದೆವು. ನನ್ನವರು ಪ್ರತಿದಿವಸ ಸಾಯಂಕಾಲ ಅನುಭವ ಮಂಟಪಕ್ಕೆ ಹೋಗುತ್ತಿದ್ದರು. ಮನೆಗೆ ಬಂದ ಮೇಲೆ ಅಲ್ಲಿ ನಡೆದದ್ದನ್ನೆಲ್ಲ ನನಗೆ ತಿಳಿಸಿ ಹೇಳುತ್ತಿದ್ದರು. ತಮ್ಮೊಂದಿಗೆ ಲಿಂಗಪೂಜೆಗೆ ಕರೆಯುತ್ತಿದ್ದರು. ನಾವು ಸಿರಿವಂತರಲ್ಲದಿದ್ದರೂ ಸುಖದಿಂದ ಇದ್ದೆವು. ಭಕ್ತಿಯಿಂದ ಲಿಂಗಪೂಜೆ ಮಾಡಿಕೊಳ್ಳುತ್ತಿದ್ದೆ. ಈಗ ಯಾವ ಸುಖಕ್ಕಾಗಿ ಲಿಂಗಪೂಜೆ ಮಾಡಿಕೊಳ್ಳಲಿ, ಎಲ್ಲರನ್ನು ಕಳೆದುಕೊಂಡು ಯಾರಿಗಾಗಿ ಬದುಕಲಿ. ದೇವರೂ ಬೇಡ, ಈ ಜೀವವೂ ಬೇಡ, ಎಂದು ಅನಿಸುತ್ತಿದೆ.

ಏಳವ್ವ ಮಹಾದೇವಿ, ಇಂಥ ಕೆಟ್ಟ ವಿಚಾರ ಮಾಡಬಾರದು. ನಮ್ಮ ಆಯುಷ್ಯ ಮುಗಿದ ನಂತರ ನಾವು ಒಂದು ನಿಮಿಷವೂ ಕೂಡ ಇಲ್ಲಿರಲು ಸಾಧ್ಯವಿಲ್ಲ. ದೇವರ ಕರೆ ಬರುವವರೆಗೆ ಶಾಂತಚಿತ್ತದಿಂದ ಲಿಂಗಪೂಜೆ ಮಾಡಿಕೊಳ್ಳಬೇಕು. ನಮಗಿಂತ ಹೀನ ಸ್ಥಿತಿಯಲ್ಲಿರುವವರಿಗೆ ನೋಡಿ ಅವರಿಗೆ ನಮ್ಮ ಕೈಲಾದ ಸಹಾಯವನ್ನು ಮಾಡಬೇಕು. ದೇಹವೆ ದೇವಾಲಯ, ಆತ್ಮವೆ ಲಿಂಗ ಎಂದು ಶರಣರು ಹೇಳಿದ್ದಾರೆ. "ಕೂಡಲಸಂಗಮ ದೇವರನೊಲಿಸ ಬಂದ ಪ್ರಸಾದ ಕಾಯವ ಕೆಡಿಸಲಾಗದು," ಎಂಬ ಅಣ್ಣ ಬಸವಣ್ಣನವರ ತತ್ತ್ವದಂತೆ ಬಾಳಿದರೆ ನಿನ್ನ ದುಃಖ ದೂರಾಗುವುದು. ಮಹಾದೇವಿ ನಿಮ್ಮ ಯಜಮಾನರು ದಿನಾಲೂ ಅನುಭವ ಮಂಟಪದ ಬಗ್ಗೆ ಹೇಳುತ್ತಿದ್ದರು ಎಂದಿಯಲ್ಲ ಏನೆಂದು ನನಗೂ ತಿಳಿಸುವಿಯಂತೆ ನಡೆ ಎಂದು ಒಳಗೆ ನಡೆದರು.

ಅಮ್ಮ. ಕಲ್ಯಾಣದ ಅನುಭವ ಮಂಟಪದಲ್ಲಿ ನಡೆಯುವ ಅನುಭಾವದ ಬಗ್ಗೆ

ಮತ್ತು ಬಸವಣ್ಣನವರ ಮಹಾಮಹಿಮೆಗೆ ಮನಸೋತು ಭರತಖಂಡದ ವಿವಿಧ ಕಡೆಗಳಿಂದ ಜನರು ಸಾಗರದಂತೆ ಹರಿದು ಬಂದರು. ಕಲ್ಯಾಣದಲ್ಲಿ ಕಾಯಕ-ದಾಸೋಹ ಮಾಡುತ್ತಾ ಗುರು ಕೊಟ್ಟ ಇಷ್ಟಲಿಂಗಪೂಜೆಯ ಮುಖಾಂತರ ತನ್ನ ತಾನರಿತು ಆತ್ಮಕಲ್ಯಾಣದೊಂದಿಗೆ ಲೋಕಕಲ್ಯಾಣದಲ್ಲಿ ತೊಡಗಿದರು. ಈ ಉದಾತ್ತ ತತ್ತ್ವವನ್ನು ಪ್ರಸಾರ ಮಾಡುವುದೇ ಅನುಭವ ಮಂಟಪದ ಪರಮ ಗುರಿಯಾಗಿದೆ ಎಂದೆಲ್ಲಾ ನಮ್ಮ ಯಜಮಾನರು ಶರಣರ ಬಗ್ಗೆ ಹಾಡಿ ಹೊಗಳುತ್ತಿದ್ದರು. ಎಂದು ಮಹಾದೇವಿ ಹೇಳುತ್ತಿದ್ದಂತೆ ಲಿಂಗಮ್ಮನಿಗೆ, ಬೇಗ ಅನುಭವ ಮಂಟಪಕ್ಕೆ ಹೋಗಬೇಕೆಂಬ ತವಕ ಅಧಿಕವಾಯಿತು.

ಲಿಂಗಮ್ಮನ ಮನಸ್ಸು ವಿಚಾರಚಕ್ರದಲ್ಲಿ ಸುಳಿಯುತ್ತಲಿತ್ತು. ಅನುಭವ ಮಂಟಪದಲ್ಲಿನ ಎಲ್ಲ ಶರಣರು ವಚನರಚನಾ ಚತುರರಿದ್ದಾರೆ. ಅನುಭಾವಿಗಳಾಗಿದ್ದಾರೆ. ಕಾಯಕ ದಾಸೋಹದಲ್ಲಿ ನಿರತರಾಗಿದ್ದಾರೆ. ಪ್ರತಿಯೊಬ್ಬರೂ ಕಾಯಕ ಮಾಡಲೇಬೇಕು ಎಂಬುದು ಬಸವಣ್ಣನವರ ಅಭಿಪ್ರಾಯವಂತೆ. ನಾನಾವ ಕಾಯಕ ಕೈ ಕೊಳ್ಳಬೇಕು, ಎಂಬ ಆಲೋಚನೆಯಲ್ಲಿ ಮನ ತೇಲಾಡುತ್ತಿತ್ತು. ನನಗೆ ಬಾಲ್ಯದಿಂದಲೂ ದೀನ ದುರ್ಬಲರನ್ನು, ದುಃಖಿಗಳನ್ನು, ಅಂಗವಿಕಲರನ್ನು, ನಿರ್ಗತಿಕ ವೃದ್ಧರನ್ನು ನೋಡಿದರೆ ಕೆಡಕೆನಿಸುತ್ತಿತ್ತು. ಲಿಂಗಪೂಜೆಯ ನಂತರ, ಆಶ್ರಯ ಬೇಡಿ ಬಂದವರಿಗೆ ಒಳಿತನ್ನು ಮಾಡಪ್ಪ ದೇವರೆ ಎಂದು ಸಮರ್ಪಣ ಭಾವದಿಂದ, ಸ್ವಾರ್ಥದ ಲವಲೇಶವಿಲ್ಲದೆ ಬೇಡಿಕೊಂಡು ಭಸ್ಮವನ್ನು ಕೊಡಬೇಕು. ದೃಷ್ಟಿಯೋಗದ ಬಲದಿಂದ ಇದು ಸಿದ್ಧಿಸಿದೆ. ಈಗಾಗಲೆ ನೂರಾರು ಜನರು ದುಃಖ ದುಮ್ಮಾನದಿಂದ ಬಿಡುಗಡೆಯಾಗಿದ್ದಾರೆ. ದುಃಖಿಗಳ ಕಂಬನಿ ಒರೆಸುವದರಿಂದ ನನ್ನ ಮನಸ್ಸಿಗೆ ಶಾಂತಿ ದೊರೆಯುತ್ತದೆ. ಅಂದ ಮೇಲೆ ಇದನ್ನೇ ನನ್ನ ಕಾಯಕವನ್ನಾಗಿ ಮಾಡಿಕೊಳ್ಳಬೇಕು ಎಂದು ನಿರ್ಧರಿಸಿದಳು.

ತ್ರಿಕಾಲ ಪೂಜೆಗೆ ಭಂಗ ಬರದಂತೆ, ನಿಯಮಿತವಾಗಿ ಲಿಂಗಮ್ಮ ಇಷ್ಟಲಿಂಗಪೂಜೆ ಧ್ಯಾನ ಮಾಡುತ್ತಿದ್ದಳು. ಉಳಿದ ವೇಳೆ ನೊಂದವರನ್ನು ಸಂತೈಸುವ ಕಾಯಕದಲ್ಲಿ ನಿರತಳಾದಳು. ಯಾರಿಂದಲೂ ಧನಕನಕ ಸ್ವೀಕರಿಸುತ್ತಿರಲಿಲ್ಲ. ಜನರು ತಮ್ಮ ಹೊಲದಲ್ಲಿ ಬೆಳೆದ ದವಸ ಧಾನ್ಯಗಳನ್ನು ತಂದು ಕೊಡಹತ್ತಿದ್ದರು. ಬಡವರಿಗೆ ಜಂಗಮರಿಗೆ ಪ್ರಸಾದವನ್ನಿತ್ತು ದಾಸೋಹದ ಕೆಲಸ ಸುಸೂತ್ರವಾಗಿ ಸಾಗಿತು. ಲಿಂಗಮ್ಮನ ಹಸನ್ಮುಖವನ್ನು ಕಂಡ ಜನರ ಮನಸ್ಸು ಶಾಂತವಾಗುತ್ತಿತ್ತು. ಸಂಸಾರ ತಾಪತ್ರಯದಿಂದ ಹೊರಬಂದು ಶಿವಚಿಂತನೆಯತ್ತ ಸಾಗುತ್ತಿದ್ದರು. ಬೆಳಿಗ್ಗೆ ಲಿಂಗಮ್ಮ ಪೂಜೆ ಮುಗಿಸಿಕೊಂಡು ಹಾಲು ಹಣ್ಣು ಸೇವಿಸಿ, ಮಹಾದೇವಿಯ ಮನೆಯ ಮುಂದಿನ ಕಟ್ಟೆಗೆ ಬರುವುದರಲ್ಲಿ

ಹಲವಾರು ಜನರು ಅವ್ವ..ಅವ್ವಾ.. ಎಂದು ತಮ್ಮ ಸಮಸ್ಯೆಗಳನ್ನು ನಿವೇದಿಸಿಕೊಳ್ಳುತ್ತಿದ್ದರು.

ಲಿಂಗಮ್ಮ ಬಂದವರ ತೊಂದರೆಯನ್ನೆಲ್ಲ ಶಾಂತಭಾವದಿಂದ ಕೇಳುತ್ತಿದ್ದಳು. ತನಗಾಗಿ ಕಾಯುತ್ತಿದ್ದ ಜನರ ಸಂಕಷ್ಟ ಪರಿಹಾರದ ಕಾಯಕದಲ್ಲಿದ್ದಳು. ತನ್ನ ಬಳಿ ಬರುವ ರೋಗಿಗಳು, ದುಃಖಿತರನ್ನು ಕಂಡಾಗ ಲಿಂಗಮ್ಮನಿಗೆ ಜಗತ್ತೆಲ್ಲ ದುಃಖಮಯವಾಗಿದೆಯೇ? ಎಂಬ ಸಂಶಯ ಬರುತ್ತಿತ್ತು. ಆಕೆಯ ಆತ್ಮಶಕ್ತಿಯೆ ಆಶೀರ್ವಾದದ ಬಲವಾಗಿತ್ತು. ಅಳುತ್ತ ಅವಳ ಬಳಿಗೆ ಬಂದವರನ್ನು ನಗುತ್ತ ಹೋಗುವಂಥ ವಾತಾವರಣ ನಿರ್ಮಾಣವಾಯಿತು. ಈ ಸಮಾಚಾರ ಬಸವಣ್ಣನವರಿಗೂ ತಲುಪಿತು.

ಲಿಂಗಮ್ಮ ಶಿವಯೋಗವನ್ನು ಮಾಡುತ್ತಾ ಅತ್ಯುನ್ನತ ಸ್ಥಲದಲ್ಲಿದ್ದಳು. ಅದಕ್ಕಾಗಿ ಆಕೆಯ ಕ್ರಿಯಾಚರಣೆಯೆಲ್ಲಾ ಅರ್ಪಣಭಾವದಿಂದ ಕೂಡಿಕೊಂಡಿತ್ತು. ಶರಣರ ಮಹಾಮನೆಯ ಉದ್ಯಾನಕ್ಕೆ ಹೋಗಿ ಅಲ್ಲಿಯೇ ಕುಳಿತುಕೊಂಡು ಇಷ್ಟಲಿಂಗದಲ್ಲಿ ದೃಷ್ಟಿನೆಟ್ಟು ಮಗ್ನಳಾಗಿ ಶಿವಪ್ರಸಾದದಲ್ಲಿ ಅಂಕುರವಾದ ಶಿವಭಕ್ತಿ ಬೆಳೆದು ಪರಮಾನಂದದಲ್ಲಿ ಪ್ರಕಾಶಿಸುತ್ತಾ ಶಿವಯೋಗದಲ್ಲಿ ತಲ್ಲೀನಳಾದಳು. ಇದನ್ನು ಬಸವಣ್ಣನವರು ಅರಿತು, ಸತಿ ನೀಲಾಂಬಿಕೆಯೊಂದಿಗೆ ಅನುಭವ ಮಂಟಪದ ಗೋಷ್ಠಿಯನ್ನು ಮುಗಿಸಿಕೊಂಡು ಬರುವಾಗ ಉದ್ಯಾನವನ ಪ್ರವೇಶಿಸುತ್ತಾರೆ. ಅಲ್ಲಿ ಲಿಂಗಾಂಗಸಾಮರಸ್ಯದಲ್ಲಿ ಓಲಾಡುತ್ತಿದ್ದ 'ನೆಲದ ಮರೆಯ ನಿಧಾನದಂತೆ, ತಿಲದ ಮರೆಯ ತೈಲದಂತೆ, ಮುಗಿಲ ಮರೆಯ ಮಿಂಚಿನಂತೆ,' ಲಿಂಗವೇ ಪ್ರಾಣವಾಗಿ ಕುಳಿತ ದಿವ್ಯ ಚೇತನವನ್ನು ಕಾಣುತ್ತಾರೆ. ತದೇಕ ದೃಷ್ಟಿಯಿಂದ ನೋಡುತ್ತಾ ಅಂತರಂಗದಲ್ಲಿಯೇ ಶರಣು ತಾಯೇ ಶರಣೆಂದು ನಮಿಸಿ, ಈ ಹೆಣ್ಣುಮಗು ಯಾರೆಂದು ಗೊತ್ತಾ ನೀಲಾ, ನೋಡು ಕಲ್ಯಾಣಪುರದಲ್ಲಿ ಎಂಥೆಂಥಾ ಗುಪ್ತಭಕ್ತಿಯ ಶರಣರು ಬಂದು ನೆಲೆಸಿದ್ದಾರೆ. ಅದಕ್ಕಾಗಿಯೆ ಕಲ್ಯಾಣವೇ ಕೈಲಾಸವಾಗಿದೆ. ಇಂಥ ಶರಣಸಂಕುಲದಲ್ಲಿರುವ ನಾವೇ ಧನ್ಯರು ಎಂದು ಬಸವಣ್ಣನವರು ನೀಲಾಂಬಿಕೆಗೆ ಮೆಲ್ಲನೆ ಮೃದುವಾದ ಧ್ವನಿಯಲ್ಲಿ ಹೇಳುವ ಶಬ್ದಕೇಳಿ ಲಿಂಗಮ್ಮ ಇಷ್ಟಲಿಂಗಪೂಜೆ ಮುಗಿಸಿಕೊಂಡು ದೃಷ್ಟಿ ಹಾಯಿಸಿದಳು.

ಬಸವಣ್ಣನವರು ಮತ್ತು ನೀಲಾಂಬಿಕೆಯರು ಕಣ್ಣಮುಂದೆ ನಿಂತಿರುವುದನ್ನು ಕಂಡ ಲಿಂಗಮ್ಮನಿಗೆ ಅತ್ಯಂತ ಆನಂದವೂ ಆಶ್ಚರ್ಯವೂ ಆಯಿತು. ಎಷ್ಟೊ ದಿವಸದ ಹಂಬಲ ಈ ಕ್ಷಣದಲ್ಲಿ ಒದಗಿ ಬಂದಿದೆ ಎಂದು ಹರ್ಷಗೊಂಡಳು. ಬಯಸಿದ ಭಾಗ್ಯ ತನ್ನ ಬಳಿ ಬಂದಂತಾಯಿತೆಂದು ತಟ್ಟನೆ ಎದ್ದು ಭಕ್ತಿಯಿಂದ ಶರಣು ಶರಣಾರ್ಥಿ ಎಂದಳು. ಮಹಾತಾಯಿ ತಾವು ಇಲ್ಲಿಗೆ ಬಂದು ಎಷ್ಟು ದಿನಗಳಾದವು? ಮಹಾಮನೆಗೆ ಏಕೆ ಬರಲಿಲ್ಲ? ಎಂದು ಬಸವಣ್ಣನವರು ಪ್ರಶ್ನಿಸಿದರು. ಲಿಂಗಮ್ಮ ಭಯಭಕ್ತಿಯಿಂದ ಅಣ್ಣಾ!

ತಮ್ಮನ್ನು ಕಾಣಲು ಹಲವು ದಿನಗಳ ಕಾಲ ಹಂಬಲದುಂಬಿದ ಮನದಿಂದ ಕಾತರಳಾಗಿದ್ದೆ. ಆದರೆ ಬರುವಾಗ ದುಃಖದಲ್ಲಿ ಮುಳುಗಿದ್ದ ಮಹಾದೇವಿಯಮ್ಮನ ಕಂಡು ಮನಸ್ಸು ಮುಂದೆ ಬರಲು ಬಿಡಲಿಲ್ಲ ಆ ತಾಯಿಯ ಮನೆಯಲ್ಲಿ ಉಳಿದುಕೊಂಡಿದ್ದೆ ಅನುಭವಮಂಟಪದಲ್ಲಿ ನಡೆಯುವ ಮಹತ್ಕಾರ್ಯಗಳನ್ನೆಲ್ಲಾ ಕೇಳುತ್ತ ಆನಂದಿಸುತ್ತಿದ್ದೇನೆ. ಶರಣರೊಡನೆ ಬೆರೆಯುವ ತವಕದಲ್ಲಿದ್ದೇನೆ.

ಲಿಂಗಮ್ಮನನ್ನು ದೂರದಿಂದ ನೋಡುತ್ತ ನಿಂತ ಗುಂಪು ಲಿಂಗಮ್ಮನ ಹತ್ತಿರ ಬಂದು ಎಲ್ಲರಿಗೂ ಶರಣು ಶರಣಾರ್ಥಿ ಹೇಳಿ ತಮ್ಮ ನೋವುಗಳನ್ನು ಲಿಂಗಮ್ಮನಲ್ಲಿ ಹೇಳಿಕೊಂಡರು.

"ತಾಯಿ, ನೀನು ರೋಗಿಗಳ ರೋಗವನ್ನು ಗುಣಪಡಿಸುವಿಯಂತೆ, ಅಂಗವಿಕಲರು ದೃಷ್ಟಿಮಾಂದ್ಯರು, ಕೈಕಾಲು, ಕಣ್ಣುಗಳನ್ನು ಪಡೆದಿರುವರಂತೆ ನಿಜವೆ? ತಾಯಿ ಕಲ್ಯಾಣದಲ್ಲೆಲ್ಲಾ ಸುದ್ದಿಯಾಗಿದೆ. ಅದೆಲ್ಲ ನಿನಗೆ ಹೇಗೆ ಸಾಧಿಸಿದೆಯವ್ವ" ಎಂದು ಕೇಳಿದರು.

"ತಂದೆ, ರೋಗ ಹಾಗೂ ಭವರೊಗವನ್ನು ನಾಶಗೊಳಿಸಲು ನಾನ್ಯಾರು? ಅದೆಲ್ಲ ಅಪ್ಪ ಬಸವಣ್ಣನವರು ಕೊಟ್ಟ ಇಷ್ಟಲಿಂಗದ ಮಹಿಮೆ. ಒಮ್ಮೆ ನಾನು ನನ್ನ ಹೆತ್ತವರ ಜೊತೆಗೆ ಸೊಲ್ಲಾಪುರಕ್ಕೆ ಸಿದ್ಧರಾಮೇಶ್ವರರ ದರ್ಶನಕ್ಕೆ ಹೋಗಿದ್ದೆ. ಆಗ ಗುರು ಸಿದ್ಧರಾಮೇಶ್ವರರು ದೃಷ್ಟಿಯೋಗವನ್ನು ತಿಳಿಸಿಕೊಟ್ಟಿದ್ದರು. ಭವರೋಗವನ್ನು ನಾಶಗೊಳಿಸುವ ಮತ್ತು ಇಷ್ಟಾರ್ಥವನ್ನು ಪೂರೈಸುವ ಶಕ್ತಿ ಇಷ್ಟಲಿಂಗಕ್ಕಿದೆ ಎಂಬುದು ಶರಣರು ಸಾಧಿಸಿದ್ದಾರೆ" ಎಂದು ಹೇಳಿದ್ದರು. ಮತ್ತೆ ಇಲ್ಲಿಗೆ ಬರುವಾಗ ಶಿವಯೋಗ ಸಾಧನೆಯ ಮಾರ್ಗವನ್ನರುಹಿದರು. ನಾನಿನ್ನೂ ಸಾಧಕಳು ತಂದೆ. ಅನುಭವ ಮಂಟಪದಲ್ಲಿ ಕಾಯಕಕ್ಕೆ ಅತ್ಯಂತ ಮಹತ್ವವಿದೆ ಎಂದು ಕೇಳಿದೆ. ಸಾವಿರಾರು ಜನ ಶರಣರು ಕಾಯಕದಲ್ಲಿ ನಿರತರಾದುದನ್ನು ಅರಿತು ನಾನ್ಯಾವ ಕಾಯಕ ಕೈಕೊಳ್ಳಲಿ ಎಂದು ವಿಚಾರ ಮಾಡಿದೆ. ದೀನ ದುಃಖಿತರನ್ನು ಕಂಡಾಗ, ನನ್ನ ಹೃದಯ ಭಾರವಾಗುವುದು. ಅದಕ್ಕಾಗಿ ನೊಂದವರ ಕಣ್ಣೀರನೊರೆಸುವ ಕಾಯಕವನ್ನು ಕೈಕೊಂಡೆ, ಈ ಕಾರ್ಯಕ್ಕೆ ತ್ರಿಕಾಲ ಪೂಜೆಯೆ ಆಧಾರವಾಗಿದೆ. ಅಂಗೈಯಲ್ಲಿ ಲಿಂಗಹಿಡಿದು ಏಕಾಗ್ರತೆಯಿಂದ ದೃಷ್ಟಿನೆಟ್ಟಾಗ ಆ ಲಿಂಗದೇವನೇ ಬಂದವರ ದುಃಖ ಪರಿಹರಿಸುತ್ತಾನೆ ಇದರಲ್ಲಿ ನನ್ನದೇನಿದೆ ತಂದೆ, ಎಂದಳು ಲಿಂಗಮ್ಮ.

ಬಸವಣ್ಣನವರು ಲಿಂಗಮ್ಮ, ನಿನ್ನ ಮಹಿಮೆಯನ್ನು ಅರಿತು ಆನಂದವಾಯಿತು.

ನೀಲಾಂಬಿಕೆಯ ಮೋಹದ ಮಗಳಾದ ಅಕ್ಕಮಹಾದೇವಿ ಈಗಾಗಲೆ ಮಹಾಮನೆಯಿಂದ ಶ್ರೀಶೈಲದ ಕಡೆಗೆ ಸಾಗುವ ಸಿದ್ಧತೆ ನಡೆಸಿದ್ದಾಳೆ. ನೀನು ಗಂಗಾಂಬಿಕೆಯ ಅಕ್ಕರೆಯ ಮಗಳಾಗಿ ಮಹಾಮನೆಗೆ ಬಾರವ್ವ, ನಾಳೆ ಅನುಭವ ಮಂಟಪದಲ್ಲಿನ ಎಲ್ಲಾ ಶರಣರಿಗೂ ನಿನ್ನ ದರ್ಶನವಾಗಬೇಕೆಂದು ಹೇಳಿದರು.

ಅನುಭವ ಮಂಟಪದಲ್ಲಿ

ಅಣ್ಣನವರ ಅಣತಿಯಂತೆ ಅನುಭವ ಮಂಟಪಕ್ಕೆ ಲಿಂಗಮ್ಮ ಬರುತ್ತಾಳೆ. ವಿಶಾಲವಾದ ಅನುಭವ ಮಂಟಪದಲ್ಲಿ ಅಲ್ಲಮಪ್ರಭುದೇವರು ಅಧ್ಯಕ್ಷ ಪೀಠವೆನಿಸಿದ ಶೂನ್ಯಪೀಠವನ್ನು ಅಲಂಕರಿಸಿದ್ದರು. ಅವರ ಬಲಗಡೆಗೆ ದಿವ್ಯ ಹೊಳಹಿನಿಂದ ಬೆಳಗುತ್ತಿರುವ ಪ್ರಸನ್ನಭಾವದ ಬಸವಣ್ಣನವರು, ಎಡಭಾಗದಲ್ಲಿ ಅವಿರಳ ಜ್ಞಾನಜ್ಯೋತಿ ಚನ್ನಬಸವಣ್ಣನವರು ಕುಳಿತ್ತಿದ್ದರು. ಒಂದು ಭಾಗದಲ್ಲಿ ಹಡಪದ ಅಪ್ಪಣ್ಣ, ಮಡಿವಾಳ ಮಾಚಿದೇವರು, ಘಟ್ಟಿವಾಳಯ್ಯನವರು, ನುಲಿಯಚಂದಯ್ಯ ಅನೇಕ ಜನ ಶರಣರು ಹಾಗೂ ಸಾವಿರಾರು ಜನ ಜಂಗಮರು ಭಕ್ತರು ಸಾಲು ಸಾಲಾಗಿ ಶಿಸ್ತಿನಿಂದ ಕುಳಿತ್ತಿದ್ದರು. ಮತ್ತೊಂದು ಭಾಗದಲ್ಲಿ ಅಕ್ಕನಾಗಲಾಂಬಿಕೆ, ಗಂಗಾಂಬಿಕೆ. ನೀಲಾಂಬಿಕೆ, ಅಮುಗೆರಾಯಮ್ಮ, ಆಯ್ದಕ್ಕಿಲಕ್ಕಮ್ಮ ಮೊದಲಾದ ಶರಣೆಯರ ಸಮೂಹವಿತ್ತು.

ವಿಶ್ವಕಲ್ಯಾಣಕ್ಕಾಗಿ ಕಾಯಕದಲ್ಲಿ ಕೈಲಾಸವನ್ನೇ ಕಂಡುಕೊಂಡ ಶರಣರ ಅಂತರಂಗ ಶುದ್ಧಿ ಮತ್ತು ಬಹಿರಂಗ ಶುದ್ಧಿಯಾಗಿ ಸಕಲಜೀವಾತ್ಮರಿಗೆ ಲೇಸನೆ ಬಯಸುವ ಭಾವ ಬಲಿತು ಭವಿ ಭಕ್ತನಾಗಬಲ್ಲನು ಎಂಬ ಶಿವಾನುಭವದ ನುಡಿಗಳೇ ಪ್ರತ್ಯಕ್ಷವಾದಂತೆ ಶರಣಸಮೂಹವನ್ನು ಕಂಡು ತನ್ನ ಜನ್ಮ ಸಾರ್ಥಕವಾಯಿತೆಂದು ಎಲ್ಲ ಶರಣರನ್ನು ಕಣ್ತುಂಬ ನೋಡಿದಳು ತನ್ನ ಕನಸು ಇಂದು ನನಸಾಯಿತೆಂದು ಲಿಂಗಮ್ಮ ಸಂತೋಷದಿಂದ ಶರಣರೆಲ್ಲರಿಗೂ ಶರಣು ಶರಣಾರ್ಥಿ ಎಂದು ಹೇಳುವಳು.

ಬಸವಣ್ಣವವರು ಲಿಂಗಮ್ಮನನ್ನು ಕಂಡು ಹಸನ್ಮುಖರಾಗಿ ಶರಣರ ಸಮೂಹಕ್ಕೆ ಪರಿಚಯಿಸಿದರು. ಲಿಂಗಮ್ಮ ಮಹಾಶಿವಶರಣೆ. ಅವಳು ಪಾದೋದಕ ಪ್ರಸಾದ ಲಿಂಗಾನುಸಂಧಾನದಲ್ಲಿ ಆನಂದ ಪಡೆಯುವವಳು. ದಾಸೋಹದ ಮೂಲಕ ಜಂಗಮರನ್ನು ತೃಪ್ತಿಪಡಿಸುವಳು. ತನ್ನ ಶಿವಯೋಗದ ಮಹಿಮೆಯ ಬಲದಿಂದ ಬಂದ ಭಕ್ತರಿಗೆಲ್ಲಾ ಇಷ್ಟಾರ್ಥವನ್ನು ಪೂರೈಸುವಳು ಜನರ ಕಷ್ಟಕಾರ್ಪಣ್ಯಗಳನ್ನು ಮಾನವೀಯತೆಯ ಅನುಕಂಪದಿಂದ ಕಂಡು ಜನರ ಕಷ್ಟ ಪರಿಹರಿಸಲು, ತನ್ನ ಶಿವಯೋಗ ಸಾಧನೆಯನ್ನೆ ದಾನಗೈಯುವ ಮಹಾತಾಯಿ ಇವಳು. ಆದ್ದರಿಂದ ಸಮಸ್ತ ಜಂಗಮರಿಗೆ

ಈ ಲಿಂಗಮ್ಮ 'ದಾಸೋಹಿ ದಾನಮ್ಮ' ಆಗಿದ್ದಾಳೆ. ತಾಯಿ ದಾನಮ್ಮನ್ನಾಗಿ ಕೀರ್ತಿವಂತಳಾಗು ಎಂದರು. ಅನುಭವ ಮಂಟಪದಲ್ಲಿರುವ ಸರ್ವ ಶರಣರು 'ಬಸವಣ್ಣನವರು ಕರೆದ ದಾನಮ್ಮ ಎಂಬ ಹೆಸರಿನಲ್ಲಿ ಪ್ರಸಿದ್ಧಳಾಗು' ಎಂಬ ಹರ್ಷೋದ್ಗಾರ ಮೊಳಗಿಸಿದರು. ಅಂದಿನಿಂದ ಲಿಂಗಮ್ಮನ ಹೆಸರು "ದಾನಮ್ಮ" ಎಂದು ಕರೆಯಲ್ಪಟ್ಟಿತು.

ದಾನಮ್ಮನಿಗೆ ಅನುಭವ ಮಂಟಪದಲ್ಲಿ ಅನುಭಾವಿಗಳ ಸಮೂಹ ಕಂಡು, ಕಲ್ಯಾಣದಿಂದ ತಮ್ಮ ಊರಿಗೆ ಬರುತ್ತಿರುವ ಜಂಗಮರು, ಯಾತ್ರಿಕರು ಹೇಳುತ್ತಿರುವ ಸಂಗತಿಗಳನ್ನು ಪ್ರತ್ಯಕ್ಷ ಕಂಡು ಸಂತೃಪ್ತಳಾದಳು. ಶರಣರೊಡನೆ ಅನುಭವ ಮಂಟಪದಲ್ಲಿ ಕುಳಿತುಕೊಂಡಳು. ಮೊದಲಿಗೆ ನೀಲಾಂಬಿಕಾ, ಗಂಗಾಂಬಿಕಾ ಕೂಡಿ ಬಸವಣ್ಣನವರ ವಚನವನ್ನು ರಾಗಬದ್ಧವಾಗಿ ಹಾಡುತ್ತ ಪ್ರಾರಂಭಿಸಿದರು.

ಹೊತ್ತಾರೆ ಎದ್ದು ಅಗ್ಫವಣಿ ಪತ್ರೆಯ ತಂದು
ಹೊತ್ತು ಹೊಗದ ಮುನ್ನ ಪೂಜಿಸು ಲಿಂಗವ.
ಹೊತ್ತು ಹೋದ ಬಳಿಕ ನಿನ್ನನಾರು ಬಲ್ಲರು?
ಹೊತ್ತು ಹೊಗದ ಮುನ್ನ, ಮೃತ್ಯುವೊಯ್ಯದ ಮುನ್ನ
ತೊತ್ತುಗೆಲಸವ ಮಾಡು ಕೂಡಲಸಂಗಮದೇವನ.

– ಬಸವಣ್ಣನವರು

"ಅರ್ಥಪೂರ್ಣವಾದ ವಚನವನ್ನು ಸಂಗೀತಕ್ಕಳವಡಿಸಿ ಭಾವಪೂರ್ಣವಾಗಿ ಹೇಳಿದರು. ಅಲ್ಲಮಪ್ರಭುಗಳು ಭಲೇ! ನನ್ನವ್ವಗಳಿರಾ, ಎಂಥ ಅದ್ಭುತ ಎಷ್ಟು ಸುಶ್ರಾವ್ಯವಾಗಿ ಹಾಡಿದಿರಿ, ತಮ್ಮ ಸುಮಧುರ ಕಂಠದಿಂದ ಇನ್ನೊಂದು ವಚನ ಕೇಳುವಾಸೆ" ಎಂದರು ಪ್ರಭುದೇವರು.

ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯಾ.
ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯಾ.
ಸತ್ಯದ ಬಲದಿಂದ ಅಸತ್ಯದ ಕೇಡು ನೋಡಯ್ಯಾ.
ಪರುಷದ ಬಲದಿಂದ ಅವಲೋಹದ ಕೇಡು ನೋಡಯ್ಯಾ.
ಕೂಡಲಸಂಗನ ಶರಣರ ಅನುಭಾವದಿಂದ
ಎನ್ನ ಭವದ ಕೇಡು, ನೋಡಯ್ಯಾ.

– ಬಸವಣ್ಣನವರು

ಅನುಭವ ಮಂಟಪದಲ್ಲಿ ಕುಳಿತ ಶರಣರೆಲ್ಲ ಭಕ್ತಿಭಂಡಾರಿ ಬಸವಣ್ಣನವರು ರಚಿಸಿದ ವಚನಸಂಗೀತದ ಸೊಬಗಿನಲ್ಲಿ ತಲ್ಲೀನರಾಗಿದ್ದರು. ಸೂರ್ಯೋದಯಕ್ಕೆ ಮುನ್ನ ಎದ್ದು ಲಿಂಗವನ್ನು ಪೂಜಿಸಬೇಕು. ಈ ಜೀವನ ಶಾಶ್ವತವಲ್ಲ. ಆಯುಷ್ಯ ತೀರದ ಮೊದಲು ನಮ್ಮನ್ನು ನಾವು ಇಷ್ಟಲಿಂಗಕ್ಕೆ ಅರ್ಪಿಸಿಕೊಂಡು, ದೇವನ ತೊತ್ತುಗೆಲಸ ಅಂದರೆ ಸಮಯ ವ್ಯರ್ಥಮಾಡದೆ ಪೂಜೆಯ ಜೊತೆಗೆ ಕಾಯಕ ದಾಸೋಹವನ್ನು ಮಾಡುತ್ತ ಆಯುಷ್ಯ ಕಳೆಯಬೇಕು ಎಂಬ ಸೂಚನೆಯು ಅಲ್ಲಿದ್ದವರನ್ನು ಎಚ್ಚರಿಸಿತು. ಜ್ಞಾನದ ಬಲದಿಂದ ಅಜ್ಞಾನ ಅಳಿಯುವದು. ದೀಪದ ಬೆಳಕು ಇದ್ದಲ್ಲಿ ಕತ್ತಲೆ ಕಾಣದಂತೆ ಅಡಗುವದು. ಸತ್ಯ ಶಾಶ್ವತ ಅದರ ಎದುರು ಅಸತ್ಯ ಮಾಯವಾಗುವುದು. ಪರುಷದ ಸೋಂಕಿನಿಂದ ಕಬ್ಬಿಣ ಬಂಗಾರವಾಗುವದು ಹೇಗೋ, ಹಾಗೆ ಕೂಡಲಸಂಗಮದೇವಾ ನಿಮ್ಮ ಅನುಭಾವದಿಂದ, ಎನ್ನ ಭವ ಕೆಟ್ಟಿತು, ಎನ್ನುವ ಬಸವಣ್ಣನವರ ಅನುಭವದ ವಚನಗಳು ಅನುಭಾವಿಗಳ ಮನವನ್ನು ಆಕರ್ಷಣೆಗೆ ಒಳಪಡಿಸಿತು.

ಲಿಂಗಮ್ಮನಿಗೆ ಅನುಭವ ಮಂಟಪದಲ್ಲಿ ವಚನಗಾಯನ ಪುರಾಣಗಳಲ್ಲಿ ಕೇಳಿದ ಗಂಧರ್ವಲೋಕದ ಕಿನ್ನರರ ಗಾಯನದ ವರ್ಣನೆಯನ್ನು ಮೀರಿಸಿದಂತಿತ್ತು. ಒಬ್ಬೊಬ್ಬ ಶರಣರು ಒಂದೊಂದು ವಚನ ಓದಿದೊಡನೆ, ಆ ಬಗೆಗೆ ಉಳಿದವರು ಚರ್ಚೆ ನಡೆಸುತ್ತಿದ್ದರು. ಅನುಭವ ಗೋಷ್ಠಿಯಲ್ಲಿಯ ಚಿಂತನ ಮಂಥನ ಆತ್ಮೋನ್ನತಿಗೆ ಸಹಕಾರಿ ಆಗುವಂಥದ್ದಾಗಿತ್ತು. ಲಿಂಗಮ್ಮ ಶರಣವಾಣಿ ಕೇಳುತ್ತ ಧನ್ಯತೆಯ ಭಾವನೆಯಲ್ಲಿ ಕಣ್ಣುಮುಚ್ಚಿ ಕುಳಿತಿದ್ದಳು.

ಗಂಗಾಂಬಿಕೆ ನೀಲಾಂಬಿಕೆಯರು ಲಿಂಗಮ್ಮನನ್ನು ಎಚ್ಚರಿಸುತ್ತ "ಲಿಂಗಮ್ಮ, ಬಸವರಸರು ದಾನಮ್ಮ" ಎಂಬ ಹೊಸ ಹೆಸರನ್ನು ನಿನಗಿತ್ತಿದ್ದಾರೆ. ನಡೆ ನಮ್ಮೆಲ್ಲರ ಜೊತೆಗೆ ಮಹಾಮನೆಯಲ್ಲಿಯೆ ಪ್ರಸಾದವಾಗಲಿ ಎಂದರು. ಎಲ್ಲರೂ ಮಹಾಮನೆಯ ಕಡೆಗೆ ಹೊರಟಾಗ ದಾನಮ್ಮ "ತಾಯಿ ನನಗೆ ಶಬ್ದ ರೂಪದಲ್ಲಿ ಕಂಗೊಳಿಸುವ ವಚನಕಾರ್ತಿ ಅಕ್ಕಮಹಾದೇವಿಯವರನ್ನು ಕಾಣಬೇಕು ಎಂದು ನೀಲಾಂಬಿಕೆಯವರನ್ನು ಕೇಳಿದಳು. ಈ ಸಮಯದಲ್ಲಿ ಅಕ್ಕಮಹಾದೇವಿ ವಚನ ರಚನೆಯಲ್ಲಿ ಕುಳಿತಿರಬಹುದು, ನಾಳೆ ಬೆಳಗಿನ ಪೂಜೆಯಾದೊಡನೆ ಕಾಣಬಹುದು ಎನ್ನುತ್ತಾ ಮಹಾಮನೆಯೊಳಗೆ ನಡೆದರು.

ಅಕ್ಕನಾಗಮ್ಮನವರು ಮಹಾಮನೆಯಲ್ಲಿ ಅತಿಥಿಗಳ ಮಧ್ಯಾಹ್ನದ ಪ್ರಸಾದದ ವ್ಯವಸ್ಥೆಗೆ ನಿಂತಿದ್ದರು. ನೀಲಾಂಬಿಕಾ, ಗಂಗಾಂಬಿಕಾ ಅವರು ಪ್ರಸಾದವನ್ನು ಎಡೆಮಾಡಲು ಹೋದರು. ಸಾವಿರಾರು ಜನರು ಒಂದೇ ಪಂಕ್ತಿಯಲ್ಲಿ ಕುಳಿತು ಪ್ರಸಾದ ಸೇವಿಸುವದನ್ನು

ಕಂಡು ದಾನಮ್ಮ ಅಚ್ಚರಿಗೊಂಡಳು. ಮಹಾಮನೆಯ ವೈಭವ ಹಾಗೂ ಬೇಡಿದವರಿಗೆ ಬೇಡಿದುದನ್ನು ಎಡೆಮಾಡುವ ದೃಶ್ಯವನ್ನು ಕಂಡು ಬಸವಣ್ಣನವರ ಭಕ್ತಿ ಹಾಗೂ ಈ ಮೂವರೂ ತಾಯಂದಿರ ಶಕ್ತಿಗೆ ಶಿರಬಾಗಿ ವಂದಿಸಿದಳು.

ದಾನಮ್ಮ ಅಕ್ಕನಾಗಮ್ಮನವರ ಬಳಿಗೆ ಹೋಗಿ "ಅವ್ವಾ ನನ್ನ ಬಳಿ ಬರುವ ಜನರಿಗೆಲ್ಲ ಭಸ್ಮ ಧರಿಸಿಕೊಳ್ಳಲು ಹೇಳುತ್ತಿರುವೆ. ತಮ್ಮ ರೋಗರುಜಿನಗಳು ಗುಣವಾದವರು ಬಹಳ ಜನ ಬಂದು ಇಷ್ಟಲಿಂಗಧಾರಣೆ ಮಾಡಿಕೊಳ್ಳಬೇಕೆಂದು ಇಚ್ಛೆ- ಪಡುತ್ತಿದ್ದಾರೆ. ಅಂಥವರಿಗೆ ಲಿಂಗಧಾರಣೆ ಮಾಡಬೇಕು, ನಾವು ಪಡೆಯುತ್ತಿರುವ ದೈವೀ ಆನಂದ ಅವರಿಗೂ ದೊರೆಯಬೇಕು ಎಂದು ಅನಿಸುತ್ತಿದೆ. ಆದರೆ ಮಹಿಳೆಯರು ಲಿಂಗದೀಕ್ಷೆ ಕೊಡಬಹುದೇ ? ಅವರಿಗೆ ಆ ಅಧಿಕಾರವಿದೆಯೇ? ಎಂಬ ಸಂಶಯ ನನ್ನಲ್ಲಿ ಮೂಡಿತ್ತು ಅದಕ್ಕೆ ತಮ್ಮನ್ನು ಕೇಳುತ್ತಿರುವೆನವ್ವ"

"ದಾನಮ್ಮ ಬಸವಣ್ಣನವರು ರಚಿಸಿದ ಈ ಹೊಸ ಸಮಾಜ ರಚನೆಯಲ್ಲಿ ಹೆಣ್ಣು-ಗಂಡು ಎಂಬ ಭೇದವಿಲ್ಲ. ಇಬ್ಬರೊಳಗೂ ಇರುವ ಆತ್ಮ ಒಂದೇ. ಒಳಗೆ ಸುಳಿವ ಆತ್ಮ ಹೆಣ್ಣೂ ಅಲ್ಲ ಗಂಡೂ ಅಲ್ಲ ಎಂದು ಶರಣರು ಹೇಳುತ್ತಾರೆ. ಅನೇಕ ಜನ ಶರಣರು ಚನ್ನಬಸವಣ್ಣನವರಿಂದ ಲಿಂಗಧಾರಣಾ ಕ್ರಮವನ್ನು ಕಲಿತುಕೊಂಡು ಹೋಗುತ್ತಾರೆ. ವಾರಕ್ಕೊಂದು ದಿವಸ ಬೆಳಗಿನ ಜಾವದಲ್ಲಿ ಮಹಾಮನೆಯ ಲಿಂಗಧಾರಣ ಮಂಟಪದಲ್ಲಿ ನೂರಾರು ಜನರು ಲಿಂಗಧಾರಿಗಳಾಗಿ ಹೋಗುತ್ತಾರೆ. ನೀನು ಅಲ್ಲಿಗೆ ಹೋದರೆ, ಚನ್ನಬಸವಣ್ಣನವರು ಅಷ್ಟಾವರಣ, ಪಂಚಾಚಾರ, ಷಟಸ್ಥಲದ ಹಿರಿಮೆಯನ್ನು ಜನರಿಗೆ ತಿಳಿಸಿಕೊಡುವದನ್ನು ನೋಡಿ ಕಲಿಯಬಹುದು. ಇಷ್ಟಲಿಂಗ ದೀಕ್ಷಾ ಸಂಸ್ಕಾರದ ಬಗ್ಗೆ ಅರಿತುಕೊಂಡು ಮತ್ತು ಅದರ ಬಗ್ಗೆ ಇರುವ ವಚನಗಳ ಕಟ್ಟುಗಳನ್ನು ಪಡೆದುಕೊಳ್ಳಬಹುದು. ದೀಕ್ಷೆ ಪಡೆದ ನಂತರ ಜ್ಯೋತಿ ಮುಟ್ಟಿ ಜ್ಯೋತಿಯಾಗುವಂತೆ, ಇಷ್ಟಪಟ್ಟವರಿಗೆ ನೀನೆ ದೀಕ್ಷಾಸಂಸ್ಕಾರ, ಲಿಂಗಧಾರಣ ಮಾಡಬಹುದು." ಎಂದು ತಿಳಿಸಿದರು.

ಚನ್ನಬಸವಣ್ಣನವರು ಶರಣರೆಲ್ಲರ ಅಣತಿಯಂತೆ ದಾನಮ್ಮನಿಗೆ ದೀಕ್ಷಾ ಸಂಸ್ಕಾರ ನೀಡಿದರು. ಬಸವಣ್ಣನವರು ಮಾನವಕುಲದ ಸರ್ವಾಂಗೀಣ ಏಳ್ಗೆಗಾಗಿ ಕೊಟ್ಟ ಅಮೂಲ್ಯ ಸೂತ್ರಗಳಾದ ಅಷ್ಟಾವರಣ, ಷಟ್ಸ್ಥಲ, ಪಂಚಾಚಾರಗಳು ಲಿಂಗಭಕ್ತನಾದ ಸಾಧಕನ ಪ್ರಾಣವೇ ಆಗಿವೆ ಎಂದು ಚನ್ನಬಸವಣ್ಣನವರು ತಿಳಿಸುತ್ತಾರೆ. ಚನ್ನಬಸವಣ್ಣನವರು ಈ ಕೆಳಗಿನ ವಚನದಲ್ಲಿ ಪಂಚ ಆಚಾರಗಳ ವ್ಯಾಖ್ಯಾನ ಮಾಡಿದ್ದಾರೆ.

ಲಿಂಗಾಚಾರ ಸದಾಚಾರ ಶಿವಾಚಾರ
ಗಣಾಚಾರ ಭೃತ್ಯಾಚಾರವೆಂಬ ಪಂಚಾಚಾರದ
ಆಚರಣೆಯೆಂತೆಂದಡೆ:
ಲಿಂಗವಲ್ಲದೆ ಅನ್ಯವನರಿಯದಿಹುದೆ ಲಿಂಗಾಚಾರ.
ಸಜ್ಜನ ಕಾಯಕದಲ್ಲಿ ತಂದು ಗುರು–ಲಿಂಗ–ಜಂಗಮಕ್ಕೆ ನೀಡಿ
ಸತ್ಯಶುದ್ಧನಾಗಿಹುದೆ ಸದಾಚಾರ.
ಶಿವಭಕ್ತರಲ್ಲಿ ಕುಲ ಗೋತ್ರ ಜಾತಿ ವರ್ಣಾಶ್ರಮವನರಸದೆ
ಅವರೊಕ್ಕುದ ಕೊಂಬುದೆ ಶಿವಾಚಾರ.
ಶಿವಾಚಾರದ ನಿಂದೆಯ ಕೇಳದಿಹುದೆ ಗಣಾಚಾರ.
ಶಿವಶರಣರೆ ಹಿರಿಯರಾಗಿ ತಾನೆ ಕಿರಿಯನಾಗಿ
ಭಯಭಕ್ತಿಯಿಂದ ಆಚರಿಸುವುದೆ ಭೃತ್ಯಾಚಾರ.
ಇಂತೀ ಪಂಚಾಚಾರವುಳ್ಳ ಪರಮಸದ್ಭಕ್ತರ
ಒಕ್ಕುದನಿಕ್ಕಿ ಸಲಹಯ್ಯಾ ಪ್ರಭುವೆ, ಕೂಡಲಚೆನ್ನಸಂಗಮದೇವಾ.

–ಚನ್ನಬಸವಣ್ಣನವರು

ದಾನಮ್ಮ ಷಟ್ಸಸ್ಥಲಬ್ರಹ್ಮಿ ಚನ್ನಬಸವಣ್ಣನವರಿಂದ ಲಿಂಗದೀಕ್ಷಾ ಮತ್ತು ಲಿಂಗಧಾರಣೆಯ ತಾತ್ವಿಕ ವಿಚಾರಗಳನ್ನು ಚರ್ಚಿಸಿ ಅನುಭಾವ ಪಡೆದಳು.

ಅಲ್ಲಮಪ್ರಭುದೇವರ ಹತ್ತಿರ ಹೋಗಿ ಭಯ ಭಕ್ತಿಯಿಂದ ಶರಣು ಸಮರ್ಪಿಸಿದಳು. ಪ್ರಭುದೇವರು ದಾನಮ್ಮನ ಶಿವಯೋಗ ಸಾಧನೆಯ ಬಲವನ್ನು, ಅವಳ ಮುಖಲಕ್ಷಣದಿಂದ ಅರಿತರು. ಬಾ ತಾಯಿ, ಈ ಭಸ್ಮಗಟ್ಟಿ ನಿನ್ನ ಶಿವಯೋಗ ಸಾಧನೆಯನ್ನು ಗಟ್ಟಿಗೊಳಿಸಲಿ, ಪ್ರಾಣಲಿಂಗಿಸ್ಥಲ ತಲುಪಿದ ನಿನ್ನಿಂದ ಲೋಕಕಲ್ಯಾಣವಾಗಲಿ, ಶರಣರ ಮಣಿಹ ಪೂರೈಸುವುದರಲ್ಲಿದೆ. ಅಕ್ಕಮಹಾದೇವಿ ಶ್ರೀಶೈಲದ ಕಡೆಗೆ ಹೊರಟಿದ್ದಾಳೆ. ತಾಯಿ ನೀನು ನಾಡಿನಾದ್ಯಂತ ತಿರುಗಾಡಿ ಬಸವಧರ್ಮ ತತ್ತ್ವದ ಧ್ವಜವನ್ನು ಮೆರೆಯಿಸಬಲ್ಲೆ, ನಿನ್ನನ್ನು ನೋಡಿದರೆ ವೀರಗಣಾಚಾರ ವೃತ್ತಿಯವಳಾಗಬಹುದು ಎಂದು ತೋರುತ್ತದೆ. ನಮ್ಮ ಬಸವಣ್ಣನ ನುಡಿ, ಮುತ್ತಿನಂತೆ, ಮಾಣಿಕ್ಯದಂತೆ, ಅದಕ್ಕೆ ನಿನಗೆ 'ದಾನಮ್ಮ' ಎಂಬ ಹೆಸರನ್ನು ಇಟ್ಟಿದ್ದಾರೆ. ಆ ಹೆಸರು ಆಚಂದ್ರಾರ್ಕವಾಗಿರಲಿ, ನಿನಗೆ ಶುಭವಾಗಲಿ ಎಂದು ಹರಸಿದರು.

ಗಂಗಾಂಬಿಕೆ ದಾನಮ್ಮ, ಅಲ್ಲಮಪ್ರಭುದೇವರು ಅಕ್ಕಮಹಾದೇವಿಯನ್ನು, ಬಸವರಸರನ್ನು ನಾನಾ ಬಗೆಯಾಗಿ ಪರೀಕ್ಷಿಸಿ, ನಂತರ ಅಹುದಹುದೆಂದರು. ನಿನಗೆ

ಯಾವ ಪರೀಕ್ಷೆಗೂ ಒಳಪಡಿಸದೆ ಗಣಾಚಾರ ವೃತ್ತಿಯನ್ನು ದಯಪಾಲಿಸಿದರು. ನೀನು ಪುಣ್ಯವಂತೆ, ಎನ್ನುತ್ತಾ ಕರೆದುಕೊಂಡು ಅಕ್ಕಮಹಾದೇವಿ ಬಳಿಗೆ ಹೋದರು. ದಾನಮ್ಮ ಅಕ್ಕಮಹಾದೇವಿಯರು ಸಮವಯಸ್ಕರು, ಆತ್ಮೋನ್ನತಿಯನ್ನು ಸಾಧಿಸಿದವರು, ಏನೋ ಒಂದು ಬಗೆಯ ದೈವೀ ಆಕರ್ಷಣೆ ಅವರಿಬ್ಬರ ಅಂತರಂಗವನ್ನು ಒಂದುಗೂಡಿಸಿತು. ಪರಸ್ಪರ ಶರಣು ಶರಣಾರ್ಥಿ ಸಲ್ಲಿಸಿದರು. ಕಣ್ಣುಗಳು ಅರಳಿದವು. ಮನದಲ್ಲಿ ಉತ್ಸಾಹ ಉಕ್ಕಿತು. ಅಕ್ಕಾ ನೀನು ಜ್ಞಾನದಲ್ಲಿ ಎಲ್ಲರಿಗಿಂತ ಹಿರಿಯಳೆಂದು ಮಹಾಜ್ಞಾನಿ ಚನ್ನಬಸವಣ್ಣನವರು ಹೇಳಿದ್ದಾರೆ. ನಿನ್ನ ಬಳಿ ನನ್ನ ಮನದ ಸಂಶಯವೊಂದನ್ನು ನೀಗಿಸಿಕೊಳ್ಳಬೇಕಾಗಿದೆ.

ದಾನಮ್ಮ, ನೀನೇನು ಸಾಮಾನ್ಯಳೇ ಅಣ್ಣ ಬಸವಣ್ಣನವರಿಂದ 'ದಾನಮ್ಮ' ಎಂಬ ಬಿರುದನ್ನು ಪಡೆದಿರುವಿ, ನಾವಿಬ್ಬರೂ ಈ ಭಕ್ತಿಸಂಬಂಧದಿಂದ ಬೆಸೆದ ಮಹಾಮನೆಯ ಹೆಣ್ಣುಮಕ್ಕಳು. ಸಂಕೋಚವಿಲ್ಲದೆ ಕೇಳವ್ವ ಎಂದಳು ಅಕ್ಕಮಹಾದೇವಿ.

'ಅಕ್ಕಾ, ನಾವು ಮಹಾಮನೆಯ ಅಕ್ಕರೆಯ ಮಕ್ಕಳು. ನನಗೆ ಈ ಪ್ರಶ್ನೆಯನ್ನು ಬೇರೆಯವರಿಗೆ ಕೇಳಲು ಸ್ವಲ್ಪ ಹಿಂಜರಿಕೆಯಾಗುತ್ತಿದೆ. ಅದಕ್ಕೆ ನಿನ್ನನ್ನು ಕೇಳುತ್ತಿರುವೆ, ನನ್ನ ತಂದೆ–ತಾಯಿಯರು ವರನಶೋಧನೆಯಲ್ಲಿ ತೊಡಗಿರುವಾಗ, ಅವರಿಗೆ ಹೇಳದೆ ನಾನಿಲ್ಲಿಗೆ ಬಂದಿರುವೆ. ನೀನಂತೂ ಚನ್ನಮಲ್ಲಿಕಾರ್ಜುನನೇ ನಿನ್ನ ಪತಿಯೆಂದು ನಂಬಿದ ನಿಷ್ಠಾವಂತಳು. ಉಡುತಡಿಯ ಕೌಶಿಕರಾಜ ನಿನ್ನನ್ನು ಮದುವೆಯಾಗಬಯಸಿದಾಗ, ಅವನನ್ನು ತೊರೆದು ಇಲ್ಲಿಗೆ ಬಂದಿರುವೆ. ಈಗ ನನ್ನ ಹೆತ್ತವರು ನನಗಾಗಿ ದಾರಿಕಾಯುತ್ತ ಹಾಸಿಗೆ ಹಿಡಿದಿರುವರಂತೆ, ಊರಿಗೆ ಹೋದ ಮೇಲೆ ಮತ್ತೆ ಮದುವೆಯ ಪ್ರಶ್ನೆ ಧುತ್ತೆಂದು ನಿಲ್ಲುತ್ತದೆ. ಮದುವೆ ಆತ್ಮೋನ್ನತಿಗೆ ಆತಂಕವಾಗುವುದೇ? ಅಕ್ಕ ನಿಮ್ಮ ಅಭಿಪ್ರಾಯ ತಿಳಿಸಿ ಮಾರ್ಗದರ್ಶನ ಮಾಡಬೇಕು.

"ದಾನಮ್ಮ, ಮದುವೆಯಾಗುವುದು ಆತಂಕಕಾರಿಯಲ್ಲ. ಶರಣರ ತತ್ತ್ವದಲ್ಲಿ ಮದುವೆಯಾಗಬಾರದು ಎಂಬ ಕಟ್ಟಳೆಯಿಲ್ಲ. ಮದುವೆಯಾಗಲೇಬೇಕೆಂದು ನಿರ್ಬಂಧವಿಲ್ಲ. ಕಾಯಕ, ದಾಸೋಹ, ಸತ್ಯ, ಸದಾಚಾರ, ಸಮತಾಭಾವದಿಂದ ಆತ್ಮೋನ್ನತಿ ಪಡೆಯುವದು ಮುಖ್ಯವಾಗಿದೆ. ನಾನು ಬಾಲ್ಯದಿಂದ ಚೆನ್ನಮಲ್ಲಿಕಾರ್ಜುನನೇ ನನ್ನ ಪತಿ ಎಂದು ಅಚಲವಾಗಿ ನಂಬಿದ್ದೇನೆ. ನನ್ನ ಬಾಹ್ಯ ಸೌಂದರ್ಯಕ್ಕೆ ಮರುಳಾಗಿ ಕೌಶಿಕರಾಜ ನನ್ನನ್ನು ಮದುವೆಯಾಗಬಯಸಿದ. ಭೋಗ ಜೀವನದ ಕೈಗೊಂಬೆಯಾಗಲು ನನಗೆ ಬೇಡವೆನಿಸಿತು. ಅದಕ್ಕಾಗಿ ಅವನನ್ನು ತೊರೆದೆನು. ಅಣ್ಣ ಬಸವಣ್ಣನವರೆ ಹೇಳಿದ್ದಾರಲ್ಲ.

ಮನಕ್ಕೆ ಮನೋಹರವಲ್ಲದ ಗಂಡರು
ಮನಕ್ಕೆ ಬಾರರು ಕೇಳವ್ವಾ ಕೆಳದೀ.
ಪನ್ನಗಭೂಷಣನಲ್ಲದ ಗಂಡರು
ಇನ್ನೆನಗಾಗದ ಮೋಜಿಕೆ, ನೋಡವ್ವಾ.
ಕನ್ನೆಯಂದಿನ ಕೂಟ, ಚಿಕ್ಕಂದಿನ ಬಾಳುವೆ,
ನಿಮ್ಮಾಣೆಯಯ್ಯಾ ಕೂಡಲಸಂಗಮದೇವಾ

– ಬಸವಣ್ಣನವರು

ಅಣ್ಣ ಬಸವಣ್ಣನವರ ಈ ವಚನದಲ್ಲಿ ಶರಣಸತಿಯಾಗಿ ಲಿಂಗಪತಿಯ ಮೇಲಿನ ಏಕೈಕ ನಿಷ್ಠೆಯನ್ನು ಕಾಣುತ್ತೇವೆ. ನಾನು ಚಿಕ್ಕವಯಸ್ಸಿನಿಂದಲೇ ಚೆನ್ನಮಲ್ಲಿಕಾರ್ಜುನನೆ ನನ್ನ ಗಂಡನೆಂದು ಮನದಲ್ಲಿ ಬೆಳೆದು ಬಂದಿದೆ. ಅದಕ್ಕಾಗಿ ನನಗೀಗ ಚೆನ್ನಮಲ್ಲಿಕಾರ್ಜುನನ ಬಿಟ್ಟು ಆ ಸ್ಥಾನದಲ್ಲಿ ಮತ್ತಾರೂ ಹಿಡಿಸುವುದಿಲ್ಲ.

“ಹೌದಕ್ಕ, ನೀನು ಹೇಳುವದು ನಿಜ. ಚೆನ್ನಮಲ್ಲಿಕಾರ್ಜುನನೆ ಪತಿಯೆಂದು ನಿನ್ನ ಕನಸು ಮನಸ್ಸಿನ ತುಂಬೆಲ್ಲಾ ವ್ಯಾಪಿಸಿಕೊಂಡಿರುವುದನ್ನು ನಿನ್ನ ವಚನಗಳಲ್ಲಿ ಕೇಳಿದೆ. “ನಾನೊಂದು ಕನಸ ಕಂಡೆ” ಎಂದು ಚೆನ್ನಮಲ್ಲಿಕಾರ್ಜುನನ ವರ್ಣನೆಯಲ್ಲಿ ಕೇಳಿ ನಾನು ಪುಳಕಿತಳಾದೆ.”

ಲೋಕದ ಚೇಷ್ಟೆಗೆ ರವಿ ಬೀಜವಾದಂತೆ,
ಕರಣಂಗಳ ಚೇಷ್ಟೆಗೆ ಮನವೇ ಬೀಜ.
ಎನಗುಳ್ಳದೊಂದು ಮನ, ಆ ಮನ ನಿಮ್ಮಲ್ಲಿ ಸಿಲುಕಿದ ಬಳಿಕ
ಎನಗೆ ಭವವುಂಟೆ ಚೆನ್ನಮಲ್ಲಿಕಾರ್ಜುನಾ?”

– ಅಕ್ಕಮಹಾದೇವಿಯವರು.

“ಅಕ್ಕ, ಅಂದು ಅನುಭವ ಮಂಟಪದಲ್ಲಿ ಅದೆಷ್ಟು ಅರ್ಥಪೂರ್ಣವಾಗಿ ಹರಿವ ಮನವನ್ನು ಇಷ್ಟಲಿಂಗದಲ್ಲಿ ಲೀನಗೊಳಿಸಿದರೆ ಭಯವೂ ಇಲ್ಲ ಭವವೂ ಇಲ್ಲ ಎಂದು ಮನದ ಬಗೆಗೆ ನೀನು ಸೊಗಸಾದ ವಚನ ಹೇಳುತ್ತಿರುವದನ್ನು ಕಂಡು ನನ್ನ ಮನ ಅಂತರ್ಮುಖಿಯಾಯಿತು. ಎಲ್ಲವೂ ಅವರವರ ಮನದ ಮೇಲೆ ಅವಲಂಬಿತವಾಗಿದೆ. “ಅಲ್ಲಮಪ್ರಭುದೇವರು, ಸಿದ್ಧರಾಮೇಶ್ವರರು, ಚನ್ನಬಸವಣ್ಣನವರು, ಬೊಂತಾದೇವಿಯವರು ಗೊಗ್ಗವ್ವೆತಾಯಿ ಹೀಗೆ ಶರಣಸಂಕುಲದಲ್ಲಿ ಕೆಲವರನ್ನು ಕಂಡಾಗ ವೈರಾಗ್ಯವೇ ಶ್ರೇಷ್ಠವೆನಿಸುವುದು.”

"ದಾನಮ್ಮ, ಅದು ಅವರವರ ಮನದಿಚ್ಛೆಯನ್ನು ಅವಲಂಬಿಸಿದೆ. ನಮ್ಮಣ್ಣ ಜಗದಣ್ಣ ಬಸವಣ್ಣನವರಿಗೆ ಜೇಡರದಾಸಿಮಯ್ಯವರ "ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ" ಎಂಬ ವಚನದಲ್ಲಿ ಅಚಲ ನಂಬಿಕೆ ಇದೆ. ಅದರಂತೆ ತಮ್ಮ ಬಾಳನ್ನು ರೂಪಿಸಿಕೊಂಡರು. ಅಣ್ಣ 'ಸಂಸಾರದಿಂದಲೇ ಸದ್ಗತಿ' ಪಡೆಯುವ ಬಾಳದಾರಿ ತೋರಿಸಿದ್ದಾರೆ. ಅವರು ತಮ್ಮ ಬಾಳಪಯಣದಲ್ಲಿ ನುಡಿದಂತೆ ನಡೆದುಕೊಂಡು ಬರುವುದನ್ನು ಕಾಣುತ್ತಿದ್ದೇವೆ. ಅವರ ಪತ್ನಿಯರು ಆಧ್ಯಾತ್ಮ ಜೀವನಕ್ಕೆ ಆಧಾರಸ್ತಂಭವಾಗಿದ್ದಾರೆ. ಮಹಾಮನೆಯ ದಾಸೋಹದ ಅನ್ನಪೂರ್ಣೆಯರಾಗಿದ್ದಾರೆ. ಪತಿ ಪತ್ನಿಯರು ಕೂಡಿ ಭಕ್ತಿಯಿಂದ ಇರುವುದು, ದೇವರಿಗಷ್ಟೇ ಅಲ್ಲ, ಮಾನವಕುಲಕ್ಕೆ ಆದರ್ಶಮಯವಾಗಿದೆ.

ಸತ್ಯವಾದ ನಿನ್ನ ನುಡಿಗಳನ್ನು ನಾನು ಕಂಡಿದ್ದೇನೆ ಅಕ್ಕ. ನಾನು ಉಮರಾಣಿಯಿಂದ ಕಲ್ಯಾಣಕ್ಕೆ ಬರುವಾಗ ಮಾರ್ಗದಲ್ಲಿ ಮೋಳಿಗೆ ಮಾರಯ್ಯನವರು– ಮಹಾದೇವಿಯಮ್ಮನವರ ಜೊತೆಗಿದ್ದು ಬಂದೆವು. ಆ ದಂಪತಿಯರದ್ದು ಹಾಲು–ಜೇನಿನಂಥ ಸಂಸಾರ. ಪರಸ್ಪರ ಪೂರಕಶಕ್ತಿಗಳಾಗಿ ಬಾಳುತ್ತಿರುವದನ್ನು ಕಂಡೆ. ಕೈಯಲ್ಲಿ ಜ್ಯೋತಿಯ ಹಿಡಿದು ಕತ್ತಲೆಯೆನಲೇತಕ್ಕೆ? ಇಷ್ಟಲಿಂಗದ ಪೂಜೆಯನ್ನು ಬಿಟ್ಟು, ಕೈಲಾಸದ ಆಸೆ ನಿಮಗೇಕೆ ? ಎಂದು ಮಹಾದೇವಿಯಮ್ಮ ಪತಿಯನ್ನು ಎಚ್ಚರಿಸಿದರಂತೆ. ಆ ಮಾತುಗಳಿಂದ ಮಾರಯ್ಯನವರು ಸಿಟ್ಟಾಗಲಿಲ್ಲ. ನೀ ಶಕ್ತಿಯಾದ ಕಾರಣ, ಎನ್ನ ಸತ್ಯಕ್ಕೆ ನೀ ಸತಿಯಾದ ಕಾರಣ, ಎನ್ನ ಸುಖದುಃಖ ಅನ್ಯವಿಲ್ಲ ಇದಕ್ಕೆ ಭಿನ್ನಭೇದವೇನು? ಎಂದು ಮಹಾದೇವಮ್ಮನವರನ್ನು ಕೇಳಿದರಂತೆ. ಹೀಗೆ ಪರಸ್ಪರರು ಅನ್ಯೋನ್ಯವಾಗಿದ್ದರೆ, ದಾಂಪತ್ಯ ಜೀವನ ಆಧ್ಯಾತ್ಮ ಸಾಧನೆಗೆ ಬಾಧಕವಾಗಲಾರದು.

ನಮ್ಮ ಆಯ್ದಕ್ಕಿ ಮಾರಯ್ಯ– ಲಕ್ಕಮ್ಮನವರ ಕಾಯಕ ನಿಷ್ಠೆ ಎಂಥದ್ದು ಎಂದು ಕೇಳಿರುವೆಯಾ ದಾನಮ್ಮ. ಅವರು ಆರಿಸಿಕೊಂಡ ಕಾಯಕವೆಂದರೆ ಅಕ್ಕಿಯನ್ನು ಆಯ್ದು ತಂದು ಗುರು ಲಿಂಗ ಜಂಗಮ ದಾಸೋಹ ನಡೆಸುವುದು. ಒಮ್ಮೆ ಮಾರಯ್ಯನವರು ಅನುಭವ ಮಂಟಪದಲ್ಲಿ ಅನುಭಾವದಲ್ಲಿ ಮಗ್ನರಾಗಿ ಕಾಯಕವನ್ನು ಮರೆತು ಕುಳಿತುಕೊಳ್ಳುತ್ತಾರೆ. ಜಂಗಮರು ಬರುವ ಸಮಯವಾದರೂ, ಮಾರಯ್ಯನವರು ಕಾಯಕಕ್ಕೆ ಹೊರಡದೆ ಇರುವುದನ್ನು ಕಂಡ ಲಕ್ಕಮ್ಮ ಎಚ್ಚರಿಸುತ್ತಾಳೆ.

ಕಾಯಕ ನಿಂದಿತ್ತು ಹೋಗಯ್ಯ ಎನ್ನಾಳ್ದನೆ
ಭಾವಶುದ್ಧವಾಗಿ ಮಹಾಶರಣರ
ತಿಪ್ಪೆಯ ತಪ್ಪಲ ಅಕ್ಕಿಯ ತಂದು

ನಿಶ್ಚಯಿಸಿ ಮಾಡಬೇಕು. ಮಾರಯ್ಯಪ್ರಿಯ
ಅಮರೇಶ್ವರಲಿಂಗಕ್ಕೆ ಬೇಗ ಹೋಗು ಮಾರಯ್ಯ.
– ಆಯ್ದಕ್ಕಿ ಲಕ್ಕಮ್ಮನವರು

ಎಂಬ ಆಯ್ದಕ್ಕಿ ಲಕ್ಕಮ್ಮನವರ ವಚನ ಎಂಥ ಅದ್ಭುತವಾದ ನುಡಿಗಡಣವದು. ಮಾರಯ್ಯನವರು ಸತಿಯು ಸದುವಿನಯದಿಂದ ತನಗೆ ಎಚ್ಚರಿಸುತ್ತಿದ್ದಾಳೆ ಎಂದು ಅರಿತು ಮರುಮಾತನಾಡದೆ ಕಾಯಕದಲ್ಲಿ ನಿರತರಾದರಂತೆ.

ಕಲ್ಯಾಣದಲ್ಲಿ ಇರುವ ಇಂಥ ಅನೇಕ ಬಸವಾದಿ ಶರಣ ದಂಪತಿಗಳನ್ನು ಕಂಡಾಗ, ಒಬ್ಬಳೇ ಇರುವದಕ್ಕಿಂತ ವಿವಾಹವಾಗಿ, ದಂಪತಿಗಳು ಜೊತೆಯಾಗಿ ಶರಣಧರ್ಮ ಪ್ರಚಾರಮಾಡಬೇಕು ಎಂಬ ಆಶೆಯಾಗುತ್ತಿದೆ. ನನ್ನ ಹೆತ್ತವರಿಗೆ ಮದುವೆ ಮಾಡುವ ಬಹಳ ಹಂಬಲವಿದೆ. ಉಮರಾಣಿಯ ಕಡೆಯಿಂದ ಬರುವ ಭಕ್ತರೊಬ್ಬರು ನಿಮ್ಮನ್ನು ನೆನೆಯುತ್ತ ನಿಮ್ಮ ತಂದೆ ತಾಯಿ ಕೊರಗುತ್ತಿದ್ದಾರೆ ಎಂದು ಹೇಳಿದರು.

ನಿನ್ನ ವಿಚಾರಗಳು ಸರಿಯಾಗಿವೆ ದಾನಮ್ಮ. ಈಗಾಗಲೇ ಸಾಧನೆಯಲ್ಲಿ ಮುಂದುವರೆದಿರುವಿ, ಐಕ್ಯಸ್ಥಾನದತ್ತ ಸಾಗಿರುವೆ ಸಿದ್ಧಿ ಸನಿಹದಲ್ಲಿದೆ. ಇನ್ನು ಕೆಲವು ದಿವಸ ಇಲ್ಲಿದ್ದು ಸಾಧನೆ ಮಾಡವ್ವ. ಶರಣರ ಸನ್ನಿಧಿಯಲ್ಲಿ ಈ ಆಧ್ಯಾತ್ಮ ಪರಿಸರದಲ್ಲಿ ಆತ್ಮೋನ್ನತಿಯ ಮಾರ್ಗ ಸುಲಭವಾಗುತ್ತದೆ.

ಮಹಾದೇವಿಯಕ್ಕ, ನಾನೇನು ನಿಮ್ಮಂತೆ ವಚನಕಾರಳಲ್ಲ. ನಿಮ್ಮೆಲ್ಲರ ವಚನಗಳನ್ನು ಸಂಗ್ರಹಿಸಿಕೊಳ್ಳಬೇಕು. ಅವುಗಳನ್ನು ಆಳವಾಗಿ ಅಭ್ಯಾಸ ಮಾಡಬೇಕು. ಆ ಘನಮನದ ಅನುಭವ ಪಡೆಯಬೇಕು. ಆಧ್ಯಾತ್ಮ ಜೀವಿಯೊಬ್ಬರನ್ನು ಮದುವೆಯಾಗಿ ಹೆತ್ತವರಿಗೆ ಸಂತಸವನ್ನೀಯಬೇಕು, ನಾಡಿನಾದ್ಯಂತ ತಿರುಗಾಡುತ್ತ ಬಸವಣ್ಣನವರ ಹಿರಿಮೆಯನ್ನು ಸಾರಬೇಕು, ನೊಂದವರ ಕಣ್ಣೀರು ಒರೆಸಬೇಕು ಎಂಬುದೆ ನನ್ನ ಜೀವನದ ಗುರಿಯಾಗಿದೆ.

ದಾನಮ್ಮ, ನಿನ್ನ ಜೊತೆಯ ಅನುಭಾವದ ನುಡಿಗಳಿಂದ ನನಗೆ ಆನಂದವಾಯಿತು. ಪರರ ದುಃಖವನ್ನು ದೂರಗೊಳಿಸುವ ನಿನ್ನ ಕಾಯಕ ಶ್ರೇಷ್ಠ ಕಾಯಕವಾಗಿದೆ. ನಿನ್ನ ಮನದೊಲವಿನಂತೆ ಅಧ್ಯಾತ್ಮಜೀವಿ ಪತಿ ನಿನಗೆ ದೊರಕಲಿ. ಉಮರಾಣಿಗೆ ಹೋಗಿ ಮದುವೆ ಮಾಡಿಕೊ, ನಂತರ ದಂಪತಿಯರು ಬಸವತತ್ತ್ವ ಪ್ರಚಾರ ಮಾಡುತ್ತ ದೇಶ ಸಂಚಾರ ಮಾಡಬಹುದು.

"ವೀರವೀರಾಗಿಣಿ, ಮಹಾಶಿವಯೋಗಿಣಿಯಾದ ಅಕ್ಕಾ ನೀನು ನನಗಷ್ಟೇ ಅಕ್ಕನಲ್ಲ,

ಕನ್ನಡ ನಾಡಿಗೆ ಬೆಳದಿಂಗಳಕ್ಕಳಾಗಿರುವಿ. ವಚನಕಾರ್ತಿಯಾದ ನಿನ್ನ ಲೋಕಾನುಭವ, ಅಂತರಂಗದ ಅನುಭಾವದ ವಚನಗಳು ಕಾವ್ಯಮಯವಾಗಿವೆ, ಯೋಗಾಂಗ ತ್ರಿವಿಧಿಗಳು, ಅಂಥ ಆತ್ಮಶಕ್ತಿಯನ್ನು ಸಾಹಿತ್ಯ ರಚನಾ ಚಾತುರ್ಯವನ್ನು ಪಡೆದಿರುವ ನಿನ್ನ ಆಶೀರ್ವಾದ ನನಗಿರಲಿ" ಎಂದು ದಾನಮ್ಮ ಅಕ್ಕಮಹಾದೇವಿಯವರಿಗೆ ಹೃದಯದುಂಬಿ ಶರಣು ಶರಣಾರ್ಥಿ ಸಲ್ಲಿಸಿದಳು.

ದಾನಮ್ಮ, ಅಕ್ಕಮಹಾದೇವಿಯವರಿಂದ ಶರಣತತ್ತ್ವದ ನೆಲೆಯಲ್ಲಿ ವೈವಾಹಿಕ ಜೀವನದ ವ್ಯವಸ್ಥೆಯನ್ನು ಅರಿಯುತ್ತಾಳೆ. ಶರಣರ ಶಿವಾನುಭವದ ನಂತರ ಅಕ್ಕನಾಗಮ್ಮ, ಗಂಗಾಂಬಿಕೆ, ನೀಲಾಂಬಿಕೆಯವರಿಂದ ಹೆಚ್ಚಿನ ಶಿವಯೋಗ ಸಾಧನೆಯನ್ನು ಅರಿಯುತ್ತಾಳೆ. ಹಡಪದ ಅಪ್ಪಣ್ಣ– ಲಿಂಗಮ್ಮರನ್ನು ಸಂದರ್ಶಿಸಿದ ದಾನಮ್ಮ ಆತ್ಮೋನ್ನತಿಯ ಮಹತಿಯನ್ನು ತಿಳಿದುಕೊಳ್ಳುತ್ತಾಳೆ. ಅಮುಗಿದೇವಯ್ಯ–ರಾಯಮ್ಮನವರ ಇಷ್ಟಲಿಂಗ ನಿಷ್ಠೆಯ ಬಗ್ಗೆ ಮಾಹಿತಿ ಪಡೆಯುತ್ತಾಳೆ. ಮಡಿವಾಳ ಮಾಚಿದೇವ, ಅಂಬಿಗರ ಚೌಡಯ್ಯನವರ ಗಣಾಚಾರದ ನಿಷ್ಠೆಯನ್ನು ಕಲಿತುಕೊಳ್ಳುತ್ತಾಳೆ. ಅದರಂತೆ ಇನ್ನಿತರ ಎಲ್ಲ ಶರಣರನ್ನು ಸಂದರ್ಶಿಸಿ ಇಷ್ಟ, ಪ್ರಾಣ, ಭಾವಲಿಂಗದ ಮಹತಿಯನ್ನು ಅಷ್ಟಾವರಣಗಳಾದ ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರಗಳ ಮಹತ್ವವನ್ನು ಅರಿತ ಶರಣೆ ದಾನಮ್ಮ ಸಮತೆಯ ಮೂರ್ತಿಯಾಗಿ ಜನಪರ ಜೀವಪರ ಒಲವು ತಾಳಿದ ಉದಾತ್ತ ಮಹಿಳೆಯಾಗಿ ಶರಣಧರ್ಮದ ಪ್ರತಿನಿಧಿಯಾಗುತ್ತಾಳೆ.

ಕಲ್ಯಾಣದಲ್ಲಿ ಸೇವೆ

ಕಲ್ಯಾಣದಲ್ಲಿ ದಾನಮ್ಮ ಅನುಭವ ಮಂಟಪದಲ್ಲಿದ್ದು ಶರಣರ ವಚನಗಳನ್ನು ಆಲಿಸುತ್ತಾ ಬಡವರ ಸಂಕಷ್ಟಗಳನ್ನು ನಿವಾರಿಸುವಲ್ಲಿ ನಿರತಳಾದಳು. ನೊಂದವರ ನೋವುಗಳನ್ನು ಪರಿಹರಿಸುತ್ತ ಜೀವನದಲ್ಲಿ ಅಡೆತಡೆ ಉಂಟಾಗಿ ಚಿಂತೆಯಲ್ಲಿ ಒದ್ದಾಡುವವರಿಗೆ ಸಮಾಧಾನ ಹೇಳುತ್ತಿದ್ದಳು. ಮಹಾದೇವಿಯ ಮನೆಯ ಮುಂದೆ ನೊಂದು ಬೆಂದವರು ಸಾಲುಗಟ್ಟಿ ನಿಲ್ಲುತ್ತಿದ್ದರು. ಒಮ್ಮೆ ಒಬ್ಬ ಹೆಣ್ಣು ಮಗಳು ಧಾವಿಸಿ ಬಂದಳು. ಅವ್ವ.. ಅವ್ವ! ಎನ್ನತ್ತಾ, ಚಕ್ಕಡಿಗಾಡಿಯಲ್ಲಿ ಒಬ್ಬ ಹುಡಗನನ್ನು ತಂದಿದ್ದಾರೆ ಅವನ ಸ್ಥಿತಿ ಚಿಂತಾಜನಕವಾಗಿದೆ ಎಂದಳು. ದಾನಮ್ಮ ಆ ಹುಡಗನ ಹತ್ತಿರ ಹೋಗಿ ಅವನನ್ನು ನೀರು ಕುಡಿಸಿ ಒಳಗೆ ಕರೆದುಕೊಂಡು ಹೋಗಿ ಅವನ ಹಣೆಗೆ ವಿಭೂತಿ ಧರಿಸಿ ಧ್ಯಾನಮಗ್ನಳಾಗಿ ಆ ಹುಡಗನಿಗೆ ಉಪಚರಿಸಿದಳು.

ದಾನಮ್ಮ ತಾಯಿ, ನಮ್ಮ ಮಗ ಬದುಕುವುದಿಲ್ಲವೆಂದು ಅಳುತ್ತಾ ನಿಮ್ಮಲ್ಲಿಗೆ

ಕರೆತಂದಿದ್ದೆವು. ನಿಮ್ಮ ಕರುಣೆಯಿಂದ ಮಗ ಬದುಕಿದ. ನಿಮ್ಮ ಮಹಿಮೆ ಎಷ್ಟು ಕೊಂಡಾಡಿದರೂ ಕಡಿಮೆ, ಮಗುವನ್ನು ಬದುಕಿಸಿದ ತಾಯಿಗೆ ನಮ್ಮ ಭಕ್ತಿಪೂರ್ವಕ ಕೃತಜ್ಞತೆ ಎಂದು ವಂದಿಸಿದರು.

ದಿನಗಳೆದಂತೆ, ಸಂಸಾರದ ನೂರೊಂದು ತಾಪತ್ರಯಗಳಲ್ಲಿ ಬೆಂದವರು, ರೋಗದಿಂದ ಬಳಲುವವರು ದೂರ ದೂರ ಊರಿನಿಂದ ಬರುತ್ತಿದ್ದರು. ದಾನಮ್ಮ ಸೂರ್ಯೋದಯಕ್ಕೆ ಮೊದಲು ಶಿವಯೋಗ ಧ್ಯಾನವನೆಲ್ಲ ಮುಗಿಸಿಕೊಂಡು ಬೆಳಗಾಗುತ್ತಿದ್ದಂತೆ ಬಂದವರನ್ನೆಲ್ಲರನ್ನು ಉಪಚರಿಸುತ್ತಿದ್ದಳು. ಆಕೆಗೆ ಕಲ್ಯಾಣದಲ್ಲಿ ದಿನಗಳು ಕಳೆವುದು ಗೊತ್ತಾಗಲಿಲ್ಲ. ಸದಾ ಕಾಯಕದಲ್ಲಿ ತಲ್ಲೀನಳಾಗಿರುತ್ತಿದ್ದಳು.

ಮಹಾದೇವಿಯ ಮನೆಯಲ್ಲಿ ಇರುವ ದಾನಮ್ಮ ಶರಣೆಯ ಆಶೀರ್ವಾದದಿಂದ ರೋಗಗಳು ವಾಸಿಯಾಗುತ್ತವೆ. ದಾನಮ್ಮ ನೀಡುವ ಧೈರ್ಯ, ಶಕ್ತಿಸಾಮರ್ಥ್ಯದಿಂದ ಅಂಗವಿಕಲರು ಚೇತರಿಸಿಕೊಳ್ಳುತ್ತಾರೆ. ಆ ತಾಯಿಯ ದಾಸೋಹದಲ್ಲಿ ಪ್ರಸಾದ ಸೇವಿಸಿದರೆ ಇಷ್ಟಾರ್ಥ ಸಿದ್ಧಿಯಾಗುತ್ತದೆ. ಆ ತಾಯಿಯ ದರ್ಶನದಿಂದ ಪಾಪನಾಶವಾಗುತ್ತದೆ. ಎಂಬ ಮುಂತಾದ ಸುದ್ದಿಗಳು ಮಿಂಚಿನ ವೇಗದಲ್ಲಿ ಕಲ್ಯಾಣ ತುಂಬಾ ಹರಡಿ, ಸುತ್ತಲಿನ ಹಳ್ಳಿಗರಿಗೂ ಗೊತ್ತಾಯಿತು.

ಒಂದು ದಿನ ಗೌರಮ್ಮ ಎಂಬ ಬಾಲೆಯು ಹುಚ್ಚಳಂತೆ ಪಟ್ಟಣದ ಬೀದಿಯೊಳಗೆ ಅಲೆಯುತ್ತಿರುವುದನ್ನು ಕಂಡು, ದಾನಮ್ಮ ಅವಳನ್ನು ಮನೆಗೆ ಕರೆದುಕೊಂಡುಹೋಗಿ ಅವಳ ಈ ರೀತಿಯ ವರ್ತನೆಗೆ ಕಾರಣವೇನೆಂದು ವಿಚಾರಿಸಿದಳು. ಮೊದಲಿಗೆ ಭಯಗೊಂಡ ಗೌರಮ್ಮ ಸ್ವಲ್ಪ ಚೇತರಿಸಿಕೊಂಡು, 'ಅಮ್ಮ ನನ್ನ ಗಂಡನು ನನಗೆ ಹೇಳದೆ ಹೋಗಿ ಮೂರು ವರ್ಷಗಳಾದರೂ ಇನ್ನೂ ಹಿಂದಿರುಗಿ ಬರಲಿಲ್ಲ.' ಅದಕ್ಕಾಗಿ ಸಂಕಟದಿಂದ ನಾನು ಹೀಗೆ ಹುಚ್ಚಿಯಂತೆ ತಿರುಗುತ್ತಿದ್ದೇನೆಂದು ಹೇಳಿದಳು. ಆಗ ದಾನಮ್ಮ ಲಿಂಗಧ್ಯಾನದಲ್ಲಿ ಕುಳಿತು ಅಂತರ್ಮುಖಿಯಾಗಿ ನೋಡಿ, ಗೌರಮ್ಮಳಿಗೆ ನಿನ್ನ ಚಿಂತೆ ಶೀಘ್ರವೆ ದೂರಾಗುವದು, ಕಳವಳಿಸಬೇಡೆಂದು ಸಮಾಧಾನ ಮಾಡಿದಳು. ನಂತರ ಕೆಲವೆ ದಿನಗಳಲ್ಲಿ ದಾನಮ್ಮನನ್ನು ಕೇಳುತ್ತಾ ಆ ಗೌರಮ್ಮನ ಪತಿ ಬಂದನು. ದಾನಮ್ಮ ಗೌರಮ್ಮನ ಪತಿಗೆ ನಿನ್ನ ಪತ್ನಿಯನ್ನು ಚೆನ್ನಾಗಿ ನೋಡಿಕೊಳ್ಳಬೇಕು ಎಂದು ಬುದ್ಧಿ ಹೇಳಿ ಕಳುಹಿಸಿದಳು. ಗೌರಮ್ಮ ದಾನಮ್ಮನಿಗೆ ಶರಣೆಂದು, ಗಂಡನ ಜೊತೆಯಲ್ಲಿ ಆನಂದದಿಂದ ಸ್ವಗ್ರಾಮಕ್ಕೆ ತೆರಳಿದಳು.

ಹೀಗೆ ಇಷ್ಟಲಿಂಗ ಯೋಗದಿಂದ ಸಿದ್ಧಿ ಪಡೆದು, ಸಮಾಜ ಸೇವೆಯಲ್ಲಿ ನಿರತಳಾಗಿದ್ದ

ದಾನಮ್ಮ ವಾಸವಾಗಿದ್ದ ಮಹಾದೇವಿಯಮ್ಮನ ಮನೆಯನ್ನೇ ಮಹಾಮನೆಯನ್ನಾಗಿಸಿದಳು. ಲಿಂಗಮ್ಮನು 'ದಾನಮ್ಮ' ಎಂಬ ಅಭಿದಾನ ಪಡೆಯುವ ರೀತಿಯನ್ನು ರಾಮುಕವಿಗಳು ತಮ್ಮ ಕಾವ್ಯದಲ್ಲಿ ಹೀಗೆ ಬಣಿಸಿದ್ದಾರೆ.

ಇಂಥ ಕಾರ್ಯವ ಮಾಡಿ ಅನುದಿನ
ಶಾಂತಿ ಸಿರಿಸುಖ ಕೊಟ್ಟು ಭುವನದ–
ನಂತ ಭಕ್ತರ ಕಷ್ಟಕೋಟಲೆ ಕಳೆದು ಕರುಣದಲೀ
ಇಂತು ದಾನವ ಮಾಡಿ ಅನುದಿನ
ಭ್ರಾಂತಿಭವರುದ್ಧಾರ ಮಾಡುತ–
ಲಂತು ಕೀರ್ತಿಯ ಪಡೆದು ವರದಾನಮ್ಮ ನೀನೆನಿಸೋ

ಗುಡ್ಡಾಪುರ ವರದಾನಿ ದಾನಮ್ಮ ಕಲ್ಯಾಣದಲ್ಲಿದ್ದು ದಾಸೋಹ ಹಾಗೂ ಸಾಮಾಜಿಕ ಸೇವೆಯಲ್ಲಿ ನಿರತಳಾಗಿದ್ದು ಪಡೆದ ಗೌರವವನ್ನು ರಾಮಕವಿ ಹೀಗೆ ಸ್ಮರಿಸಿದ್ದಾರೆ.

ಬಸವಣ್ಣನವರ ದರ್ಶನದಿಂದ ಲಿಂಗಮ್ಮ ದಾನಮ್ಮನಾದಳು. ದೃಷ್ಟಿಯೋಗದಲ್ಲಿ ನಿಪುಣಳಾಗಿದ್ದರಿಂದ ದಾನಮ್ಮ ದೀನ ದುರ್ಬಲರಿಗೆ ದುಃಖಿತರಿಗೆ ವರದಾನಿಯಮ್ಮ ಆಗಿದ್ದಳು. ಚನ್ನಬಸವಣ್ಣನವರಿಂದ ದೀಕ್ಷೆ ಪಡೆದ ದಾನಮ್ಮನ ಸಾಧನೆ ಭರದಲ್ಲಿ ಸಾಗಿತು. ತ್ರಿಕಾಲ ಜ್ಞಾನಿಯಾದಳು. ಚನ್ನಬಸವಣ್ಣನವರಿಂದ ಲಿಂಗಧಾರಣಾ ಕ್ರಮದ ವಚನ ಕಟ್ಟುಗಳು, ಅಕ್ಕಮಹಾದೇವಿಯ ವಚನಗಳು, ಯೋಗಾಂಗ ತ್ರಿವಿಧಿಯ ಕಟ್ಟುಗಳು, ಅನೇಕ ಶರಣರ ವಚನ ಕಟ್ಟುಗಳ ಹಸ್ತಪ್ರತಿಗಳನ್ನು ಮಾಡಿಸಿಕೊಂಡಳು. ಜನ ಕಲ್ಯಾಣಕ್ಕಾಗಿ, ಶರಣಧರ್ಮದ ತತ್ತ್ವಗಳ ಪ್ರಚಾರಕ್ಕಾಗಿ ತನ್ನ ಜೀವನ ಮುಡಿಪಾಗಿಡುವ ನಿರ್ಧಾರ ಮಾಡಿದಳು.

ದಾನಮ್ಮ ಉಮರಾಣಿಗೆ ಹೋಗುವಳು ಎಂಬ ಸುದ್ದಿ ಆಕೆಯ ಭಕ್ತ ವರ್ಗಕ್ಕೆ ತಳಮಳವನ್ನುಂಟು ಮಾಡಿತು. ಆಕೆಯ ಆಶೀರ್ವಾದದಿಂದ ರೋಗಮುಕ್ತರಾದ ಕೆಲವು ಜನ ತರುಣರು, ಶಿವಾನುಭವದ ಅರಿವನ್ನು ದಾನಮ್ಮನಿಂದ ಪಡೆದ ಹತ್ತಾರು ಜನರು ಆಕೆಯ ಶಿಷ್ಯರಾಗಿದ್ದರು. "ತಾಯಿ, ನಿನ್ನಿಂದ ಪುನರ್ಜನ್ಮ ಪಡೆದ ನಾವುಗಳು ನಿಮ್ಮೊಂದಿಗೆ ಸೇವೆ ಸಲ್ಲಿಸಲು ನಿಮ್ಮ ಜೊತೆಗೆ ಹೊರಡಲು ಸಕಲ ಸಿದ್ಧತೆ ಮಾಡಿಕೊಂಡಿದ್ದೇವೆ ಎಂದರು. "ಅವ್ವಾ ನಮ್ಮ ವಂಶದ ಕುಡಿಯನ್ನು ಉಳಿಸಿದ ನಿನ್ನ ಉಪಚಾರ ದೊಡ್ಡದು ತಾಯಿ. ನೀನು ಶರಣಧರ್ಮ ಪ್ರಚಾರಕ್ಕೆ ನಮ್ಮೆಲ್ಲರ ನೆನಪಿಗಾಗಿ ಈ ಚಕ್ಕಡಿಗಾಡಿ ಎತ್ತುಗಳನ್ನು ತೆಗೆದುಕೊಂಡು ಹೋಗಬೇಕವ್ವ, ಎಂದು ವಿನಂತಿಸಿಕೊಂಡರು.

ಕಲ್ಯಾಣದಿಂದ ಉಮರಾಣಿಗೆ ನಾಳೆ ಸೂರ್ಯೋದಯಕ್ಕೆ ಹೊರಡಬೇಕು. ಅದಕ್ಕಾಗಿ ಅಪ್ಪ ಬಸವಣ್ಣನವರನ್ನು ತಾಯಿ ನೀಲಾಂಬಿಕೆ, ಗಂಗಾಂಬಿಕೆ, ಅಕ್ಕನಾಗಮ್ಮ, ಚನ್ನಬಸವಾದಿ ಶರಣರೆಲ್ಲರನ್ನು ಕಂಡು ಬರಿದಾಗಿದ್ದ ನನ್ನ ಹೃದಯ ಪಾತ್ರೆಗೆ ನೀವೆಲ್ಲ ಅನುಭವಾಮೃತವನ್ನು ಸುರಿದಿದ್ದೀರಿ, ಭಕ್ತಿ ಭಂಡಾರಿಗಳಾದ ಬಸವಾದಿ ಶರಣರೆಲ್ಲರಿಗೆ ಭಕ್ತಿ ಭಿಕ್ಷೆಯ ಬೇಡುತ್ತಿರುವೆ, ಸದಾ ಬಸವಭಕ್ತಳಾಗಿರುವಂತೆ ಅನುಗ್ರಹಿಸಿರಿ ತಂದೆ ತಾಯಿಗಳೆ" ಎಂದು ದಾನಮ್ಮ ಹೃದಯತುಂಬಿ ಶರಣು ಶರಣಾರ್ಥಿ ಸಲ್ಲಿಸಿದಳು.

"ಹೋಗಿ ಬಾ ದಾನಮ್ಮ, ನೀನು ಅಲ್ಪ ಕಾಲದಲ್ಲಿ ಅನೇಕ ಜನರ ರೋಗ ನಿವಾರಣೆ ಮಾಡಿರುವಿ. ನಿನ್ನ ಬಳಿ ಬಂದವರಿಗೆ ಶರಣ ತತ್ತ್ವದಂತೆ ನಡೆಯಲು ಕಲಿಸಿರುವಿ, ನಿನ್ನ ಆತ್ಮ ಶಕ್ತಿ ದೊಡ್ಡದು. ನೊಂದವರ ಕಣ್ಣೀರನೊರೆಸುವ ನಿನ್ನ ಕಾಯಕ ನಿರಂತರವಾಗಿ ಸಾಗಲಿ. ವೀರ ಗಣಾಚಾರಣಿಯಾಗಿ, ವರದಾನಿಯಾಗಿ ಬಾಳವ್ವ" ಎಂದು ಹರಸಿದರು. ಬಸವಣ್ಣನವರ ಕಾರುಣ್ಯದಿಂದ ನಿನ್ನ ಪ್ರಯಾಣ ಸುಖಕರವಾಗಲಿ, ಜೀವನ ಆನಂದಮಯವಾಗಲಿ. ಇಚ್ಛಾಶಕ್ತಿಯ ಬಲದಿಂದ ನಿನ್ನ ಕಾರ್ಯಗಳು ಸುಗಮವಾಗಿ ಸಾಗಲಿ ಎಂದು ಬೀಳ್ಕೊಟ್ಟರು.

ವರದಾನಿಯಾಗಿ ಉಮರಾಣಿಗೆ

ಕಲ್ಯಾಣದಿಂದ ಹೊರಟ ಚಕ್ಕಡಿಗಾಡಿ ಮುಂದೆ ಮುಂದೆ ಸಾಗುತ್ತಲಿತ್ತು, ದಾನಮ್ಮನ ಮನಸ್ಸು ಇನ್ನೂ ಕಲ್ಯಾಣದ ಅನುಭವ ಮಂಟಪ, ಮಹಾಮನೆಯಲ್ಲಿ ಸುಳಿಯುತ್ತಲಿತ್ತು. ಅಲ್ಲಿಯ ಶಿವಾನುಭವ ಕಿವಿಯಲ್ಲಿ ಝೇಂಕರಿಸುತ್ತಲಿತ್ತು. ಕಣ್ಣಿನಲ್ಲಿ ಕಟ್ಟಿದಂತೆ, ಹೃದಯದ ತುಂಬ ಬಸವಣ್ಣನವರು, ಚನ್ನಬಸವಣ್ಣ, ಅಕ್ಕನಾಗಮ್ಮತಾಯಿ, ಗಂಗಾಂಬಿಕಾ, ನೀಲಾಂಬಿಕಾ, ಶರಣರೆಲ್ಲರು ತುಂಬಿದ್ದರು. ಅವರು ತೋರಿದ ಪ್ರೀತಿ, ಅಂತಃಕರಣ ಮನವನ್ನು ತುಂಬಿತ್ತು. ಕಳುಹಿಸಲು ಬಂದ ಭಕ್ತಾದಿಗಳ ಭಕ್ತಿ, ಶ್ರದ್ಧೆ ದಾನಮ್ಮಳಿಗೆ ಮೂಕವಿಸ್ಮಿತಳನ್ನಾಗಿಸಿತು.

"ದಾನಮ್ಮತಾಯಿ, ನೀವು ಹೀಗೆ ಮೌನವಾಗಿ ಕುಳಿತರೆ ನಮಗೆ ಬೇಸರವಾಗುವುದು, ದೂರದ ಪಯಣ ಏನಾದರೂ ಹೇಳಿರಿ" ಎಂದು ಕೇಳಿದಾಗ ದಾನಮ್ಮ ಬಾಹ್ಯಪ್ರಪಂಚಕ್ಕೆ ಬಂದಳು. 'ಅವ್ವಾ, ನೀವು ವಚನಗೀತ ಹೇಳಿದರೆ, ನಾವೆಲ್ಲ ಕೂಡಿ ಒಕ್ಕೊರಲಿನಿಂದ ಹಾಡುತ್ತೇವೆ. ಆಗಲಿ ನಿಮ್ಮ ಇಚ್ಛೆಯನ್ನು ಪೂರೈಸುವುದು ನನ್ನ ಕರ್ತವ್ಯ, ಶರಣರ ನೆನಹೇ ನಮಗೆ ಸರ್ವಸ್ವ, ವೀರಗಣಾಚಾರಿ ಶರಣ ಮಡಿವಾಳ ಮಾಚಿತಂದೆಗಳ ವಚನದ ನೆನಪಿನಲ್ಲೆ ಮೈಮರೆತಿದ್ದೆ ಅದನ್ನೇ ಹೇಳುತ್ತೇನೆ.

ಎತ್ತೆತ್ತ ನೋಡಿದಡತ್ತತ್ತ ಬಸವನೆಂಬ ಬಳ್ಳಿ.
ಎತ್ತಿ ನೋಡಿದರೆ ಲಿಂಗವೆಂಬ ಗೊಂಚಲು.
ಒತ್ತಿ ಹಿಂಡಿದರೆ ಭಕ್ತಿಯೆಂಬ ರಸವಯ್ಯಾ.
ಆಯತವು ಬಸವಣ್ಣನಿಂದ, ಸ್ವಾಯತವು ಬಸವಣ್ಣನಿಂದ.
ಸನ್ನಹಿತವು ಬಸವಣ್ಣನಿಂದ,
ಗುರು ಬಸವಣ್ಣನಿಂದ, ಲಿಂಗ ಬಸವಣ್ಣನಿಂದ.
ಜಂಗಮ ಬಸವಣ್ಣನಿಂದ.
ಪಾದೋದಕ ಬಸವಣ್ಣನಿಂದ, ಪ್ರಸಾದ ಬಸವಣ್ಣನಿಂದ.
ಅತ್ತ ಬಲ್ಲರೆ ನೀವು ಕೇಳಿರೆ, ಇತ್ತ ಬಲ್ಲರೆ ನೀವು ಕೇಳಿರೆ.
ಬಸವಾ ಬಸವಾ ಬಸವಾ ಎಂದು ಮಜ್ಜನಕ್ಕೆರೆಯದವನ ಭಕ್ತಿ,
ಶೂನ್ಯ ಕಾಣಾ ಕಲಿದೇವರದೇವಾ.

–ಮಡಿವಾಳ ಮಾಚಿದೇವರು

ಅವ್ವ, ಮಡಿವಾಳ ಮಾಚಿತಂದೆಯವರ ಈ ವಚನದಿಂದ ಬಸವ ನಾಮಸ್ಮರಣೆಯಿಂದ ಗುರು, ಲಿಂಗ. ಜಂಗಮ, ಪಾದೋದಕ, ಪ್ರಸಾದಗಳೆಲ್ಲ ಬಸವಣ್ಣನವರಿಂದ ಎಂದು ಅವರ ಹಿರಿಮೆಯನ್ನು ಎಂಥ ಸೊಗಸಾಗಿ ವಿವರಿಸಿದ್ದಾರೆ. ಜಗಜ್ಯೋತಿ ಬಸವಣ್ಣನವರು ಬಂದು ಕಲ್ಯಾಣದಲ್ಲಿ ಹೊಸ ಸಮಾಜವನ್ನು ರೂಪಿಸದಿದ್ದರೆ ಗುರು, ಲಿಂಗ, ಜಂಗಮಕ್ಕೆ ಇಷ್ಟೊಂದು ಮಹತ್ವ ಬರುತ್ತಿರಲಿಲ್ಲ. ಯಾವ ಪೂಜೆ ಮಾಡಬೇಕಾದರೂ ಪೂಜಾರಿಗಳ ಮೊರೆಹೊಕ್ಕು ಸ್ಥಾವರ ಲಿಂಗವನ್ನೇ ಪೂಜಿಸಬೇಕಾಗುತ್ತಿತ್ತು. ಈಗ ಆ ಲಿಂಗವೆ ನಮ್ಮ ಅಂಗೈಯಲ್ಲಿ ಇಷ್ಟಲಿಂಗವಾಗಿ ಪೂಜಿಸುವಂತೆ ಬಸವಣ್ಣನವರು ಮಾಡಿದರು. ಅದಕ್ಕಾಗಿ ನಾವು ಬಸವಣ್ಣನವರನ್ನು ಎಷ್ಟು ಸ್ಮರಿಸುತ್ತಾ ಕೊಂಡಾಡಿದರೂ ಸಾಲದು ಎಂದರು. ಅದಕ್ಕೆ ಬಸವ ಎಂಬ ಮೂರಕ್ಷರ ಮಂತ್ರ ಶಕ್ತಿಯನ್ನು ಪಡೆದಿದೆ ಎಂದಳು ದಾನಮ್ಮ.

ತಾಯಿ, ದೂರದಲ್ಲಿ ಒಂದು ಹಳ್ಳಿ ಕಾಣುತ್ತಿದೆ. ನಿಮ್ಮ ಪೂಜೆಯ ವೇಳೆಯಾಗಿದೆ ಎಂದರು. ಊರ ಹೊರಭಾಗದಲ್ಲಿ ಅದು ಈಶ್ವರ ದೇವಾಲಯ ಪ್ರಶಸ್ತವಾಗಿತ್ತು. ಸನಿಹದಲ್ಲಿದ್ದ ಕೆರೆಯ ದಂಡೆಯ ಮೇಲೆ ಸ್ನಾನ ಪೂಜೆ ಮುಗಿಸಿಕೊಂಡರು. ಪ್ರಸಾದದ ಬುತ್ತಿಯಲ್ಲಿ ಮಹಾಮನೆಯಿಂದ ದಾಸೋಹದವ್ವ ನೀಲಾಂಬಿಕಾ ತಾಯಿ ದಾನಮ್ಮನಿಗೆ ಪ್ರಿಯವೆಂದು ಹೋಳಿಗೆಯ ಬುತ್ತಿ ಕೊಟ್ಟಿದ್ದರು. ಅಲ್ಲಿಯೆ ಎಲ್ಲರೂ ಪ್ರಸಾದ ಸ್ವೀಕರಿಸಿದರು.

ಪ್ರವಾಸದಲ್ಲಿನ ದಾರಿಯುದ್ದಕೂ ವಚನಗಳನ್ನು, ಭಕ್ತಿಗೀತೆಗಳನ್ನು ಹಾಡುತ್ತ ಭಜನೆ ಮಾಡುತ್ತ, ಶರಣರ ಜೀವನದ ವೈಶಿಷ್ಟ್ಯವನ್ನು ಚರ್ಚಿಸುತ್ತಾ ಬರುತ್ತಿದ್ದರು. ಉಮರಾಣಿ

ಸನಿಹ ಬಂದಂತೆ ದಾನಮ್ಮನ ಮನಸ್ಸು ಬಾಲ್ಯ ಜೀವನದ ನೆನಪಿನತ್ತ ಸಾಗಿತ್ತು. ದಾನಮ್ಮ ಬರುತ್ತಿರುವ ಸಮಾಚಾರ ಕೇಳಿದ ಸಿರಸಮ್ಮ-ಅನಂತರಾಯರು ಉತ್ಸಾಹ ಭರಿತರಾಗಿ, ಮಗಳನ್ನು ಕಾಣುವ ಆತುರ ತೀವ್ರವಾಯಿತು.

ದಾನಮ್ಮ ವರದಾನಿಯಾಗಿ ಉಮರಾಣಿಗೆ ಆಗಮಿಸಿದಾಗ ಅನಂತರಾಯ ಸಿರಸಮ್ಮ ಅವರಿಗೆ ಸ್ವರ್ಗವೇ ಭೂಮಿಗೆ ಇಳಿದಿದೆ ಎಂದು ಸಂತೋಷಪಟ್ಟರು. ಮಗಳು ಶರಣರ ಗಣಾಚಾರ ತತ್ತ್ವ ಮತ್ತು ಶಿವತತ್ತ್ವದ ಸಾಕಾರವನ್ನು ಮೈಗೂಡಿಸಿಕೊಂಡು ಬಂದದ್ದನ್ನು ನೋಡಿದ ಅವರಿಗೆ ಕಲ್ಯಾಣದಲ್ಲಿರುವ ಅನುಭವ ಮಂಟಪವನ್ನೇ ಕಂಡಂತಾಯಿತು. ಪ್ರೀತಿಯ ಮಗಳು ಮರಳಿ ಮನೆಗೆ ಬಂದಳೆಂದು ಅತ್ಯಂತ ಆದರದಿಂದ ಉಪಚರಿಸಿದರು. ಅಂದಿನ ರಾತ್ರಿ ಅವರು ಸಂತೃಪ್ತಿಯಿಂದ ನಿದ್ರೆಯಲ್ಲಿ ಜಾರಿದರು.

ದಾನಮ್ಮ ತನ್ನ ಜೊತೆಗೆ ಬಂದವರೊಡನೆ ವೀರಮಲ್ಲಯ್ಯನ ದೇವಸ್ಥಾನಕ್ಕೆ ಹೋದಳು. ಅಲ್ಲಿ ವಿಶಾಲವಾದ ಆವರಣದಲ್ಲಿ ಊರಿನ ಜನರೆಲ್ಲರೂ ದಾನಮ್ಮನ ಕೀರ್ತಿವಾರ್ತೆ ಕೇಳಿದ್ದರು. ದಾನಮ್ಮ ಉಮರಾಣಿಗೆ ಬಂದ ಸುದ್ದಿ ಕೇಳಿ ಅವಳ ದರ್ಶನಕ್ಕಾಗಿ ಕಾಯುತ್ತಿದ್ದರು. ದಾನಮ್ಮ, ಎಲ್ಲರಿಗೂ ಭಕ್ತಿಯ ಶರಣು ಶರಣಾರ್ಥಿ ಎಂದಳು. ಊರಿನ ಹಿರಿಯ ಅಜ್ಜರೊಬ್ಬರು "ತಾಯಿ, ನೀನು ಶರಣು ಶರಣಾರ್ಥಿ ಹೇಳಬೇಡಮ್ಮ, ಕಲ್ಯಾಣದ ಬಸವಣ್ಣನವರಿಂದ ಭಲೆ ಅನ್ನಿಸಿಕೊಂಡು ಬಂದ ಶರಣೆಯವ್ವ. ನಿನ್ನ ಆಶೀರ್ವಾದ ಪಡೆಯಲು ನಿನ್ನ ನುಡಿಮುತ್ತುಗಳನ್ನು ಕೇಳಲು ನಾವೆಲ್ಲ ಬಂದಿದ್ದೇವೆ. ನೀನು ನಮ್ಮೂರ ಭಾಗ್ಯದೇವತೆ, ನೀನು ಈ ಊರ ಜನರನ್ನು ಉದ್ಧಾರ ಮಾಡಲು ಬಂದಿರುವ ದೇವತೆಯವ್ವ. ನಮಗೆ ಶಿವಪಥವ ತೋರಿಸುವ ತಾಯೆ, ನೀನು ಹೇಳಿದ ಕೆಲಸ ಮಾಡಲು ನಾವೆಲ್ಲರೂ ಸಿದ್ಧರಿದ್ದೇವೆ. ನಿನ್ನ ಕಾರ್ಯಕ್ಕೆ ತನು ಮನ ಧನ ಅರ್ಪಿಸುತ್ತೇವೆ." ಎಂದರು.

ಉಮರಾಣಿ ಊರಿನ ಜನತೆಗೆ ದಾನಮ್ಮ ಶರಣೆಯಾಗಿದ್ದಾಳೆ ಎಂಬ ಹೆಮ್ಮೆಯ ಗರಿಯೇರಿತು. "ದಾನಮ್ಮ, ಹುಟ್ಟಿದ ಊರಿಗೆ ನಿನ್ನ ಹೆತ್ತವರಿಗೆ ಕೀರ್ತಿಯನ್ನು ತಂದ ತಾಯಿಗೆ ನಮೋ ನಮೋ" ಎಂದ ಊರ ಜನ, ದಾನಮ್ಮನ ಮುಖದಲ್ಲಿ ಕಂಗೊಳಿಸುವ ಆಧ್ಯಾತ್ಮ ಶಕ್ತಿಗೆ ಜನರೆಲ್ಲ ಶಿರಬಾಗಿ ವಂದಿಸಿದರು. ಅವ್ವ, ಕಲ್ಯಾಣದಿಂದ ಬರುವ ಚರಜಂಗಮರೆಲ್ಲ ಇಲ್ಲಿ ವೀರಮಲ್ಲಯ್ಯನ ದೇವಸ್ಥಾನದ ಆವರಣದಲ್ಲಿರುವ ಕಟ್ಟೆಯ ಮೇಲೆ ವೀರಯ್ಯನವರ ಜೊತೆ ಕುಳಿತು, ಅಲ್ಲಿಯ ಸಮಾಚಾರ ಹಂಚಿಕೊಳ್ಳುತ್ತಿದ್ದರು. ನಿನ್ನ ಸಾಧನೆಯ ಸುದ್ದಿಕೇಳಿ ನಮ್ಮ ಊರಿನ ಜನತೆ ಸಂತೋಷದಲ್ಲಿ ತೇಲಾಡಿದ್ದೆವು. ನೀನು ಕಲ್ಯಾಣದ ಬಗ್ಗೆ ಅಣ್ಣ ಬಸವಣ್ಣನವರ ಬಗ್ಗೆ ಏನಾದರೂ ಹೇಳವ್ವ, ನಾವು

ಕೇಳಲು ಕಾತುರರಾಗಿದ್ದೇವೆ.

ಬಸವಣ್ಣನವರು ಕಲ್ಯಾಣದಲ್ಲಿ ಮಾಡಿದ ಕೆಲಸ ಒಂದೇ ಎರಡೇ ಹೇಳಲು ಈ ಜೀವನ ಸಾಲದು. ವಿನಯ ಕರುಣೆಗಳ ಮಹಾಸಾಗರವಾಗಿದ್ದ ಬಸವಣ್ಣನವರ ಘನವ್ಯಕ್ತಿತ್ವವನ್ನು ಸಮಕಾಲೀನ ಶರಣರು ಹೃದಯತುಂಬಿ ಕೊಂಡಾಡಿದ್ದಾರೆ. ಬಸವ ಶಬ್ದವು ಧ್ವನಿಯಾಗಿ, ಮಂತ್ರವಾಗಿ ಅವರ ಅಂತರಾಳದಲ್ಲಿ ಮಿಡಿಯುತ್ತಿತ್ತು.

ಅನುಭವ ಮಂಟಪದ ಅಧ್ಯಕ್ಷರಾದ ಅಲ್ಲಮಪ್ರಭುದೇವರಾದಿಯಾಗಿ ಎಲ್ಲ ಶರಣರು ಬಸವಣ್ಣನವರ ಭಕ್ತಿಗೆ ಅವರ ಆತ್ಮಶಕ್ತಿಗೆ ಆಕರ್ಷಿತರಾಗಿ ಅವರನ್ನು ಕೊಂಡಾಡಿದ್ದಾರೆ. ಶೂನ್ಯ ಪೀಠಾಧೀಶ ಅಲ್ಲಮ ಪ್ರಭುಗಳು ಶಿವಯೋಗಿ ಸಿದ್ಧರಾಮೇಶ್ವರರಿಗೆ ಹೇಳುತ್ತಾರೆ.

ಕಲ್ಯಾಣವೆಂಬ ಪ್ರಣತೆಯಲ್ಲಿ ಭಕ್ತಿರಸವೆಂಬ ತೈಲವನೆರೆದು,
ಆಚಾರವೆಂಬ ಬತ್ತಿಗೆ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು,
ತೊಳಗಿ ಬೆಳಗುತ್ತಿದ್ದಿತಯ್ಯಾ ಶಿವನ ಪ್ರಕಾಶ!
ಬೆಳಗಿನೊಳಗೆ ಒಪುತ್ತಿದ್ದರಯ್ಯಾ ಅಸಂಖ್ಯಾತ ಭಕ್ತಗಣಂಗಳು.
ಶಿವಭಕ್ತರಿದ್ದ ಕ್ಷೇತ್ರವೇ ಅವಿಮುಕ್ತಕ್ಷೇತ್ರವೆಂಬುದು ಹುಸಿಯೇ ?
ಶಿವಭಕ್ತರಿದ್ದ ದೇಶ ಪಾವನವೆಂಬುದು ಹುಸಿಯೇ?
ಗುಹೇಶ್ವರಲಿಂಗದಲ್ಲಿ ಎನ್ನ ಪರಮಾರಾಧ್ಯ ಸಂಗನಬಸವಣ್ಣನ
ಕಂಡು ಬದುಕಿದೆನು ಕಾಣಾ ಸಿದ್ಧರಾಮಯ್ಯಾ.

– ಅಲ್ಲಮಪ್ರಭುದೇವರು

ವ್ಯೋಮಮೂರುತಿ, ಶೂನ್ಯಪೀಠಾಧೀಶ್ವರ ಅಲ್ಲಮಪ್ರಭುಗಳು ಬಸವಣ್ಣನವರನ್ನು ಗುಹೇಶ್ವರ ಲಿಂಗದಲ್ಲಿ ಕಂಡು ಬದುಕುವ ಪರಿಯನ್ನು ಅರಿತಾಗ ಬಸವಣ್ಣನವರ ವ್ಯಕ್ತಿತ್ವದ ಕಲ್ಪನೆ ಮೂಡುವುದು. ಇಲ್ಲಿ ಅಲ್ಲಮಪ್ರಭುಗಳು ಶಿಷ್ಟ ಸಮಾಜದ ಕಲ್ಪನೆಯನ್ನು ಕೊಡುತ್ತಾರೆ. ಅದೆ ಪವಿತ್ರ ಕ್ಷೇತ್ರವೆನ್ನುತ್ತಾರೆ. ಅಂಥ ಸಮಾಜವನ್ನು ಒಳಗೊಂಡ ದೇಶದ ಕಲ್ಪನೆ ಮೂಡಿಸುತ್ತಾರೆ. ಬಸವಣ್ಣನೆಂಬ ಜ್ಯೋತಿಯಿಂದಾಗಿ ಇದೆಲ್ಲ ಸಾಧ್ಯ ಎಂಬುದನ್ನು ಸೂಚಿಸುತ್ತಾರೆ.

ಅನುಭವ ಮಂಟಪದಲ್ಲಿ ಮೇಲು ಕೀಳು ಜಾತಿಯ ಜಂಜಡವಿಲ್ಲ. ಹೆಣ್ಣು ಗಂಡು ಎಂಬ ಭೇದವಿಲ್ಲ. ಇಬ್ಬರ ಆತ್ಮ ಒಂದೇ, ಇಬ್ಬರೂ ಸಮಾನರು ಎಂದು ಭಾವಿಸುತ್ತಾರೆ. ಸಿರಿತನ ಬಡತನದ ಸೋಂಕಿಲ್ಲ, ಅಲ್ಲಿ ಎಲ್ಲರೂ ಒಂದೆ ಎಂದು ತಿಳಿದುದರಿಂದ ಸಮಾನತೆಯ ಸಮಾಜವಾದ ಅಲ್ಲಿ ರೂಢಿಯಲ್ಲಿದೆ. ಬಸವಣ್ಣನವರ ಜೀವನವೆಂದರೆ

ನಮ್ಮೆಲ್ಲರ ಬಾಳಿಗೆ ಬೆಳಕಾಗುವಂಥದ್ದು. ಬಸವಣ್ಣನವರಿಗೆ ಮಂತ್ರಿ ಪದವಿಯಿದೆ. ಭಕ್ತಿ ಮುಕ್ತಿಯರಂಥ ಪತ್ನಿಯರಿದ್ದಾರೆ. ತಾಯಿಗಿಂತ ಹೆಚ್ಚಿನ ಪ್ರೀತಿ ತೋರುವ ಅಕ್ಕ ನಾಗಲಾಂಬಿಕಾತಾಯಿ, ಮಗನಿಗಿಂತ ಹೆಚ್ಚಿನ ಮಮತೆಯ ಸೋದರಳಿಯ ಚನ್ನಬಸವಣ್ಣನವರಿದ್ದಾರೆ. ದೈವಿಸಾಕ್ಷಾತ್ಕಾರ ಪಡೆದ ಅವರ ಅಂತರಂಗ ಆನಂದಮಯವಾಗಿದೆ. ಆದರೆ ಅವರಿಗೆ ಸ್ವಂತ ಸುಖದ ಕಡೆಗೆ ಕಿಂಚಿತ್ತು ಗಮನವಿಲ್ಲ. ಜನತೆಯ ಸುಖವೆ ತಮ್ಮ ಸುಖ ಎಂದು ನಂಬಿದ್ದಾರೆ. ಕಳ್ಳನಲ್ಲಿಯೂ ಕೂಡಲಸಂಗಮನಿದ್ದಾನೆ ಎನ್ನುತ್ತಾರೆ.

ಸತ್ಯ ಸದಾಚಾರದಿಂದ ಬದುಕಬೇಕಾದರೆ ದೇಹಶ್ರಮದಿಂದ ತಾವು ಗಳಿಸಿದ ಹಣದಿಂದ ದಾಸೋಹ ನಡೆಸಬೇಕು, ಎಂಬುದನ್ನು ಮಹಾಮನೆಯ ದಾಸೋಹದಿಂದ ಎಲ್ಲರಿಗೂ ಮಾರ್ಗ ತೋರಿಸಿದ್ದಾರೆ. ಶರಣರು ಇಂದಿಂಗೆ ನಾಳಿಂಗೆ ಎನ್ನದೆ, ಬಂದ ತತ್ಕಾಲಕ್ಕೆ ಉಂಟು ಎಂದು ಹೇಳುತ್ತ, ವಸ್ತುಮೋಹದಿಂದ ದೂರ ಉಳಿಯುವ ಶಕ್ತಿ ಸಾಮರ್ಥ್ಯವನ್ನು ಹೊಂದಿದ್ದವರು. ವಸ್ತುಮೋಹ ಎಂಬುದು ಬಲಾಢ್ಯರ, ಧನಾಢ್ಯರ ಮತ್ತು ಸಾಮ್ರಾಜ್ಯಶಾಹಿಗಳ ಮನದಾಳದಲ್ಲಿ ಇರುತ್ತದೆ. ಸಂಪತ್ತು ಹೆಚ್ಚಿದಷ್ಟೂ ಸಾಮ್ರಾಜ್ಯ ವಿಸ್ತರಣೆಯಾದಷ್ಟೂ ಅವರ ದಾಹ ಹೆಚ್ಚಾಗುತ್ತಲೇ ಹೋಗುತ್ತದೆ. ಅವರು ಪರರನ್ನು ಶೋಷಿಸುವ ಮೂಲಕ ಸಂಪತ್ತಿನ ವಿಸ್ತರಣೆ ಮಾಡುತ್ತ ಹೋಗುತ್ತಾರೆ. ಆದರೆ ಶಿವಭಕ್ತರು ತಮ್ಮ ಸ್ವಕಾಯಕದ ಮೇಲೆ ಅವಲಂಬಿತರಾಗಿರುತ್ತಾರೆ. ತಮ್ಮ ಗಳಿಕೆಯಲ್ಲಿ ಬೇಕಾದಷ್ಟನ್ನು ಮಾತ್ರ ಪ್ರಸಾದವೆಂದು ಸ್ವೀಕರಿಸಿ ಉಳಿದುದೆಲ್ಲವನ್ನು ದಾಸೋಹ ರೂಪದಲ್ಲಿ ಶರಣಸಂಕುಲಕ್ಕೆ ಅರ್ಪಿಸುತ್ತಾರೆ. ಹೀಗೆ ಮಾಡುವುದರಿಂದ ಯಾರೊಬ್ಬರ ಬಳಿಯೂ ಸಂಪತ್ತಿನ ಸಂಗ್ರಹಣೆ ಇರುವುದಿಲ್ಲ. ಶರಣರ ಶಿವನಿಧಿಯಲ್ಲಿ ಸಂಗ್ರಹವಾದ ಸಂಪತ್ತು, ಏನಿದ್ದರೂ ಇಡೀ ಸಮಾಜದ ಬಳಕೆಗೆ ಬರುವಂಥ ಶಿವನಿಧಿಯಾಗಿರುತ್ತದೆ.

“ಉಮರಾಣಿಯಲ್ಲಿ ಎಲ್ಲರೂ ಕಾಯಕ ಮಾಡಬೇಕು. ನಿಮ್ಮ ಜೀವನ ಇತರರಿಗೆ ಆದರ್ಶವಾಗಬೇಕು. ನಿಮಗೆ ಯಾವ ಕೊರತೆಯೂ ಆಗದಂತೆ ನೋಡಿಕೊಳ್ಳಲು ಬಸವಣ್ಣನವರ ಕೃಪೆಯಿದೆ. ನಾವು ಇಲ್ಲಿಯೇ ಅನ್ನದಾಸೋಹ, ಜ್ಞಾನದಾಸೋಹ ಪ್ರಾರಂಭಿಸೋಣ. ಈ ಎಲ್ಲ ಕಾರ್ಯಕ್ಕೆ ಬಸವ ಮಂತ್ರವೇ ನಮ್ಮೆಲ್ಲರ ಶಕ್ತಿಯಾಗುತ್ತದೆ” ಎಂದಳು ದಾನಮ್ಮ.

ಸಿರಸಮ್ಮ ಅನಂತರಾಯರು, ಮಗಳ ಕೀರ್ತಿ ಸುತ್ತಲೂ ಹೆಚ್ಚಿದಂತೆ ಜನ ಆಕೆಯ ಬಳಿ ಬರುವುದನ್ನು ಅವರ ದುಃಖ ನಿವಾರಣೆಯಾಗಿ ಆನಂದದಿಂದ ದಾನಮ್ಮನನ್ನು ಹರಸುತ್ತ ಹೋಗುವುದನ್ನು ಕಂಡು ಅಭಿಮಾನಪಟ್ಟರು. ಆದರೆ ಮಗಳ ಮದುವೆಯ

ಚಿಂತೆ ಮನದಲ್ಲಿ ಕೊರೆಯಹತ್ತಿತು. ಈ ಮಗಳು ಲೋಕೋಪಕಾರ ಮಾಡುತ್ತ ಶರಣಮ್ಮನಾಗಿ ಕುಳಿತಳು. ಇನ್ನು ಇವಳಿಗೆ ಮದುವೆಯಾಗುವುದು ಸಾಧ್ಯವೇ? ದಾನಮ್ಮನಿಗೆ ತಕ್ಕ ವರ ದೊರೆಯಬಹುದೇ ಎಂದು ಚಿಂತಿಸಹತ್ತಿದರು. ಊರ ಹಿರಿಯರಿಗೆ ಹೇಳಿದರು. ಅವರೆಲ್ಲ ದಾನಮ್ಮನಿಗೆ ಯೋಗ್ಯನಾಗಬಲ್ಲ ವರನ ಶೋಧನೆಗೆ ತೊಡಗಿದರು. ಎಷ್ಟೋ ವರಗಳು ದಾನಮ್ಮನ ಕೀರ್ತಿಯನ್ನು ಕೇಳಿ ಮದುವೆಯಾಗಲು ಹಿಂಜರಿದರು. ಪ್ರತಿದಿವಸ ವರಗಳ ಬಗೆಗೆ ಬಂದ ಸಮಾಚಾರವನ್ನು ಕೇಳಿದ ಸಿರಸಮ್ಮ, ಶಿವಭಕ್ತ ಶಿವನಿಷ್ಠೆಯುಳ್ಳ ವರನು ನಮ್ಮ ಮಗಳಿಗೆ ದೊರೆಯಲಿ ಬಸವಾದಿ ಶರಣರ ಕೃಪೆಯಿರಲಿ ತಂದೆ ವೀರಮಲ್ಲಯ್ಯ ಎಂದು ಪ್ರಾರ್ಥನೆ ಮಾಡಿ ಮಲಗುತ್ತಿದ್ದಳು.

ಸಿರಸಮ್ಮಳಿಗೆ ತಮ್ಮ ಆರಾಧ್ಯದೈವ ವೀರಮಲ್ಲಯ್ಯ ಕನಸ್ಸಿನಲ್ಲಿ ಬಂದು, ಸಂಕ ಗ್ರಾಮದಲ್ಲಿ ವಾಸಿಸುತ್ತಿರುವ ಸಂಗಮನಾಥನೇ ನಿಮ್ಮ ವರದಾನಿಗೆ ಯೋಗ್ಯವಾದ ವರನೆಂದು ಹೇಳಿದಂತೆ ಭಾಸವಾಗಿ ಎಚ್ಚರವಾಗುತ್ತದೆ. ಸಿರಸಮ್ಮ ಅನಂತರಾಯರಿಗೆ ನಯವಾಗಿ ಸ್ವಪ್ನದಲ್ಲಿ ಕಂಡಿರುವ ವಿಷಯವನ್ನು ತಿಳಿಸುತ್ತಾಳೆ. ನಾವು ಜಾಗ್ರತಾವಸ್ಥೆಯಲ್ಲಿ ಲೌಕಿಕ ಪುರುಷರನ್ನು ಧಿಕ್ಕರಿಸುವ ಮಗಳಿಗೆ ಯೋಗ್ಯ ವರನನ್ನು ಹುಡಕಬೇಕೆಂದು ಚಿಂತನೆ ಮಾಡುತ್ತಿದ್ದೇವಲ್ಲವೆ, ಸಂಕ ಗ್ರಾಮದಲ್ಲಿರುವ ಶಿವಭಕ್ತ ಸೋಮನಾಥನೆ ನಿನ್ನ ಮಗಳಿಗೆ ಯೋಗ್ಯವರನು ಎಂದ ಹಾಗಾಯಿತು. ಆದರೆ ಮಗಳ ಸಮ್ಮತಿಯಿರದೆ ನಾವು ಯಾವುದೇ ನಿರ್ಣಯ ಮಾಡಬಾರದು. ಅವಳಿಗೆ ಈ ವಿಷಯವನ್ನು ತಿಳಿಸೋಣ. ಮಗಳ ಮನಸ್ಸಿಗೆ ಹಿಡಿಸುವಂತೆ ಬಸವಣ್ಣನವರ ಸಂಗಮನಾಥನೇ ಕರುಣಿಸಬೇಕೆಂದು ಬೇಡಿಕೊಳ್ಳುತ್ತಾರೆ.

ಉಮರಾಣಿಯಿಂದ ಉತ್ತರ ದಿಕ್ಕಿನ ಕಡೆಗೆ ಬರುವ ಸಂಕ ಗ್ರಾಮದಲ್ಲಿ ಸಂಗಮನಾಥನೆಂಬ ಸದ್ಭಕ್ತನಿದ್ದಾನೆ. ಅವನೆ ಯೋಗ್ಯ ವರವೆಂದು ಶಿವನಪ್ಪಣೆಯಾಗಿದೆ ದಾನಮ್ಮ, ಎಂದು ಹೇಳಿದರು. ದಾನಮ್ಮ ಶಿವನಪ್ಪಣೆ ಮತ್ತು ಹೆತ್ತವರಿಗೆ ಸಂತೋಷವಿದ್ದರೆ ಹಾಗೆ ಆಗಲವ್ವ ಎಂದಳು.

ವೀರಮಲ್ಲಯ್ಯನವರು ದಾನಮ್ಮ, 'ಸಂಕ' ಎಂಬ ಗ್ರಾಮದ ನಿವಾಸಿ ಸೋಮನಾಥ ಶರಣ ಜೀವನವನ್ನು ಬಾಳುತ್ತಿದ್ದ ಸಾತ್ವಿಕ ಪುರುಷ, ನೀತಿವಂತನಾದ ಶಿವಶರಣನವನು ಎಂದು ಸಂಕದ ಹಿರಿಯರೊಬ್ಬರು "ಸಂಗಮನಾಥ (ಸೋಮನಾಥ) ಬಡವ ಬಲ್ಲಿದರೆಲ್ಲರನ್ನು ತನ್ನವರೆಂದು, ಉಚ್ಚ, ನೀಚ ಜಾತಿಯವರೆನ್ನದೆ ಎಲ್ಲರಿಗಾಗಿ ದುಡಿಯುತ್ತಾನೆ. ನಮ್ಮೂರಿನ ಮಗನು ಸಂಗಮನಾಥ. ಊರ ಜನರೆಲ್ಲ ನಿಂತು ನಮ್ಮ ಸಂಕಗ್ರಾಮದಲ್ಲೆ ವೈಭವದಿಂದ ಮದುವೆ ಮಾಡುತ್ತೇವೆ. ಎಂದು ಅತ್ಯಂತ ಉತ್ಸಾಹದಿಂದ

ಹೇಳುತ್ತಿದ್ದರು.

ಗುರುಗಳೇ, ಈ ಮದುವೆ ಗುರು ಹಿರಿಯರಾಗಿ ನೀವಿರುವಾಗ ನನಗೆ ಯಾವ ಚಿಂತೆಯೂ ಇಲ್ಲ. "ನನ್ನ ಪಾಲಿಗೆ ಮದುವೆಯ ಮೂಹೂರ್ತಕ್ಕಿಂತ ಆದರ್ಶ ದಾಂಪತ್ಯ ನಡೆಸುತ್ತಿರುವ ಬಸವಾದಿ ಪ್ರಮಥರ ಹರಕೆ ಮುಖ್ಯ" ಎಂದು ನನ್ನ ಮನದಿಚ್ಛೆಯನ್ನು ನಿಮ್ಮ ಮುಂದಿರಿಸಿದ್ದೇನೆ.

"ದಾನಮ್ಮ, ನಿನ್ನ ಮದುವೆಗೆ ಶಿವನೇ ಬಂದು ಅವ್ಯಕ್ತನಾಗಿ ನಿಂತು ಊರ ಜನರಿಂದ ಕೆಲಸ ಮಾಡಿಸುತ್ತಿರುವಾಗ ಯಾರಿಗೂ ಚಿಂತೆಯಿಲ್ಲ. ನಿನ್ನ ವಿಚಾರಗಳಿಗೆ ಪ್ರೋತ್ಸಾಹ ಕೊಡುವ ಶರಣನೊಬ್ಬ ವರನಾಗಿ ದೊರತದ್ದು ದೊಡ್ಡ ಭಾಗ್ಯ. ಅದು ಶಿವ ಸಂಕಲ್ಪ. ದೈವಿ ಕೃಪೆಗೆ ಪಾತ್ರಳಾದ ನಿನ್ನಿಚ್ಛೆಗಳೆಲ್ಲ ಪೂರೈಸಲಿ ತಾಯಿ" ಎಂದು ಹರಸಿದರು.

ಸಂಕತೀರ್ಥದಲ್ಲಿ ವಿವಾಹ

ಶಿವಾನುಭವದಲ್ಲಿ ಹೇಳುವ ಶರಣತತ್ತ್ವದ ಪ್ರಕಾರ ಸ್ತ್ರೀಯರಿರಲಿ ಅಥವಾ ಪುರುಷರಿರಲಿ ಅವರಿಗೆ ಬ್ರಹ್ಮಚರ್ಯದ ಕಟ್ಟಳೆಯಿಲ್ಲ. ಅಂದರೆ ಶರಣರಲ್ಲಿ ಲಗ್ನವಾಗಬಹುದು ಅಥವಾ ಅವಿವಾಹಿತರಾಗಿರಬಹುದು. ಇದರಿಂದ ಯಾವ ಸ್ಥಿತಿ ಶ್ರೇಷ್ಠವೆಂದಾಗಲಿ ಕನಿಷ್ಠವೆಂದಾಗಲಿ ಹೇಳಲಾಗದು. ಎರಡೂ ಸ್ಥಿತಿಗಳು ಸರಿಸಮಾನ ಎಂಬುದು ಶರಣರ ಜೀವನ ಮತ್ತು ಅವರ ವಚನಗಳ ಸಂದೇಶಗಳೆ ಸಾಕ್ಷಿಯಾಗಿವೆ ಎಂಬುದನ್ನು ಸಿದ್ಧರಾಮೇಶ್ವರರ ವಚನದಲ್ಲಿ ನೋಡಬಹುದು.

ಭಕ್ತನ ಮನ ಹೆಣ್ಣಿನೊಳಗಾದಡೆ, ವಿವಾಹವಾಗಿ ಕೂಡುವುದು.
ಭಕ್ತನಮನ ಮಣ್ಣಿನೊಳಗಾದಡೆ,
ಕೊಂಡು ಆಲಯವ ಮಾಡುವುದು.
ಭಕ್ತನ ಮನ ಹೊನ್ನಿನೊಳಗಾದಡೆ, ಬಳಲಿ ದೊರಕಿಸುವುದು
ನೋಡಾ, ಕಪಿಲಸಿದ್ಧ ಮಲ್ಲಿಕಾರ್ಜುನಾ.

– ಸಿದ್ಧರಾಮೇಶ್ವರರು.

ಆಧ್ಯಾತ್ಮಿಕ ಸಾಧಕ ವರ್ಗದವರು ಸಂಸಾರ ತ್ಯಜಿಸಿ ಬಾಳಬೇಕೆಂಬ ನಿಯಮವೇನಿಲ್ಲ. ಶರಣರು ಸಂಸಾರದಲ್ಲಿದ್ದು ಸತ್ಯ ಸಾಧನೆಯಲ್ಲಿ ತೊಡಗಿ ಸಾರ್ಥಕತೆಯ ಜೊತೆಗೆ ದೈವೀಚೈತನ್ಯ ಹೊಂದಿದವರು.

ಉಮರಾಣಿ ಗ್ರಾಮಕ್ಕೆ ಸಮೀಪದಲ್ಲಿರುವ ಸಂಕ ಎಂಬ ಗ್ರಾಮದಲ್ಲಿ ನೆಲೆಸಿರುವ ಸಕಲ ಸಂಪನ್ನ ಶಿವಭಕ್ತನಾದ ಸೋಮನಾಥನೆಂಬ ಶಿವಶರಣನೊಡನೆ ವಿವಾಹದ ಏರ್ಪಾಡು ನಡೆಯುತ್ತದೆ. ದಾನಮ್ಮ ಬಸವಾದಿ ಶರಣರನ್ನು ಮನದಲ್ಲಿ ನೆನೆಯುತ್ತಾ ಈ ವಿವಾಹವು ಪ್ರಪಂಚದಲ್ಲಿ ಬಿದ್ದು ಒದ್ದಾಡುವುದಕ್ಕಲ್ಲ. ವಚನಗಳಲ್ಲಿ ಅಡಗಿರುವ ತತ್ತ್ವವನ್ನು ಅರ್ಥೈಸುತ್ತಾ ಸಮಾಜದಲ್ಲಿ ದುಃಖದಲ್ಲಿರುವವರನ್ನು ಜ್ಞಾನದ ಬೆಳಕಿನೆಡೆಗೆ ತಂದು ಅವರಿಗೆ ಸಾಂತ್ವನದಿಂದ ಅರಿವು ಮೂಡಿಸುತ್ತಾ ಜೀವನ ನಡೆಸಬೇಕೆಂಬ ತನ್ನ ಆಂತರಿಕ ಬಯಕೆಯನ್ನು ಶರಣರಿಗೆ ತಲುಪಲೆಂದು ಆಶಿಸುತ್ತಾ ವಿವಾಹವಾಗುತ್ತಾಳೆ.

ಸೋಮನಾಥ ದಾನಮ್ಮರ ಮದುವೆ, ಎಲ್ಲರ ಮದುವೆಯಂತೆ ಲೌಕಿಕ ಮದುವೆಯಾಗಿರಲಿಲ್ಲ. ಈ ಮದುವೆ ಆಧ್ಯಾತ್ಮ ಸಾಧನೆಗೆ ಸಹಯೋಗ ಒದಗಿಸುವದಾಗಿತ್ತು. ಶಿವಯೋಗ ಸಾಧನೆಗೆ ಸಹಕಾರಿಯಾಗಬಲ್ಲ ಮದುವೆಯಾಗಿತ್ತು. ಆದರೆ ಸಂಸಾರದ ನೂರೆಂಟು ತಾಪತ್ರಯಗಳಲ್ಲಿ ಮುಳುಗಿದವರಿಗೆ, ಅಧ್ಯಾತ್ಮ ಜೀವನದ ಕಲ್ಪನೆಯೂ ಇರಲಿಲ್ಲ. ಈ ದಾನಮ್ಮ ದಂಪತಿಯರು ಲೌಕಿಕರ ಮನಸ್ಸನ್ನು ಸಂತಸ ಪಡಿಸಲು, ಅವರು ಹೇಳಿದಂತೆ ಎಲ್ಲ ಕಾರ್ಯಗಳನ್ನು ಮಾಡಿಸಿಕೊಂಡರು. ಮದುಮಕ್ಕಳ ಬಳಿ ಜನ ಗುಂಪು ಕಟ್ಟಿಕೊಂಡು ಆರತಿ ಬೆಳಗಿ, ದಾನಮ್ಮನಿಗೆ ಒಡಪಿಟ್ಟು ಗಂಡನ ಹೆಸರು ಹೇಳಲು ಒತ್ತಾಯ ಮಾಡಿದರು. ಆಗ ದಾನಮ್ಮ ಗಂಭೀರ ಭಾವದಿಂದ ! "ಅಂಗಕ್ಕೆ ಲಿಂಗ ಶ್ರೇಷ್ಠ, ಲಿಂಗಕ್ಕೆ ಜಂಗಮ ಶ್ರೇಷ್ಠ, ನನಗೆ ಸಂಗಮೇಶ್ವರನೇ ಶ್ರೇಷ್ಠ" ಎಂದಳು.

ಸಂಕತೀರ್ಥದಲ್ಲಿ ಜರಗುವ ದಾನಮ್ಮ ಸೋಮನಾಥರ ವಿವಾಹದ ಸಂದರ್ಭದಲ್ಲಿ ವಿವಾಹದ ವೈಶಿಷ್ಟ್ಯವೋ ಎನ್ನುವಂತೆ ಇವರ ಜೊತೆಗೆ ಐದನೂರಕ್ಕೂ ಹೆಚ್ಚು ಜೋಡಿಗಳನ್ನು ಸತಿಪತಿಗಳನ್ನಾಗಿಸಿ ಸಾಮೂಹಿಕ ವಿವಾಹವನ್ನು ನೆರವೇರಿಸುತ್ತಾರೆ. ಆ ಸಂದರ್ಭದಲ್ಲಿ ಅಲ್ಲಿ ನೀರಿನ ಕೊರತೆ ಉಂಟಾಗಲು ದಾನಮ್ಮ ಒಂದು ಶಂಖವನ್ನು ನೆಲದ ಮೇಲೆ ಇಟ್ಟು ತಿರುಗಿಸಿದಾಗ ಆ ಸ್ಥಳದಲ್ಲಿಯೇ ಜಲಧಾರೆ ಉಕ್ಕಿಹರಿಯಿತು. ಇಂದಿಗೂ ಅದೇ ಸ್ಥಳದಲ್ಲಿ ನೀರು ಇರುವ ಕುರುಹನ್ನು ನೋಡಬಹುದು. ಈ ಶಂಖತೀರ್ಥ ಎಂಬುದೇ ಕಾಲಕ್ರಮೇಣವಾಗಿ ಸಂಕತೀರ್ಥವಾಗಿದೆ ಎಂದು ದಂತಕಥೆಗಳಲ್ಲಿ ಪ್ರಚಲಿತದಲ್ಲಿದೆ.

ದಂಪತಿಯರು ಮಧ್ಯಾಹ್ನ ಪೂಜೆ ಪ್ರಸಾದ ಮುಗಿಸಿಕೊಂಡು, ಸ್ವಲ್ಪ ವಿಶ್ರಾಂತಿ ಪಡೆಯುವುದರಲ್ಲಿ ಮತ್ತೆ ದರ್ಶನಕ್ಕೆ ಜನ ಬರಹತ್ತಿದರು. ದಾನಮ್ಮ ಸೋಮನಾಥರು ಜಕ್ಕವಕ್ಕಿಗಳಂತೆ ಲೌಕಿಕ ಜೀವನ ನಡೆಸಿದರು. ಸಹಜೀವಿಗಳಾಗಿ ಸಾಧನೆಗೈಯುತ್ತಿದ್ದರು. ಪರಸ್ಪರ ಪೂರಕ ಶಕ್ತಿಗಳಾಗಿ ಬಾಳಿದರು. ಅವರ ಈ ಜೀವನ ಸುತ್ತಲಿನ ಜನಸಾಮಾನ್ಯರು

ಸಾಮಾಜಿಕ ಜೀವನದಲ್ಲಿ ಸಮಾನತೆಯನ್ನು, ಧಾರ್ಮಿಕ ಜೀವನದಲ್ಲಿ ಪ್ರಗತಿಯನ್ನು, ಆಧ್ಯಾತ್ಮ ಜೀವನದಲ್ಲಿ ಉನ್ನತಿಯನ್ನು ಸಾಧಿಸುವಂತಾಯಿತು. ತಮ್ಮ ಹೆಚ್ಚಿನ ಸಮಯವನ್ನು ದಂಪತಿಯರು ಜನಹಿತ ಕಾರ್ಯದಲ್ಲಿ ಕಳೆಯುತ್ತಿದ್ದರು.

ಸೋಮನಾಥ ಮತ್ತು ದಾನಮ್ಮರು ತಮ್ಮ ಶಿವಯೋಗ ಸಾಧನೆಗೆ ಪ್ರಶಾಂತವಾದ ಉತ್ತಮತಾಣ ಬೇಕೆಂದು ಬಯಸಿದ ಶಿವಾನುಭವಿಗಳು. ಇಷ್ಟಲಿಂಗಪೂಜೆ, ಪ್ರಾಣಲಿಂಗಾನುಸಂಧಾನಕ್ಕೆ ಅನುಕೂಲವಾಗುವ ಸೂಕ್ತವಾದ ಸ್ಥಳಕ್ಕಾಗಿ ಅರಸುತ್ತಾ ಸಂಕ ಗ್ರಾಮದ ಪಶ್ಚಿಮಕ್ಕೆ ಎಂಟು ಮೈಲು ದೂರದಲ್ಲಿರುವ ಗುಡ್ಡಾಪುರ ಗ್ರಾಮದಲ್ಲಿ ಬಂದು ನೆಲೆಸುತ್ತಾರೆ. ಕೇವಲ ನಿರ್ಜನವಾದ ಗುಡ್ಡಗಾಡು ಪ್ರದೇಶದೊಳಗೆ ಸೋಮೇಶ್ವರಲಿಂಗದ ಚಿಕ್ಕ ದೇವಾಲಯವಿತ್ತು. ಅದುವೇ ಶಿವಯೋಗಕ್ಕೆ ತಕ್ಕ ಸ್ಥಾನವಾಗಿತ್ತು. ದಂಪತಿಯರ ಈ ಗುಡ್ಡದಲ್ಲಿನ ವಾಸದಿಂದಾಗಿ ಒಬ್ಬೊಬ್ಬರಾಗಿ ಜನ ಗುಡ್ಡದ ಕಡೆಗೆ ಬರಲು ಪ್ರಾರಂಭಿಸಿದರು. ಬಂದವರೆಲ್ಲರೂ ಇವರನ್ನು ನೋಡುತ್ತಾ ಅವರ ನಡೆ ನುಡಿಗಳು ಮತ್ತು ಶರಣರ ವಚನಗಳನ್ನು ಆಲಿಸುತ್ತಿದ್ದರು. ಶಿವಯೋಗದಿಂದ ಪಡೆದ ಅವರ ಅನುಭವಾಮೃತವನ್ನು ಕೇಳುವುದರಲ್ಲಿ ತಲ್ಲೀನರಾಗುತ್ತಿದ್ದರು. ಹೀಗೆ ಕಾಯಕ-ದಾಸೋಹದಲ್ಲಿ ನಿರತರಾದವರನ್ನು ಕಂಡು ಆಕರ್ಷಿತರಾದ ಅನೇಕ ಜನರು ಈ ಗುಡ್ಡಗಾಡಿನಲ್ಲಿ ಬಂದು ನೆಲೆಸಲು ಆ ಗುಡ್ಡವೇ ಗುಡ್ಡಾಪುರವಾಗಿ ರೂಪತಾಳಿತು.

ಇದನ್ನು ಕವಿ ಲಕ್ಕಣ್ಣದಂಡೇಶನು "ವಾಮಲೋಚನೆ, ಹೋಗು ಗುಡ್ಡಾಪುರ ನಿನ್ನ ನಾಮಸಾಮ್ಯದ ಪುರವ ರಚಿಸಿ ಮರ್ತ್ಯದೊಳಗೆ ಮನೋಮುದದೊಳೀಕ್ಷಣದಿಂ ಜನಿಸು ಹೋಗಲ್ಲಿ ಸೋಮೇಶ್ವರ ಲಿಂಗಾಲಯವಿದೆ." ಎಂದು ತನ್ನ ಶಿವತತ್ತ್ವಚಿಂತಾಮಣಿಯೆಂಬ ಮಹಾಕಾವ್ಯದಲ್ಲಿ ವರದಾನಿ ಗುಡ್ಡವ್ವೆಯ ಬಗ್ಗೆ ಬಣ್ಣಿಸಿದ್ದಾನೆ.

"ವರದಾನಿ ಗುಡ್ಡವ್ವೆಯ ಚರಿತ್ರೆ" ಯಲ್ಲಿ ಗಣಾಚಾರ ನೆರವೇರಿಸಿದ ಕಾವ್ಯಭಾಗವನ್ನು ಈ ಕವಿಯ ಕೃತಿಯಲ್ಲಿ ಈ ರೀತಿ ಉಲ್ಲೇಖಿಸಲಾಗಿದೆ.

ಎನ್ನ ಜವ್ವನ ನಿರರ್ಥಕವೆನಿಸದಾಯಿಂದು
ಹೊನ್ನಯ್ಯ ಬಾ ಪಾಂಡ್ಯ ನಾಯಕರೆ ಬನ್ನಿರೇ
ಕಿನ್ನರ ಬ್ರಹ್ಮಯ್ಯ ಬಾ ಬೀರಿದೇವ ಬಿಜ್ಜಯ್ಯಗಳೇ ಕೂಡಿ ಬನ್ನಿ.
ಸನ್ನದ್ಧನಾಗಿ ಪಡಿಹಾರಿ ಸೋಮಯ್ಯ ಬಾ
ಮನ್ನಣೆಯ ಕಾಳಮ್ಮ ಕೇತಮ್ಮಗಳು ನೀವು
ಬನ್ನಿಯೆಂದೆನುತ ವಂದಿಸಿದ ಗುಡ್ಡಮ್ಮಗಳ ಚರಣಾಂಬುಜಕ್ಕೆ

ನಂದಿಮುಖವಿದು ಕೃಪೆಯಿಂದ ಹಂದಯ್ಯ ಬಾ
ಕಂದರ್ಪ ವಿಜಯ ಕಲ್ಯಾಣ ಬಾಚಮ್ಮ ಬಾ
ವೊಂದೆ ಮಾನಸನಾಗಿ ದೇವಯ್ಯ ಬಾ ಮುಂದೆ
ನಡೆಬೇಗ ಸೇನಾನಾಥ
ಹಿಂದೆ ಸಿಕ್ಕದಿರು ಚಿಕ್ಕಲಿಗೆ ನಾಗಯ್ಯಗಳು
ವೊಂದಾಗಿ ಬನ್ನಿ ಪೂವಲ ಬಾಚಿ ತಂದೆಗಳೆ
ಯೆಂದು ದೇವರ ಬಾಚಿಗುಸುರ್ದು ಗುಡ್ಡಮ್ಮಗಳ
ಚರಣಾಂಬುಜಕ್ಕೆ.

– ಲಕ್ಕಣ್ಣದಂಡೇಶ

ಷೋಡಶರ ಹೆಸರುಗಳು: ಹೊನ್ನಯ್ಯ, ಪಾಂಡ್ಯನಾಯಕ, ಕಿನ್ನರಿಯ ಬ್ರಹ್ಮಯ್ಯ, ಬೀರಿದೇವಯ್ಯ, ಬಿಜ್ಜಯ್ಯ, ಪಡಿಹಾರಿ ಸೋಮಯ್ಯ, ಕಾಳವ್ವೆ, ಕೇತಮ್ಮೆ ಹಂದಯ್ಯ, ಬಾಚಮ್ಮ, ದೇವಯ್ಯ, ಸೇನನಾಥ, ಚಿಕ್ಕಲಿಗೆ ನಾಗಯ್ಯ, ಹೂವಿನ ಬಾಚಿಲದೇವಿ, ದೇವಬಾಚಯ್ಯ, ಕಂದರ್ಪನಾಗಯ್ಯ, ಷೋಡಶರ ಗುಡ್ಡವ್ವೆ ಶಿವತತ್ತ್ವಚಿಂತಾಮಣಿಕಾರನನ್ನು ಅನುಸರಿಸಿ ಕವಿಗಳು ತಮ್ಮ ಕಾವ್ಯಗಳಲ್ಲಿ 'ಮಹಾಶರಣೆ ಗುಡ್ಡಾಪುರ ದಾನಮ್ಮನು' ಬಸವಾದಿ ಶರಣರ ಸಮಕಾಲೀನಳಾಗಿ ಬಾಳಿದ ಮತ್ತು ದಿಟ್ಟತನದಿಂದ ಷೋಡಶಗಣಂಗಳೊಂದಿಗೆ ಗಣಾಚಾರ ನಿರ್ವಹಿಸಿದ್ದನ್ನು ಒಪ್ಪಿಕೊಂಡಿದ್ದಾರೆ. ಇನ್ನೂ ಅನೇಕ ವೀರಶೈವ ಕಾವ್ಯಗಳು ಗುಡ್ಡವ್ವೆಯನ್ನು ಷೋಡಶಗಣಂಗಳ ನಾಯಕಿಯೆಂದು ಪ್ರತಿಪಾದಿಸಿದ್ದಾರೆ.

೧೭ ನೆಯ ಶತಮಾನದ ಸಿದ್ಧನಂಜೇಶ ವಿರಚಿತ 'ಶ್ರೀ ಗುರುರಾಜ ಚಾರಿತ್ರ' ದಲ್ಲಿ ವರದಾನಿ ಗುಡ್ಡವ್ವೆ ಷೋಡಶ ಪುರಾತ ಪುಂಗವರಲ್ಲಿ ಒಬ್ಬಳೆಂದು ತಿಳಿಸಲಾಗಿದೆ.

ಹೊನ್ನಯ್ಯನುಂ ಪಾಂಡ್ಯನಾಯಕಂ ಗುಡ್ಡವ್ವೆ
ಯುಂ ನಾಗಿದೇವಯ್ಯ ಚಿಕ್ಕುಲಿಗೆ ನಾಗಯ್ಯ
ವುನ್ನಗದ ಕಂದುಲಿಗೆ ನಾಗದೇವಯ್ಯ ಕೇತಲದೇವಿ ಬೀರಿದೇವಂ
ಕಿನ್ನರಿ ಬ್ರಹ್ಮಯ್ಯ ಬಿಜ್ಜಯ್ಯ ಕಾಳವ್ವೆ
ಚೆನ್ನ ಪಡಿಹಾರಿ ಸೋಮಯ್ಯ ಬಾಚಲದೇವಿ
ಹೊನ್ನ ಹೂವಿನ ಬಾಚಿ ಹಂದಯ್ಯ ಶೇನಕ
ದೇವರಾ ಬಾಚಯ್ಯನು."

ಇಂತಿವರು ಷೋಡಶ ಪುರಾತ ಪುಂಗವರೆಯ್ದೆ
ಯಂತರಂಗದೊಳೊಲಿದು ಭಕ್ತಿಯಿಂ ಕೊಂಡಾಡೆ
ಸಂತತಂ ಬರೆದೋದಿ ಪರಿಸಿದೊಡೆ ಸದ್ ಭಕ್ತಿ
ಸುಜ್ಞಾನವೈಂದ್ಯವು
ಆಂತರಿಸದೊದಗುವುವುಮಿಹದಲ್ಲಿ ಮೇಣು ದೇ
ಹಾಂತ್ಯದೊಳು ಸದ್ ಗತಿಯು ದೊರೆವುದುಂ ಸತ್ಯವಿದು
ಕಂತುಹರ ಸಿದ್ಧನಂಜೇಶ್ವರ ಪಾಲಿಸುವನಾ ಸಕಲ ಸಜ್ಜನರನು.

ಗುಡ್ಡವ್ವೆಯ ನೇತೃತ್ವದಲ್ಲಿ ಕೆಲವು ವೀರವ್ರತಧಾರಿಗಳ ಕಥೆಗಳ ಹಂದರವನ್ನು ಹೆಣೆದಿರುವುದು ಶಿವಶಂಕರ ಕವಿಯ ಕಾವ್ಯದಲ್ಲಿ ಮಾತ್ರ ಕಂಡು ಬಂದಿದೆ. ವಾಸ್ತವವಾಗಿ ದಶಗಣ, ತೇರಸ, ಷೋಡಶರ ಕಥೆಗಳನ್ನು ಒರೆಗೆ ಹಚ್ಚಿ ನೋಡಿದಾಗ, ಶರಣರ ಶಿವಭಕ್ತಿಯಲ್ಲಿ ಸತ್ಯ, ನಿಷ್ಠೆ, ಪ್ರಾಮಾಣಿಕತೆ, ಛಲ ಮೊದಲಾದವುಗಳಲ್ಲಿ ವಿಶೇಷ ಗುಣನಡತೆಗಳು ಕಂಡು ಬರುತ್ತವೆ. ಒಂದೆಡೆ ಗಣಾಚಾರ ಪ್ರತಿಪಾದಿತವಾದರೆ, ಇನ್ನೊಂದೆಡೆ ವೀರಭಕ್ತಿ ಗುಣ ವ್ಯಕ್ತವಾಗುತ್ತದೆ. ದೇವನನ್ನು ಛಲದಿಂದಲೇ ಕಾಣಬೇಕೆಂಬ ಭಾವವಿದೆ. ಇನ್ನೂ ಅನೇಕ ನಿಷ್ಠಾವಂತ ಶಿವಶರಣರು ಇತಿಹಾಸ ಗರ್ಭದಲ್ಲಿ ಗತಿಸಿಹೋಗಿದ್ದಾರೆ.

ಶರಣ ಪರಂಪರೆಯ ರಕ್ಷಣೆ

ಶರಣ ಪರಂಪರೆಯಲ್ಲಿ 'ಗಣಾಚಾರವು' ಸಾಮಾಜಿಕ ಜೀವನದಲ್ಲಿ ಎದುರಾಗುವ ಅನ್ಯಾಯ ಅಸತ್ಯಗಳನ್ನು ಎದುರಿಸಿ ನ್ಯಾಯ ಪ್ರತಿಷ್ಠಾಪಿಸುವ ಸಾಮರ್ಥ್ಯವನ್ನು ತುಂಬುತ್ತದೆ. ಮಾನವನ ಪ್ರಗತಿಗೆ ಅಡ್ಡಿಯಾಗಿರುವ ಯಾವುದೇ ಆಚಾರ ವಿಚಾರವಿರಲಿ ಅದರ ವಿರುದ್ಧ ಹೋರಾಡುವುದೇ ಗಣಾಚಾರ. ಬಸವಣ್ಣನವರ ವಚನದಂತೆ "ನ್ಯಾಯನಿಷ್ಠುರಿ ದಾಕ್ಷಿಣ್ಯಪರ ನಾನಲ್ಲ, ಲೋಕವಿರೋಧಿ ಶರಣನಾರಿಗೆಯೂ ಅಂಜುವವನಲ್ಲ ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ." ಎಂಬಂತೆ ದಾನಮ್ಮ ಯಾರ ಹಂಗಿನಲ್ಲಿಯೂ ಇರಲಾರದೆ ದಯಾ ದಾಕ್ಷಿಣ್ಯಕ್ಕೆ ಒಳಗಾಗದೆ, ನ್ಯಾಯ ನಿಷ್ಠುರಿಯಾಗಿ, ಏನೇ ಸಮಸ್ಯೆ ಬಂದರೂ ಬದುಕಿಗೆ ಬೆನ್ನು ತೋರಿಸಿ ಓಡದೆ, ಸತ್ಯದ ಹೋರಾಟದಲ್ಲಿ ಅಂಜದೆ, ಅಳುಕದೆ ಎದುರಿಸುತ್ತಾ ಶರಣರ ವಚನತತ್ತ್ವವನ್ನು ರಕ್ಷಿಸುವ ಹೊಣೆಹೊತ್ತ ವೀರಗಣಾಚಾರರನ್ನು ಒಡಗೂಡಲು ಶೂರ ಧೀರ ಶರಣೆ ದಾನಮ್ಮ ಶರಣರ ಕಡೆಗೆ ಧಾವಿಸಿದಳು.

ಕಲ್ಯಾಣದಲ್ಲಿ ಕೋಲಾಹಲ ಪ್ರಾರಂಭವಾಯಿತು. ಶರಣರು ಕಂಡಲ್ಲಿ ಕೊಲ್ಲುವ,

ವಚನಕಟ್ಟುಗಳನ್ನು ಸುಡುವ, ಹೀನಕೃತ್ಯ ನಡೆಯಿತು. ಮನುವಾದಿಗಳ ಮತ್ತು ಪ್ರಭುತ್ವದ ಪೈಶಾಚಿಕ ಆಕ್ರಮಣದಿಂದಾಗಿ ಅಳಿದುಳಿದ ಶರಣರು ದಿಕ್ಕಾಪಾಲಾದರು. ಅಷ್ಟೊತ್ತಿಗಾಗಲೇ ಅನೇಕ ಶರಣರ ಬಲಿದಾನವಾಗಿತ್ತು. ಶರಣ ಪರಂಪರೆಯೇ ಅಗ್ನಿಪರೀಕ್ಷೆಗೆ ಒಳಗಾಗಿತ್ತು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಶರಣರನ್ನು ಮತ್ತು ವಚನಸಾಹಿತ್ಯವನ್ನು ರಕ್ಷಿಸುವ ಹೊಣೆ ಹೊತ್ತ ಅಕ್ಕನಾಗಮ್ಮನವರ ನೇತೃತ್ವದಲ್ಲಿ ಚನ್ನಬಸವಣ್ಣ, ಮಡಿವಾಳ ಮಾಚಿದೇವ, ಕಿನ್ನರಿ ಬ್ರಹ್ಮಯ್ಯ, ಗಂಗಾಂಬಿಕೆ, ಡೋಹರ ಕಕ್ಕಯ್ಯ, ಮುಂತಾದವರನ್ನು ಒಳಗೊಂಡ ಒಂದು ಶರಣರ ಗುಂಪು ಉಳವಿಯ ಕಡೆಗೆ ಕಾದುತ್ತ ಸಾಗಿತು. ಈ ಗುಂಪು ಬಿಜ್ಜಳನ ಸೈನ್ಯದೊಡನೆ ಹೋರಾಡುತ್ತ ಗೊಡಚಿಯವರೆಗೆ ಬಂದದ್ದನ್ನು ತಿಳಿದುಕೊಂಡ ದಾನಮ್ಮ ಮತ್ತು ಸೋಮನಾಥರು ಧರ್ಮರಕ್ಷಣೆಗಾಗಿ ಹೋರಾಡಲು ಕಂಕಣಬದ್ಧರಾಗಿ ಆ ಕಡೆಗೆ ಹೊರಟರು. ಮುಂದೆ ಗುಡ್ಡವ್ವೆ ಅಕ್ಕನಾಗಮ್ಮನವರ ಅಣತಿಯಂತೆ ಶ್ರೀಶೈಲದ ಕಡೆಗೆ ಹೋಗಿ ಸಂಕಷ್ಟಕ್ಕೊಳಗಾದ ಶರಣರಿಗೆ ರಕ್ಷಣೆ ಒದಗಿಸುತ್ತಾ ಸುರಕ್ಷಿತ ಸ್ಥಳಗಳಿಗೆ ತಲುಪಿಸುತ್ತಾಳೆ. ಹೀಗೆ ಮಹಾಸಾಹಸವನ್ನು ಗೈದ ವೀರಗಣಾಚಾರಿಣಿ ಗುಡ್ಡವ್ವೆ ಕಲ್ಯಾಣ ಹತ್ಯಾಕಾಂಡದ ನಂತರ ಶರಣಧರ್ಮ ಪ್ರಚಾರ ಮಾಡುತ್ತ ಆ ಪರಂಪರೆಯನ್ನು ರಕ್ಷಿಸಲು ಕೊನೆಯವರೆಗೂ ನೇತಾರಳಾಗಿ ನಿಲ್ಲುತ್ತಾಳೆ.

ಸಂಚಾರ ಮತ್ತು ಸಾಧನೆ

ಗುಡ್ಡಾಪುರ ದಾನಮ್ಮ ಶರಣೆ ದೇಶ ಸಂಚಾರ ಕೈಕೊಂಡು ಸಾಧನೆಗೈದ ಬಗ್ಗೆ ಹಲವಾರು ಆಧಾರಗಳು ಲಭ್ಯವಾಗಿವೆ. 'ದೇಶ ಸುತ್ತಿ ನೋಡು ಕೋಶ ಓದಿ ನೋಡು' ಎಂಬ ಗಾದೆ ಮಾತೊಂದು ಪ್ರಚಲಿತವಿದೆ. ಪುರಾತನ ಕಾಲದಲ್ಲಿ ಜನರು ಬುದ್ಧಿ, ಜ್ಞಾನ, ವಿಕಾಸದ ಪ್ರಗತಿಗಾಗಿ ದೇಶ ನೋಡುವಿಕೆಯಿಂದ ಹಾಗೂ ಇತರ ಜನರ ಸಂಪರ್ಕ ಪ್ರಭಾವಗಳಿಂದ ಜ್ಞಾನ ಪಡೆಯುತ್ತಿದ್ದರು. ಬ್ರಹ್ಮಚಾರಿಗಳು ಗುರುವಿನ ಉಪದೇಶದೊಂದಿಗೆ ದೇಶ ಪರ್ಯಟನೆ ಮಾಡುತ್ತಾ ಜ್ಞಾನವಿಸ್ತಾರ ಮಾಡಿಕೊಳ್ಳುತ್ತಿದ್ದರು. ಗೃಹಸ್ಥರು ಗೃಹಸ್ಥಾಶ್ರಮದ ನಂತರ 'ಸನ್ಯಾಸ' ಹಂತದಲ್ಲಿ ಮನೆ ಬಿಟ್ಟು ಪುಣ್ಯಕ್ಷೇತ್ರ ದರ್ಶನಕ್ಕಾಗಿ ದೇಶಸಂಚಾರ ಮಾಡುತ್ತಿದ್ದರು. ತೀರ್ಥಯಾತ್ರೆ, ಕ್ಷೇತ್ರದರ್ಶನ, ಪುಣ್ಯಪುರುಷರ ಪುರಾಣ ಕಥೆಗಳ ಶ್ರವಣದಿಂದ ಪುಣ್ಯ ಸಿಗುತ್ತದೆ ಎಂದು ಅವರು ನಂಬಿದರು. ಆದರೆ ದಾನಮ್ಮ ಶರಣೆ ತನ್ನ ಆತ್ಮೋನ್ನತಿಗಾಗಿ ಮತ್ತು ಲೋಕೋದ್ಧಾರಕ್ಕಾಗಿ ದೇಶ ಪರ್ಯಟನೆ ಕೈಗೊಂಡು ಸಂಚಾರದ ಸಂದರ್ಭದಲ್ಲಿ ದೀನದಲಿತರ ಸಮಸ್ಯಗಳಿಗೆ ಸ್ಪಂದಿಸಿ, ಕಂಬನಿ ಮಿಡಿದಳು. ಅನೇಕ ಕ್ಷೇತ್ರಗಳ ದರ್ಶನ ಮಾಡುತ್ತ ಜ್ಞಾನವೃದ್ಧಿಯ ಜೊತೆಗೆ ಶಿವಯೋಗಿಣಿಯಾದಳು.

ವೀರಶರಣೆಯು ದೇಶ ಸಂಚಾರ ಎರಡು ಹಂತದಲ್ಲಿ ನೆರವೇರಿತು. ವಿವಾಹಪೂರ್ವದಲ್ಲಿ ಕಲ್ಯಾಣಕ್ಕೆ ಸಾಧಕಳಾಗಿ, ಅಧ್ಯಾತ್ಮದ ಸಿದ್ಧಿಗಾಗಿ, ಜ್ಞಾನ ವಿಸ್ತಾರಕ್ಕೆ ಪ್ರಯಾಣ ಬೆಳೆಸಿದ್ದು ಮೊದಲ ಹಂತವಾಗಿದೆ. ಸಂಕತೀರ್ಥದಲ್ಲಿ ಸೋಮನಾಥರೊಡನೆ ವಿವಾಹದ ನಂತರ ದೇಶಸಂಚಾರ ಕೈಕೊಂಡಿದ್ದು ದ್ವಿತೀಯ ಹಂತವಾಗಿದೆ. ವಿವಾಹದ ಕೆಲಕಾಲದ ನಂತರ ದಂಪತಿಯರು ಸಂಕತೀರ್ಥದ ಪೂರ್ವಾಭಿಮುಖವಾಗಿ ದೇಶಸಂಚಾರ ಕೈಗೊಂಡು ಕಲ್ಯಾಣ ಕ್ರಾಂತಿಯಲ್ಲಿ ಚೆದುರಿಹೋದ ಶರಣರನ್ನು ಸಂದರ್ಶಿಸಿ ಮುಂದಿನ ನಡೆಯ ಬಗ್ಗೆ ಚರ್ಚಿಸಿದರು.

ಶ್ರೀಶೈಲ ಕ್ಷೇತ್ರದ ಅಭಿಮುಖವಾಗಿ ಸಂಚರಿಸುತ್ತಾ ನಡೆದರು. ಬೆಳಗಿನ ಸ್ನಾನಕ್ಕೆ ಪಾತಾಳಗಂಗೆಗೆ ಹೋದರು. ಬ್ರಹ್ಮಗಿರಿ, ರುದ್ರಗಿರಿ, ವಿಷ್ಣುಗಿರಿಗಳ ಮಧ್ಯದಲ್ಲಿ ದಕ್ಷಿಣಾಭಿಮುಖವಾಗಿ ಹರಿಯುತ್ತಿರುವ ಕೃಷ್ಣಾ ನದಿಗೆ ಇಲ್ಲಿ ಪಾತಾಳಗಂಗೆ ಎನ್ನುತ್ತಾರೆ. ಅಲ್ಲಿರುವ ಪಂಡಿತಾರಾಧ್ಯಮಠ, ಘಂಟಾಮಠ, ಸಾರಂಗಮಠ, ವಿಭೂತಿಮಠ, ರುದ್ರಾಕ್ಷಿಮಠ ಹಾಗೂ ನಂದಿಕೇಶ್ವರ ಮಠಗಳನ್ನು ಸಂದರ್ಶಿಸಿದರು. ಒಂದು ದಿವಸ ಸಿದ್ಧರಾಮೇಶ್ವರರ ಕೊಳ್ಳವನ್ನು ನೋಡಿಬಂದರು. ಕಲ್ಯಾಣ ಕ್ರಾಂತಿಯ ನಂತರ ಹಲವಾರು ಜನ ಶರಣರು ಇಲ್ಲಿ ಬಂದು ನೆಲೆಸಿದರು. ಪ್ರತಿದಿವಸ ಸಾಯಂಕಾಲ ಅವರ ಬಳಿ ಹೋಗಿ ಬರುತ್ತಿದ್ದರು. ಕೆಲವು ದಿವಸ ಶ್ರೀಶೈಲದಲ್ಲಿದ್ದರು. ಅಕ್ಕಮಹಾದೇವಿ ಒಬ್ಬಳೇ ಇಲ್ಲಿಯವರೆಗೆ ಬಂದುದನ್ನು ನೆನೆದಾಗ ಆಕೆಯ ವೈರಾಗ್ಯ, ದಿಟ್ಟತನ, ಧೈರ್ಯ, ಸ್ಥೈರ್ಯಗಳಿಗಾಗಿ ಮನದಲ್ಲಿಯೇ ಅಕ್ಕನ ಪಾದಕ್ಕೆ ಭಕ್ತಿಯಿಂದ ನಮಿಸಿದರು.

ಅಲ್ಲಿಯ ಪೂಜಾರಿಗಳಿಗೆ ಅಕ್ಕಮಹಾದೇವಿಯ ಬಗ್ಗೆ ವಿಚಾರಿಸಿದರು. ಅವರು ಅಕ್ಕ ಕದಳಿಯ ಕಡೆ ಹೋಗಿದ್ದಾರೆ ಅವರು ರಚಿಸಿದ ಕೆಲವು ವಚನಗಳು ಯೋಗಾಂಗ ತ್ರಿವಿಧಿಗಳ ಕಟ್ಟುಗಳ ಪ್ರತಿಗಳು ದೊರೆತವು. "ಆಧಾರದ ಬೇರು ಹಿಡಿದು ಐಕ್ಯದ ತುದಿಯನೇರಿದ" ಬಗೆಗೆ ಅಕ್ಕಮಹಾದೇವಿ ರಚಿಸಿದ ವಚನ, ಶ್ರೀಶೈಲ ಪರ್ವತ ಶಿಖರವೂ ಆಗಬಹುದು. ಅಂತರಂಗದಲ್ಲಿ ಐಕ್ಯಸ್ಥಾನ ತಲುಪಿದ ಸಂಕೇತವೂ ಆಗಬಹುದು, ಎಂದು ಭಾವಿಸಿದ ದಂಪತಿಯರು ತಾವೂ ಆ ಅನುಭವವನ್ನು ಅಲ್ಲಿ ಪಡೆದರು. ಆ ಮೇರುಪರ್ವತಗಳ ಸಾಲನ್ನು ಕಂಡಾಗ, ಶಿವನು ಬೆಟ್ಟಗಳ ರೂಪದಲ್ಲಿ ತನ್ನ ವಿರಾಟಸ್ವರೂಪವನ್ನು ತೋರುತ್ತಿದ್ದಾನೆ ಎಂದು ಅನಿಸಿತು.

ಮಾರ್ಗ ಮಧ್ಯದಲ್ಲಿ ದೌರ್ಜನ್ಯ, ಅನ್ಯಾಯಕ್ಕೆ ಒಳಗಾದ ಜನರನ್ನು ಸಂತೈಸುತ್ತಾ ನಡೆದರು. ಅಕ್ಕಮಹಾದೇವಿ, ಅಲ್ಲಮಪ್ರಭುಗಳು, ಮೊದಲಾದ ಶರಣರು ಶ್ರೀಶೈಲದ ಕದಳಿಯ ಕಡೆಗೆ ಹೋಗಿದ್ದನ್ನು ಅರಿತ ದಂಪತಿಗಳು ಕದಳಿ ವನವನ್ನು ಸಂದರ್ಶಿಸಿಸಿ

ಮುಂದೆ ನಡೆದರು.

ಹನ್ನೆರಡನೆ ಶತಮಾನದಲ್ಲಿ ಶ್ರೀಶೈಲ ಕ್ಷೇತ್ರವು ಶೈವ ಧರ್ಮದ ಪ್ರಖ್ಯಾತ ಕೇಂದ್ರವಾಗಿತ್ತು. ನಾಥಸಂಪ್ರದಾಯದ ಇನ್ನಿತರ ಶೈವಭಕ್ತರು ವಾಸಮಾಡುತ್ತಿದ್ದ ಬಗೆಗಿನ ಶಾಸನಗಳಿವೆ ಎನ್ನಲಾಗಿದೆ. ಶೈವಧರ್ಮವು ಲಿಂಗಾಯತ ಧರ್ಮದ ಕಡೆಗೆ ಪರಿವರ್ತನೆ ಹೊಂದುವ ಕಾಲಾವಧಿಯಲ್ಲಿ ದಾನಮ್ಮ ಬಾಳಿ ಬದುಕಿದವಳು. ಬಸವಾದಿ ಶರಣರು ಸ್ಥಾಪಿಸಿದ ಲಿಂಗಾಯತ ಧರ್ಮವನ್ನು ರಕ್ಷಿಸಿ ಪ್ರಚಾರ ಮಾಡುವ ಸಂದರ್ಭ ಅದಾಗಿತ್ತು. ದಂಪತಿಯರು ಶ್ರೀಶೈಲಕ್ಷೇತ್ರದ ಪರಿಸರದಲ್ಲಿ ಸಾಧಕರಾಗಿ ಕೆಲವು ದಿನಗಳನ್ನು ಕಳೆದರು.

ಆದವಾನಿಯ ಕಡೆ

ದಾನಮ್ಮ ಮತ್ತು ಸೋಮನಾಥ ಸಂಚರಿಸುತ್ತ ಆದವಾನಿಗೆ (ಆದೋನಿ) ಬಂದು ಅಲ್ಲಿ ವಾಸವಾಗಿದ್ದರು. ದಾನಮ್ಮನ ಮಹತ್ವವನ್ನು ಮೊದಲೆ ಅರಿತಿದ್ದರಿಂದ ಅಲ್ಲಿಯ ಜನರು ಅವರನ್ನು ಅತ್ಯಂತ ಭಕ್ತಿಯಿಂದ ಸ್ವಾಗತಿಸಿದರು. ಆದವಾನಿಯ ಸುತ್ತಲಿನ ಪ್ರದೇಶದಲ್ಲಿ ನೇಯ್ಗೆಯ ಕಾಯಕವನ್ನು ಮಾಡುವವರು ಮತ್ತು ಒಕ್ಕಲಿಗರು ಬಹು ಸಂಖ್ಯೆಯಲ್ಲಿ ಇದ್ದರು. ಅವರು ಕೆಲವು ವಿಶೇಷ ಹಬ್ಬಗಳಲ್ಲಿ ತಮ್ಮ ತಮ್ಮ ಮನೆಗಳಿಗೆ ಮುತ್ತೈದಿತನದ ಸಂಭ್ರಮಕ್ಕಾಗಿ ಶರಣದಂಪತಿಯರು ಬರಬೇಕೆಂದು ಆಹ್ವಾನಿಸುತ್ತಿದ್ದರು.

ಸಮಾಜೋಧಾರ್ಮಿಕ ಕಾರ್ಯದಲ್ಲಿ ತೊಡಗಿರುವ ಮಹಾಮಾತೆಯ ದೃಷ್ಟಿಯಲ್ಲಿ ಎಲ್ಲರೂ ಸಮಾನರಾಗಿ ಕಾಣುತ್ತಾರೆ. ಆದ್ದರಿಂದ ಯೋಗಶಕ್ತಿಯಿಂದ ತನ್ನ ಏಕಸ್ವರೂಪದ ಶರೀರವನ್ನು ಅನೇಕ ಶರೀರಗಳ ರೂಪದಲ್ಲಿ ಕಾಣಿಸಿಕೊಂಡು, ಎಲ್ಲರ ಮನೆಗೆ ಹೋಗಿ ಪ್ರಸಾದ ಸ್ವಿಕರಿಸಿದ ಪವಾಡ ಪ್ರಸಿದ್ಧಿಗೆ ಕಾರಣವಾಗುತ್ತದೆ. ತಾಯಿ ಗುಡ್ಡವ್ವೆ ಆಶ್ಚರ್ಯಕರವಾಗಿ ಪ್ರತಿಯೊಬ್ಬರ ಮನೆಯಲ್ಲೂ ಮುತ್ತೈದಿತನ ತೀರಿಸಿದ್ದು ಪವಾಡರೂಪಿನಿಂದ. ಇದು ಮಹಾಮಾತೆಯ ಮಹಾಮಹಿಮೆಯೆಂದು ಊರೆಲ್ಲಾ ಹರಡುತ್ತದೆ. ಎಲ್ಲರೂ ತಾಯಿಯ ಅಗಾಧ ಮಹಿಮೆಯನ್ನು ಕಂಡು ದಿಗ್ಭ್ರಾಂತರಾಗಿ ದಾನಮ್ಮನ ದರ್ಶನಕ್ಕಾಗಿ ಬಂದು ಸೇರುತ್ತಾರೆ. ಅಂಗವಿಕಲರು ಸೇರಿದಂತೆ ಹಲವಾರು ಜನರು ವರದಾನಿ ಗುಡ್ಡವ್ವೆಯಿಂದ ಇಷ್ಟಲಿಂಗದೀಕ್ಷೆ ಪಡೆಯುತ್ತಾರೆ. ಹೀಗಾಗಿ ದಾನಮ್ಮದೇವಿ ಆದವಾನಿಯ ಸಮಸ್ತ ಜನತೆಗೆ ಅಚ್ಚುಮೆಚ್ಚಿನ ಗುರುವಾಗುತ್ತಾಳೆ.

ದಾನಮ್ಮ ತನ್ನ ಪ್ರಭಾವಶಾಲಿ ವ್ಯಕ್ತಿತ್ವದಿಂದ ಅನೇಕ ಮನೆಗಳಲ್ಲಿ ಮುತ್ತೈದೆಯಾಗಿ ಪೂಜೆಗೊಂಡ ಪವಾಡ ಜನಮಾನಸದಲ್ಲಿದೆ. ಇಂದಿಗೂ ಅಲ್ಲಿನ ನೇಕಾರ ಮತ್ತು ಒಕ್ಕಲಿಗರಾದಿಯಾಗಿ ಅನೇಕರ ಮನೆಯ ಕುಲದೇವತೆಯಾಗಿರುವುದು (ಮನೆದೇವರು)

ವಿಶೇಷವಾಗಿದೆ. ದಾನಮ್ಮ ಶರಣೆಯನ್ನು ಗುರುಸ್ವರೂಪದಲ್ಲಿ ಕಂಡಿರುವುದು ಸ್ಪಷ್ಟವಾಗುತ್ತದೆ. ಲಿಂಗವಂತ ಧರ್ಮದಲ್ಲಿ ಮಹಿಳೆಯೋರ್ವಳು ಗುರುಸ್ಥಾನದಲ್ಲಿ ನಿಂತು ಯಾವ ಲಿಂಗಭೇದವಿಲ್ಲದೆ ಆದವಾನಿಯಲ್ಲಿ ಮಾಡಿದ ಸಾಧನೆಯು ಶರಣತತ್ತ್ವದ ವಿಜಯವಾಗಿದೆ.

ಜೇಡರ ದಾಸಿಮಯ್ಯನವರ ವಚನದಲ್ಲಿ "ಮೊಲೆ ಮುಡಿ ಬಂದಡೆ ಹೆಣ್ಣೆಂಬರು, ಗಡ್ಡ ಮೀಸೆ ಬಂದಡೆ ಗಂಡೆಂಬರು. ನಡುವೆ ಸುಳಿವ ಆತ್ಮನು ಹೆಣ್ಣು ಅಲ್ಲ, ಗಂಡು ಅಲ್ಲ ಕಾಣಾ! ರಾಮನಾಥಾ." ಎಂದು ಲಿಂಗಭೇದವನ್ನು ಅಲ್ಲಗಳೆದಿದ್ದಾರೆ. ಅದೇ ದಾಟಿಯಲ್ಲಿ ಶರಣೆ ಗೊಗ್ಗವ್ವೆಯವರ ವಚನದಲ್ಲಿಯೂ ನೋಡಬಹುದು "ಮೊಲೆ ಮುಡಿ ಬಂದಡೆ ಹೆಣ್ಣೆಂಬರು. ಮೀಸೆಕಾಸೆ ಬಂದಡೆ ಗಂಡೆಂಬರು. ಈ ಉಭಯದ ಜ್ಞಾನ ಹೆಣ್ಣೊ ಗಂಡೊ ನಾಸ್ತಿನಾಥಾ?" ಎಂದು ಪ್ರಶ್ನಿಸುತ್ತಾಳೆ. ಹೀಗೆ ಶರಣರು ಎಲ್ಲಾ ಭೇದಭಾವಗಳನ್ನು ಅಳಿದು ಸಮಾನತೆಯನ್ನು ಸಾರುತ್ತಾ ಬದುಕುವ ಕಲೆಯನ್ನು ದಾನಮ್ಮ ಆದವಾನಿಯ ಜನರಿಗೆ ಕಲಿಸುತ್ತಾಳೆ. ನೈತಿಕ ಜೀವನದ ನಿಷ್ಠೆಯನ್ನು ಬೋಧಿಸಿ, ಲಿಂಗದೀಕ್ಷೆಯನ್ನು ಕೊಡುತ್ತಾ ಶರಣ ಧರ್ಮದ ಉದಾತ್ತ ಆಚರಣೆಯಲ್ಲಿ ಅವರನ್ನು ತೊಡಗುವಂತೆ ಮಾಡುತ್ತಾಳೆ.

ಅಲಂಪುರದಲ್ಲಿ ದಾನಮ್ಮ

ಆದವಾನಿಯಿಂದ ಸುಮಾರು ೮೦ ಮೈಲುಗಳ ಅಂತರದಲ್ಲಿ ಅಲಂಪುರವೆಂಬ ಗ್ರಾಮವಿದೆ. ಅಲ್ಲಿ ತುಂಗಭದ್ರಾ ನದಿತೀರದ ಮೇಲೆ ಬಾಲಬ್ರಮ್ಹೇಶ್ವರ ದೇವಾಲಯವಿದೆ. ಅಲಂಪುರದ ಗ್ರಾಮದೇವತೆ ಬ್ರಮ್ಹೇಶ್ವರ ದೇವಾಲಯದಲ್ಲಿದ್ದ ಬ್ರಮ್ಹಲಿಂಗವನ್ನು ಕಿತ್ತು ತುಂಗಭದ್ರಾ ನದಿಯಲ್ಲಿ ಎಸೆದ ಪರಮತೀಯರು ಅಲ್ಲಿ ನಾರಾಯಣ ಮೂರ್ತಿಯನ್ನು ಸ್ಥಾಪಿಸಿದರು. ಇದು ಶೋಚನೀಯ ಸಂಗತಿಯೆಂದು ಗುಡಿಯ ಪೂಜಾರಿ ವೀರಮಾಚಯ್ಯನು ಚಿಂತಿಸುತ್ತಿರುವಾಗ ಕನಸಿನಲ್ಲಿ ಬಾಲಬ್ರಮ್ಹೇಶ್ವರನು ಬಂದು, ಶಿವಶರಣೆ ದಾನಮ್ಮನ ಕಡೆಗೆ ಹೋಗು ನಿನ್ನ ಚಿಂತೆಗೆ ಪರಿಹಾರ ಸಿಗುತ್ತದೆ ಎಂದು ಹೇಳಿದಂತಾಯಿತು. ಅಷ್ಟರಲ್ಲಿ ದಾನಮ್ಮನ ಕೀರ್ತಿ ಎಲ್ಲ ಕಡೆಗೆ ಗಾಢವಾಗಿ ಪಸರಿಸಿತು. ಆಗ ಪೂಜಾರಿ ವೀರಮಾಚಯ್ಯ ದಾನಮ್ಮನಿರುವ ಆದವಾನಿಗೆ ಹೋಗಿ ನಡೆದ ಘಟನೆಯನ್ನು ವಿವರಿಸುತ್ತಾನೆ. ಅದನ್ನು ಕೇಳಿದ ವರದಾನಿ ಗುಡ್ಡವ್ವೆ ಭಕ್ತರ ನೋವಿಗೆ ಸ್ಪಂದಿಸುವುದೆ ಶಿವಾನುಭವದ ನಡೆ ಎಂದು ಭಾವಿಸಿ, ಅಲಂಪುರಕ್ಕೆ ತಲುಪಿದಳು. ಶಸ್ತ್ರಧಾರಿಯಾಗಿ ಶಂಕರಿಯಂತೆ ಗರ್ಜಿಸುತ್ತಾ ರಣರಂಗಕ್ಕೆ ಧಾವಿಸಿದಳು. ವೀರರಮಣಿಯಾಗಿ, ಮಣ್ಣು ಹೊನ್ನಿಗೆ, ಸಾಮ್ರಾಜ್ಯ ಸ್ಥಾಪನೆಗೆ ಹೋರಾಡದೆ, ಧರ್ಮ

ಸಂಸ್ಥಾಪನೆಗಾಗಿ ಹೋರಾಡಿದಳು. ಆಕೆಯ ಶೌರ್ಯಕ್ಕೆ ಶತ್ರುಗಳು ಓಡಿಹೋದರು. ಭಕ್ತಸಮೂಹದ ಇಚ್ಛೆಯಂತೆ ಪುನಃ ಬಾಲಬ್ರಹ್ಮೇಶ್ವರ ಲಿಂಗವನ್ನು ಮರಳಿ ಪ್ರತಿಷ್ಠಾಪಿಸಿದ ಕಾರಣ ಬ್ರಹ್ಮೇಶ್ವರನ ಆರಾಧಕರು ಅತ್ಯಂತ ಹರ್ಷಗೊಂಡರು.

ಈ ಘಟನೆ ದಾನಮ್ಮ ಶರಣೆಯ ವೀರಗಣಾಚಾರದ ಮಹತ್ವದ ಸಾಧನೆಯೆಂದು ಶಾಸನ, ಕಾವ್ಯ ಹಾಗೂ ದೇವಿಯರ ತ್ರಿಪದಿಯಲ್ಲಿ ಇದರ ಉಲ್ಲೇಖವನ್ನು ಕಾಣಬಹುದು.

ವಾರಿಜಾಕ್ಷನ ಕಿತ್ತು ಮಾರವೈರಿಯ ನಿಲಿಸಿ
ಧರಣಿಯ ಮೇಲೆ ಜಪವೆತ್ತೀಶನ ಬೆರೆದ
ಧೀರ ಗುಡ್ಡವ್ವೆ; ಶರಣಾಗು.

ವರದಾನಿಯಮ್ಮನ ಶಿವಯೋಗ ಸಾಧನೆಯಿಂದ ಪಡೆದ ಧೈರ್ಯ ಶೌರ್ಯಗಳನ್ನು ಜನರೆಲ್ಲಾ ಹೊಗಳುತ್ತಾ ಶ್ರೇಷ್ಠ ಶರಣೆಯೆಂದು ಕೊಂಡಾಡಿದರು. ರಾಯಚೂರು, ಬಳ್ಳಾರಿ, ಅನಂತಪುರ ಮೊದಲಾದ ಪ್ರದೇಶಗಳಲ್ಲಿನ ಅನೇಕ ಜನರು ಶಿವಯೋಗ ಸಾಧನೆಗಾಗಿ ಲಿಂಗದೀಕ್ಷೆ ಪಡೆದರು. ದಾನಮ್ಮನು ಇಷ್ಟಲಿಂಗದೀಕ್ಷೆ ನೀಡಿ ಆಶೀರ್ವದಿಸುತ್ತ ತನ್ನೊಳಗಿನ ಅರಿವಿನ ಜಾಗೃತಿಗಾಗಿ ಮತ್ತು ತಮ್ಮ ಉದ್ಧಾರಕ್ಕಾಗಿ ಈ ಇಷ್ಟಲಿಂಗವನ್ನು ಪೂಜಿಸಿದ್ದಾದರೆ ಆ ಪರಾತ್ಪರ ಪರಮಾತ್ಮನ ಪ್ರೀತಿಗೆ ಪಾತ್ರರಾಗುತ್ತೀರಿ ಎಂದು ಜನಸಮೂಹಕ್ಕೆ ತಿಳಿಸಿದಳು. ಅದಕ್ಕೆ ಅಣ್ಣ ಬಸವಣ್ಣನವರು ಹೇಳಿದ್ದಾರೆ.

ಎನ್ನ ತನು ಮನವೆರಡನೂ
ಗುರು ಕರುಣದಿಂದ ಲಿಂಗದಲ್ಲಿ ಏಕವ ಮಾಡಿದನಾಗಿ
ಎನ್ನ ಅಂತರಂಗ ಬಹಿರಂಗವೆರಡೂ ನಿಮ್ಮವು ನೋಡಾ!
ನಿಮ್ಮಂತರಂಗದೊಳಗೆ ನಿಮ್ಮನೆ ಇಂಬಿಟ್ಟುಕೊಂಬೆ;
ನಿಮ್ಮ ಬಹಿರಂಗದೊಳಗೆ ನಿಮ್ಮನೆ ನೀವಾಗಿ ಪೂಜಿಸುವೆ;
ನಿಮ್ಮ ಅಜಿವಿಂದ ನಿಮ್ಮನೆ ಅಜಿವೆ ಕಾಣಾ,
ಕೂಡಲಸಂಗಮದೇವಾ.

– ಬಸವಣ್ಣನವರು

ಅಂತರಂಗ ಎಂದೊಡನೆ ಬಹಿರಂಗ ಮುಂದೆ ಬಂದು ನಿಲ್ಲುತ್ತದೆ. ಬಹಿರಂಗದ ಹಿಂದೆ ಅಂತರಂಗ ತಾನಾಗಿ ಮೂರ್ತಿಗೊಳ್ಳುತ್ತದೆ. ಈ ಎರಡರಲ್ಲಿ ಮೂಡಿ ತೋರುವ ಧ್ಯಾನ ಶಿವಯೋಗದ ಅನುಭಾವಕ್ಕೆ ಮೂಲಾಧಾರ ಅರಿವು. ಅಲ್ಲಿ ನಡೆದಿರುವ ಧ್ಯಾನ ಪೂಜೆಯ ಅರಿವಿನ ನಿಜಸ್ಥಿತಿಯಿಂದ ಆ ಮಹಾಘನ ವಸ್ತುವಾದ ನಿಮ್ಮನ್ನು ನೆಲೆಗೊಳಿಸಿ,

ಅಂತರಂಗ ಬಹಿರಂಗವೆಂಬ ಸಂದು ಬಿರುಕನ್ನು ಬಿಚ್ಚಿ ಕಳೆದು, ಒಂದುಗೂಡಿಸಿ ಒಂದೇಯಾಗಿ ಮಾಡುತ್ತದೆ. ಗುರುಕರುಣೆಯಿಂದ ಒಳಹೊರಗೆ ಒಂದಾಗಿ ಪೂಜಿಸುವ ಕ್ರಮ ಅರುಹಿದ ಬಸವಣ್ಣನವರ ಜ್ಞಾನದ ಬೆಳಕಲ್ಲಿ ನಡೆದಾಗ ಜೀವನದಲ್ಲಿ ಸತ್ಯದ ದರ್ಶನವಾಗುತ್ತದೆ. ಹೀಗೆ ದಾನಮ್ಮ ಶರಣರ ತತ್ತ್ವಗಳನ್ನು ತಿಳಿಸುತ್ತಾ ಬಹಳ ದಿನಗಳವರೆಗೆ ಅಲಂಪುರದಲ್ಲಿ ನೆಲೆಸದೆ ಮುಂದೆ ದಕ್ಷಿಣದತ್ತ ಸಾಗಿದಳು.

ಕಾವೇರಿ–ಕಪಿಲಾ ಸಂಗಮ ದರ್ಶನ

ಆ ಕಾಲಘಟ್ಟದಲ್ಲಿ ಉತ್ತರ ಕನಾಟಕದ ಮಧ್ಯ ಪ್ರದೇಶದಲ್ಲಿರುವ ಬಾಗೇವಾಡಿ, ಹಿಪ್ಪರಗಿ, ಮುದನೂರ, ಸೊನ್ನಲಿಗೆ, ಮಂಗಳವಾಡ ಮುಂತಾದ ಗ್ರಾಮಗಳಿರುವ ಭಾಗಗಳಲ್ಲಿ ಬಸವೇಶ್ವರ, ಸಿದ್ಧರಾಮೇಶ್ವರ, ಮಡಿವಾಳ ಮಾಚಿದೇವ, ದೇವರ ದಾಸಿಮಯ್ಯ, ರೇವಣಸಿದ್ಧೇಶ್ವರ ಮೊದಲಾದ ಶಿವಶರಣರು ಬಹುಮುಖವಾಗಿ ಶರಣಧರ್ಮವನ್ನು ವಿಸ್ತರಿಸಿದರು. ಪಶ್ಚಿಮ ಪ್ರಾಂತದಲ್ಲಿ ಬನವಸೆ, ಬಳ್ಳಿಗಾವಿಗಳಲ್ಲಿದ್ದ ಪ್ರದೇಶದಲ್ಲಿ ಅಲ್ಲಮಪ್ರಭು, ಅನಿಮಿಷ, ಅಕ್ಕಮಹಾದೇವಿ, ಸತ್ಯಕ್ಕ, ಮುಕ್ತಾಯಕ್ಕ ಅನೇಕ ಶರಣರು ಉದಯವಾಗಿದ್ದರು. ಶ್ರೀಶೈಲ ಭಾಗದಲ್ಲಿ ಸಕಳೇಶ ಮಾದರಸ, ಪಂಡಿತಾರಾಧ್ಯ, ಮುಕ್ತಿಮುನಿ, ಮೊದಲಾದವರೂ ಚೋಳಮಂಡಲದಲ್ಲಿ ಚನ್ನಯ್ಯ, ಮೆರೆಮಿಂಡದೇವ, ಶಿವಪ್ರಿಯನಾಚಿ ಹೀಗೆ ಮೊದಲಾದವರೂ ಪ್ರಸಿದ್ಧಿಗೆ ಬಂದಿದ್ದರು.

ದಾನಮ್ಮ ತನ್ನ ಪತಿಯೊಡನೆ ಮೈಸೂರು ಭಾಗದ ಕಪಿಲ–ಕಾವೇರಿ ಸಂಗಮದ ಕಡೆಗೆ ಬಂದು ನಿಂತರು. ಅಲ್ಲಿಯ ಜನರು ಗುಂಪು ಗುಂಪಾಗಿ ದಾನಮ್ಮನವರ ದರ್ಶನಕ್ಕಾಗಿ ಬರುತ್ತಿದ್ದರು. ದಾನಮ್ಮ ಶಿವಯೋಗ ಸಿದ್ಧಿಯಿಂದ ಅನೇಕರ ಅಂಗವೈಫಲ್ಯವನ್ನು ನಿವಾರಿಸುತ್ತಿದ್ದಳು.

ಗುಡ್ಡಾಪುರದ ದಾನಮ್ಮ ನೊಂದವರ ಬಾಳಿಗೆ ಬೆಳಕಾಗಿ, ಸಾಂತ್ವನದ ನುಡಿಯೊಂದಿಗೆ ಸಹಾಯ ಹಸ್ತ ಚಾಚುತ್ತಾ ಅನೇಕರ ಹಸಿವು ತಣಿಸಲು ಅನ್ನದಾಸೋಹ ಕೈಗೊಳ್ಳುತ್ತಾ ಮುನ್ನಡೆಯುತ್ತಿದ್ದಳು. ಪೂರ್ವದಿಂದ ದಕ್ಷಿಣಕ್ಕೆ, ಆದವಾನಿಯಿಂದ ಕಾವೇರಿ ನದಿ ಪ್ರವಹಿಸುವ ಕಡೆಗೆ ಸಂಚರಿಸುತ್ತಾ ಕಾವೇರಿ ಕಪಿಲಾ ಸಂಗಮಸ್ಥಾನದ ಪಂಚಲಿಂಗೇಶ್ವರ ಸೋಮನಾಥ ಪ್ರದೇಶದಲ್ಲಿ ಶಿವಯೋಗ ಸಾಧನೆಗೈದಳು. ಈ ಸ್ಥಳ ನಂಜನಗೂಡಿನಿಂದ ೧೮ ಮೈಲಿ ದೂರದಲ್ಲಿನ ತಿರುಮಕೂಡಲು ನರಸೀಪುರದಲ್ಲಿದೆ. ಇದು ಜಗತ್ತಿನ ಅತ್ಯಂತ ರಮಣೀಯ ಪ್ರದೇಶಗಳಲ್ಲಿ ಒಂದೆಂದು ಹೇಳಲಾಗುತ್ತದೆ. ಇಲ್ಲಿನ ಬಹಳ ಎತ್ತರದಲ್ಲಿರುವ ನದಿಗೆ ಅಗಸ್ತ್ಯೇಶ್ವರ ಲಿಂಗದಲ್ಲಿನ ಒಂದು ಪ್ರಾಕೃತಿಕ ರಂಧ್ರದಿಂದ ಎಷ್ಟು ತೀರ್ಥ ತೆಗೆದರೂ ಬತ್ತದಿರುವುದು ಸೋಜಿಗವೆನಿಸುತ್ತದೆ. ನದಿಗಳ ಸಂಗಮ

ಸ್ಥಳದಲ್ಲಿ ನಿಂತು ನೋಡಿದರೆ ಎಡಗಡೆ ಹೆಚ್ಚಾಗಿ ಮರಳ ಮೇಲೆ ಹರಿಯುವ ಕಪಿಲೆಯ ಬಗ್ಗಡದ ನೀರು ಇರುವುದು. ಇಂತಹ ಸಂಗಮ ಕ್ಷೇತ್ರದಲ್ಲಿ ದೀನದಲಿತರ ರೋಗಿಗಳ ಕಣ್ಮಣಿಯಾದಳು. ಟಿ. ನರಸೀಪುರದಿಂದ ಒಂದೆರಡು ಮೈಲಿ ದೂರದಲ್ಲಿ ಸೋಮನಾಥಪುರದಲ್ಲಿ ಸೋಮೇಶ್ವರ ದೇವಾಲಯ ಒಂದು ಪ್ರಮುಖ ಆಕರ್ಷಣೆಯ ಪ್ರವಾಸಿ ತಾಣವಾಗಿದೆ.

ತಮಿಳುನಾಡಿಗೆ ಸಂಚಾರ

ಹನ್ನೆರಡನೆಯ ಶತಮಾನದಲ್ಲಿ ಶರಣೆ ದಾನಮ್ಮನು ದಕ್ಷಿಣಭಾರತದಲ್ಲಿ ಸಂಚಾರಮಾಡಿ ಧರ್ಮಪ್ರಚಾರ ಮಾಡುತ್ತಾ ಕಾವೇರಿ-ಕಪಿಲಾ ಸಂಗಮಸ್ಥಾನದಿಂದ ಚೋಳರ ರಾಜಧಾನಿ 'ಕಂಚಿ' ನಗರಕ್ಕೆ ತೆರಳಿದಳು. ಅಲ್ಲಿ ಕಣಗಿಲ ಮಹಾರಾಜನು ಭವ್ಯವಾದ ವಿಷ್ಣುದೇವಾಲಯವನ್ನು ಕಟ್ಟಿಸಿದ ಹೆಮ್ಮೆಯಲ್ಲಿದ್ದನು. ಅಲ್ಲದೆ ಅಲ್ಲಿಯ ದೇವರ ದರ್ಶನ ಮಾಡಲು ವಿಷ್ಣುಪಂಥದವರಿಗೆ ಮಾತ್ರ ಅವಕಾಶವಿತ್ತು. ಅನ್ಯಮತದವರಿಗೆ ದೇವಾಲಯದ ಸನಿಹಕ್ಕೂ ಸುಳಿಗೊಡುತ್ತಿರಲಿಲ್ಲ. ಇದನ್ನು ಅರಿತ ವೀರಶರಣೆ ಸ್ವತಃ ಕಣಗಿಲ ಮಹಾರಾಜನ ಅರಮನೆಗೆ ಹೋಗಿ ರಾಜನಿರುವುದು ಸರ್ವಜನಾಂಗದ ಕಲ್ಯಾಣಕ್ಕಾಗಿ ಯಾವದೇ ತರಹದ ಭೇದಭಾವ ಮಾಡಬಾರದು. ರಾಜನಾದವನು ಪ್ರಜೆಗಳ ಹಿತೈಷಿಯಾಗಿರಬೇಕು. ಇದೇ ರಾಜಧರ್ಮ ಎಂದಳು. ನನ್ನ ಮುಂದೆ ನಿನ್ನ ಗೊಡ್ಡು ಉಪದೇಶಬೇಡ ನಿನಗೂ ಆ ದೇವಾಲಯದೊಳಗೆ ಪ್ರವೇಶವಿಲ್ಲ. ಎಂದು ರಾಜನು ದರ್ಪದಿಂದ ಕಠೋರವಾಗಿ ನುಡಿದನು.

ದಾನಮ್ಮನು ನಸುನಗುತ್ತಾ ಓ! ರಾಜನೆ ನಾನು ಈಗಾಗಲೇ ದೇವಾಲಯದೊಳಗೆ ಹೋಗಿ ಬಂದಿರುವೆ. ಬೇಕಾದರೆ ನೀನು ನಿನ್ನ ವಿಷ್ಣುವನ್ನು ಕೇಳು ಎಂದಳು. ನನ್ನ ನಿಯಮವನ್ನು ಧಿಕ್ಕರಿಸಿದ್ದಲ್ಲದೆ ನನ್ನ ಆರಾಧ್ಯ ದೇವರ ಕುರಿತು ಹಗುರವಾಗಿ ಹೇಳುತ್ತಿರುವೆಯಾ ಎಂದು ಕೋಪಗೊಂಡನು. ಅಹಂಕಾರದ ಅಂಧಃಕಾರದಲ್ಲಿ ಮುಳುಗಿದ ರಾಜನು 'ನಿನ್ನನ್ನು ಈಗಲೇ ಬಂಧಿಸುವೆ' ಎಂದು ದಾನಮ್ಮನನ್ನು ಹಿಡಿಯಲು ಹೋಗುವಷ್ಟರಲ್ಲಿಯೇ ದೇಹವೆಲ್ಲಾ ನಡುಗಿ ಕಣ್ಣು ಕಾಣಿಸದಂತಾಯಿತು. ಆಗ ಗಾಬರಿಗೊಂಡು ವಿಷ್ಣುದೇವನನ್ನು ಭಕ್ತಿ, ಶ್ರದ್ಧೆಯಿಂದ ಪ್ರಾರ್ಥಿಸುತ್ತಿರಲು ಅವನಿಗೆ ಅಂತರವಾಣಿಯೊಂದು ಕೇಳಿಸಿತು. ನೀನು ಕಾಣದಿರವುದನ್ನು ಆರಾಧಿಸುವುದರಿಂದ ಯಾವ ಪ್ರಯೋಜವಿಲ್ಲ. ನಿನ್ನ ಎದುರಿಗೆ ನಿಂತಿರುವ ತಾಯಿ ಸಾಮಾನ್ಯಳಲ್ಲ. ಮಹಾ ಶಿವಶರಣೆ ಸಾಕ್ಷಾತ್ ಜಗನ್ಮಾತೆಯಾಗಿರುವಳು. ಆ ಮಹಾತಾಯಿಯಲ್ಲಿ ಕ್ಷಮೆ ಕೇಳು ಎಂದು ಕೇಳಿಸಿತು.

ರಾಜನು ಆಶ್ಚರ್ಯಚಕಿತನಾದನು. 'ನಾನು ಏನೆಲ್ಲ ಮಾಡಿ ದೇವಾಲಯ ನಿರ್ಮಿಸಿ ವಿಷ್ಣುವಿನ ಮೂರ್ತಿ ಕೂಡಿಸಿ ಪೂಜೆ ಮಾಡುತ್ತಿದ್ದರೂ ನನಗೆ ಮುಕ್ತಿಯಿಲ್ಲ ಎಂದಾದರೆ ಈ ಮೂರ್ತಿಯ ಪೂಜೆ ಮಾಡಿ ಏನೂ ಪ್ರಯೋಜನವಿಲ್ಲ' ಎಂದ ರಾಜನು ದಾನಮ್ಮನಲ್ಲಿಗೆ ಧಾವಿಸಿ, ಹೇ ಜಗನ್ಮಾತೆ ನನ್ನನ್ನು ಶಿಷ್ಯನ್ನನ್ನಾಗಿ ಸ್ವೀಕರಿಸಿ ಉದ್ಧರಿಸಬೇಕೆಂದು ಪರಿಪರಿಯಿಂದ ಅಂಗಲಾಚಿದನು. ಆಗ ದಾನಮ್ಮ, ಮಹಾರಾಜ! ಈಗ ನನ್ನ ಇಷ್ಟಲಿಂಗ ಪೂಜೆಯ ಸಮಯವಾಗಿದೆ ನಾನು ಹೊರಡಬೇಕು ಎಂದಳು. ಮಹಾತಾಯಿ ಅರಮನೆಯಲ್ಲಿಯೆ ಲಿಂಗಪೂಜೆ ಮಾಡಿರಿ. ಅಲ್ಲದೆ ನನಗೂ ಲಿಂಗದೀಕ್ಷೆ ಕೊಡಬೇಕೆಂದು ವಿನಯದಿಂದ ಕೈಮುಗಿದು ಬೇಡಿಕೊಂಡನು.

ಸಮನ್ವಯದ ಶರಣಸಿದ್ಧಾಂತವನ್ನು ಕಲ್ಯಾಣದಲ್ಲಿ ಶರಣರು ತಮ್ಮ ವಚನಗಳ ಮೂಲಕ ಲಿಂಗಧ್ಯಾನದ ಮಹತ್ವ ತಿಳಿಸಿ, ಮುಕ್ತಿಪಥದ ದಾರಿ ಅರುಹಿದ್ದಾರೆ ಎಂದು ದಾನಮ್ಮ ಮಹಾರಾಜನಿಗೆ ತಿಳಿಸುತ್ತಾಳೆ.

ನೋಡಿ ನೋಡಿ ಲಿಂಗಧ್ಯಾನವೆನ್ನ ಮನ.
ರಾಗರಂಜನೆಯ ಉತ್ಪತ್ತಿ ಸ್ಥಿತಿ ಲಯ ನಿನಗೆಂದಾದುವು.
ರಾಗರಂಜನೆಯ ಪೂಜೆ ಎನ್ನ ಮನ,
ಕೂಡಲಸಂಗಮದೇವ, ಅಹಾ, ಎನ್ನ ಮನ !

– ಬಸವಣ್ಣನವರು

ಈ ವಚನದ ಸಾಲುಗಳಲ್ಲಿ ಮನಸ್ಸೇ ಲಿಂಗಸ್ವರೂಪವಾದಾಗ ಉಕ್ಕುವ ಉದ್ಗಾರವೇನೆಂದರೆ ಇಷ್ಟಲಿಂಗವನ್ನು ನೋಡಿ ನೋಡಿ ನನ್ನ ಮನಸ್ಸು ಲಿಂಗಧ್ಯಾನಸ್ಥವಾಯಿತು. ಲಿಂಗದಲ್ಲಿ ಮುಳುಗಿತು. ರಾಗರಂಜನೆ ಎಂದರೆ ಪ್ರೇಮೋನ್ಮಾದ ಅಥವಾ ಭಕ್ತಿಯ ಆವೇಶ, ಇಲ್ಲಿ ಅದರ ಉತ್ಪತ್ತಿ ಸ್ಥಿತಿ ಲಯ ಎಲ್ಲವೂ ನಿನ್ನೊಳಗೆ, ಮತ್ತೆ ನಿನಗಾಗಿ, ಈ ಭಕ್ತಿಯ ಆವೇಶದ ಆದಿ ಮಧ್ಯ ಅಂತ್ಯ ಎಲ್ಲವೂ ಲಿಂಗದಲ್ಲಿ. ಇಷ್ಟಲಿಂಗ ಪೂಜೆಯಲ್ಲಿ ಮನಸ್ಸು ಮಗ್ನವಾಗಿದೆ. ಅಹಾ, ಎನ್ನ ಮನ ! ಎನ್ನುವ ಉದ್ಗಾರದಲ್ಲಿ ಮನಸ್ಸೇ ಲಿಂಗವಾಗಿರುವ ತನ್ಮಯತೆ ಕಾಣುತ್ತದೆ. ಅಂದರೆ ಲಿಂಗಧ್ಯಾನದ ತನ್ಮಯತೆ, ಭಕ್ತಿಯ ಆವೇಶ, ಮನಸ್ಸೆಲ್ಲಾ ಲಿಂಗವೇ ವ್ಯಾಪಿಸಿರುವ ರೀತಿ ಮತ್ತು ಮನಸ್ಸಿನಲ್ಲಿ ಉಕ್ಕುತ್ತಿರುವ ಸಂತೋಷದ ಅನುಭವವಾಗುತ್ತದೆ.

'ಶಿವ' ಎಂದರೆ ಮಂಗಳಕರವಾದುದು. 'ಯೋಗ' ಎಂದರೆ ಕೂಡುವುದು. 'ಶಿವಯೋಗ' ಎಂದರೆ ಮಂಗಳಕರವಾದುದರ ಜೊತೆಗೆ ಕೂಡುವುದು. ಜೀವಾತ್ಮನು

ಮಂಗಳಕರವಾದುದರ ಜೊತೆಗೆ ಸೇರುವುದೇ ಶಿವಯೋಗ. ಇಷ್ಟಲಿಂಗ ಪೂಜೆಯಿಂದ ಇಂಥ ಶಿವಯೋಗವನ್ನು ಸಾಧಿಸಲು ಸಾಧ್ಯವಾಗುತ್ತದೆ. ಆದರೆ ಸ್ಥಾವರದಿಂದ ಇದನ್ನು ಸಾಧಿಸಲಿಕ್ಕಾಗದು ಎಂಬುದನ್ನು ತಿಳಿಸುತ್ತಾರೆ. ಪ್ರತಿಯೊಬ್ಬರೂ ಹೀಗೆ ವಿಶ್ವಮಾನವರಾಗಿ ಮುಕ್ತಿ ಪಡೆಯಬೇಕೆಂಬುದೇ ಬಸವಾದಿ ಶರಣರ ಸಂದೇಶವಾಗಿದೆ. ಎಂದು ದಾನಮ್ಮ ತಾಯಿಯು ಇಷ್ಟಲಿಂಗ ಪೂಜೆಯ ಮಹತ್ವ ತಿಳಿಸುತ್ತಾ ರಾಜನಿಗೆ ಲಿಂಗದೀಕ್ಷೆ ನೀಡಿದ್ದಲ್ಲದೆ ರಾಜಧಾನಿಯಲ್ಲಿದ್ದ ಜನರಲ್ಲಿ ಅಪೇಕ್ಷೆ ಪಟ್ಟವರಿಗೆಲ್ಲಾ ಲಿಂಗದೀಕ್ಷೆ ನೀಡಿದಳು.

ದೇಹವೆ ದೇಗುಲವಾಗಿರಲು, ಬೇರೆ ಮತ್ತೆ
ದೇವಾಲಯವೇಕಯ್ಯಾ?
ಪ್ರಾಣವೆ ಲಿಂಗವಾಗಿರಲು, ಬೇರೆ ಮತ್ತೆ ಲಿಂಗವೇಕಯ್ಯಾ?
ಹೇಳಲಿಲ್ಲ, ಕೇಳಲಿಲ್ಲ.
ಗುಹೇಶ್ವರ ನೀನು ಕಲ್ಲಾದರೆನಾನೇನಪ್ಪೆನಯ್ಯ?

– ಅಲ್ಲಮಪ್ರಭುದೇವರು

ಶರಣ ಸಂಕುಲದಿಂದ ಕೂಡಿದ್ದ ಅನುಭವ ಮಂಟಪದ ಶೂನ್ಯಪೀಠಾಧೀಶರಾಗಿದ್ದ ಅಲ್ಲಮಪ್ರಭುಗಳು ಇಂಥ ಅನೇಕ ವಚನಗಳನ್ನು ರಚಿಸಿದ್ದಾರೆ. ಮಾನವ ಜನಾಂಗದ ಮಧ್ಯೆ ಇರುವ ಅನಿಷ್ಟ ಭೇದಗಳನ್ನೆಲ್ಲ ಅಳಿಸಿ ಸಕಲಜೀವಿಗಳಿಗೆ ಒಳ್ಳೆಯದಾಗುವಂಥ ಇಷ್ಟಾರ್ಥವನ್ನು ಕೊಡುವ ಇಷ್ಟಲಿಂಗವು ಪರಶಿವನ ಸಂಕೇತವಾಗಿದೆ. ಆ ಅರಿವಿನ ಕುರುಹು ಗುರುವಿನ ಅನುಗ್ರಹದಿಂದ ದೀಕ್ಷೆಯ ಮೂಲಕ ಪಡೆದ ಇಷ್ಟಲಿಂಗವನ್ನು ಅಂಗದ ಮೇಲೆ ಧರಿಸುತ್ತಾ ಸದಾಚಾರಿಯಾಗಿರಬೇಕು. ಇಷ್ಟಲಿಂಗವು ಜೀವಾತ್ಮ ಮತ್ತು ಪರಮಾತ್ಮನ ಮಧ್ಯೆ ಅದ್ವೈತವನ್ನು ಸಾಧಿಸುವಂಥದ್ದು. ಇಷ್ಟಲಿಂಗ ಪೂಜಕ ತನ್ನೊಳಗಿನ ದೇವರ ಜೊತೆ ಒಂದಾಗುವ ಕ್ರಮ ಶರಣರ ಶಿವಯೋಗ ಸಾಧನೆಯಲ್ಲಿ ಅಡಗಿದೆ. ದೇಹವೆಂಬ ಗುಹೆಯಲ್ಲಿ ಗುಹೇಶ್ವರನಾದ ಪರಮಾತ್ಮ ಮತ್ತು ಜೀವಾತ್ಮ ಒಂದೆಂಬ ಭಾವವುಂಟಾದಾಗ ವ್ಯಕ್ತಿಯು ವ್ಯಷ್ಟಿಪ್ರಜ್ಞೆಯಿಂದ ಹೊರಬಂದು ಸಮಷ್ಟಿ ಪ್ರಜ್ಞೆಯೊಂದಿಗೆ ವಿಶ್ವಮಾನವನಾಗುತ್ತಾನೆ.

ದಾನಮ್ಮನ ಅನುಭಾವದ ನುಡಿಗಳಿಂದ ಸಂತೋಷಪಟ್ಟ ರಾಜನು ತಾಯಿಯ ಮಹಾಮಹಿಮೆಯನ್ನು ಕೊಂಡಾಡುತ್ತಾ ಅಂದಿನಿಂದ 'ವಿಷ್ಣುಕಂಚಿ ಹೋಗಿ ಶಿವಕಂಚಿಯಾಗಿದೆ' ಎಂದು ಕೈಮುಗಿದು ಶಿರಬಾಗಿ ವಿಶೇಷ ಆದರ ಸತ್ಕಾರದಿಂದ ಧನ್ಯತಾಭಾವ ವ್ಯಕ್ತಪಡಿಸುತ್ತಾನೆ.

ಕರ್ನಾಟಕದ ದಕ್ಷಿಣಕ್ಕೆ ಸಾಗುತ್ತಾ ತಮಿಳನಾಡು, ಕೇರಳದಲ್ಲೂ ಶರಣ ಧರ್ಮ ಪ್ರಚಾರ ಮಾಡುತ್ತಾ, ವರದಾನಿಯಮ್ಮ ಮಧುರೆಯ ಮೀನಾಕ್ಷಿದೇವಿಯ ದರ್ಶನ ಪಡೆದು ರಾಮೇಶ್ವರಕ್ಕೆ ನಡೆದರು. ರಾಮೇಶ್ವರದಲ್ಲಿ ಮೊದಲ ಸಲ ಸಮುದ್ರ ಕಂಡು ಅದರ ವಿಶಾಲತೆಗೆ ಬೆರಗಾದರು. ಆ ತೆರೆಗಳ ಅಬ್ಬರದಲ್ಲಿ ಓಂಕಾರನಾದ ಕೇಳಿದಂತಾಗಿ ಮಂತ್ರಮುಗ್ಧರಾಗಿ ಸಮುದ್ರ ತೀರದಲ್ಲಿ ಹೆಚ್ಚು ವೇಳೆ ಕಳೆಯುತ್ತಿದ್ದರು. ಅಲ್ಲಿಯ ರಾಮೇಶ್ವರ ಲಿಂಗವೂ ಜ್ಯೋತಿರ್ಲಿಂಗಗಳಲ್ಲಿ ಒಂದು. ಸೃಷ್ಟಿಯ ಸೊಬಗು, ಶಿಲೆಕಲೆಯ ಬೆಡಗುಗಳನ್ನು ಸವಿಯುತ್ತ ಕೆಲವುಕಾಲ ಅಲ್ಲಿಯೆ ಇದ್ದರು. ಯಾತ್ರಿಕರು, ಊರ ಜನರು ರೋಗಾದಿಗಳಿಂದ ಬಳಲುತ್ತಿರುವುದನ್ನು ನೋಡಲಾರದೆ ದಾನಮ್ಮ-ಸೋಮನಾಥರು ಅವರ ಆರೈಕೆ ಮಾಡಿ, ಆಶೀರ್ವದಿಸಿ ರೋಗ ಮುಕ್ತರನ್ನಾಗಿ ಮಾಡುತ್ತಿದ್ದರು. ಇವರ ಪ್ರಭಾವಕ್ಕೊಳಗಾದ ಹಲವಾರು ಜನ ಬಡವ ಬಲ್ಲಿದರು ದಾನಮ್ಮನವರ ಭಕ್ತರಾದರು.

ರಾಮೇಶ್ವರ ದೇವಸ್ಥಾನಕ್ಕೆ ತಪ್ಪದೆ ಬರುತ್ತಿದ್ದ ಆ ಊರ ಲಕ್ಷಾಧೀಶ ವಜ್ರವ್ಯಾಪಾರಿ ಅರ್ಧಾಂಗವಾಯುವಿನಿಂದ ಬಳಲುತ್ತಿದ್ದ, ಯಾವ ಔಷಧಿಗೂ ಗುಣವಾಗುತ್ತಿರಲಿಲ್ಲ. ಅಲ್ಲಿಯ ಅರ್ಚಕರೊಬ್ಬರು ವಜ್ರವ್ಯಾಪಾರಿಯ ಪತ್ನಿಯನ್ನು ಕುರಿತು, ದಾನಮ್ಮದೇವಿ ದಂಪತಿಯರ ಮಹಿಮೆಯನ್ನು ಮತ್ತು ತಮ್ಮ ಕಣ್ಣೆದುರಿಗೆ ನೂರಾರು ಜನ ರೋಗಮುಕ್ತರಾದ ಘಟನೆಗಳನ್ನು ವರ್ಣಿಸಿದರು. ಆಗ ಅವಳು ದಾನಮ್ಮನವರು ವಾಸಿಸುವ ಸ್ಥಳದ ಕಡೆಗೆ ಧಾವಿಸುತ್ತಾಳೆ. "ತಾಯಿ, ನಮ್ಮ ಮನೆಯಲ್ಲಿ ಅಷ್ಟೈಶ್ವರ್ಯವಿದೆ, ಆದರೆ ನನ್ನ ಪತಿ ಅರ್ಧಾಂಗವಾಯುವಿನಿಂದ ಬಳಲುತ್ತಿದ್ದಾರೆ ಎಂದು ಬೇಡಿಕೊಂಡಾಗ, ದಾನಮ್ಮನಿಗೆ ಕನಿಕರವೆನಿಸಿತು. ಅವರ ಮನೆಗೆ ಹೋಗಿ ದೃಷ್ಟಿಯೋಗದ ಮೂಲಕ ಭಸ್ಮದ ಗಟ್ಟಿಯನ್ನು ಹಿಡಿದು ಧ್ಯಾನ ಮಾಡಿದರು. ದೇವರೆ ನಿನ್ನ ಕರುಣೆಯಿಂದ ಇವನ ರೋಗ ನಿವಾರಣೆಯಾಗಲಿ, ಎಂದು ಬಸವ ಮಂತ್ರ ಜಪಿಸುತ್ತ ರೋಗಿಗೆ ಉಪಚಾರ ಮಾಡಿದರು. ದಂಪತಿಯರ ಭಕ್ತಿಭಾವದಿಂದ ಮಾಡುವ ಉಪಚಾರವ ಕಂಡು, ರೋಗಿಯು ಆನಂದ ಭಾಷ್ಪದಿಂದ ನಮಿಸುತ್ತ, ನಾನು ಈ ರೋಗದಿಂದ ಮುಕ್ತನಾಗಬಲ್ಲೆ ಎಂಬ ಆತ್ಮವಿಶ್ವಾಸ ಮೂಡಿ ಅವನು ಶೀಘ್ರದಲ್ಲಿ ಗುಣವಾಗುತ್ತಾನೆ. ಅವನು ಅತ್ಯಂತ ಸಂತೋಷದಿಂದ ದಾನಮ್ಮನವರಿಗೆ ಬೇಡಿದಷ್ಟು ಧನಕನಕ ಕೊಡಲು ಮುಂದಾಗುತ್ತಾನೆ. ಆದರೆ ದಾನಮ್ಮ ಅದನ್ನು ಬಡಬಗ್ಗರಿಗೆ ನೀಡಬೇಕೇಂದು ಹೇಳುತ್ತಾರೆ.

ರಾಮೇಶ್ವರದಲ್ಲಿಯೂ ದಿನ ದಿನಕ್ಕೆ ಭಕ್ತರ ಜನಸಂದಣಿ ಹೆಚ್ಚಿತು. ದಾನಮ್ಮ ಜನರ ಇಷ್ಟಾರ್ಥಗಳನ್ನು ಪೂರೈಸುತ್ತಿದ್ದಳು. ತತ್ಪರಿಣಾಮ ಅಲ್ಲಿಯೂ ದೊಡ್ಡ ಪಂಗಡವನ್ನೇ

ಸೃಷ್ಟಿಸಿ ಶರಣತತ್ತ್ವ ಬಿತ್ತಿದರು. ಸೋಮನಾಥ ಪತ್ನಿ ದಾನಮ್ಮನೊಂದಿಗೆ ಮಾತಾಡುತ್ತ, ಈ ಸಮುದ್ರದ ವಿಸ್ತಾರ, ಆಳ ನೋಡಿದಾಗಲೆಲ್ಲ ಬಸವೇಶ್ವರರ ನೆನಪಾಗುತ್ತದೆ. ಆ ಬಸವಾದಿ ಶರಣರ ವಚನ ಸಾಹಿತ್ಯ ಹೀಗೆ ವಿಸ್ತಾರವಾಗಿದೆ. ಆ ವಚನಗಳಲ್ಲಿ ಹುದುಗಿದ ಅಂತರಂಗದ ಅನುಭಾವ ಸಮುದ್ರದ ಆಳದಂತಿದೆ. ಒಂದೊಂದು ವಚನವನ್ನು ಅರಿತುಕೊಂಡು ಅರಗಿಸಿಕೊಂಡಾಗ ಅದರ ಅರ್ಥ ನಮಗಾಗುತ್ತದೆ. ಆ ಬಸವ ಭಾನುವಿನ ನೆನಪಿಗಾಗಿ ಈ ರಾಮೇಶ್ವರದಲ್ಲಿ ಬಸವೇಶ್ವರರ ದೇವಾಲಯ ಕಟ್ಟಿಸೋಣ ಎಂದರಂತೆ ಅದಕ್ಕಾಗಿಯೆ ರಾಮೇಶ್ವರ ಕ್ಷೇತ್ರದ ಹತ್ತಿರ ಬಸವೇಶ್ವರರ ದೇವಾಲಯವನ್ನು ಕಟ್ಟಿಸಿದಳೆಂಬ ಪ್ರತೀತಿಯಿದೆ. ಭಕ್ತರ ಇಷ್ಟಾರ್ಥಗಳನ್ನು ಪೂರೈಸಿ, ಪಾವನ ಜಗನ್ಮಾತೆ ವರದಾನಿಯಮ್ಮ ಎಂದು ಅಲ್ಲಿಯ ಜನಸಮುದಾಯ ಕೊಂಡಾಡಿತು.

ಶರಣೆಯ ಸಂಚಾರ ಉತ್ತರ ಭಾರತದೆಡೆಗೆ

ಗುಡ್ಡಾಪುರದ ದಾನಮ್ಮ ದಕ್ಷಿಣ ಭಾರತದಿಂದ ಉತ್ತರ ಭಾರತದ ಕಡೆಗೂ ಸಂಚಾರ ಮಾಡಿ ಕಾಶಿ, ಗಯಾ, ಪ್ರಯಾಗ, ಬದರಿ–ಕೇದಾರ ಮೊದಲಾದ ಕ್ಷೇತ್ರಗಳನ್ನು ಸಂದರ್ಶಿಸಿದಳು. ಅಲ್ಲಿ ಅವರನ್ನು ಕಾಣಲು ಬರುವ ಸಾವಿರಾರು ಭಕ್ತರಿಗೆ ಶರಣ ಧರ್ಮದ ತತ್ತ್ವಗಳನ್ನು ತಿಳಿಹೇಳಿದ್ದಲ್ಲದೆ ಇಷ್ಟಪಟ್ಟವರಿಗೆ ಇಷ್ಟಲಿಂಗ ದೀಕ್ಷೆ ನೀಡಿ ಅವರವರ ಇಚ್ಛೆಗಳನ್ನು ನೇರವೆರಿಸಿ ಶರಣ ದಂಪತಿಗಳು ಮತ್ತೇ ದಕ್ಷಿಣ ಭಾರತದ ಕರ್ನಾಟಕದ ಕಡೆಗೆ ಬಂದರು.

ಇಷ್ಟಲಿಂಗದ ಪೂಜೆಯ ಮೂಲಕ ಪ್ರಾಣಲಿಂಗದ ಅನುಭವ ಪಡೆದು ಭಾವಲಿಂಗದಲ್ಲಿ ತನ್ಮಯರಾಗಬಹುದು. ಒಬ್ಬ ಮನುಷ್ಯನ ಜೀವನದಲ್ಲಿ ಬಾಲ್ಯ, ಯೌವ್ವನ, ವೃದ್ಧಾಪ್ಯ ಹೇಗೋ ಹಾಗೆ ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗಗಳು ಬೇರೆ ಅಲ್ಲ. ಲಿಂಗಧಾರಿಗಳಾದವರೆಲ್ಲ ಲಿಂಗಪೂಜೆಯನ್ನು ಅರಿತುಕೊಂಡು ಬಸವನಾಮ ಜಪಿಸುತ್ತ ತ್ರಿಕಾಲ ಲಿಂಗಪೂಜೆ ಮಾಡಿಕೊಳ್ಳಲು ಮರೆಯದಿರಿ. "ಅರುಹ ತೋರಲು ಕುರುಹು" ಎಂದು ಕೊಟ್ಟ ಲಿಂಗವೇ ಮುಖ್ಯ. ಲಿಂಗಕ್ಕೆ ನೀರೆರೆದು ವಿಭೂತಿ ಧರಿಸಿ, ಹೂವನ್ನು ಏರಿಸಿದರೆ ಪೂಜೆಯಾಗುವುದಿಲ್ಲ. ಮನಸ್ಸನ್ನು ಏಕಾಗ್ರಗೊಳಿಸಿಕೊಂಡು, ಚಿತ್ತವನ್ನು ಸ್ಥಿರಗೊಳಿಸಿಕೊಳ್ಳಿರಿ. ಏಕಾಗ್ರತೆಯಿಂದ ಲಿಂಗದಲ್ಲಿ ದೃಷ್ಟಿನೆಟ್ಟು ಶಿವಸಾಕ್ಷಾತ್ಕಾರ ಪಡೆದುಕೊಳ್ಳವದು ಸಾಧ್ಯವಿದೆ. ಎಂದು ದಾನಮ್ಮ ಭಕ್ತಿಯಿಂದ ಬಂದವರ ಮನದ ಮೈಲಿಗೆಯನ್ನು ಕಳೆದು ಶರಣರ ವಚನಗಳನ್ನು ತಿಳಿಸುತ್ತಾ ಅಳಿಮನ ಮುಕ್ತರನ್ನಾಗಿಸಿದಳು. ವೀರಗಣಾಚಾರ ತತ್ತ್ವದಿಂದ ಕಲ್ಯಾಣದ ಕಿರಣಗಳನ್ನು ದಶದಿಕ್ಕುಗಳಿಗೂ ಪಸರಿಸಿದಳು.

ಶರಣರ ಕ್ಷೇತ್ರಗಳಿಗೆ ಭೇಟಿ

ಕನ್ನಡನಾಡಿಗೆ ಬರುತ್ತಿದ್ದಂತೆ ದಾನಮ್ಮನ ಮನಸ್ಸಿನಲ್ಲಿ ಬಸವಾದಿ ಶರಣರ ಸ್ಥಾನಗಳನ್ನು ಸಂದರ್ಶಿಸಬೇಕೆಂಬ ಬಯಕೆಯಾಯಿತು. ದಕ್ಷಿಣಕ್ಕೆ ಹೊರಳಿ ಸೊನ್ನಲಿಗೆಗೆ ಬಂದರು. ಈ ಸ್ಥಳದಲ್ಲಿ ಶಿವಯೋಗಿ ಸಿದ್ಧರಾಮೇಶ್ವರರು ಅನೇಕ ರಾಜರಿಂದಲೂ, ಸಾಮಂತರಿಂದಲೂ ಪೂಜಿತರಾಗಿ ಬಹಳ ಪ್ರಸಿದ್ಧಿಯನ್ನು ಪಡೆದಿದ್ದರು. ಅಲ್ಲಿ ದಂಪತಿಯರು ಕೆಲಕಾಲ ಶಿವಯೋಗದಲ್ಲಿ ಕಳೆದರು. ಅಲ್ಲಿಂದ ಬಸವಣ್ಣನವರ ಐಕ್ಯಸ್ಥಳವಾದ ಕೂಡಲಸಂಗಮ ಕ್ಷೇತ್ರಕ್ಕೆ ಬಂದರು. ಅಲ್ಲಿ ಕೆಲವು ದಿವಸಗಳು ಕಳೆದು ಅಲ್ಲಿಂದ ಪಶ್ಚಿಮಕ್ಕೆ ೧೮ ಮೈಲುಗಳ ದೂರವಿರುವ ಘಟಪ್ರಭಾ ನದಿಯು ಕೃಷ್ಣೆಗೆ ಕೂಡಿದ ಸಂಗಮಸ್ಥಾನಕ್ಕೆ ಬಂದರು. ಇಲ್ಲಿಗೆ ಸಮೀಪವಾಗಿ ಇಳಿಹಾಳ ಬೊಮ್ಮಯ್ಯ, ಚಂದಿಮರಸರು ಮೊದಲಾದ ಶರಣರ ಸ್ಥಳಗಳನ್ನು ಸಂದರ್ಶಿಸಿ ಅಲ್ಲಿಂದ ೨೦ ಮೈಲು ದೂರ ಇರುವ ಇರುವ ಬಸವಣ್ಣನವರ ಜನ್ಮಸ್ಥಳ ಬಾಗೇವಾಡಿಗೆ ಬಂದು ಅಲ್ಲಿ ಕೆಲಕಾಲವಿದ್ದು ಅನೇಕರಿಗೆ ಬಸವಣ್ಣನವರ ವಚನ ಹಾಡುತ್ತಾ ದಾನಮ್ಮ ಇಷ್ಟಲಿಂಗ ದೀಕ್ಷೆಯನ್ನು ನೀಡುತ್ತಾಳೆ.

ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ
ಪಾತಾಳದಿಂದತ್ತತ್ತ ನಿಮ್ಮ ಶ್ರೀ ಚರಣ.
ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀ ಮಕುಟ!
ಅಪ್ರಮಾಣ ಅಗಮ್ಯ ಅಗೋಚರ ಅಪ್ರತಿಮ ಲಿಂಗವೆ,
ಕೂಡಲಸಂಗಮದೇವಯ್ಯಾ,
ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ!

–ಬಸವಣ್ಣನವರು.

ಶರಣತತ್ತ್ವದಲ್ಲಿ ಇರುವ ಗುರು ಲಿಂಗ ಜಂಗಮದ ಮಹತ್ವವನ್ನು ಗುಡ್ಡವ್ವೆ ತಿಳಿಸಿ ಕೊಡುತ್ತಾಳೆ. ಮುಂದೆ ಉಳವಿ ಕ್ಷೇತ್ರದ ಕಡೆಗೆ ಹೋಗಬೇಕೆಂದು ಸಿದ್ಧಳಾಗುತ್ತಾಳೆ. ಚನ್ನಬಸವಣ್ಣನವರನ್ನು ಕಾಣುವ ಕಾತರದಿಂದ ಉಳವಿ ಕ್ಷೇತ್ರವನ್ನು ತಲಪುವುದರಲ್ಲಿಯೇ ಚನ್ನಬಸವಣ್ಣನವರು ಲಿಂಗೈಕ್ಯರಾಗಿದ್ದಾರೆ ಎಂಬ ವಿಷಯ ತಿಳಿಯುತ್ತದೆ. ಆಗ ದಾನಮ್ಮನಿಗೆ ತುಂಬಾ ಸಂಕಟವಾಯಿತು. ಚಿನ್ನಯಜ್ಞಾನಿ ಚನ್ನಬಸವಣ್ಣವರ ಮಹಿಮೆಯನ್ನು ಲಿಂಗವಂತ ಧರ್ಮಪರಂಪರೆಯಲ್ಲಿ ಅಜರಾಮರವಾಗಿ ಮೆರೆಯಲೆಂದು ಮನತುಂಬಿ ಹರಸುತ್ತಾಳೆ.

ಶರಣರು ಇರುವ ಸ್ಥಳಗಳಿಗೆ ಹೋಗಿ ಅನೇಕ ಶರಣರ ದರ್ಶನ ಪಡೆದು, ವಿಚಾರ ವಿನಿಮಯ ಮಾಡಿಕೊಂಡು ದಾನಮ್ಮ– ಸೋಮನಾಥ ಶರಣ ದಂಪತಿಗಳು

ಮುಂದೆ ನಡೆದರು. ಇವರ ದರ್ಶನ ಪಡೆದ ಜನಸಾಮಾನ್ಯರು, ರಾಜಮಹಾರಾಜರು ಇವರ ಕೃಪೆಗೆ ಪಾತ್ರರಾದರು. ಶಿವಶರಣೆ ದಾನಮ್ಮ ಜನಸಾಮಾನ್ಯರ ಬಂಧುವಾಗಿ, ರಾಜಮಹಾರಾಜರ ಮೇಲೆ ಲಿಂಗವಂತ ಪ್ರತಿಭೆಯಾಗಿ ಪ್ರಭಾವ ಬೀರಿದಳು. ಸಾಮಾಜಿಕ ಸೇವೆಯ ಕಾರ್ಯಗುಣದಿಂದ ವರದಾನಿ ಗುಡ್ಡವ್ವೆ, 'ದಾನದಾಸೋಹಿ ದಾನಮ್ಮ' ಎಂಬ ಅಭಿದಾನ ಪಡೆದು ಸಾರ್ಥಕತೆ ಪಡೆದವಳು. ಶರಣೆಯು ಸಂಚರಿಸಿದ ಸ್ಥಳಗಳಲ್ಲಿ ಜನರ ಸಂಕಷ್ಟ ಪರಿಹರಿಸಲು ಅನೇಕ ಪವಾಡಗಳನ್ನು ಜರುಗಿಸಿದಳು. ಕಲ್ಯಾಣದಲ್ಲಿ ಕೋಲಾಹಲದ ನಂತರ ಜನಸಾಮಾನ್ಯರಲ್ಲಿ ಉಂಟಾದ ಗೊಂದಲ, ದ್ವೇಷಗಳನ್ನು ಎದುರಿಸುತ್ತಾ, ಆತ್ಮಸಂರಕ್ಷಣೆಯೊಂದಿಗೆ ವೀರಗಣಾಚಾರಿಣಿಯಾಗಿ ಅನೇಕ ಕ್ಷೇತ್ರಗಳ ದರ್ಶನ ಕೈಕೊಂಡು, ಅಲಲ್ಲಿ ಧ್ಯಾನ, ಇಷ್ಟಲಿಂಗಪೂಜೆ, ಶಿವಯೋಗ, ತಪಸ್ಸು, ಜಪಗಳಲ್ಲಿ ನಿರತಳಾದ ಕುರಿತು ದಂತಕಥೆಗಳಿವೆ.

ಮರಳಿ ಗುಡ್ಡಾಪುರಕ್ಕೆ

ಉಳವಿಯಿಂದ ನೇರವಾಗಿ ತನ್ನ ಶಿವಯೋಗ ಸ್ಥಳವಾದ ಗುಡ್ಡಾಪುರಕ್ಕೆ ಬರುವುದರಲ್ಲಿಯೇ ತಂದೆ ತಾಯಿಗಳಿಬ್ಬರೂ ಲಿಂಗೈಕ್ಯರಾಗಿದ್ದರು. ಅವರ ಗದ್ದುಗೆಗಳಿಗೆ ದಂಪತಿಗಳು ಶರಣು ಸಲ್ಲಿಸಿದರು. ಈ ಕ್ಷೇತ್ರದಲ್ಲಿಯೇ ಅನಂತರಾಯ ಹಾಗೂ ಸಿರಸಮ್ಮನವರ ಸಮಾಧಿಗಳನ್ನು ಈಗಲೂ ಕಾಣಬಹುದು. ಗುಡ್ಡಾಪುರಕ್ಕೆ ಬರುವಷ್ಟರಲ್ಲಿ ಅವರು ಮಾಡಿದ ಮಹತ್ಕಾರ್ಯಗಳಿಂದಾಗಿ ಅವರ ಕೀರ್ತಿ ಎಲ್ಲೆಡೆಯಲ್ಲಿ ಹರಡಿತ್ತು. ಆದ್ದರಿಂದ ಗುಡ್ಡಾಪುರದಲ್ಲಿನ ಜನರು ಅವರನ್ನು ಅತ್ಯಂತ ಭಕ್ತಿ ಶ್ರದ್ಧೆಯಿಂದ "ತಾಯಿ ದಾನಮ್ಮ ಶರಣೆ, ಇರಲೆಮ್ಮ ನಿನ್ನ ಕರುಣ ಕೊಡು ನಮಗೆ ವರವ ಮುಗಿಯುವೆ ಕರವ ಬಾಗಿಸುವೆ ಶಿರವ" ಎಂದು ತಾಳಬದ್ಧವಾಗಿ ಹಾಡುತ್ತ, ಭಜನೆ ಮಾಡುತ್ತ ಸನ್ಮಾನಿಸುತ್ತಾ ಸ್ವಾಗತಿಸಿದರು. ಅಲ್ಲಿ ಕುಳಿತ ಸಹಸ್ರಾರು ಜನರು ಭಕ್ತಿಭಾವ ಭರಿತರಾಗಿ, ದಾನಮ್ಮ ದಂಪತಿಯರ ದರ್ಶನಕ್ಕೆ ಮಂಟಪದ ತುಂಬ ಜನರು ಸಾಲು ಸಾಲಾಗಿ ಕುಳಿತ್ತಿದ್ದರು.

ದಾನಮ್ಮ ಮಂಟಪದ ಎದುರು ಪೂಜಾಗೃಹದ ಹೊರಭಾಗದಲ್ಲಿ ತನಗಾಗಿ ಸಿದ್ಧಗೊಳಿಸಿದ ಆಸನದಲ್ಲಿ ಕುಳಿತಳು. ಜನ ಮರು ದಿವಸ ದೀಪಾವಳಿ ಹಬ್ಬವೆಂಬುದನ್ನು ಲೆಕ್ಕಿಸದೆ ದೂರ ದೂರದ ಊರಿನಿಂದ ತಾಯಿಯ ದರ್ಶನಕ್ಕೆ ಬಂದಿದ್ದರು. ದಾನಮ್ಮ ತವರು ಮನೆಗೆ ಬಂದ ಮಕ್ಕಳನ್ನು ತಾಯಿ ಅಕ್ಕರೆಯಿಂದ ಕರೆದು ಮಾತನಾಡಿಸುವಂತೆ ಮಾತಾಡಿದಳು. ಅವರವರ ಬೇಡಿಕೆಗಳನ್ನು ಕೇಳಿ ಶುಭವಾಗಲೆಂದು ಅವರ ಇಷ್ಟಾರ್ಥ ಸಿದ್ಧಿಸಲೆಂದು ಆಶೀರ್ವದಿಸಿದಳು.

ಅಪ್ಪಾ, ದಾಸೋಹದಲ್ಲಿ ನಿಮ್ಮ ಅಣತಿಯಂತೆ ಹೋಳಿಗೆ ಪ್ರಸಾದ ಸಿದ್ಧವಾಗಿದೆ. ಆದರೆ ಇಲ್ಲಿ ಹಲವಾರು ಹೆಣ್ಣುಮಕ್ಕಳು ಇಷ್ಟಲಿಂಗ ದೀಕ್ಷೆ ಪಡೆಯುವ ಆಕಾಂಕ್ಷೆಯಲ್ಲಿದ್ದಾರೆ. ಲಿಂಗಧಾರಣೆ ಮಾಡಿಕೊಳ್ಳಲು ಬಯಸಿದವರಿಗೆ ಅಂಗದಮೇಲೆ ಲಿಂಗಯ್ಯನ ಸ್ವಾಯತವ ಮಾಡಿಸಿದಳು ದಾನಮ್ಮ. ಬಸವಣ್ಣನವರು ಮಾನವ ಜನಾಂಗಕ್ಕೆ ಮಹಿಳಾ ಕುಲಕ್ಕೆ ಮಾಡಿದ ಉಪಕಾರ ಹೇಳತೀರದು. ಅಕ್ಕನಾಗಮ್ಮ ತಾಯಿಯವರು ಹೇಳಿದ್ದಾರೆ "ಎನ್ನ ಕುಲ ಸೂತಕವ ಕಳೆದಾತ ಬಸವಣ್ಣ" ಎಂದು. ದೇವಪೂಜೆಗೆ ಅನರ್ಹಳೆನಿಸಿದ ಶೂದ್ರಳೆನಿಸಿದ ಹೆಣ್ಣಿಗೆ ಇಷ್ಟಲಿಂಗವನ್ನಿತ್ತು ಮಹಿಳಾ ಕುಲಕ್ಕೆ ಕುಲೋದ್ಧಾರಕ ಮಾಡಿದ ಬಸಣ್ಣನವರನ್ನು ನಾವು ಎಷ್ಟು ನೆನೆದರೂ ಸಾಲದು. ದುರಾಶೆಯ ಪುರುಷರಿಗೆ, ಕಾಮಾಂಧರಾದವರಿಗೆ ಹೊನ್ನು ಮಣ್ಣಿನಂತೆ ಹೆಣ್ಣೊಂದು ಭೋಗದ ವಸ್ತುವೆನಿಸಿದ್ದಳು. ಅಂತ ಪರಿಸರದಲ್ಲಿ ಶೂದ್ರರಿಗೆ ಸ್ತ್ರೀಯರಿಗೆ ಸಮಾನತೆಯನ್ನು ಮಹಾ ಮಾನವತಾವಾದಿ ಬಸವಣ್ಣನವರ ಕೃಪೆಯಿಂದ ನಾವು ನೀವೆಲ್ಲ ಇಷ್ಟಲಿಂಗದ ಮೂಲಕ ಶಿವಸಾಕ್ಷಾತ್ಕಾರ ಪಡೆಯಬಹುದಾಗಿದೆ.

ಪಾವನನಾದೆನು ಬಸವಣ್ಣಾ,
ನಿಮ್ಮ ಪಾವನ ಮೂರ್ತಿಯ ಕಂಡು.
ಪರತತ್ತ್ವವನೈದಿದೆ ಬಸವಣ್ಣಾ,
ನಿಮ್ಮ ಪರಮ ಸೀಮೆಯ ಕಂಡು.
ಪದನಾಲ್ಕು ಮೀರಿದೆ ಬಸವಣ್ಣಾ,
ನಿಮ್ಮ ಪರುಷ ಪಾದವ ಕಂಡು.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯನ ಕೂಡಿದೆ.
ಬಸವಣ್ಣ, ಬಸವಣ್ಣ, ಬಸವಣ್ಣಾ ನೀನು ಗುರುವಾದೆಯಾಗಿ.

– ಸಿದ್ಧರಾಮೇಶ್ವರರು

ಶಿವಯೋಗಿ ಸಿದ್ಧರಾಮೇಶ್ವರರು ಬಸವಣ್ಣನವರ ಭಕ್ತಿಗೆ ಅವರ ಆತ್ಮಶಕ್ತಿಗೆ ಆಕರ್ಷಿತರಾಗಿ ರಚಿಸಿದ ವಚನವಿದು. ಬಸವಣ್ಣನವರು ಸಾಮಾಜಿಕ, ಆರ್ಥಿಕ, ಆಧ್ಯಾತ್ಮಿಕ ಪ್ರಗತಿಯನ್ನು ಮಾಡಿದ್ದಾರೆ. ಸತ್ಯಶರಣರು ಪಾವನ ಮಾಡಿದ ಭೂಮಿಯಲ್ಲಿ ವಾಸಿಸಿ, ಅವರ ಕಾರುಣ್ಯವನ್ನು ಪಡೆದುದರಿಂದ ನನ್ನ ಜೀವನ ಪಾವನ ಎಂದು ನಂಬಿದ್ದೇನೆ. ಬಸವಣ್ಣನವರು ನಮಗಾಗಿ ರಚಿಸಿದ ಸಪ್ತಸೂತ್ರಗಳು ನಿಚ್ಚಣಿಕೆಯಾಗಿ "ಕಳಬೇಡ, ಕೊಲಬೇಡ," ಎಂಬ ವಚನದ ಮೆಟ್ಟಿಲುಗಳಾಗಿವೆ. ಅದನ್ನು ಏರುವುದು ಬಿಡುವುದು ತಮ್ಮೆಲ್ಲರ ಇಚ್ಛೆಯಾಗಿದೆ, ಎಲ್ಲ ಕಡೆಗಳಿಂದ ಬಂದ ಭಕ್ತರಿಗೆ ಸರ್ವರಿಗೂ ಶುಭವಾಗಲಿ ಎಂದು ದಾನಮ್ಮ ಹರಸಿದರು.

ದಾನಮ್ಮ ಪತಿ ಸೋಮನಾಥರೊಂದಿಗೆ ಶರಣಗಣಂಗಳ ದರ್ಶನ ಪಡೆದು, ಶಿವಯೋಗ ಸಾಧನೆ ನೇರವೇರಿಸುತ್ತಾ, ಶೈವ ವೈಷ್ಣವ ಸಂಘರ್ಷವನ್ನು ಶಮನಗೊಳಿಸಿ, ನೊಂದವರ ಪಾಲಿಗೆ ಸಾಂತ್ವನ ನೀಡುವ ಬಂಧುವಾಗಿ, ಜ್ಞಾನದ ಕಲಶವಾಗಿ ಗುಡ್ಡಾಪುರಕ್ಕೆ ಮರಳುತ್ತಾರೆ. ದಾನಮ್ಮ ತನ್ನ ಜೀವಿತದ ಕೊನೆಯ ದಿನಗಳಲ್ಲಿ ಗುಡ್ಡಾಪುರವನ್ನು ತನ್ನ ಕಾಯಕ ಭೂಮಿಯನ್ನಾಗಿ ಮಾಡಿಕೊಂಡಳು. ಇಷ್ಟಲಿಂಗಪೂಜೆಯಲ್ಲಿ ನಿರತಳಾಗಿ, ಭಕ್ತಿ, ನಿಷ್ಠೆಯಿಂದ ದಾಸೋಹ ಪೂರೈಸಿ, ಅಧ್ಯಾತ್ಮದ ಸಾಧನೆಯ ಪಥದಲ್ಲಿ ಮುಂದುವರೆದು ಷಟಸ್ಥಲ ಹಂತವನ್ನು ಮೀರಿದ ಮಹಂತಳೆಂದು ಪ್ರಸಿದ್ಧಿ ಪಡೆದಳು. "ಅಲ್ಲಲ್ಲಿಯ ಶರಣರು, ಅಲ್ಲಲ್ಲಿಯೇ ನಿಲ್ಲಲು, ಅಲ್ಲಲ್ಲಿಯ ಭಕ್ತಿ ಅಲ್ಲಲ್ಲಿಯೇ ಅಡಗಿತ್ತು." ಎಂಬಂತೆ ಗುಡ್ಡಾಪುರದ ಒಂದು ಶಾಸನದಲ್ಲಿ ಸೋಮೇಶ್ವರದೇವರ ಭಕ್ತಳು ಗುಡ್ಡವ್ವೆ ಅಲ್ಲಿಯ ದೇವಾಲಯದಲ್ಲಿ ವೀರವ್ರತ ಧಾರಿಯಾಗಿ ಬಾಳಿದ್ದನ್ನು ಸೂಚಿಸುತ್ತದೆ.

ವೀರಶರಣೆ ದಾನಮ್ಮ ಐಕ್ಯಳಾದುದು

ಶರಣಧರ್ಮದಲ್ಲಿ ಬಸವಾದಿ ಶರಣರ ಆತ್ಮವು ದೇಹತ್ಯಾಗ ಮಾಡುವುದಕ್ಕೆ ಅಥವಾ ಸೃಷ್ಟಿಯಲ್ಲಿ ಲೀನವಾಗುವುಕ್ಕೆ ಬಯಲು, ಶೂನ್ಯ ಅಥವಾ ಐಕ್ಯವೆಂದು ಹೇಳಲಾಗಿದೆ. ಶಿವಯೋಗ ನಿಷ್ಠ ಶರಣರು ಅನುಭಾವಿಗಳು. ಇಷ್ಟಲಿಂಗ ಪೂಜೆಯಲ್ಲಿ ನಿರತರಾದ ಸಂದರ್ಭದಲ್ಲಿ ತಮ್ಮ ಶಿವಯೋಗ ಸಾಧನೆಯಿಂದ ಆತ್ಮನನ್ನು ಪರಮಾತ್ಮನಲ್ಲಿ ಲೀನಗೊಳಿಸಿಕೊಳ್ಳುತ್ತಾರೆ. "ಮೊರೆವ ನಾದವ ಕೇಳಿ ಉರಿವ ಜ್ಯೋತಿಯ ನೋಡಿ, ಸುರಿವ ಅಮೃತವ ಸವಿದುಂಡ। ಕಾರಣ, ತೊರೆದೆನು ಜನನ ಮರಣಂಗಳ" ಅಕ್ಕನ ತ್ರಿವಿಧಿಯ ನುಡಿಗಳನ್ನು ಅನ್ನುತ್ತ ದಾನಮ್ಮ ತನ್ನನ್ನು ತಾನೇ ಮರೆತುಬಿಟ್ಟಳು. ಗುಡ್ಡವ್ವೆಗೆ ಇಹಲೋಕದ ಜೀವನವನ್ನು ಮುಗಿಸಿ ಲಿಂಗದಲ್ಲಿ ಲೀನವಾಗುವ ಸಮಯ ಬಂದಿದೆ ಎನಿಸತೊಡಗಿತು. ಆದರೂ ಕೆಲಕಾಲ ವರದಾನಿಯಮ್ಮ ಇಷ್ಟಲಿಂಗ ಯೋಗದಿಂದ ದೀನ-ದುಃಖಿಗಳ ಕಷ್ಟಗಳನ್ನು ದೂರಮಾಡುತ್ತಾ ಜನರನ್ನು ಸಂತೋಷಪಡಿಸುತ್ತಿದ್ದಳು.

ಗುಡ್ಡಾಪುರದ ಈ ಸೋಮೇಶ್ವರನ ಪವಿತ್ರಸ್ಥಾನದಲ್ಲಿ ಅನ್ಯಾಯವಾಗಬಾರದು. ಹಿಂಸೆಗೆ ಅವಕಾಶವಿರಕೂಡದು. ಬಂದವರು ಎಲ್ಲರೂ ಸಂತೃಪ್ತಭಾವದಿಂದ ಹೋಗುವಂತಾಗಲಿ. ಎಲ್ಲರಿಗೂ ಸದಾ ದೇವನ ಕೃಪಾಶೀರ್ವಾದವಿರಲಿ. ಎಂದು ಆ ದಿವಸದ ಲಿಂಗಪೂಜೆಗೆ ಹೋದಳು ದಾನಮ್ಮ. ತನ್ನ ಬದುಕಿನ ಅಂತಿಮ ಹಂತದಲ್ಲಿ ಜಗದ ಜೀವ ಜಂಜಡದಿಂದ ದೂರವಾಗಿ ಲಿಂಗದಲ್ಲಿ ಲೀನವಾಗಬೇಕೆಂದು ಅವಳ ಮನಸ್ಸು ಹಾತೊರೆಯುತ್ತಿತ್ತು. ಈ ತೀವ್ರತೆಗೆ ಸ್ಪಂದಿಸಿದ ಶರಣೆ ದಾನಮ್ಮ ಒಂದು ದಿನ ಸಂಭ್ರಮದಿಂದ ಇಷ್ಟಲಿಂಗ ಪೂಜೆ ಮುಗಿಸಿದ ನಂತರ ದಾಸೋಹದ ಸಂದರ್ಭದಲ್ಲಿ

ಭಕ್ತಗಣಕ್ಕೆ ಶರಣು ಸಲ್ಲಿಸಿದಳು.

ಅಂಗದಾಶ್ರಯವಳಿದು ಲಿಂಗದಾಶ್ರಯವುಳಿದು
ಲಿಂಗದೊಳು ಮನವು ಒಡವೆರದ। ಕಾರಣವು
ಅಂಗಗುಣವೆನಗೆ ಇನಿತಿಲ್ಲ

ಅಕ್ಕಮಹಾದೇವಿಯ ಯೋಗಾಂಗ ತ್ರಿವಿಧಿ ಹೇಳುತ್ತಿದ್ದಳು. ದೇಹ ಭಾವವಳಿಯಿತು. ಕಿವಿಯಲ್ಲಿ ಓಂಕಾರನಾದ ಝೇಂಕರಿಸುತ್ತಿತ್ತು. ದಾನಮ್ಮನವರ ಆತ್ಮಜ್ಯೋತಿ ಪ್ರಜ್ವಲಿಸಹತ್ತಿತ್ತು. ಆನಂದ ಸಾಗರದಲ್ಲಿ ತೇಲುತ್ತಿದ್ದ ದಾನಮ್ಮ ನಿತ್ಯದ ಪೂಜೆ ಮುಗಿಸಿ ಏಳುವ ಹೊತ್ತಾದರೂ ಮಿಸುಕಾಡಲಿಲ್ಲ. ಮುಖ ಆನಂದಭರಿತವಾಗಿತ್ತು. ದೃಷ್ಟಿ ಲಿಂಗದಲ್ಲಿ ನೆಟ್ಟಿತ್ತು. ಅಂಗವಳಿದು ಲಿಂಗದಲ್ಲಿ ಲೀನವಾದಳು. ಹೀಗೆ ಬಯಲಾದ ಮೇರುಸಾಧಕಿ ವೀರಶರಣೆ ಗುಡ್ಡಾಪುರದ ದಾನಮ್ಮ. ಶರಣರು ಇಚ್ಛಾಮರಣಿಗಳು ಎಂಬುದನ್ನು ಲೋಕಕ್ಕೆ ತೋರಿಸಿಕೊಟ್ಟಳು. "ಬೆಳಗಿಂಗೆ ಬೆಳಗು ಸಿಂಹಾಸನವಾಗಿ, ಬೆಳಗು ಬೆಳಗ ಕೂಡಿದಂತಾಯಿತು ಎಂಬ ಶರಣವಾಣಿ ಸತ್ಯ. "ದಾನಮ್ಮನ "ದೇಹವೇ ದೇವಾಲಯವಾಗಿದೆ, ಶಿರವೇ ಹೊನ್ನ ಕಳಶವಾಗಿದೆ" ಎಂಬ ಸೋಮನಾಥರ ಉದ್ಗಾರ ಕೇಳಿದೊಡನೆ ಎಲ್ಲರೂ ಒಳಗೆ ಬಂದು ನೋಡುತ್ತಿದ್ದರು. "ಅವ್ವನ ಮುಖದ ಮೇಲೆ ಕಾಣುತ್ತಿರುವ ಆನಂದಮಯ ಹೊಂಗಿರಣಗಳೆ ಸಾಕ್ಷಿ, ಎಂದು ಎಲ್ಲರೂ ಭಕ್ತಿಯಿಂದ ದಾನಮ್ಮ ತಾಯಿಗೆ ನಮಿಸಿದರು.

ಗಾಳಿ ಗಂಧವನಪ್ಪಿದಂತೆ, ಬಯಲು ಬಯಲನಪ್ಪಿದಂತೆ
ಬೆಳಗು ಬೆಳಗನಪ್ಪಿದಂತೆ, ಬೆಳಗು ಬೆಳಗನಪ್ಪಿ
ಮಹಾ ಬೆಳಗಾದಂತೆ ಶರಣಲಿಂಗವನಪ್ಪಿ
ಮಹಾಲಿಂಗವೇ ತಾನು ತಾನಾಗಿ ನಿರ್ವಯಲಳಾಗಿ
ಕುಳಿತ ನಮ್ಮವ್ವನ ನೋಡಬನ್ನಿರೆ

ಎಂದು ನೆರದ ಜನರೆಲ್ಲ ದುಃಖಿಸುತ್ತ ಪಾದಕ್ಕೆರಗಿದರು. ತನುವನ್ನು ಜನ ಕಲ್ಯಾಣಕ್ಕೆ ಮನವನ್ನು ದೇವರ ನೆನಹಿಗೆ ಅರ್ಪಿಸಿದ ದಾನಮ್ಮ ಸೋಮೇಶ್ವರನ ಪಾದಕ್ಕೆ ಅರ್ಪಿತಳಾದ ನಿನ್ನ ಪಾದಕ್ಕೆ ನಮೋ ನಮೋ' ಎನ್ನುತ್ತಾ, ಸೋಮನಾಥರು **"ಅಂಬರದೊಳಗಣ ತುಂಬಿದ ಕೊಡನುಕ್ಕಿ, ಕುಂಭಿನಿಯ ಮೇಲೆ ಸುರಿಯಲು। ಮಾನವರು ಶಂಭು ಲೋಕಕ್ಕೆ ತೆರಳಿದರು"** ಎಂದು ತನ್ನ ಬಳಿಯಲ್ಲಿದ್ದ ಆತ್ಮೀಯರಿಗೆ ಮುಂದಿನ ವ್ಯವಸ್ಥೆಯ ಭಾರವನ್ನು ವಹಿಸಿ, ಸೋಮೇಶ್ವರನ ಗರ್ಭಗುಡಿಯೊಳಗೆ ಪ್ರವೇಶಿಸಿದ ಸೋಮನಾಥರು ಧ್ಯಾನಸ್ಥರಾಗಿ ಕುಳಿತರು.

ಲಿಂಗದಲ್ಲಿ ನುಡಿದು, ಲಿಂಗದಲ್ಲಿ ನಡೆದು
ಲಿಂಗದಲ್ಲಿ ಮುಟ್ಟಿ, ಲಿಂಗದಲ್ಲಿ ವಾಸಿಸಿ
ಲಿಂಗದಲ್ಲಿ ಕೇಳಿ, ಲಿಂಗವಾಗಿ ನೋಡಿ
ಸರ್ವಾಂಗವು ಲಿಂಗವಾಗಿ ಐಕ್ಯಳಾದಳು ವರದಾನಿ ಗುಡ್ಡವ್ವೆ.

ಎಂದು ಗುಡ್ಡಾಪುರದ ದಾನಮ್ಮನ ಬಗ್ಗೆ ಕವಿ ಲಕ್ಕಣ್ಣ ದಂಡೇಶನು ತನ್ನ ಶಿವತತ್ತ್ವಚಿಂತಾಮಣಿ ಮಹಾಕಾವ್ಯದಲ್ಲಿ ಉಲ್ಲೇಖಿಸಿದ್ದಾನೆ.

ದಾನಮ್ಮ ಗುಡ್ಡಾಪುರದಲ್ಲಿ ಲಿಂಗೈಕ್ಯಳಾದಾಗ ಅವಳ ದೇಹವು ಶಿಲೆಯಾಯಿತು ಎಂದು ಹೇಳಲಾಗಿದೆ. ಅದುವೇ ದಾನಮ್ಮನ ಮೂರ್ತಿಯೆಂದು ಶಿವಕವಿ ಮೊದಲಾದವರು ತಮ್ಮ ಕಾವ್ಯಗಳಲ್ಲಿ ಉಲ್ಲೇಖಿಸಿದ್ದಾರೆ.

ಗುಡ್ಡಾಪುರದ ದಾನಮ್ಮ ದೇವಸ್ಥಾನ

ಪ್ರಾಚೀನ ಕಾಲದ ಗುಡ್ಡಾಪುರ ದಾನಮ್ಮನ ದೇವಾಲಯವು ಉತ್ತರಾಭಿಮುಖ-ವಾಗಿದೆ. ಗುಡ್ಡಾಪುರದ ಶಾಸನಗಳಲ್ಲಿ ಸೋಮೇಶ್ವರನ ಭಕ್ತೆ ಗುಡ್ಡವ್ವೆಯ ಉಲ್ಲೇಖವಿದ್ದು, ಇಂದಿನ ದಾನಮ್ಮನ ದೇವಾಲಯವೇ ಆಕೆಯದಾಗಿದೆ. ಗುಡ್ಡಾಪುರದ ಶಾಸನಗಳು ಕಲ್ಯಾಣ ಚಾಲುಕ್ಯರ, ಕಳಚೂರಿಗಳ ಕಾಲವನ್ನು ಸೂಚಿಸುತ್ತದೆ. ಈ ಅವಧಿಯಲ್ಲಿಯೇ ಸೋಮೇಶ್ವರ ದೇವಾಲಯ ಮೊದಲು ನಂತರ ಶರಣೆಯ ದೇವಾಲಯ ನಿರ್ಮಾಣವಾಗಿವೆ. ಶರಣೆಯ ದೇವಾಲಯ ಕಾಲಕ್ಕೆ ತಕ್ಕಂತೆ ಪರಿವರ್ತನೆಯೊಂದಿಗೆ ಜೀರ್ಣೋದ್ಧಾರಗೊಂಡಿದೆ. ಈ ದೇವಾಲಯದ ವಾಸ್ತುಶಿಲ್ಪದ ವೈಶಿಷ್ಟ್ಯಗಳು ಗಮನಾರ್ಹವಾಗಿವೆ.

ಗುಡ್ಡಾಪುರದ ದಾನಮ್ಮದೇವಿಯ ದೇವಾಲಯದ ಗರ್ಭಗೃಹದಲ್ಲಿ ಇಷ್ಟಲಿಂಗ ಪೂಜಿಸುವ ಶಿಲಾಮೂರ್ತಿ ನಯನಮನೋಹರವಾಗಿದೆ. ಪದ್ಮಾಸನದಲ್ಲಿ ಕುಳಿತ ದಾನಮ್ಮನ ಮೂರ್ತಿಯ ಎಡಗೈಯಲ್ಲಿ ಇಷ್ಟಲಿಂಗ ಮತ್ತು ಬಲಗೈಯಲ್ಲಿ ಜಪಮಾಲೆ ಇದೆ. ನಾಲ್ಕು ಅಡಿ ಎತ್ತರದ ಈ ಮೂರ್ತಿಯ ಕೆಳಭಾಗದಲ್ಲಿಯೆ ದಾನಮ್ಮದೇವಿಯ ಸಂಜೀವಿನಿ ಸಮಾಧಿ ಇದೆ ಎನ್ನಲಾಗುತ್ತದೆ. ದಾನಮ್ಮನ ದೇವಾಲಯದ ಗರ್ಭಗೃಹದ ದ್ವಾರಮಂಟಪ ಕಪ್ಪುಕಲ್ಲಿನಲ್ಲಿ ನಿರ್ಮಿತವಾಗಿದೆ. ಹೊರಭಾಗದಲ್ಲಿ ಗ್ರಾನೈಟ್ ಕಲ್ಲಿನ ಜೋಡಣೆ ಆವರಿಸಿರುವುದರಿಂದ ಮೂಲರಚನೆಯ ಕೆತ್ತನೆಯ ಕುಸುರಿ ಕಲೆ ಮಾಯವಾಗಿದೆ. ಗರ್ಭಗೃಹ ದ್ವಾರಮಂಟಪದ ಮೇಲೆ ಗಣಪತಿಯು ವಿಗ್ರಹವಿರುವುದು ಶೈವದೇವಾಲಯವಾಗಿ ರೂಪುಗೊಂಡಿದೆ. ಈ ಗಟ್ಟಿಮುಟ್ಟಾದ ಗರ್ಭಗೃಹವು 'ಹೇಮಾಡ

ಪಂಥಕ್ಕೆ' ಸೇರಿದ್ದೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.

ವಿಸ್ತಾರವಾದ ಪ್ರಾಕಾರಗಳಿಂದ ಆಕರ್ಷಕ ಗೋಪುರಗಳಿಂದ ಕೂಡಿದ ದೇವಾಲಯ ಭವ್ಯವಾಗಿದೆ. ಗುಡಿಯ ಆವರಣದಲ್ಲಿಯೇ ದಾನಮ್ಮನ ಪತಿ ಸೋಮನಾಥನ ಐಕ್ಯಮಂಟಪವಿದೆ. ವಿಶೇಷವಾಗಿ ಅಲ್ಲಿ ಇಷ್ಟಲಿಂಗಪೂಜೆ ಮಾಡಿಕೊಳ್ಳಲಿಕ್ಕಾಗಿಯೇ ಎಂದು ಒಂದು ಚಿಕ್ಕ ಕೋಣೆಯು ಇದೆ. ಸೋಮನಾಥನ ಐಕ್ಯಮಂಟಪದಲ್ಲಿ ಸ್ಥಾವರಲಿಂಗವಿದ್ದು ಎದುರಿಗೆ ನಂದಿ ವಿಗ್ರಹವಿದೆ. ದಾನಮ್ಮ ದೇವಾಲಯದಲ್ಲಿ ದಾನಮ್ಮನ ಮೂರ್ತಿಯ ಎದುರಿಗೆ ಇರುವ ನವರಂಗ ಮಂಟಪದಲ್ಲಿ ನಂದಿ ವಿಗ್ರಹವಿದೆ. ದಾನಮ್ಮನ ದೇವಾಲಯದ ಮುಂಭಾಗದಲ್ಲಿ ದಾನಮ್ಮ ನಿಷ್ಠಾವಂತ ಶಿಷ್ಯನಾದ ಅಡಿಗಲ್ಲಪ್ಪನ ದೇವಾಲಯವಿದೆ.

ಶರಣೆ ದಾನಮ್ಮನ ದೇವಾಲಯವನ್ನು ಹೊರಭಾಗದಿಂದ ನೋಡಿದರೆ ಗರ್ಭಗೃಹದ ಮುಂದೆ ತೆರೆದ ಮುಖಮಂಟಪವಿರುವಂತೆ ತೋರುತ್ತದೆ. ಆದರೆ ಈಗ ಸುತ್ತಲೂ ಗೋಡೆ ನಿರ್ಮಿತವಾಗಿದೆ. ಈ ದೇವಾಲಯದ ಗರ್ಭಗುಡಿಯ ಹೊರಗೋಡಗಳನ್ನು ಕಿರದಾಗಿ ಕೆತ್ತಿದ ಚಪ್ಪಡಿಕಲ್ಲುಗಳನ್ನು ಹಾಸಿ, ಹೊರಕ್ಕೆ ಚಾಚಿ, ಇಳಿಜಾರಾಗಿರುವ ಸೆಜ್ಜೆಗಳನ್ನು (ಲಿಂಟಲ್) ರೂಪಿಸಿ ನಿರ್ಮಿಸಲಾಗಿದೆ. ಗರ್ಭಗೃಹದ ಕೆಳಭಾಗದ ಸುತ್ತಲೂ ಉಬ್ಬುಶಿಲ್ಪವಿರುವ ವಿಗ್ರಹಗಳ ಪಟ್ಟಿಕೆಯಿದೆ. ಈ ವಿಗ್ರಹದಲ್ಲಿ ಮಂಗನ ಮುಖವಿರುವ ಪುರುಷಾಕೃತಿಯ ವಿಗ್ರಹ ಹಾಗೂ ಮಂಗನ ಮುಖವಿರುವ ದಿಗಂಬರ ವಿಗ್ರಹ, ಮನುಷ್ಯನ ಮಂಗತನದ ಮನಸ್ಸನ್ನು ಬಿಂಬಿಸುತ್ತವೆ.

ದೇವಾಲಯದ ಹೊರಗೋಡೆಯ ಮೇಲೆ ಲಜ್ಜಾಗೌರಿಯ ಎರಡು ಶಿಲ್ಪಗಳು ಹಾಗೂ ಮಿಥುನಶಿಲ್ಪಗಳು ಮನುಷ್ಯನ ಭೋಗಜೀವನ ನಶ್ವರವೆಂದು ಪ್ರತಿಪಾದಿಸುತ್ತವೆ. ಈ ಮೂರ್ತಿಶಿಲ್ಪಗಳನ್ನು ಗಮನಿಸಿದರೆ ಮಹಾವ್ರತ ಶೈವ ಆಚರಣೆಗಳು ದೇವಾಲಯದಲ್ಲಿರುವುದನ್ನು ಬಿಂಬಿಸುತ್ತವೆ. ಆದರೆ ಸ್ಪಷ್ಟ ಆಧಾರಗಳಿಲ್ಲ. ಡಮರುಗ ಬಾರಿಸುವ ಶಿಲ್ಪ, ದಂಡವಿಡಿದ ಶಿಲ್ಪ, ಕೋಲಿಗೆಬುಟ್ಟಿ ಕಟ್ಟಿ ಸಂಚಾರಕ್ಕೆ ಹೊರಟ ಶಿಲ್ಪ, ವ್ಯಕ್ತಿ ಎತ್ತುಗಳನ್ನು ಹಿಡಿದು ಹೊರಟಿರುವ ಶಿಲ್ಪಗಳಾದಿಯಾಗಿ ಅನಾವರಣವಾಗಿರುವುದನ್ನು ಕಾಣಬಹುದು.

ಪ್ರವೇಶದ್ವಾರ ಸುಮಾರು ಐವತ್ತು ಅಡಿಗಳ ಚಚ್ಚೌಕಾಕಾರದ ಮುಖ್ಯಭಾಗಕ್ಕೆ ಉತ್ತರಕ್ಕೆ ಮುಖ್ಯ ಪ್ರವೇಶ ದ್ವಾರವಿದೆ. ಇತ್ತೀಚೆಗೆ ಪಶ್ಚಿಮಕ್ಕೂ ಹಾಗೂ ಪೂರ್ವಾಭಿಮುಖವಾಗಿ ದ್ವಾರಗಳನ್ನು ನಿರ್ಮಿಸಿದ್ದಾರೆ.

ದಾನಮ್ಮನ ದೇವಾಲಯದ ಗೋಪುರದ ತಳಭಾಗವು ಹನ್ನೆರಡನೆಯ ಶತಮಾನದ ಚಾಲುಕ್ಯ ಶೈಲಿಯಲ್ಲಿ ನಿರ್ಮಾಣವಾಗಿದೆ ಹಾಗೂ ೧೫-೧೬ ನೇ ಶತಮಾನದಲ್ಲಿ ಜೀರ್ಣೋದ್ಧಾರವಾಗಿರುವಂತೆ ಕಂಡುಬರುತ್ತದೆ. ಇದರ ಗೋಪುರ ಮೆಟ್ಟಿಲುಗಳು ದ್ರಾವಿಡ ಶೈಲಿಯಲ್ಲಿಯಂತೆ ಮೇಲೇರಿ ಕ್ರಮೇಣ ಕಿರಿದಾಗುತ್ತ ಹೋಗಿವೆ. ಈ ಬಗೆಯ ಶಿಖರವನ್ನು ಹೊಂದಿ ಮೇಲ್ಭಾಗದಲ್ಲಿ ಚಿಕ್ಕ ಚಿಕ್ಕ ಕೋಣೆಗಳಂತಿರುವ ನವೀಕೃತ ಮಾಡುಗಳಿವೆ. ಈ ಮಾಡುಗಳಲ್ಲಿಯ ಮೂರ್ತಿಶಿಲ್ಪಗಳು ನಾಶವಾಗಿವೆ. ಗೋಪುರದ ನಾಲ್ಕು ಮೂಲೆಗಳಲ್ಲಿರುವ ನಂದಿ ವಿಗ್ರಹಗಳು ಗಮನಸೆಳೆಯುತ್ತವೆ.

ವರದಾನಿ ದಾನಮ್ಮ ಶಿವಯೋಗದ ಸಾಧಕಿಯಾಗಿ ಜನರ ದುಃಖ ದುಮ್ಮಾನಗಳನ್ನು ನಿವಾರಿಸುವ ಪವಾಡಗಳಲ್ಲಿ ಭಕ್ತರು ಇಂದಿಗೂ ಅಚಲವಾದ ನಂಬಿಕೆ ಇಟ್ಟಿದ್ದಾರೆ. ದಾನಮ್ಮ ಶರಣೆಯು ಮಾನವಳಾಗಿ ಧರೆಗೆ ಬಂದು ಅಸಾಮಾನ್ಯ ಸಾಧನೆಯಿಂದ ಉನ್ನತ ಶಿವಯೋಗ ದೃಷ್ಟಿಯ ಶಕ್ತಿ ಸಾಮರ್ಥ್ಯ ಪಡೆದದ್ದನ್ನು ಕೇಳಿ ಭಕ್ತ ವರ್ಗ ಆಶ್ಚರ್ಯಚಕಿತವಾಗುವುದು ಸ್ವಾಭಾವಿಕವಾದುದು. ದಾನಮ್ಮ ಲಿಂಗೈಕ್ಯವಾದ ನಂತರ ಆ ತಾಯಿಯ ಮಹತ್ವವು ಮತ್ತಷ್ಟು ಪಸರಿಸಿ, 'ದಾನಮ್ಮದೇವಿ ಪಾರ್ವತಿಯ ಅವತಾರ' ಎಂದು ಪ್ರಚಾರವಾಯಿತು. ಹಲವಾರು ಕವಿಗಳು ತಮ್ಮ ಕಾವ್ಯಗಳಲ್ಲಿ ದಾನಮ್ಮನನ್ನು ವಿವಿಧ ಪ್ರಕಾರಗಳಿಂದ ವರ್ಣಿಸಿದ್ದಾರೆ. ಈಗಲೂ ವಿಜಯಪುರ, ಸಾತಾರ, ಸಾಂಗಲಿ, ಕಲಬುರಗಿ ಮೊದಲಾದ ಕಡೆಗಳ ಭಕ್ತಾದಿಗಳು ಗುಡ್ಡಾಪುರ ದಾನಮ್ಮದೇವಿಗೆ (ಮನೆದೇವತೆ) ಕುಲದೇವತೆ ಎಂದು ಪಾಲಿಸಿಕೊಂಡು ಬರುತ್ತಿದ್ದಾರೆ.

ದೇವಿ ಸ್ವರೂಪದ ದಾನಮ್ಮ ಭಕ್ತರ ಇಷ್ಟಾರ್ಥಗಳನ್ನು ಪೂರೈಸುವಳು ಎಂಬ ನಂಬಿಕೆ ಇರುವುದರಿಂದ ಭಕ್ತಾದಿಗಳು ಅವಳನ್ನು 'ವರದಾನಿ ಗುಡ್ಡವ್ವ' (ಗುಡ್ಡಮ್ಮ) ಎಂದು ಕರೆಯುತ್ತಾ ಬಂದಿದ್ದಾರೆ. ನಡೆ-ನುಡಿಗಳು ಒಂದಾಗಿದ್ದ ದಾನಮ್ಮ ಬಸವಣ್ಣನವರು ಪ್ರತಿಪಾದಿಸಿದ ಸಮಷ್ಟಿ ಪ್ರಜ್ಞೆಯ ಸಂಕೇತವಾಗಿದ್ದಳು. ಕೆಳವರ್ಗದವರಿಗೆ ಇಷ್ಟಲಿಂಗ ದೀಕ್ಷೆ ಕೊಟ್ಟು ಬಸವ ಧರ್ಮವನ್ನು ಎತ್ತಿಹಿಡಿದಳು. ದಾನಮ್ಮ ವಚನ ರಚನೆ ಮಾಡಿದ್ದರ ಬಗ್ಗೆ ಯಾವುದೇ ದಾಖಲೆಗಳಿಲ್ಲ. ಎಷ್ಟೋ ಶರಣರ ವಚನಗಳು ಕಾಲಗರ್ಭದಲ್ಲಿ ಅಡಗಿಹೋಗಿರುವುದು ನೋವಿನ ಸಂಗತಿಯಾಗಿದೆ. ಆದರೆ ದಾನಮ್ಮ ಎಲ್ಲಾ ಕಡೆಗೆ ವಚನಗಳು ಪ್ರಚಾರ ಮಾಡುತ್ತಾ ಅವುಗಳನ್ನು ರಕ್ಷಿಸುವ ಕಾರ್ಯವನ್ನು ಮಾಡಿದ್ದಾಳೆ. ದಾನಮ್ಮನ ಧೀಮಂತಿಕೆ, ವೀರಗುಣ, ದಾಸೋಹ ಮತ್ತು ಜನಮನವನ್ನು ತಲಪುವಂಥ ಪ್ರತಿಭೆಯಿಂದಾಗಿ ಅಮರತ್ವವನ್ನು ಹೊಂದಿದ್ದಾಳೆ.

ಪವಾಡಗಳಲ್ಲಿ ದಾನಮ್ಮ

ಬಸವಾದಿ ಶರಣರು ಜನರನ್ನು ಮರಳು ಮಾಡಿ ಭ್ರಾಂತಿಯಲ್ಲಿ ತಳ್ಳಿ ತಮ್ಮ ಹಿತಾಸಕ್ತಿಗಾಗಿ ಜನರ ಮೇಲೆ ಯಾವುದೇ ತರಹದ ಧಾರ್ಮಿಕ ಪ್ರಭುತ್ವ ಸಂಪಾದಿಸಬೇಕೆಂಬ ಬಯಕೆ ಇದ್ದವರಲ್ಲ. ಆದರೂ ಮಹಾತ್ಮರ ಜೀವನದ ಸುತ್ತ ಪವಾಡಗಳು ಆವರಿಸಿರುವುದನ್ನು ನೋಡಬಹುದು. ಮಹಾತ್ಮರು ಬದುಕಿನುದ್ದಕ್ಕೂ ಸಮಾಜದಲ್ಲಿನ ಜನರ ಮನವನ್ನು ತಿದ್ದಿ, ದುಷ್ಟತನದ ಕಡೆಗೆ ಹೋಗದಂತೆ ತಡೆದು, ಸತ್ಯ ಸನ್ಮಾರ್ಗದ ಕಡೆಗೆ ಕರೆದ್ಯೊಯುತ್ತಾರೆ. ಮಹಾತ್ಮರು ನಡೆ–ನುಡಿ ಒಂದಾಗಿಸಿಕೊಂಡು ಜನತೆಯ ಉಸಿರಿನೊಂದಿಗೆ ತಮ್ಮ ಉಸಿರು ಬೆರೆಸಿ ಸ್ಪಂದಿಸುತ್ತಾರೆ. ಅದಕ್ಕಾಗಿ ಜನಪದರು ತಮ್ಮ ಭಕ್ತಿ ನಂಬುಗೆಯ ಪ್ರತೀಕವಾಗಿಯೋ ಅಥವಾ ತಾವು ಕಂಡು ಕೇಳಿದ ಅಸಾಮಾನ್ಯ ಅದ್ಭುತ ಸಂಗತಿಗಳ ವರ್ಣರಂಜಿತ ಕಥೆಗಳನ್ನು ಕೇಳಿಯೋ ಪವಾಡಗಳ ಕಡೆಗೆ ಆಕರ್ಷಿತರಾಗುತ್ತಾರೆ.

ಶಿವಯೋಗಿಗಳಾಗಿದ್ದ ಶರಣರು ದೀನದಲಿತರ ನೋವು ನಿವಾರಿಸುತ್ತಾ, ಅಸ್ಪೃಶ್ಯತೆಯನ್ನು ಅಳಿಸುತ್ತಾ, ಸಮಾನತೆಯ ಹರಿಕಾರರಾಗಿ ಮಾನವೀಯತೆ ಮೆರೆದರು. ಪ್ರತಿವಾದಿಗಳ ಜೊತೆ ವೈಚಾರಿಕ ಸಂಘರ್ಷಕ್ಕೆ ಇಳಿದು ಸಮಾಜವನ್ನು ಪರಿಶುದ್ಧಗೊಳಿಸಲು ಯತ್ನಿಸಿದರು. ಅವರ ಅದಮ್ಯ ಜನಪರ ಕಾಳಜಿ ಸಾಮಾನ್ಯರ ದೃಷ್ಟಿಯಲ್ಲಿ ಪವಾಡವಾಗಿ ಕಂಡಿತು. ಗುಡ್ಡಾಪುರ ದಾನಮ್ಮನು ಕೂಡ ನೊಂದವರ ನೋವು ನಿವಾರಿಸಲು ಪವಾಡಗಳನ್ನು ಮೆರೆದಳೆಂಬ ಪ್ರತೀತಿ ಇದೆ. ದಾನಮ್ಮನ ವೀರಬದುಕಿನಲ್ಲಿ ನಡೆದ ನೈಜ ಘಟನೆಗಳು ಪವಾಡಗಳ ರೂಪ ತಾಳಿದವು. ಶಿವಶಂಕರ, ಲಕ್ಕಣ್ಣದಂಡೇಶ, ಶಿವಕವಿಗಳು ದಾನಮ್ಮನ ಪುರಾಣದಲ್ಲಿ ಮತ್ತು ಕಾವ್ಯಗಳಲ್ಲಿ ಅವಳ ಸೇವಾ ಕಾರ್ಯಗಳನ್ನು ವರ್ಣರಂಜಿತ ಪವಾಡಗಳನ್ನಾಗಿ, ಲೀಲೆಗಳೆಂದು ಬಣ್ಣಿಸಿದ್ದಾರೆ.

ದಾನಮ್ಮ ಶರಣೆಯ ವ್ಯಕ್ತಿತ್ವವನ್ನು ವೈಭವೀಕರಿಸುವ ಉದ್ದೇಶದಿಂದ ಕೃತಿಕಾರರು ಪವಾಡಗಳಿಗೆ ಹೆಚ್ಚಿನ ಮಹತ್ವ ನೀಡಿದರು. ಇದರಿಂದ ಶರಣೆಯ ನೈಜ ವ್ಯಕ್ತಿತ್ವದ ಚಿತ್ರಣ ಪರಿಪೂರ್ಣವಾಗಿ ಮೂಡದ ಕಾರಣ ಅವಳು ದಂತಕಥೆ ಮತ್ತು ಪವಾಡಗಳ ಮಹಾಶಕ್ತಿಯಾಗಿ ಜನಮನದಲ್ಲಿ ನೆಲೆಸಿದಳು. ದಾನಮ್ಮನ ಭಕ್ತರು ಹರಕೆ ಹೊತ್ತು ತಮ್ಮ ಇಷ್ಟಾರ್ಥ ಪೂರೈಸಿದಾಗ, ಇದು ದಾನಮ್ಮನ ಪವಾಡ, ಎಂದು ಭಾವಿಸುತ್ತಾರೆ.

ಮೈಸೂರು ಮಹಾರಾಜರಿಗೆ ದಾನಮ್ಮಶರಣೆ ಲಿಂಗ ಕಟ್ಟಿದ ಪವಾಡ ಶಿವಕವಿಯ ಕೃತಿಯಲ್ಲಿ ಉಲ್ಲೇಖವಾಗಿದೆ. ಆದರೆ ಮೈಸೂರು ಅರಸರು ವಿಜಯನಗರದ ಸಾಮ್ರಾಜ್ಯದ ಪತನದ ನಂತರ ಹದಿನಾರನೆಯ ಶತಮಾನದಲ್ಲಿ ಆಳಿದರು. ಶರಣೆ ದಾನಮ್ಮನ

ಕಾಲಾವಧಿಯು ಹನ್ನೆರಡನೆಯ ಶತಮಾನವಾಗಿದೆ. ಇಂತಹ ಘಟನೆಗಳನ್ನು ಸ್ಪಷ್ಟವಾಗಿ ಅಲ್ಲಗಳೆಯಬಹುದು. ದಾನಮ್ಮನ ಮೇಲಿನ ಅತಿಯಾದ ನಿಷ್ಠೆ ಭಕ್ತಿಭಾವದಿಂದ ಕೆಲವು ಕೃತಿಕಾರರು ಕಥಾವಸ್ತುವಿನೊಂದಿಗೆ ಇಂಥ ಪವಾಡಗಳನ್ನು ಸೇರಿಸಿದ್ದು ಕಂಡುಬರುತ್ತದೆ. ಈ ವಿಜ್ಞಾನಯುಗದಲ್ಲಿ ಇವೆಲ್ಲವೂ ಕಾಲ್ಪನಿಕ. ಸಂಪ್ರದಾಯ, ಕುರುಡು ನಂಬಿಕೆ ಎಂದು ತೋರಿದರೂ, ಪವಾಡಗಳನ್ನು ಅವಹೇಳನ ಮಾಡಲಿಕ್ಕಾಗದು. ಆ ಪವಾಡಗಳ ಹಿಂದೆ ಇರಬಹುದಾದ ಸಂದೇಶಗಳನ್ನು ಅರಿಯುವುದು ಅವಶ್ಯವಾಗಿದೆ.

ದಾನಮ್ಮ ಶರಣೆಯು ನಮ್ಮಂತೆಯೇ ಮಾನವಳಾಗಿ ಬಾಳಿ, ಅಮೋಘ ಸಾಧನೆಯಿಂದ ಅಸಾಮಾನ್ಯಳಾದಳು. ಅವಳ ಉನ್ನತ ಯೋಗದೃಷ್ಟಿಯ ಶಕ್ತಿ ಸಾಮರ್ಥ್ಯ ಸಾಮಾನ್ಯ ಜನರಿಗೆ ಆನಂದ, ಆಶ್ಚರ್ಯ ಉಂಟುಮಾಡಿತು. ಅವರ ಕಲ್ಪನೆಯ ಆಳವನ್ನು ಅರಿತಾಗ ಪವಾಡಗಳ ಹಿಂದಿನ ಭಾವಪೂರ್ಣತೆ ಅರ್ಥವಾಗುತ್ತದೆ.

ಮಿಶ್ರಸ್ತೋತ್ರ ತ್ರಿವಿಧಿಯಲ್ಲಿ ದಾನಮ್ಮ

ಕನ್ನಡನಾಡಿನಲ್ಲಿ ಬಸವಣ್ಣನವರು, ಅಲ್ಲಮಪ್ರಭುದೇವರು, ಚನ್ನಬಸವಣ್ಣನವರು, ಅಕ್ಕಮಹಾದೇವಿಯವರು, ಸಿದ್ಧರಾಮೇಶ್ವರರು ಹೀಗೆ ಮೊದಲಾದ ಶಿವಶರಣರು ಮಾಡಿದ ಕ್ರಾಂತಿ ಸಮಗ್ರ ಮಾನವಕೋಟಿಗೆ ಕಲ್ಯಾಣಮಯವಾದದ್ದು. ಅಂತಹ ಕ್ರಾಂತಿ ಪ್ರಪಂಚದ ಇತಿಹಾಸದಲ್ಲಿ ವಿರಳ. ಶರಣರು ಆತ್ಮಜ್ಞಾನಿಗಳಾಗಿದ್ದರು. ಅವರು ಕಾಯಕದಿಂದ ಬಂದ ಅನುಭವವನ್ನು ಒರೆಗಲ್ಲಿಗೆ ತಿಕ್ಕಿ ಮಾನವನ ಉನ್ನತಿಗೆ ಬೇಕಾದ ಸರ್ವಕಾಲಿಕವಾದ ತತ್ತ್ವಗಳನ್ನು ಕಂಡುಕೊಂಡು ವಚನಗಳಾಗಿ ರಚಿಸಿ ಅನುಭವ ಮಂಟಪದಲ್ಲಿಟ್ಟರು. ಸಾಮಾಜಿಕ, ಧಾರ್ಮಿಕ, ನೈತಿಕ, ಆಧ್ಯಾತ್ಮಿಕ ಹೀಗೆ ಎಲ್ಲದರಿಂದ ಮನುಷ್ಯನ ಬಾಳನ್ನು ಸುಂದರಗೊಳಿಸಲು ಹೊಸ ಮಾರ್ಗವನ್ನೇ ಹಾಕಿಕೊಟ್ಟರು.

ಶರಣರ ಈ ವಿಶಿಷ್ಟ ಕ್ರಾಂತಿಗೆ ಮೂಲಿಗರಾದ ರಾಯಪೂರ್ವಾಚಾರಿ ಸಂಗನಬಸವಣ್ಣನವರು, ತಮ್ಮ ಮಹಾಮಣಿಹದ ಪ್ರಚಾರ, ಪ್ರಸಾರಕ್ಕೆ ಕಟ್ಟಿದ ವಿನೂತನ ಸಂಸ್ಥೆಯೇ ಅನುಭವಮಂಟಪ. ಅಲ್ಲಿ ಸತ್ಯಶುದ್ಧರೂ ಮಹಾತ್ಯಾಗಿಗಳೂ ಸುಳಿದಾಡುವ ಪರಬೊಮ್ಮ ಎನಿಸಿದವರೂ ಕೂಡಿದ ಜಂಗಮ ಸಂಸ್ಥೆಯಾಗಿತ್ತು. ಈ ಚರಜಂಗಮರು ಎಲ್ಲೆಡೆ ಸಂಚರಿಸಿ ಬಸವಣ್ಣನವರ ಮಹಾಮಣಿಹದ ಪ್ರಚಾರ, ಪ್ರಸಾರದ ಜೊತೆಗೆ ಕಲ್ಯಾಣದ ಅನುಭವ ಮಂಟಪದಿಂದ ಹೊರಬಿದ್ದ ನಿತ್ಯನೂತನ ವಚನಗಳಲ್ಲಿನ ತತ್ತ್ವದ ಸಾರವನ್ನು ಜನರ ಮನದಲ್ಲಿ ಬಿತ್ತಿದರು. ಅವರಲ್ಲಿ ಜ್ಞಾನದ ಅರಿವು ಮೂಡಿಸಿ ಬಸವಣ್ಣನವರ ಘನತೆಯನ್ನು ತಿಳಿಸಿ, ಜನರ ಒಲವನ್ನು ಕಲ್ಯಾಣದ ಕಡೆಗೆ ತಿರುಗಿಸಿದರು. ಈ ತತ್ತ್ವಜಂಗಮ ಸಂಸ್ಥೆಯಿಂದಲೇ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗಿನ ವಿವಿಧ

ಮಟ್ಟದ, ವಿವಿಧ ಕಾಯಕದ ಜನ ಹರಿದು ಕಲ್ಯಾಣಕ್ಕೆ ಬಂದಿತು.

ಅನುಭವ ಮಂಟಪದಲ್ಲಿ ಶರಣರು ಧಾರ್ಮಿಕ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯ ರಂಗದಲ್ಲಿ ಬದಲಾವಣೆ ಬಯಸಿದರು. ವೈಚಾರಿಕ ಪ್ರಜ್ಞೆಯನ್ನು ಸಮಾಜದಲ್ಲಿ ಮೂಡಿಸಿದರು. ವಚನ ಸಾಹಿತ್ಯವು ಜನಸಾಮಾನ್ಯರ ಆಶೋತ್ತರಗಳನ್ನು ಈಡೇರಿಸಿತು. ಶರಣರು ಸಾಮಾಜಿಕರ ನೋವು, ನಲಿವುಗಳನ್ನು ಆಧ್ಯಾತ್ಮಿಕ ವಿಚಾರಗಳನ್ನು ಅನುಭವ ಮಂಟಪದಲ್ಲಿ ಚರ್ಚಿಸಿದರು. ಈ ಚರ್ಚಾಗೋಷ್ಠಿಯಲ್ಲಿ ಪಾಲ್ಗೊಂಡು ವ್ಯಕ್ತಪಡಿಸಿದ ಅಭಿಪ್ರಾಯಗಳು ಮತ್ತು ಶರಣರ ಚರ್ಚಿತ ನುಡಿಗಳು ಹಾಗೂ ಇತರ ಅನೇಕ ಶರಣರ ಪ್ರಸ್ತಾಪಗಳು ಇತಿಹಾಸಕಾರರಿಗೆ ಆಧಾರ ನೀಡುತ್ತವೆ.

ಶರಣೆ ದಾನಮ್ಮನಿಗೆ ಸಂಬಂಧಪಟ್ಟಂತೆ ಸೊನ್ನಲಾಪುರದ ಸಿದ್ಧರಾಮ ಶಿವಯೋಗಿಗಳು ತಮ್ಮ "ಮಿಶ್ರಸ್ತೋತ್ರದ ತ್ರಿವಿಧಿ" ಕೃತಿಯಲ್ಲಿ ಯೋಗಿನಾಥ ಅಂಕಿತದಿಂದ ರಚಿಸಿದ ತ್ರಿವಿಧಿಯಲ್ಲಿ ಗುಡ್ಡವ್ವೆ ಶರಣೆಯನ್ನು ಉಲ್ಲೇಖಿಸಿದ್ದಾರೆ.

ವೀರ ಸಂಗವ್ವೆಯುದಾರ ಚಂಗಳೆ ಸತ್ಯ ಧೀರ ಗುಡ್ಡವ್ವೆ
ಸೋಮವ್ವೆಯಮ್ಮ ಚಾರುಲಿಂಗ ಪ್ರಾಣಿಸಾರ ಕಮಳವ್ವೆಯ
ಪಾರರತಿಯಿಂ ಸ್ತುತಿಪೆ ಯೋಗಿನಾಥ

ಸಿದ್ಧರಾಮೇಶ್ವರರು ಶರಣರ ಒಂದೊಂದು ಗುಣವನ್ನು ಕಂಡು ಸಂಬೋಧಿಸಿ ವರ್ಣಿಸಿದ್ದಾರೆ. ಗುಡ್ಡವ್ವೆಯು ಧೀರಳೂ, ಸತ್ಯವಂತಳು, ಎಂದು ಬಣ್ಣಿಸಿದ್ದಾರೆ. ಸಿದ್ಧರಾಮರು ತಮ್ಮ ವಚನದಲ್ಲಿ ಗುಡ್ಡವ್ವೆಯನ್ನು ಲೌಕಿಕ-ಅಲೌಕಿಕ ದ್ವಿಸ್ತರದ ಪರಂಪರೆಯಲ್ಲಿ ಗುರುತಿಸಿದ್ದಾರೆ. ಇಂತಹ ಶರಣೆಯರಿಂದಲೇ ಶರಣರ ಕ್ರಾಂತಿಗೆ ಮಹತ್ವದ ತಳಹದಿ ದೊರೆಯಿತು. ಜಾತಿ, ವರ್ಗ, ವರ್ಣ, ಲಿಂಗದಲ್ಲಿ ಸಮಾನತೆ ಕಂಡುಕೊಳ್ಳುವಲ್ಲಿ ಶರಣರು ಯಶಸ್ವಿಯಾದರು. ಆದರೆ ಇತರ ಶರಣರ ಸಿಕ್ಕಿರುವ ವಚನಗಳಲ್ಲಿ ದಾನಮ್ಮನ ಕುರಿತು ಉಲ್ಲೇಖ ಲಭ್ಯವಾಗಿಲ್ಲ. ಉಲ್ಲೇಖಿಸಿದರೂ ಅಂತಹ ವಚನಗಳು ಕಾಲಗರ್ಭದಲ್ಲಿ ಅಡಗಿರುವ ಸಾಧ್ಯತೆಗಳು ಇರಬಹುದೆಂದು ವಿಷಾದವೆನಿಸುತ್ತದೆ.

ಹರಿಹರನ ರಗಳೆಗಳಲ್ಲಿ ಗುಡ್ಡವ್ವೆ (ಕ್ರಿ.ಶ. ೧೨೨೦)

ಭಕ್ತಿಕವಿ, ಶಿವಕವಿ, ರಗಳೆಕವಿ ಎನಿಸಿಕೊಂಡವನು ಹರಿಹರ ೧೩ನೇ ಶತಮಾನದಲ್ಲಿ. ಲಿಂಗಾಯತ ಸಾಹಿತ್ಯ ಮಾರ್ಗ ನಿರ್ಮಿಸಿದನು. ತಾನು ಹಂಪೆಯ ವಿರೂಪಾಕ್ಷನ ವರಪುತ್ರನೆಂದು ಭಾವಿಸಿದ್ದ ಹರಿಹರ ತನ್ನ ಲೇಖನಿಯನ್ನು ಶಿವನಿಗೆ ಮೀಸಲಿರಿಸಿ,

ಶಿವಶರಣರ ಚರಿತ್ರೆಯನ್ನು ರಗಳೆಗಳಲ್ಲಿ ದಾಖಲಿಸಿದ್ದಾನೆ. ಅವನು ರಚಿಸಿದ 'ಮಹಾದೇವಿಯಕ್ಕನ ರಗಳೆ' ಈ ಕೃತಿಯಲ್ಲಿ ಶರಣೆ ಅಕ್ಕಮಹಾದೇವಿಯ ಪಾತ್ರ ಚಿತ್ರಣದಲ್ಲಿ ಗುಡ್ಡವ್ವೆಯನ್ನು ಸೂಚ್ಯವಾಗಿ ಉಲ್ಲೇಖಿಸಿದ್ದಾನೆ. ಅಕ್ಕಮಹಾದೇವಿಯು ಭೂಲೋಕದಲ್ಲಿ ಜನಿಸುವ ಮೊದಲು, ಶಿವನ ಒಡ್ಡೋಲಗದ ಪ್ರಸಂಗದಲ್ಲಿ ಗುಡ್ಡವ್ವೆಯನ್ನು ವರ್ಣಿಸಿದ್ದಾನೆ.

ಪಾಲ್ಕುರಿಕೆ ಸೋಮನಾಥ (ಕ್ರಿ.ಶ. ೧೨೨೦)

ಪಾಲ್ಕುರಿಕೆ ಸೋಮನಾಥನು ತೆಲಗುಭಾಷೆಯಲ್ಲಿ 'ಬಸವ ಪುರಾಣಮು' ಕಾವ್ಯ ರಚಿಸಿ ಬಸವಣ್ಣನವರನ್ನು ಮೊದಲ ಬಾರಿಗೆ ಇತಿಹಾಸದಲ್ಲಿ ದಾಖಲಿಸಿದ್ದಾನೆ. ಈ ಕವಿಯು ಗುಡ್ಡವ್ವೆಗೆ ತನ್ನ ಕಾವ್ಯದಲ್ಲಿ ಸ್ಥಾನ ನೀಡಿದ್ದಾನೆ. ಆದರೆ ನಾವದಿಗೆ ಗುಡ್ಡವ್ವೆ ಎಂದು ಬರೆದ ಕಾರಣ ಇತಿಹಾಸ ರಚಿಸಿದ್ದಾನೆ.

ಭೀಮಕವಿ (ಕ್ರಿ.ಶ. ೧೩೭೦)

ಭೀಮಕವಿ ಭಾಮಿನಿ ಷಟ್ಪದಿಯಲ್ಲಿ ಪಾಲ್ಕುರಿಕೆ ಸೋಮನಾಥನ ತೆಲಗು ಬಸವಪುರಾಣವನ್ನು ಕನ್ನಡಕ್ಕೆ ರೂಪಾಂತರಿಸಿದ್ದಾನೆ. ಮೂಲದಲ್ಲಿ ಇಲ್ಲದ ಅನೇಕ ಭಾಗಗಳನ್ನು ಸ್ವತಂತ್ರ ಮನೋಭಾವದಿಂದ ರಚಿಸಿ, ಪವಾಡಗಳನ್ನು ಸೇರಿಸಿದ್ದಾನೆ. ಭೀಮಕವಿ ನಾವದಿಗೆ ಗುಡ್ಡವ್ವೆಯ ಕುರಿತು ಬರೆದಿದ್ದಾನೆ. ಹಾಗೂ ಷೋಡಶರ ವರದಾನಿ ಗುಡ್ಡವ್ವೆಯ ವಿಷಯವನ್ನು ವಿವರಿಸಿದ್ದಾನೆ. ಪಾಲ್ಕುರಿಕೆ ಸೋಮನಾಥನ ಕಥಾ ಹಂದರ ಅನುಸರಿಸಿದ ಭೀಮಕವಿಯ ಕಾವ್ಯದಲ್ಲಿ ಇಬ್ಬರು ಗುಡ್ಡವ್ವೆಯರನ್ನು ಬೇರೆ ಬೇರೆ ಎಂದು ದಾಖಲಿಸಿದ್ದಾನೆ.

ಲಕ್ಕಣ್ಣದಂಡೇಶ (ಕ್ರಿ.ಶ. ೧೪೫೦)

ಲಕ್ಕಣ್ಣದಂಡೇಶನ 'ಶಿವತತ್ವ ಚಿಂತಾಮಣಿ' ಶಿವಶರಣರ ಕಥಾಗುಚ್ಛದಂತಿದೆ. ಈ ಕೃತಿ ಧರ್ಮ ಮತ್ತು ಕಾವ್ಯಧರ್ಮ ಸಮೀಕರಣದಿಂದ ಪ್ರತಿಪಾದಿತವಾಗಿವೆ. ಷೋಡಶಗಣಂಗಳ ನಾಯಕಿ 'ವರದಾನಿ ಗುಡ್ಡಮ್ಮೆಯ ಚರಿತ್ರೆ' ಯನ್ನು ಲಕ್ಕಣ್ಣದಂಡೇಶ ಪೌರಾಣಿಕ ನೆಲೆಯಲ್ಲಿ ಉಲ್ಲೇಖಿಸಿದ್ದಾನೆ. ಅಲಂಪುರದಲ್ಲಿ ಬಾಲಬ್ರಹ್ಮೇಶ್ವರ ಲಿಂಗ ಮರು ಪ್ರತಿಷ್ಠಾಪಿಸಿದ ಕಥೆಯನ್ನು ಪದ್ಯಗಳಲ್ಲಿ ವರ್ಣಿಸಿದ್ದಾನೆ. ಪಾರ್ವತಿ ಕೈಲಾಸದಲ್ಲಿ ಶಿವನ ಕೋಪಕ್ಕೆ ಸಿಲುಕಿ ಶಿವನಾಜ್ಞೆಯಂತೆ ಶಾಪ ವಿಮೋಚನೆಗಾಗಿ ಗುಡ್ಡವ್ವೆಯ ರೂಪ ಧರಿಸಿ, ಭೂಮಿಯ ಮೇಲೆ ಗುಡ್ಡಾಪುರದ ಸೋಮೇಶ್ವರ ಲಿಂಗನ ಭಕ್ತರ ಮನೆಯಲ್ಲಿ ಜನಿಸುತ್ತಾಳೆ. ಗುಡ್ಡವ್ವೆ ಪಾರ್ವತಿಯ ಸಾತ್ವಿಕ ಕಳೆ ಎಂದು ಕವಿ ವರ್ಣೀಸಿದ್ದಾನೆ.

ಜಗವೆಲ್ಲಂ ಪುಟ್ಟಿಸಲು ಜನನಿಯಾಗಿಯಾ
ಜಗದ ಜೀವರ ಯಂತ್ರ ಸೂತ್ರವುಂ ನೀನಾಗಿ
ಜಗದ ಸಂಹಾರ ತಾಂಡವ ಮೂರ್ತಿಯಾಗಿರ್ಪ
ನಿನ್ನ ನಿಜವರಿವುರೊಳವೇ
ಜಗದಿಂದಲತ್ತತ್ತಲಾರುಮವರಿಮದ ಶಿವನ
ಮೊಗದ ಕನ್ನಡಿಯೆಯಾತನೆ ನಿನ್ನ ಬಲ್ಲನೆನೆ
ನಗುವ ಮಹಾದೇವರರ್ಧಾಂಗಿ ಗುಡ್ಡಮ್ಮಗಳ
ಚರಣಾಂಬುಜಕ್ಕೆ ಶರಣು

ಲಕ್ಕಣ್ಣದಂಡೇಶನು ಪ್ರಸ್ತುತ ಕರ್ಮಸಿದ್ಧಾಂತದ ನೆಲೆಯಲ್ಲಿಯೆ ಭವಾವಳಿಯ ಪರಿಕಲ್ಪನೆಯನ್ನು ಶೈವಧರ್ಮಕ್ಕನುಸಾರವಾಗಿ ಜೋಡಿಸಿದ್ದಾನೆ. ಗುಡ್ಡಮ್ಮೆ ತನ್ನ ಪಾಪದ ಕರ್ಮ ಕಳೆಯಲು ಅಲಂಪುರಕ್ಕೆ ಹೊರಡುವುದಾಗಿ ಕವಿ ತೋರ್ಪಡಿಸಿದ್ದಾನೆ. ಹೀಗಿದ್ದರೂ ಗುಡ್ಡಮ್ಮೆ ಮನುಷ್ಯ ಗುಣ ಪಡೆದ ದೈವಾಂಶ ಸಂಭೂತಳಂತೆ ಕಂಡು ಬರುತ್ತಾಳೆ. ಗುಡ್ಡವ್ವೆ ಅಲಂಪುರ ಮಾರ್ಗದಲ್ಲಿ ಭಕ್ತಪಡೆಯೊಂದಿಗೆ ಮುನ್ನಡೆದ ಸಂದರ್ಭದಲ್ಲಿ ನಿರ್ಗತಿಕರಿಗೆ, ಅಂಗವಿಕಲರಿಗೆ ವರದಾನಿಯಾಗಿರುವ ಪ್ರಸಂಗವನ್ನು ಕವಿ ವರ್ಣಿಸಿದ್ದಾನೆ. ಗುಡ್ಡವ್ವೆ ಆಗಮಿಸುತ್ತಿರುವ ಸುದ್ದಿ ಕೇಳಿದ ಶಿವದ್ರೋಹಿ, ಪರವಾದಿಗಳು ಕಂಗೆಟ್ಟು ಕಳವಳಿಸುವ ಚಿತ್ರಣ ಕಾವ್ಯದಲ್ಲಿದೆ.

ಗುಡ್ಡವ್ವೆಯ ಗಣಾಚಾರ ಪರಿಪಾಲನೆಯನ್ನು ಲಕ್ಕಣ್ಣದಂಡೇಶ ಪ್ರಸ್ತಾಪಿಸಿದ್ದಾನೆ. ಕಾರಣ ತಾನೂ ಬದುಕಿದ ಕಾಲದಲ್ಲಿ ಶೈವ-ವೈಷ್ಣವ ಸಂಘರ್ಷದ ಪರಾಕಾಷ್ಠತೆ ಇರುವುದನ್ನು ಈ ಘಟನೆಯಿಂದ ವ್ಯಕ್ತಪಡಿಸಿದ್ದಾನೆ. ೧೨ನೆಯ ಶತಮಾನದ ಶೈವ ವೈಷ್ಣವ ಸಂಘರ್ಷದ ಸತ್ಯಕಥೆ ಈ ಮೊದಲು ಕಾವ್ಯದಲ್ಲಿ ಪ್ರಸ್ತಾಪವಾಗಿರಲಿಲ್ಲ.

ಹೀಗೆ ಕ್ರಿ.ಶ. ೧೩೮೫ ರಲ್ಲಿ ಬರುವ ಕವಿ ಪದ್ಮಣಾಂಕನು 'ಪದ್ಮರಾಜ ಪುರಾಣ' ಕಾವ್ಯದಲ್ಲಿ ಗುಡ್ಡವ್ವೆಯ ಕಥೆ ಉಲ್ಲೇಖಿಸಿದ್ದಾನೆ. ಕ್ರಿ.ಶ. ೧೫೫೦ ರಲ್ಲಿ ಚನ್ನಬಸವಾಂಕ. ಕವಿಯು 'ಮಹಾದೇವಿಯಕ್ಕನ ಪುರಾಣ' ಕೃತಿಯಲ್ಲಿ ಮಹಾದೇವಿಯಕ್ಕನ ದರುಶನ ಪಡೆಯಲು ಆಗಮಿಸಿದ ಶರಣೆಯರ ಜೊತೆಗೆ ವೀರ ಶೂರ ಸೇನಾನಿ ವರದಾನಿ ಗುಡ್ಡವ್ವೆ ಬಂದಿದ್ದಳೆಂದು ತಿಳಿಸಿದ್ದಾನೆ.

ಕ್ರಿ.ಶ. ೧೫೫೦ ರಲ್ಲಿ 'ಪುರಾತರ ದೇವಿಯರ ತ್ರಿವಿಧಿ' ಕೃತಿಯು (ಕೃತಿಕಾರನ ಹೆಸರು ಲಭ್ಯವಿಲ್ಲ) ಪೂರ್ವಿಕರಿಂದ ರಚಿಸಲ್ಪಟ್ಟಿರಬಹುದು. ಈ ಕಾವ್ಯದಲ್ಲಿ ನೂರಾ ಎಂಟು ದೇವಿಯರ ಕಾವ್ಯವು ವಾರ್ಧಕ ಷಟ್ಪದಿಯಲ್ಲಿ ರಚಿತಗೊಂಡಿದ್ದರಲ್ಲಿ

ವೀರಗುಡ್ಡವ್ವೆಯ ಪ್ರಸ್ತಾವನೆಯಿದೆ. ಕ್ರಿ. ಶ. ೧೫೫೦ ರಲ್ಲಿ ಕವಿ ನಂಜುಂಡದೇವ ಷಟ್ಪದಿಯಲ್ಲಿ ರಚಿಸಿದ 'ಭೈರವೇಶ್ವರ ಕಾವ್ಯ' ಈ ಕಾವ್ಯದಲ್ಲಿ ಷೋಡಶರ ಗುಡ್ಡವ್ವೆಯ ಬಗ್ಗೆ ಉಲ್ಲೇಖವಿದೆ.

ಕ್ರಿ.ಶ. ೧೫೮೪ ರಲ್ಲಿ ವಿರೂಪಾಕ್ಷ ಪಂಡಿತ. ಷಟಸ್ಥಲಜ್ಞಾನಿ ಚನ್ನಬಸವಣ್ಣನವರ ಮೇಲೆ ನಿಷ್ಠೆಯಿಂದ 'ಚನ್ನಬಸವ ಪುರಾಣ' ಕೃತಿ ರಚಿಸಿದ್ದಾನೆ. ಈ ಕವಿಯು ತನ್ನ ಕಾವ್ಯದಲ್ಲಿ ಷೋಡಶಗಣಂಗಳ ನಾಯಕಿ ಗುಡ್ಡವ್ವೆಯನ್ನು ಪೌರಾಣಿಕ ಚೌಕ್ಕಟ್ಟಿನಲ್ಲಿ ಚಿತ್ರಿಸಿದ್ದಾನೆ. ಕ್ರಿ.ಶ. ೧೬೦೦ ರಲ್ಲಿ ಬರುವ ಉತ್ತರ ದೇಶದ ಬಸವಲಿಂಗ, ಕ್ರಿ.ಶ. ೧೬೫೫ ರಲ್ಲಿ ಷಡಕ್ಷರದೇವ, ಕ್ರಿ.ಶ. ೧೬೭೨ ರಲ್ಲಿ ಶಾಂತಲಿಂಗ ದೇಶಿಕ, ಕ್ರಿ.ಶ. ೧೭೦೦ ರಲ್ಲಿ ಬರುವ ಸಿದ್ಧನಂಜೇಶ. ಮೊದಲಾದ ಕವಿಪುಂಗವರು ತಮ್ಮ ಕಾವ್ಯಗಳಲ್ಲಿ. ಗದ್ಯಕಥಾ ಶೈಲಿಯಲ್ಲಿ, ಚಂಪುಕಾವ್ಯದಲ್ಲಿ, ಹೀಗೆ ಹಿಂದಿನ ಕವಿಗಳನ್ನನುಸರಿಸಿ ವೀರ ಶರಣೆ ಗುಡ್ಡವ್ವೆಯ ಚರಿತ್ರೆಯನ್ನು ಸಂಕ್ಷಿಪ್ತವಾಗಿ ದಾಖಲಿಸಿದ್ದಾರೆ. ಇತ್ತೀಚೆಗೆ ಅನೇಕ ಆಧುನಿಕ ಬರಹಗಾರರು ಗುಡ್ಡಾಪುರ ದಾನಮ್ಮನ ಕುರಿತು ಕೃತಿ ರಚನೆ ಮಾಡಿದ್ದಾರೆ. ಆದರೆ ಈ ಕೃತಿಗಳು ಪವಾಡ ಪ್ರಧಾನವಾಗಿವೆ.

ಶಿವಶಂಕರ ಕವಿಯ "ವೀರಗುಡ್ಡಾಂಬಿಕೆ ಚರಿತ್ರೆ"

ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಬಾಳಿ ಬದುಕಿದ ಶಿವಶಂಕರ ಕವಿಯು 'ವೀರಗುಡ್ಡಾಂಬಿಕೆ ಚರಿತ್ರೆ' ಯನ್ನು ರಚಿಸಿದ್ದಾನೆ. ಕವಿಯು ವಿಜಯಪುರ ತಾಲೂಕಿನ 'ಕೆಂಗನಳ್ಳಿ' ಗ್ರಾಮದವನೆಂಬ ಅಂಶ ಕಾವ್ಯದ ಆದಿಯಲ್ಲಿದೆ. ಶಿವಶಂಕರ ಕವಿಯು ವೀರಶೈವ (ಲಿಂಗಾಯತ) ಧರ್ಮತತ್ತ್ವ ವಿವೇಚನೆಯಲ್ಲಿ ಸಂಸ್ಕೃತ ಶ್ಲೋಕಗಳನ್ನು ಬಳಸಿದ್ದಾನೆ. ಕಾವ್ಯದ ಆದಿಯಲ್ಲಿ ಕವಿಯು ಸಂಪ್ರದಾಯಕ್ಕೆ ಬದ್ಧವಾಗಿ ಪೂರ್ವದ ವೀರಶೈವ ಕವಿಗಳ ಪರಂಪರೆಯನ್ನು ಸ್ತುತಿಸುವ ವಿವರಣೆ ಗಮನಾರ್ಹವಾಗಿದೆ.

ಕವಿಯು ಸೋಮೇಶ್ವರನನ್ನು ಕೊಂಡಾಡಿ ನಂತರ ಕ್ರಮವಾಗಿ ಜಗಜ್ಜನನಿಯಾದ ಪಾರ್ವತಿ, ವೀರಭದ್ರ, ಷಣ್ಮುಖ, ವಿಘ್ನವಿದ್ವಾಂಸಕನಾದ ಗಣಪತಿ ಭೃಂಗೀಶ ಇವರೆಲ್ಲರನ್ನು ಸ್ತುತಿಸುತ್ತಾನೆ. ಆಮೇಲೆ ವೀರಶೈವ ಮತಸ್ಥಾಪಕರಾದ ಪಂಚಾಚಾರ್ಯರನ್ನು ಸ್ತುತಿಸುತ್ತಾನೆ. ನಂತರ ಸಕಲ ಜೀವರಾಶಿಗೆ ಲೇಸನೆ ಬಯಸುವ ಮಹಾಮಾನವತಾವಾದಿಗಳಾದ ಬಸವಾದಿ ಶರಣರನ್ನು ಸ್ಮರಿಸುತ್ತಾನೆ. ಕೊನೆಯಲ್ಲಿ ಶಿವನನ್ನು ದೃಢಭಕ್ತಿಯಿಂದ ಮೆಚ್ಚಿಸಿದ ಅನೇಕ ಭಕ್ತರನ್ನು ಕೊಂಡಾಡಿ ಪರಶಿವನ ಚಿಚ್ಛಕ್ತಿಯೆ ಷೋಡಶ ವಿಧವಾಗಿ ಮೆರೆದ ಷೋಡಶಗಣರು ತನ್ನ ಬುದ್ಧಿಗೆ ಬೆಳಕನೀಯಲೆಂದು ಪ್ರಾರ್ಥಿಸುತ್ತಾನೆ.

ಹಳೆಬೇರು ಹೊಸಚಿಗುರಿನಂತೆ ವೀರಶೈವ ಸಾಹಿತ್ಯ ಪರಂಪರೆಯಲ್ಲಿ ಹಳೆಯ ಕಥಾ ವಸ್ತುಗಳು ಹೊಸರೂಪ ಪಡೆದು ಕಾವ್ಯಗಳು ಸೃಷ್ಟಿಗೊಂಡವು. ಶಿವಶಂಕರ ಕವಿಯು ಸಹ ಹಿಂದಿನ ಕಾವ್ಯಪರಂಪರೆಯ ಧೋರಣೆಯಿಂದಲೇ "ವೀರಗುಡ್ಡಾಂಬಿಕೆ ಚರಿತ್ರೆ" ರಚಿಸಿದ್ದಾನೆ. ಗುಡ್ಡವ್ವೆಯು ಪಾಲಿಸಿದ ಗಣಾಚಾರದ ವಿಷಯದೊಂದಿಗೆ ಕವಿಯು ತನ್ನ ಕಾವ್ಯವನ್ನು ತತ್ತ್ವಗಳ ಕೋಶವಾಗುವಂತೆ ನೋಡಿಕೊಂಡಿದ್ದಾನೆ. ಕನ್ನಡ ಕಾವ್ಯಲೋಕದಲ್ಲಿ ಅಕ್ಕಮಹಾದೇವಿ ನಾಯಕಿಯಾಗಿರುವ ಕಾವ್ಯವಸ್ತು ಪ್ರಥಮವಾಗಿ ದಾಖಲಾಗಿದೆ. ನಂತರದ ಸ್ಥಾನದಲ್ಲಿ ಗುಡ್ಡವ್ವೆ ಕಥಾನಾಯಕಿಯಾಗಿ ವರ್ಣನೆ-ಗೊಂಡಿದ್ದಾಳೆ. ವೀರಶೈವ ಕವಿಗಳು ಪುರುಷರಾದ ಶರಣವರ್ಗಕ್ಕೆ ಹೆಚ್ಚಿನ ಪ್ರಾಧಾನ್ಯ ನೀಡಿದರೆ ವಿನಾ ಶರಣೆಯರ ವರ್ಗಕ್ಕೆ ಮಹತ್ವ ನೀಡಲಿಲ್ಲ. ವೀರಶೈವ ಸಾಹಿತ್ಯದಲ್ಲಿ ಶರಣೆಯರ ಬಗ್ಗೆ ಹೆಚ್ಚಿನ ಮಾಹಿತಿ ದೊರೆಯದ ಕಾರಣ ಶಿವಶಂಕರ ಮೊದಲಾದ ಕವಿಗಳು ಗುಡ್ಡವ್ವೆಯ ಚರಿತ್ರೆಯನ್ನು ಪವಾಡ ಮತ್ತು ದಂತಕಥೆಗಳಿಂದ ಸಿಂಗರಿಸಿದ್ದಾರೆ.

ಶಿವಶಂಕರ ಕವಿ ಗುಡ್ಡವ್ವೆಯ ವೀರಗಣಾಚಾರ ತತ್ತ್ವವನ್ನು ಕಥೆಯಲ್ಲಿ ಅಳವಡಿಸಿ, ಧರ್ಮ ಮತ್ತು ಕಾವ್ಯಧರ್ಮವನ್ನು ಎತ್ತಿ ಹಿಡಿದಿದ್ದಾನೆ. ಆತನ ಕಾವ್ಯಶಕ್ತಿಯು ವೀರಶೈವ ಧರ್ಮತತ್ತ್ವ ಪ್ರತಿಪಾದನೆಯಲ್ಲಿ ಸಮ್ಮಿಳಿತವಾಗಿದೆ. ಸರ್ವವೂ ಶಿವಮಯವೆಂದು ಲಿಂಗಸ್ವರೂಪವೆಂದು ಕವಿ ವರ್ಣಿಸುತ್ತಾ, ತನ್ನ ಕಾವ್ಯದಲ್ಲಿ ಅನೇಕ ರೂಪಕ ಮತ್ತು ಅಲಂಕಾರಗಳನ್ನು ಬಳಸಿದ್ದಾನೆ. ಅವುಗಳಲ್ಲಿ ಲಿಂಗಮಹತ್ವ ಸಾರುವ ಒಂದು ಪದ್ಯವಿದು.

ಲಿಂಗವೆನೆ ನಿಶ್ಶೂನ್ಯ ನಿಷ್ಕಲ ನಿರಾಮಯಂ
ಲಿಂಗವೆನೆ ನಿತಂ ನಿರಾಲಂಬ ನಿರುಪಮಂ
ಲಿಂಗವೆನೆ ಚಿತ್ಪಣದ ಮೂರ್ತಿಮಾಂಗಲ್ಯನಿಲಯಂ
ಜನನಮರಣ ।
ಲಿಂಗವೆನೆ ಕಲುಷಾಬ್ಧಿ ಬಾಡಬ ನಿರಾಕುಳಂ
ಲಿಂಗವೆನೆ ಚಿಜ್ಯೋತಿರೂಪಂ ನಿರಂಜನಂ
ಲಿಂಗವೆನಲವಿರಳ ಪರಬ್ರಹ್ಮವಿಗ್ರಹಂ ಲಿಂಗಮಹಿಮೆಯ ಕೇಳ್ವದು ।

ಲಿಂಗದ ಮಹಿಮೆಯನ್ನು ಸಾರಲು, ಲಿಂಗಮಧ್ಯದಲ್ಲೇ ಜಗವು ಅಡಗಿದೆ ಎಂಬ ತತ್ತ್ವವನ್ನು ಅಳವಡಿಸಿದ್ದಾನೆ. ಇಷ್ಟಲಿಂಗ ಪೂಜೆಯ ವಿಧಿವಿಧಾನವನ್ನು ಉಲ್ಲೇಖಿಸಿ, ದೀಕ್ಷಾ ವಿಧಾನವನ್ನು ಕಾವ್ಯದಲ್ಲಿ ಪ್ರತಿಪಾದಿಸಿದ್ದಾನೆ. ಶರಣಧರ್ಮ ಅಷ್ಟಾವರಣ, ಷಟ್ಸ್ಥಲ, ಪಂಚಾಚಾರ ತತ್ತ್ವಕ್ಕೆ ಮಹತ್ವ ನೀಡಿದೆ. ಆದರೆ ಕವಿಯು ಗುಡ್ಡವ್ವೆಯ ಕಥೆಯನ್ನು ವೀರಶೈವ ತತ್ತ್ವಗಳ ಬೋಧನೆಗೆ ಅನುಗುಣವಾಗಿ ಹೇಳಿದ್ದಾನೆ.

ಶಿವಕವಿ (೧೯೩೧)

ಕನ್ನಡ ಸಾರಸ್ವತ ಲೋಕದಲ್ಲಿ ಇನ್ನೂ ಅನೇಕ ವಿದ್ವಾಂಸರು, ಕವಿ, ಸಾಹಿತಿಗಳು ತಮ್ಮ ಕೃತಿಗಳಲ್ಲಿ ವೀರಶರಣೆ ಗುಡ್ಡಾಪುರ ದಾನಮ್ಮನ ಚರಿತ್ರೆಯನ್ನು ಐತಿಹಾಸಿಕ ಘಟನೆಗಳಿಂದ, ದಂತಕಥೆಗಳಿಂದ ಐತಿಹ್ಯ ಪ್ರತೀತಿಗಳಿಂದ ವಿವರಿಸುತ್ತಾರೆ.

ಶಿವಕವಿಯು ೧೯೩೧ ರಲ್ಲಿ ದಾನಮ್ಮನ ದಂತಕಥೆ ಹಾಗೂ ಕುರುಹು ಆಧಾರಿತ "ಗುಡ್ಡಾಪುರೀ ದಾನಮ್ಮದೇವಿ ಚರಿತ್ರೆ" ಎಂಬ ಕೃತಿ ರಚಿಸಿದನು. ಶಿವಕವಿಯ ಕಾವ್ಯವು ಕೃತಿಯಾಗಿ ಪವಾಡಗಳಿಂದ, ದಂತಕಥೆಗಳಿಂದ, ಅವಾಸ್ತವದತ್ತ ಓಡುತ್ತದೆ. ಆದರೆ ಕೆಲವು ಪ್ರಸಂಗದಲ್ಲಿ ವಾಸ್ತವ ಘಟನೆಗಳನ್ನು ಪ್ರಸ್ತಾಪಿಸಿರುವುದು ಗಮನಾರ್ಹವಾಗಿದೆ. ಇವೆರಡರ ಮಿಶ್ರಣದೊಂದಿಗೆ ದಾನಮ್ಮನ ಚರಿತ್ರೆ ಕಾವ್ಯರೂಪಕ್ಕೆ ತಾಳಿದೆ. ಕವಿಯು ಭಕ್ತಿ ನಿರೂಪಣೆಗೆ ಪ್ರಾಶಸ್ತ್ಯ ನೀಡಿರುವ ಕಾವ್ಯತಂತ್ರ ಇಲ್ಲಿ ಫಲಿಸಿದೆ.

ಶಿವಕವಿ ಕವಿತ್ವದರ್ಶನ ನೀಡುವಲ್ಲಿ ಹಿಂದೆನಿಸಿದರೂ, ದಾನಮ್ಮನ ಚರಿತ್ರೆ ನೀಡುವಲ್ಲಿ ಮುಂದಾದ ಕಾರಣ ಇದೊಂದು ವಿಶಿಷ್ಟ ಸ್ಥಾನ ಪಡೆದ ಕೃತಿ ಎನಿಸಿಕೊಂಡಿದೆ. ಮುಂದೆ ಡಾ.ಫ.ಗು. ಹಳಕಟ್ಟಿಯವರು ಈ ಕೃತಿಯ ಹಸ್ತಪ್ರತಿಗಳನ್ನು ಶೋಧಿಸಿ, ತಮ್ಮ ಶಿವಾನುಭವ ಪತ್ರಿಕೆಯ ಸಂಚಿಕೆಯಲ್ಲಿ ಪ್ರಕಟಿಸಿದರು. ಕೆಲ ವರ್ಷಗಳ ನಂತರ ಕ್ರಿ.ಶ. ೧೯೫೪ ರಲ್ಲಿ "ಡಾ. ಫ.ಗು. ಹಳಕಟ್ಟಿಯವರ ಸಮಗ್ರ ಸಂಪುಟ ೧೧ ಚರಿತ್ರ ಸಾಹಿತ್ಯ ೨ ರಲ್ಲಿ "೭೭೦ ಅಮರಗಣಾಧೀಶ್ವರರ ಚರಿತ್ರೆಗಳು" ಇದರಲ್ಲಿ ಶಿವಶರಣೆಯರ ಚರಿತ್ರೆಗಳಲ್ಲಿ 'ವರದಾನಿ ಗುಡ್ಡಮ್ಮೆ' ಎಂದು ಶರಣೆಯ ಕುರಿತು ಬರೆದಿದ್ದಾರೆ.

ಶ್ರೀಮತಿ ಶಾಂತಾದೇವಿ ಮಾಳವಾಡರು 'ದಾನದಾಸೋಹಿ ದಾನಮ್ಮ' ಎಂಬ ಮಹತ್ವದ ಗ್ರಂಥವನ್ನು ರಚಿಸಿದ್ದಾರೆ. ಈ ಗ್ರಂಥದಲ್ಲಿ ಶರಣ ಸಂಸ್ಕೃತಿಯನ್ನು ಹಾಗೂ ಅದರ ಮೂಲತತ್ತ್ವಗಳನ್ನು ಬಿಂಬಿಸುವುದಾಗಿದೆ. ಇದರಲ್ಲಿ ವಚನ, ಸ್ವರವಚನ, ಗಾದೆಮಾತು, ಸೂಕ್ತಿಗಳಿಂದ ಕೂಡಿದ್ದು ಗದ್ಯಶೈಲಿ ನಿರರ್ಗಳವಾಗಿದೆ. ಉತ್ತರ ಕರ್ನಾಟಕದ ಜನಪದ ಸೊಗಡಿನೊಳಗೊಂಡು ಶರಣ ಸಂಸ್ಕೃತಿಯನ್ನು ಬೀರುತ್ತಾ ಜನಭಾಷೆಯನ್ನು ಸಾಹಿತ್ಯ ಭಾಷೆಯನ್ನಾಗಿಸಿದ್ದಾರೆ. ಕೌಟುಂಬಿಕ ಸಮಸ್ಯೆಗಳ ವಿವಿಧ ಮುಖಗಳನ್ನು ಪರಿಚಯಿಸಿ, ಅವುಗಳ ಪರಿಹಾರದ ಸೂತ್ರದಾಯಕಳು ಶರಣೆ ದಾನಮ್ಮನೆಂದು ತಿಳಿಸಿದ್ದಾರೆ. ಜನಪರ, ಜೀವಪರ ಒಲವು ತಾಳಿದ ಉದಾತ್ತ ಮಹಿಳೆಯಾಗಿ ಶರಣಧರ್ಮದ ಸಂದೇಶ ಸಾರಿದ ದಾನಮ್ಮ ಶರಣೆಯ ಚಾರಿತ್ರಿಕ ಜೀವನದ ಗ್ರಂಥ ರಚಿಸಿದ ಶ್ರೀಮತಿ ಶಾಂತಾದೇವಿ ಮಾಳವಾಡ ತಾಯಿಯವರ ಶ್ರಮಕ್ಕೆ ಹೃತ್ಪೂರ್ವಕ

ಅಭಿನಂದನೆಗಳು.

ಕವಿ ರಾಮಣ್ಣ ಬ್ಯಾಟಿಯವರು ಭಾಮಿನಿ ಷಟ್ಪದಿಯಲ್ಲಿ 'ಶ್ರೀ ಗುಡ್ಡಾಪುರ ದಾನಮ್ಮದೇವಿಯ ಪುರಾಣಂ' ಎಂಬ ಕೃತಿಯನ್ನು ರಚಿಸಿದ್ದಾರೆ. ಬಹುತೇಕ ಬರಹಗಾರರು ದಾನಮ್ಮನನ್ನು ಕುರಿತು ಬರೆಯುವಾಗ ಡಾ. ಫ.ಗು. ಹಳಕಟ್ಟಿಯವರನ್ನು ಅನುಸರಿಸಿದ್ದು ಕಂಡು ಬರುತ್ತದೆ.

'ಶಿವಶರಣ ಕಥಾರತ್ನಕೋಶ' ಎಂಬ ಕೃತಿಯಲ್ಲಿ ಡಾ. ತ.ಸು. ಶಾಮರಾಯರು 'ವರದಾನಿ ಗುಡ್ಡಮ್ಮೆ' ಎಂಬ ಲೇಖನ ಬರೆದಿದ್ದಾರೆ. 'ಬಸವಣ್ಣನವರ ಸಮಕಾಲೀನರು' ಕೃತಿಯಲ್ಲಿ ಡಾ. ಎಸ್. ಎಂ. ಹುಣಸ್ಯಾಳರ 'ವರದಾನಿ ಗುಡ್ಡವ್ವೆ' ಎಂಬ ಲೇಖನವಿದೆ. ಪ್ರೊ. ಸಿದ್ದಣ್ಣ ಉತ್ನಾಳ ಅವರ 'ವೀರಗಣಾಚಾರಿ ಗುಡ್ಡಾಪುರ ದಾನಮ್ಮ' ಎಂಬ ಕಿರುಕೃತಿ ರಚಿಸಿದ್ದಾರೆ. ದಾನಯ್ಯ ಜಂಬಗಿಮಠ ಅವರು 'ಶ್ರೀ ಗುಡ್ಡಾಪುರ ಕ್ಷೇತ್ರ' ಎಂಬ ಕಿರು ಪುಸ್ತಕ ಬರೆದಿದ್ದಾರೆ.

ಇತ್ತೀಚೆಗೆ ಹನ್ನೆರಡನೇ ಶತಮಾನದ, ಶರಣ ಸ್ಮಾರಕಗಳು ಎಂಬ ಮೂರು ಸಂಪುಟಗಳು ಬಸವ ಸಮಿತಿ ಬೆಂಗಳೂರು ಇವರು ಪ್ರಕಟಿಸಿರುವ ಡಾ. ವೀರಣ್ಣ ದಂಡೆ ಮತ್ತು ಡಾ. ಜಯಶ್ರೀ ದಂಡೆಯವರು ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ ಹಾಗೂ ತೆಲಗಾಂಣದ ಕ್ಷೇತ್ರ ಕಾರ್ಯ ನಡೆಸಿ ಸಂಶೋಧಿಸಿದ ಸಂಪುಟಗಳಲ್ಲಿ ೧ನೇ ಸಂಪುಟದಲ್ಲಿ ದಾನಮ್ಮನವರ ಚಿಕ್ಕ ಮಾಹಿತಿಯೊಂದಿಗೆ ಜತ್ತ ತಾಲೂಕಿನಲ್ಲಿ ಬರುವ ಉಮ್ರಾಣಿ, ಸಂಕತೀರ್ಥ, ಗುಡ್ಡಾಪುರದಲ್ಲಿ ಇರುವಂಥ ಗುಡ್ಡಾಪುರ ದಾನಮ್ಮ ಜನಿಸಿದ ಮನೆ, ದಾನಮ್ಮನವರ ದೇವಸ್ಥಾನ, ಮದುವೆ ನಡೆದ ಸ್ಥಳ ಹೀಗೆ ಕೆಲವು ಭಾವಚಿತ್ರಗಳು ಶರಣ ಸ್ಮಾರಕಗಳು ಸಂಪುಟದಲ್ಲಿ ನಮಗೆ ದೊರೆಯುತ್ತದೆ.

ವಿವಿಧ ವಿದ್ವಾಂಸರು ದಾನಮ್ಮ ಶರಣೆಯ ಕುರಿತು ಉಲ್ಲೇಖಿಸಿರುವುದನ್ನು ಕಾಣಬಹುದು. ಡಾ. ಆರ್.ಸಿ. ಹಿರೇಮಠ, ಡಾ. ತಿಪ್ಪೇರುದ್ರಸ್ವಾಮಿ, ಡಾ. ಎಂ. ಎಂ. ಕಲಬುರ್ಗಿ, ಡಾ. ಬಿ.ಸಿ. ಜವಳಿ, ಡಾ.ಎಂ. ಎಸ್. ಲಠ್ಠೆ, ಡಾ. ಪಿ. ಬಿ. ದೇಸಾಯಿ, ಡಾ. ರಾಜೇಶ್ವರಿ ಮಹೇಶ್ವರಯ್ಯ ಹೀಗೆ ಅನೇಕ ಲೇಖಕರ ಲೇಖನಗಳು ಸಿಗುತ್ತವೆ. ಆದರೆ ದಾನಮ್ಮನ ಇತಿಹಾಸವು ಅಪೂರ್ಣವಾಗಿಯೆ ಉಳಿಯುತ್ತದೆ.

ಹನ್ನೆರಡನೆಯ ಶತಮಾನದ ಶರಣರ ವಚನಗಳ ಆಧಾರದ ಮೇಲೆ ಶರಣರ ಚರಿತ್ರೆಯನ್ನು ರಚಿಸಬಹುದು. ದಾನಮ್ಮ ಬರೆದಿರಬಹುದಾದ ಒಂದು ವಚನವು ಸಿಕ್ಕಿಲ್ಲ. ದೊರೆತ ಅಲ್ಪ ಸ್ವಲ್ಪ ದಾಖಲೆಗಳಲ್ಲಿ ವಿವರವಾದ ಚರಿತ್ರೆಯ ಅಂಶಗಳಿಲ್ಲ.

ಆದರೆ ಡಾ. ಮಹಂತೇಶ ಉಕ್ಕಲಿಯವರು 'ಗುಡ್ಡಾಪುರದ ದಾನಮ್ಮ: ಸಾಂಸ್ಕೃತಿಕ ನೆಲೆಗಳು' ಎಂಬ ತಮ್ಮ ಸಂಶೋಧನಾ ಕೃತಿಯಲ್ಲಿ ಬಹಳ ಶ್ರಮಪಟ್ಟು ಉಪಲಬ್ಧ ಆಧಾರಗಳಿಂದ ಐತಿಹಾಸಿಕ ಅಂಶಗಳನ್ನು ಕ್ರೋಡೀಕರಿಸಿ ಮಹತ್ವದ ಮಹಾಪ್ರಬಂಧ ರಚಿಸಿದ್ದಾರೆ. ಚಾರಿತ್ರಿಕ, ಸಾಹಿತ್ಯಿಕ, ಧಾರ್ಮಿಕ, ವಾಸ್ತುಶಿಲ್ಪ ಹಾಗೂ ಮೂರ್ತಿಶಿಲ್ಪಗಳ ಮೂಲಕ ವಿಷಯ ಸಂಗ್ರಹಿಸಿ ಸಮರ್ಪಕವಾಗಿ ವಿಶ್ಲೇಷಿಸಿದ್ದಾರೆ. ಅವರ ಪರಿಶ್ರಮ ಶ್ಲಾಘನೀಯವಾಗಿದೆ.

ಜನಪದದಲ್ಲಿ ದಾನಮ್ಮ

ಜನಪದ ಸಾಹಿತ್ಯ ಭಕ್ತಿಭಾವದ ದೃಷ್ಟಿಯಿಂದ ಮಿಗಿಲಾಗಿದೆ. ನಮ್ಮ ನಾಡಿನಲ್ಲಿ ಹುಟ್ಟಿ ಬೆಳೆದ ಧರ್ಮಗಳು ಭಕ್ತಿಗೆ ಹೆಚ್ಚು ಮಹತ್ವ ನೀಡಿದವು. ಸಾಮಾನ್ಯ ಜನರು ಪ್ರೀತಿ, ವಾತ್ಸಲ್ಯ, ಸ್ನೇಹ, ಸತ್ಯ, ಅಹಿಂಸೆ ಮೊದಲಾದ ಮೌಲ್ಯಗಳನ್ನು ಒಡಗೂಡಿಸಿ ಭಕ್ತಿಮಾರ್ಗದಿಂದಲೆ ದೇವರನ್ನು ಹುಡುಕಾಡಿದರು. ಕಾಲಕ್ಕೆ ತಕ್ಕಂತೆ ಭಕ್ತಿಮಾರ್ಗ ಬರೆದ ಕವಿಗಳು ಶ್ರದ್ಧೆ, ನಿಷ್ಠೆಯಿಂದ ಸಾಹಿತ್ಯ ಸೃಷ್ಟಿಸಿದರು. ಆದರೆ ಮುಗ್ಧಭಕ್ತಿಯ ಕವಿಹೃದಯದ ಗ್ರಾಮೀಣ ಜನರು ದೇವರನ್ನು ಭಕ್ತಿಸೂತ್ರದಡಿ ಸ್ಮರಿಸಲು, ಹಾಡುತ್ತಾ ಜನಪದ ಸಾಹಿತ್ಯ ರಚಿಸಿದರು.

ನಮ್ಮ ನಾಡಿನ ಶಿವಶರಣರು ಜನಮಾನಸದಲ್ಲಿ ಜನಪದ ಸಾಹಿತ್ಯದಿಂದಲೆ ಗಟ್ಟಿಗೊಂಡವರು. ಬಸವಣ್ಣ, ಚನ್ನಬಸವಣ್ಣ, ಅಲ್ಲಮಪ್ರಭುದೇವ, ಅಕ್ಕಮಾಹಾದೇವಿ, ಶಿವಯೋಗಿ ಸಿದ್ಧರಾಮ, ಅಕ್ಕನಾಗಮ್ಮ ಮೊದಲಾದ ಶರಣ ಶರಣೆಯರ ಕಥೆಗಳು ಜನಪದರಲ್ಲಿ ಹಾಸುಹೊಕ್ಕಾಗಿವೆ. ಜನಪದರ ದೈವಭಕ್ತಿ ದೃಢನಂಬಿಕೆಯಿಂದ ಕೂಡಿರುವುದು. ಅವರು ತಮ್ಮ ಇಷ್ಟದೇವರುಗಳನ್ನು ಅತ್ಯಂತ ಭಯಭಕ್ತಿಯಿಂದ, ನಿಷ್ಠೆ ನೇಮಗಳಿಂದ ಪೂಜಿಸಿದವರು. ಜನಪದ ಕವಿಯೊಬ್ಬ ಒಂದು ಕಡೆ ಹೇಳ್ತಾನೆ.

ಮುಗ್ಧ ಶರಣರ ಹಾಡ ಸಿದ್ಧಿ ಮಂತ್ರವು ನೋಡು
ಸಿದ್ಧಾಗು ಹಾಡ ಹಾಡುವುದಕ್ಕೆ! ಎಲೆ ಜೀವ
ಶುದ್ಧಾಗಿ ಹೊಂದು ಶಿವಪದವ.
ಎಂದು ಶರಣರ ಮಹಿಮೆಯ ಮನತುಂಬಿ ಕೊಂಡಾಡಿದ್ದಾನೆ.

(೧) ಜನಪದ ಸಾಹಿತ್ಯದಲ್ಲಿ ದಾನಮ್ಮ: ದಾನಮ್ಮನನ್ನು ಜನಪದ ಹಾಡುಗಾರರು ಅನೇಕ ರೀತಿಯಲ್ಲಿ ಹಾಡಿ ಹೊಗಳಿದ್ದಾರೆ. "ಜನಪದ ಗೀತೆಗಳಲ್ಲಿ ದಾನಮ್ಮ," "ಮಂಗಳಾರತಿ ಪದಗಳಲ್ಲಿ ದಾನಮ್ಮ", "ಕೋಲಾಟದ ಪದಗಳಲ್ಲಿ ದಾನಮ್ಮ," "ಜನಪದ

ಒಡಪುಗಳಲ್ಲಿ ದಾನಮ್ಮ," "ಜೋಗುಳ ಪದ್ಯದಲ್ಲಿ ದಾನಮ್ಮ," ಹೀಗೆ ಮೊದಲಾದವುಗಳನ್ನು ಜನಪದರು ರಚಿಸಿದ್ದಾರೆ. ಆಧ್ಯಾತ್ಮಿಕ ನಂಬಿಕೆ ಹಾಗೂ ಮುಗ್ಧಭಕ್ತಿಯ ನೆಲೆಯಲ್ಲಿ ಶಿವಶರಣೆ ದಾನಮ್ಮನ ಮಹಿಮೆಯನ್ನು ದ್ವಿಪದಿ, ತ್ರಿಪದಿ, ಚೌಪದಿಗಳಲ್ಲಿ ಕೊಂಡಾಡಿದ್ದಾರೆ.

'ನಿತ್ಯದಲ್ಲಿ ನೆನೆಯಬೇಕು' ಎಂಬ ಜನಪದ ಹಾಡಿನಲ್ಲಿ ಹೀಗೆ ಹೇಳಲಾಗಿದೆ.

ಅತ್ತ ಇತ್ತ ತಿರುಗುವುದ್ಯಾಕ ಮುತ್ತಿನಂಥ ಮನಸ್ಸಿರಬೇಕು
ಸತ್ಯವಂತೆ ದಾನಮ್ಮನನ್ನು ನಿತ್ಯದಲ್ಲಿ ನೆನೆಯಬೇಕು.
ಅಂಗೈಯಲ್ಲಿ ಲಿಂಗವ ಹಿಡಿದು ಲಿಂಗವಂತ ಧರ್ಮ ಬೆಳೆಸುವ
ಮಹಾತಾಯಿ ದಾನಮ್ಮನ ಸೇವೆ.

ದಾನಮ್ಮ ಲಿಂಗವಂತ ಧರ್ಮ ಪ್ರಚಾರ ಮಾಡುತ್ತಿದ್ದಳೆಂದು ಈ ಜನಪದ ಹಾಡಿನ ಭಾವವಾಗಿದೆ.

ದೇವರ ಮೂರ್ತಿ ಇಲ್ಲವೆ ಪುಣ್ಯಪುರುಷರ ಗದ್ದುಗೆಯನ್ನು ಪೂಜಿಸಿ ಆರತಿಯನ್ನು ಬೆಳಗುವ ಸಂದರ್ಭದಲ್ಲಿ ಹಾಡುವ ಗೀತೆಗಳಿಗೆ ಮಂಗಳಾರತಿ ಪದಗಳೆನ್ನುವರು. ಭಕ್ತಿ-ಶ್ರದ್ಧೆಯಿಂದ ಆಯಾ ದೇವರುಗಳ ಗುಣಗಾನ ಹಾಗೂ ಪುಣ್ಯಪುರುಷರ ವ್ಯಕ್ತಿತ್ವದ ಸಾಧನೆಯನ್ನು ಹಾಡಿ ಭಕ್ತರಿಗೆ ಮಂಗಳಕರವಾಗಲಿ ಎಂದು ಪ್ರಾರ್ಥಿಸುವ ಹಾಡುಗಳು ಜನಪದ ಸಾಹಿತ್ಯದಲ್ಲಿ ಕಂಡು ಬರುತ್ತವೆ. "ಆರತಿ ಬೆಳಗೋಣ" ಎಂಬ ಪದ್ಯದಲ್ಲಿನ ಒಂದು ನುಡಿ.

ಆರು ಗುಣಗಳನಳಿದು ಮಿಗಿಲಾದ ಮೂರು
ಗುಣಗಳ ಕಳೆದು ಆರು ಮೂರೊಂಬತ್ತು
ತಾ ಅಳಿದು ಪರಮಪಂಚಾಕ್ಷರಿ ಮಂತ್ರ ಮಹತಿಯ
ತಿಳುಹಿದ ದೇವಿಗೆ ಆರುತಿ ಬೆಳಗೋಣ ಬಾ.

ಶರಣೆ ದಾನಮ್ಮನ ಅನೇಕ ಕಡೆಗಳಲ್ಲಿನ ದೇವಾಲಯಗಳಲ್ಲಿ, ಕುಲದೇವತೆಯಾದ (ಮನೆದೇವರು) ಮನೆತನಗಳಲ್ಲಿ ಭಕ್ತರು ದೇವಿಯನ್ನು ಪೂಜಿಸಿ, ಆರತಿಯನ್ನು ಬೆಳಗುತ್ತಾ ಮಂಗಳಗೀತೆ ಹಾಡುತ್ತಾರೆ. ಇಂತಹ ಪದ್ಯಗಳಲ್ಲಿ ಶರಣೆಯ ಮಹಿಮೆ ಹೇಳುತ್ತಾ ಸ್ಮರಣೆ ಮಾಡುತ್ತಾರೆ.

ಕೋಲಾಟದ ಪದಗಳಲ್ಲಿ ಜನಪದರು: ಕೋಲಾಟದ ಗೀತೆಗಳನ್ನು ಸಾಮೂಹಿಕವಾಗಿ ಹಾಡಿ ಕುಣಿಯುತ್ತಾರೆ. ದೇವರ ನಾಮಸ್ಮರಣೆಯ ಜೊತೆಗೆ ತನ್ಮಯರಾಗಿ

ಮೈಮರೆಯುತ್ತಾರೆ. ದಾನಮ್ಮನ ಕುರಿತ ಕೋಲಾಟದ ಹಾಡೊಂದರ ಕೆಲವು ನುಡಿಗಳು.

ಕೋಲು ಕೋಲೆನ್ನ ಕೋಲು
ತಾಯವ್ವನ ನೆನೆಯೋದು ಯಾವ ಹೊತ್ತಿನ್ಯಾಗ
ಊರೆಲ್ಲ ಉಂಡು ಮಲಗುವಾಗ
ಬೆಳ್ಳಿಚುಕ್ಕಿ ಹೊರಟಾಗ । ಕೋಲು ಕೋಲೆನ್ನ ಕೋಲು

ಗುಡ್ಡಾಪುರ ದಾನಮ್ಮನ ಗುಡಿಯೆಲ್ಲ ಬಂಗಾರ
ಹಾಸುಗಲೆಲ್ಲ ಹವಳ, ಹಾಸುಗಲೆಲ್ಲ ಹವಳ
ನೆನೆ ದಾನಮ್ಮಗ ಬೀಸಣಿಕೆಗೆಲ್ಲ ಬಿಡಿಮುತ್ತ ।
ಕೋಲು ಕೋಲೆನ್ನ ಕೋಲು

ಚಂದ ಚಂದದ ಗುಡ್ಡ ಮುಂದೆ ಸಂಗತೀರ್ಥ
ಮೂನ್ನೂರು ಅರವತ್ತು ಎಳೆ ಮಾವಿನ ಬನದಾಗ
ರಂಬಿ ದಾನಮ್ಮ ನಲಿದಾಳ । ಕೋಲು ಕೋಲೆನ್ನ ಕೋಲು.

ಶರಣೆಂದೆ ಶಿವನಿಗೆ ಶರಣೆಂದೆ ಗುರುವಿಗೆ
ಶರಣೆಂದೆ ಸೋಮಲಿಂಗನ ಮಡದಿ ದಾನಮ್ಮನಿಗೆ
ಶರಣೆಂದು ಕೈಯ ಮುಗಿದೇವು । ಕೋಲು ಕೊಲೆನ್ನ ಕೋಲು

ಜನಪದ ಕವಿಯು ಕೋಲಾಟದ ಪದ್ಯದಲ್ಲಿ ಹೀಗೆ ದಾನಮ್ಮ ಶರಣೆಯ ಗುಣಗಾನ ಮಾಡಿದ್ದಾನೆ. ದಾನಮ್ಮ ನಲಿದು ಹರ್ಷದ ಹೊನಲನ್ನು ಹರಿಸುತ್ತಾಳೆ ಎಂದು ಸಂತೋಷಪಡುತ್ತಾರೆ. "ಹರಣ ಹಾರುವ ತನಕ ಕರುಣಿಸಿರಿ ದಾನಮ್ಮ" ಎಂದು ಭಕ್ತಿಯಿಂದ ಪ್ರಾರ್ಥಿಸುತ್ತಾರೆ. ಈ ಪದ್ಯದ ಕೊನೆಯ ನುಡಿಯಲ್ಲಿ ದಾನಮ್ಮ ಶರಣೆಗೆ ಶರಣಾರ್ಥಿಯೊಂದಿಗೆ ಮಡುಗಟ್ಟಿದ ಭಕ್ತಿರಸದಿಂದ ಕೋಲಾಟದ ಹಾಡನ್ನು ಸಮಾಪ್ತಗೊಳಿಸುತ್ತಾರೆ.

ಜನಪದರ ಒಡಪುಗಳು: ಜನಪದರಲ್ಲಿ ಒಡಪು (ಒಗಟು) ಅಂದರೆ ಸಾಮಾನ್ಯವಾಗಿ ಗಂಡನಿಂದ ಹೆಂಡತಿಯ ಹೆಸರು, ಹೆಂಡತಿಯಿಂದ ಗಂಡನ ಹೆಸರು ಕೇಳುವ ಸಂಪ್ರದಾಯವಿದೆ. ಶಬ್ದಗಳಿಗೆ ಸಂಕೇತಿಕ ಅರ್ಥಕೊಟ್ಟು ಅಲಂಕಾರಯುತವಾಗಿ ಹೇಳುತ್ತಾರೆ. ಪತಿ ಪತ್ನಿಯರು ನುಡಿಚಮತ್ಕಾರದಿಂದ ಒಡವೆ ರೂಪ ತೊಡಿಸುವುದೇ ಒಡಪುಗಳಾಗಿವೆ. ಇಂತಹ ಮಾತುಗಳಲ್ಲಿ ಗಂಡ-ಹೆಂಡತಿಯ ಆತ್ಮೀಯತೆ, ಸಲಿಗೆಯ

ಭಾವಗಳು ವ್ಯಕ್ತವಾಗುತ್ತವೆ. ಕೆಲವು ಜನಪದ ಒಡಪುಗಳಲ್ಲಿ ದಾನಮ್ಮನ ಸ್ಮರಣೆಯಾಗಿರುವುದನ್ನು ಗಮನಿಸಬಹುದು.

ಶಿವನಿಗೆ ಪಾರ್ವತಿ ಚೆಂದ,
ಸೋಮೇಶ್ವರನಿಗೆ ದಾನಮ್ಮ ಚೆಂದ
ನಮ್ಮವರಿಗೆ ನಾನೇ ಚೆಂದ.

ಹೀಗೆ ಜನಸಾಮಾನ್ಯರು, ಸಹಜವಾಗಿ ಮಾತಿನಿಂದಲೇ ರಚಿಸಿ ಹೇಳುವಲ್ಲಿ ಶರಣೆಯ ಹೆಸರು ಗೋಚರಿಸುತ್ತದೆ. ಹಾಗೆ ಸಂಪ್ರದಾಯದಲ್ಲಿ ಒಡಪು ಹೇಳುವದು ಇನ್ನೊಂದು ವಿಧವಿದೆ. 'ವೀರಭದ್ರನ ಗುಗ್ಗಳ' ವೀರಭದ್ರನ ಗುಣಗಾನದ ಒಡಪುಗಳ ಜೊತೆಗೆ ವೀರಗಣಾಚಾರಿ ಶರಣೆ ದಾನಮ್ಮನ ದಂತಕಥೆಗಳನ್ನು ವರ್ಣಿಸಿ ಒಡಪು ಹೇಳುವುದು ಕಂಡು ಬರುತ್ತದೆ.

ಸರ್ವಜೀವರಕ್ಷಣೆ ಮಾಡುವವಳು ಅನ್ನಪೂರ್ಣೇಶ್ವರಿ
ಶಿವನ ಕಾರ್ಯಕ್ಕೆ ಶಶಿಯಾಗಿರುವಳು ಮಹೇಶ್ವರಿ
ನನ್ನ ಮನೋಭಿಷ್ಟವನ್ನು ಪೂರೈಸುವಳು ದಾನೇಶ್ವರಿ

ಜೋಗುಳ ಪದಗಳು: ಜನಪದರು ಮಗುವಿನ ನಾಮಕರಣದ ಕಾರ್ಯಕ್ರದಲ್ಲಿ ಹಾಡುವುದಕ್ಕೆ ಜೋಗುಳ ಪದ ಎನ್ನುತ್ತಾರೆ. ಮಗುವಿನ ಉಜ್ವಲ ಭವಿಷ್ಯವು ಒಳ್ಳೆಯುದಾಗಿರಲೆಂದು ಹಾರೈಸುತ್ತಾ ಮೊದಲಿಗೆ ಭಕ್ತಿಯಿಂದ ದೇವರ ನಾಮಸ್ಮರಣೆಯೊಂದಿಗೆ ತೊಟ್ಟಿಲಲ್ಲಿ ಮಲಗಿಸುತ್ತಾರೆ. ಶರಣರ ಸ್ಮರಣೆಯ ಜೋಗುಳ ಪದ್ಯದಲ್ಲಿ ದಾನಮ್ಮನ ನಾಮವು ಬರುತ್ತದೆ. "ಜೋ ಎಂದು ತೂಗುವೆ ಆದಿ ಬಸವಣ್ಣ" ಎಂಬ ಜೋಗುಳ ಪದದ ಒಂದು ನುಡಿ.

ಸತ್ಯಕ್ಕ ಚೋಳಕ್ಕ ಸುಗ್ಗಲಾದೇವಿ
ನಿತ್ಯ ಸೇವೆಯ ಮಾಳ್ಪ ಶಿವ ಮಹಾದೇವಿ
ಸತ್ಯ ಸದ್ಗುಣೆಯ ಅಕ್ಕಮಹಾದೇವಿ
ಹಿಂಗ ಪ್ರೀತಿಯಿಂದಲಿ ಬಂದಳು 'ದಾನಮ್ಮದೇವಿ' ಜೋ...ಜೋ...

ಹೀಗೆ ದಾನಮ್ಮನನ್ನು ಸ್ಮರಿಸುತ್ತಾರೆ. ಇನ್ನೂ ಅನೇಕ ಜೋಗುಳ ಹಾಡುಗಳಲ್ಲಿ ಶರಣರ ಜೊತೆಗೆ ದಾನಮ್ಮನನ್ನು ಸ್ತುತಿಸಲಾಗಿದೆ.

(೨) ಆಧುನಿಕ ಜನಪದ ಕಾವ್ಯದಲ್ಲಿ ದಾನಮ್ಮ: ವೀರಶರಣೆ ಗುಡ್ಡಾಪುರ ದಾನಮ್ಮನನ್ನು ಅನೇಕ ಆಧುನಿಕ ಕವಿಗಳು ಜನಪದ ಧಾಟಿಯಲ್ಲಿ ಸ್ತುತಿಸಿದ್ದಾರೆ. ಜನಪದ ಭಾವದ

ನೆಲೆಗಟ್ಟಿನಿಂದ ಶರಣ ಪರಂಪರೆಯನ್ನು ಅಳವಡಿಸಿಕೊಂಡ ಜಯದೇವಿತಾಯಿ ಲಿಗಾಡೆ, ಆರ್. ಸಿ. ಮುದ್ದೇಬಿಹಾಳ, ಶ್ರೀ ಬಸವಣ್ಣ ಹೆರೂರ, ಶಿವಶಂಕರ ದಿಂಡಿವಾರ. ಮೋಹನ ಅಣ್ಣೆಪ್ಪನವರ, ಈರಮ್ಮ ಕಟಗೇರಿ ಮೊದಲಾದವರು ದಾನಮ್ಮನ ನಾಮಾವಳಿ, ಸುಪ್ರಭಾತ, ಪಾದಸ್ತೋತ್ರ ಮುಂತಾದವುಗಳನ್ನು ರಚಿಸಿರುವುದು ಕಂಡು ಬರುತ್ತವೆ.

ಆಧುನಿಕ ಕನ್ನಡ ಕವಯತ್ರಿಯರಲ್ಲಿ ಜಯದೇವಿ ತಾಯಿ ಲಿಗಾಡೆಯವರು ಕನ್ನಡ-ಮರಾಠಿ, ಭಾಷೆಗಳಲ್ಲಿ ಸಾಹಿತ್ಯ ಕೃಷಿಗೈದಿದ್ದಾರೆ. ವಿಶೇಷವಾಗಿ ಕನ್ನಡ ಭಾಷೆಯಲ್ಲಿ ತ್ರಿಪದಿ ಬಳಸಿ ಸಿದ್ಧರಾಮ ಪುರಾಣ, ತಾಯಿಯ ಪದಗಳು, ಜಯಗೀತೆ ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಜನಪದ ಸೊಗಡಿನಲ್ಲಿ ರಚಿತಗೊಂಡ 'ತಾಯಿಯ ಪದಗಳು' ಕೃತಿಯಲ್ಲಿ ಕವಯತ್ರಿಯವರ ದಾನಮ್ಮ ಗಣಾಚಾರದ ಪರಿಪಾಲಕಳು ಎಂದು ವರ್ಣಿಸಲಾಗಿದೆ. 'ಬಾರೆ ವೀರ ಸಂದೇಶ ಸಾರೆ' ಎಂಬುದು ಅಲಂಪುರದ ಘಟನೆಯನ್ನು ಸೂಚಿಸಿದರೆ, 'ಸಂಗಮೇಶನ ಸತಿಯಾರೆ' ಎಂಬುದು ಶರಣೆಯ ದಂತಕಥೆ ವ್ಯಕ್ತಪಡಿಸುತ್ತದೆ. ಹೀಗೆ ಮುಂದುವರೆದು "ಗುಡ್ಡವ್ವೆ ಬಾರೆ, ಧೀರ ಸಂಗವ್ವೆ ಬಾರೆ." ಎಂದು ಶರಣೆಯ ಧೀರತನವನ್ನು ಕೊಂಡಾಡಿದ್ದಾರೆ.

ಹಣೆ ಮ್ಯಾಲ ವಿಭೂತಿ ಕೊರಳಾಗ ರುದ್ರಾಕ್ಷಿ
ಮಣಿ ಜಪಮಾಲಿ ಬಲಗೈಯಾಗ ದಾನಮ್ಮ ಮು
ಕ್ಕಣ್ಣನ ಅಂಗೈಯಾಗ ಧರಿಸ್ಯಾಳ

ದಾನಮ್ಮನ ಮೂರ್ತಿಶಿಲ್ಪವು ಜಯದೇವಿತಾಯಿ ಲಿಗಾಡೆಯವರ ಮೇಲೆ ಪ್ರಭಾವ ಉಂಟು ಮಾಡಿದೆ. ಗುಡ್ಡಾಪುರ ಹಾಗೂ ಸೋಲಾಪುರದಲ್ಲಿರುವ ದೇವಾಲಯಗಳಲ್ಲಿ ದಾನಮ್ಮ ಶರಣೆಯ ಕೈಯಲ್ಲಿರುವ ಇಷ್ಟಲಿಂಗ, ಜಪಮಣಿ, ವಿಭೂತಿ, ಕೊರಳಲ್ಲಿ ರುದ್ರಾಕ್ಷಿ, ಇತ್ಯಾದಿಗಳನ್ನು ಕಂಡು ಮೂರ್ತಿಶಿಲ್ಪದ ಹಿನ್ನಲೆಯಿಂದ ಯೋಗಸಾಧಕಿಯೆಂದು ಭಕ್ತಿಭಾವದಿಂದ ವರ್ಣಿಸಿದ್ದಾರೆ.

ಹೀಗೆ ಅನೇಕ ಆಧುನಿಕ ಜನಪದರು ತಮ್ಮ ಹಾಡುಗಳಲ್ಲಿ ದಾನಮ್ಮನ ವ್ಯಕ್ತಿತ್ವದ ವೀರಗುಣ, ಧರ್ಮಶ್ರದ್ಧೆ, ಆಧ್ಯಾತ್ಮಿಕ ಔನ್ನತ್ಯ ಮೊದಲಾದ ಮೌಲ್ಯಗಳನ್ನು ದಾಖಲಿಸಿದ್ದಾರೆ. ದಾನಮ್ಮ ಶರಣೆಯನ್ನು ವೀರಗಣಾಚಾರಿಯಾಗಿ, ಆದರ್ಶನಾರಿಯಾಗಿ, ಹೆಣ್ಣುಕುಲಕ್ಕೆ ಹೆಮ್ಮೆ ತರುವಂಥ ಸ್ತ್ರೀರತ್ನವಾಗಿ, ಸತಿಸಾಧ್ವಿಯಾಗಿ ಚಿತ್ರಿಸಿದ್ದಾರೆ. ಜನಪದರು ಮೊದಲಿನಿಂದಲೂ ದಾನಮ್ಮನ ಸ್ಮರಣೆಯನ್ನು ಮಾಡುತ್ತಾ ಬಂದಿರುವುದರಿಂದ ಇಂದಿಗೂ ಶರಣೆಯ ಚರಿತ್ರೆ ಸ್ಥಿರವಾಗಿ ಉಳಿದುಕೊಂಡು ಬಂದಿದೆ.

(೩) ಜನಪದರ ಆಚರಣೆಯಲ್ಲಿ ದಾನಮ್ಮ: ನಂಬಿಕೆಯ ನೆಲೆಗಟ್ಟಿನಿಂದ ರೂಪ ಪಡೆದ ಆಚರಣೆಗಳು ಜನರ ಧಾರ್ಮಿಕ, ಭಾವನಾತ್ಮಕ, ಸಾಮಾಜಿಕ ಮತ್ತು ಆರ್ಥಿಕ ಬದುಕಿನ ಮೇಲೆ ಪ್ರಭಾವ ಬೀರಿವೆ. ಜನಸಮುದಾಯದ ಆಶೋತ್ತರಗಳ ಅನುಗುಣವಾಗಿ ಆಚರಣೆಗಳು ಸೃಷ್ಟಿಯಾಗಿರುತ್ತವೆ. ಈ ನೆಲೆಯಲ್ಲಿ ದೇವಾಲಯಗಳು ಆಚರಣೆಗಳ ಆಗರವಾಗಿವೆ. ಈ ಧಾರ್ಮಿಕ ಆಚರಣೆಗಳು ಬಹುಪಾಲು ಜನರ ಜೀವನದ ಅವಿಭಾಜ್ಯ ಅಂಗವಾಗಿವೆ. ಇವು ಕಾಲ ಬದಲಾದಂತೆ ಇವುಗಳಲ್ಲಿನ ಅನೇಕ ಅಂಶಗಳು ಕಾಲಕ್ಕೆ ತಕ್ಕಂತೆ ಪರಿವರ್ತನೆಗೊಳ್ಳುತ್ತಾ ಇರುತ್ತವೆ.

ದೇವಾಲಯಗಳು ಸಹಜವಾಗಿ ವೇದಾಗಮಗಳ ಸಂಪ್ರದಾಯಕ್ಕೆ ಒಳಗಾಗುತ್ತವೆ. ದಾನಮ್ಮದೇವಿಯ ದೇವಸ್ಥಾನವು ಇದಕ್ಕೆ ಹೊರತಾಗಿಲ್ಲ.

ಗುಡ್ಡಾಪುರ ದೇವಾಲಯದಲ್ಲಿನ ಸಂಪ್ರದಾಯ

ಇಡೀ ವರ್ಷದಲ್ಲಿ ಆಚರಿಸಲಿರುವ ಹಬ್ಬ ಆಚರಣೆ ಹಾಗೂ ಜಾತ್ರೆಗಳನ್ನು ಪಟ್ಟಿ ಮಾಡಿ ನಿರ್ದಿಷ್ಟಪಡಿಸಿದ್ದಾರೆ. ಅದರಂತೆ ವಿಶೇಷವಾದ ಅಮವಾಸ್ಯೆಗಳು, ಹುಣ್ಣಿಮೆಗಳು,ವಾರಗಳು ಎಂದು ನಿರ್ಧರಿಸಿದ್ದಾರೆ. ಅವುಗಳ ಸಂಕ್ಷಿಪ್ತ ನೋಟ.

೧) **ದಾನಮ್ಮನ ತ್ರಿಕಾಲ ಪೂಜೆ:** ಪ್ರತಿನಿತ್ಯ ಗುಡ್ಡಾಪುರದಲ್ಲಿ ತ್ರಿಕಾಲ ಪೂಜೆ ನಡೆಯುತ್ತದೆ. ಶರಣೆ ದಾನಮ್ಮನು ದಿನದಲ್ಲಿ ಮೂರು ಸಲ ಇಷ್ಟಲಿಂಗ ಪೂಜೆ ಮಾಡಿಕೊಳ್ಳುತ್ತಿರುವ ಸಾಂಕೇತವಾಗಿ ಈ ಪರಂಪರೆ ಮುದುವರೆದಿದೆ. ಶರಣರು ತ್ರಿಕಾಲದಲ್ಲಿ ಮುಂಜಾನೆ, ಮಧ್ಯಾಹ್ನ ಮತ್ತು ಸಾಯಂಕಾಲ ತಮ್ಮ ಇಷ್ಟಲಿಂಗ ಪೂಜೆಯ ಜೊತೆಗೆ ದೇಹಾತ್ಮನ ಪೂಜೆಯನ್ನು ಮಾಡಿಕೊಳ್ಳುತ್ತಾರೆ. ಸೃಷ್ಟಿಯ ಇರುವಿಕೆಗೆ, ಹಾಗೂ ಮನುಷ್ಯನಿಗೆ, ಅವಿನಾಭಾವ ಸಂಬಂಧವಿರುವುದನ್ನು ಸಂಕೇತಿಸುತ್ತದೆ.

ಸೃಷ್ಟಿಯು ಪ್ರತಿದಿನ ಹೊಸರೂಪ ಪಡೆದು ಬೆಳಗಿನಲ್ಲಿ ಉತ್ಸಾಹಪೂರ್ಣವಾಗಿರುತ್ತದೆ. ಮಧ್ಯಾಹ್ನ ಸೂರ್ಯನ ಬಿಸಿಲಿನ ಆರ್ಭಟತೆ, ಘನತೆ, ಪ್ರೌಢತೆ, ರಭಸತೆ, ತುಂಬಿಕೊಂಡಿರುತ್ತದೆ. ಸಂಜೆಯ ಸಂದರ್ಭದಲ್ಲಿ ಸೃಷ್ಟಿಗೆ ಕತ್ತಲೆಯು ನಿಧಾನವಾಗಿ ಆವರಿಸುತ್ತದೆ. ದಾನಮ್ಮದೇವಿಯ ಮೂರ್ತಿ ಪೂಜೆಯು ಮನುಷ್ಯನ ಬಾಲ್ಯ, ಯೌವ್ವನ ಮತ್ತು ಮುಪ್ಪಿಗೆ ಸಂಬಂಧಿಸಿದಂತೆ ಪರಿಕಲ್ಪನೆ ಹೊಂದಿದೆ. ಇಲ್ಲಿ ಸೃಷ್ಟಿ ಅವಸ್ಥೆಯ ಪೂಜೆ ಒಂದು ಕಡೆಯಾದರೆ; ಇನ್ನೊಂದೆಡೆ ತ್ರಿಕಾಲ ಇಷ್ಟಲಿಂಗ ಪೂಜೆಯು ಸ್ವಾನುಭಾವದ ನೆಲೆಯಲ್ಲಿ ದೇಹವೆಂಬ ದೇಗುಲದ ಪೂಜೆಯಾಗಿದೆ. ದಾನಮ್ಮನು ಶರಣಧರ್ಮದ ಗಣಾಚಾರ ಪರಿಪಾಲನೆಯ ಜೊತೆಗೆ ತ್ರಿಕಾಲ ಪೂಜಾ ನಿಷ್ಠೆಯೊಂದಿಗೆ

ಶಿವಯೋಗಿಣಿಯಾದಳು.

ಪ್ರತಿನಿತ್ಯ ಪೂಜಾರಿಗಳು ಪೂಜೆಯ ಸಂದರ್ಭದಲ್ಲಿ ಮುಂಜಾವಿನಲ್ಲಿ ಕುಮಾರಿಯಂತೆ, ಮಧ್ಯಾಹ್ನದಲ್ಲಿ ಧೀರಗಂಭೀರ ಮಹಿಳೆಯಂತೆ, ಸಾಯಂಕಾಲ ವಾತ್ಸಲ್ಯರೂಪಿಣಿ ಮಮತೆಯ ಮಡಿಲುಳ್ಳ ವೃದ್ಧೆಯಂತೆ, ವಸ್ತ್ರಾಲಂಕಾರ ಮಾಡುತ್ತಾರೆ. ಗುಡ್ಡಾಪುರದ ದಾನಮ್ಮದೇವಿಯ ದೇವಾಲಯದಲ್ಲಿ ಲಿಂಗಾಯತರ ಕುಟುಂಬಗಳಲ್ಲಿನ ಸದಸ್ಯರೆ ಸರದಿಯಂತೆ ಪೂಜೆ ಸಲ್ಲಿಸುವ ಪೂಜಾರಿಗಳಾಗಿದ್ದಾರೆ.

ದಾನಮ್ಮನ ಪೂಜೆಯು ಬೆಳಗಿನ ಜಾವ ೪ಗಂಟೆಗೆ ಪ್ರಾರಂಭವಾಗುವುದು. ಪೂಜಾರಿಗಳು ನಸುಕಿನಲ್ಲಿಯೆ ತಾಮ್ರದ ಕೊಡದಿಂದ ನೀರು ತುಂಬಿಕೊಂಡು ಬರುತ್ತಾರೆ. ಗರ್ಭಗುಡಿಯ ಬಾಗಿಲಿನ ಮುಂದೆ ಪರದೆ ಎಳೆದು ಪೂಜಾರಿಗಳು ಅಲಂಕಾರ ಮಾಡುತ್ತಾರೆ. ದಾನಮ್ಮನ ಸುಂದರವಾದ ಮೂರ್ತಿಯ ತಲೆಯ ಮೇಲೆ ಹೂವಿನ ದಂಡೆ, ಅದರ ಮೇಲೆ ದುಂಡಾದ ಹಿಂದೆ ಶ್ವೇತಛತ್ರ (ಬೆಳ್ಗೊಡೆ) ವಿರುವ ಬಂಗಾರದ ಕಿರೀಟ ಇಡುತ್ತಾರೆ. ಹಣೆಯ ಮೇಲೆ ವಿಭೂತಿ, ಕುಂಕುಮ, ಅರಿಸಿಣ, ಹಚ್ಚುತ್ತಾರೆ. ಕಣ್ಣುಗಳಿಗೆ ಕಣ್ಬಟ್ಟು, ಮೂಗಿಗೆ ಮೂಗುತಿ, ರುದ್ರಾಕ್ಷಿ, ಮತ್ತು ಮೈತುಂಬಾ ವಿವಿಧ ಬಗೆಯ ಬಂಗಾರದ ಆಭರಣಗಳು ಹಾಕಿ ಅಲಂಕರಿಸುತ್ತಾರೆ.

ದಾನಮ್ಮನ ಮಧ್ಯಾಹ್ನದ ಪೂಜೆ ೧೧-೩೦ ಗಂಟೆಗೆ ಪ್ರಾರಂಭವಾಗುತ್ತದೆ. ಮಧ್ಯಹ್ನದ ಪೂಜೆಯ ಸಮಯದಲ್ಲಿ ದಾನಮ್ಮನಿಗೆ ವಸ್ತ್ರಾಲಂಕಾರದೊಂದಿಗೆ ಪುಷ್ಪಾಲಂಕೃತವನ್ನು ಮಾಡುತ್ತಾರೆ. ಗುಲಾಬಿ, ಸೇವಂತಿಗೆ, ಮಲ್ಲಿಗೆ, ದಾಸವಾಳ ಹೀಗೆ ವಿವಿಧ ಬಗೆಯ ಪುಷ್ಪಗಳಿಂದ ಮಾಡಿದ ಹಾರಗಳು ಮತ್ತು ಹೂವಿನ ದಂಡೆಯನ್ನು ಹಾಕುತ್ತಾರೆ. ಸ್ವಲ್ಪ ಮಟ್ಟಿಗೆ ಬಂಗಾರದ ಆಭರಣ ಹಾಕಿ, ಅಚ್ಚುಕಟ್ಟಾಗಿ ಅಲಂಕರಿಸಿದಾಗ ಘನಗಂಭೀರ ಗೃಹಿಣಿಯ ಹಾಗೆ ಕಂಗೊಳಿಸುವಂತೆ ಮಾಡುತ್ತಾರೆ.

ದಾನಮ್ಮನ ಸಾಯಂಕಾಲದ ಪೂಜೆ ೬-೩೦ ಗಂಟೆಗೆ ಪ್ರಾರಂಭವಾಗುತ್ತದೆ. ಈ ಪೂಜೆಯ ಸಂದರ್ಭದಲ್ಲಿ ವಿಗ್ರಹದ ಮುಖ ಮಾತ್ರ ಕಾಣುವಂತೆ ಮಾಡಿ, ಸೀರೆಯ ಸೆರಗಿನಿಂದ ತಲೆಯ ಮೇಲಿನಿಂದ ಪಾದದವರೆಗೆ ಸಂಪೂರ್ಣವಾಗಿ ಮುಚ್ಚಿರುತ್ತಾರೆ. ಹಣೆಯ ಮೆಲೆ ವಿಭೂತಿಯು ಹೊಳೆಯುತ್ತದೆ. ಮತ್ತು ಮೈಮೇಲೆಲ್ಲಾ ರುದ್ರಾಕ್ಷಿಯ ಸರಗಳು ರಾರಾಜಿಸುತ್ತವೆ. ಎದೆಯ ಮೇಲೆ ಇಷ್ಟಲಿಂಗವಿರುವ ಕರಡಿಗೆ (ಕೊರಳಲ್ಲಿ ಧರಿಸುವ ಲಿಂಗದ ಪೆಟ್ಟಿಗೆ) ಎದ್ದು ಕಾಣುತ್ತದೆ. ವಿಶೇಷವಾಗಿ ದಾನಮ್ಮನ ಬಲಭಾಗದಲ್ಲಿ ಗಣಾಚಾರದ ಸಂಕೇತವಾಗಿ ಚಿಕ್ಕ ಬೆತ್ತವನ್ನು ಇಟ್ಟಿರುತ್ತಾರೆ. ಆಗ ದಾನಮ್ಮ ಶರಣೆಯಂತೆ,

ವಾತ್ಸಲ್ಯ ಮಾತೆಯಂತೆ, ತಪ್ಪಿತಸ್ಥರಿಗೆ ಓಜುಗಟ್ಟಿಗೆಯಿಂದ ಬೆದರಿಸಿ ಸರಿ ದಾರಿಗೆ ತರುವವಳಂತೆ ಕಾಣುತ್ತಾಳೆ. ಇಡೀ ರಾತ್ರಿಯೆಲ್ಲಾ ಗರ್ಭಗುಡಿಯ ಬಾಗಿಲಿಗೆ ಬೀಗವಿದ್ದರೂ ಹೊರಗಿನಿಂದಲೆ ಕಾಣುವ ಹಾಗೆ ಮಾಡಿದಕ್ಕಾಗಿ ಭಕ್ತರಿಗೆ ದಾನಮ್ಮನ ದರ್ಶನವಾಗುತ್ತದೆ.

ಪ್ರತಿನಿತ್ಯ ಮುಂಜಾನೆಯ ಸಮಯದಲ್ಲಿ ದಾನಮ್ಮನ ಪೂಜೆಯನ್ನು ಪೂಜಾರಿಗಳು ಭಯ ಭಕ್ತಿ ಪವಿತ್ರ ಭಾವದಿಂದ ಶಾಸ್ತ್ರಬದ್ಧವಾಗಿ ವೈದಿಕ ಪರಂಪರೆಯಿಂದ ರುದ್ರಪಠಣದೊಂದಿಗೆ ಪೂಜೆ ನೆರವೇರಿಸುತ್ತಾರೆ. ದಾನಮ್ಮನ ವಿಗ್ರಹದ ಮುಂದೆ ಇರುವ ಗುರುವಿನ ಹೆಸರಿನಲ್ಲಿ ಇರುವ ಪಾದುಕೆಗಳಿಗೆ ಪೂಜೆ ಸಲ್ಲಿಸುವುದು ಅಲ್ಲಿಯ ಸಂಪ್ರದಾಯವಾಗಿದೆ. ದಾನಮ್ಮನ ಮುಂದೆ ಉಡಿಕ್ಕಿಯ ಗಂಟು, ಜೋಡು ತೆಂಗಿನಕಾಯಿ ಇಟ್ಟಿರುತ್ತಾರೆ. ವಿಗ್ರಹದ ಬಲಭಾಗಕ್ಕೆ ನೀರು ತುಂಬಿದ ತಂಬಿಗೆ, ಎದುರಿಗೆ ಆರತಿಯು ಇರುತ್ತದೆ. ಮೂರು ಪೂಜೆಯ ಸಮಯದಲ್ಲೂ ಮಂಗಳಾರತಿ ಪದಗಳೊಂದಿಗೆ ಗಂಟೆ ಬಾರಿಸುತ್ತಾ ಆರತಿ ಬೆಳಗುವರು. ಕೊನೆಗೆ ಜಯಘೋಷ ಮಾಡುವಾಗ ತಪ್ಪದೆ ಬಸವಣ್ಣನವರ ಹೆಸರು ತೆಗೆದುಕೊಳ್ಳುವರು.

೨) ದಾನಮ್ಮನಿಗೆ ಹೋಳಿಗೆ ನೈವೇದ್ಯ : ಉತ್ತರ ಕರ್ನಾಟಕದ ಕಡೆಗೆ ಹಬ್ಬ-ಹುಣ್ಣಿಮೆ-ಅಮವಾಸ್ಯೆಗಳಂದು ಬಡವರಿದ್ದರೂ ಸಹ ಅವರ ಮನೆಗಳಲ್ಲಿ ಹೋಳಿಗೆಯ ಊಟ ಇರಬೇಕೆಂಬ ನಿಯಮವಿದೆ. ಈ ಹಿನ್ನೆಲೆಯಲ್ಲಿ ದಾನಮ್ಮನಿಗೆ ಹೋಳಿಗೆ ನೈವೇಧ್ಯ ತಪ್ಪದೆ ಇರುವುದು ಒಂದು ಸಂಪ್ರದಾಯವಾಗಿದೆ. ದಾನಮ್ಮನ ಮಧ್ಯಾಹ್ನದ ಪೂಜೆಗೆ ಪ್ರತಿದಿನ ತಪ್ಪದೆ ಹೋಳಿಗೆ ನೇವೇದ್ಯವಾಗುತ್ತದೆ. ದಿನಾಲೂ ಒಂದಿಲ್ಲೊಂದು ಊರಿನಿಂದ ಬಂದ ಭಕ್ತರು ಹೋಳಿಗೆ ಮಾಡಿಸುತ್ತಾರೆ. ನೈವೇದ್ಯದ ನಂತರ ಅಲ್ಲಿರುವ ಮುತ್ತೈದೆಯರಿಗೆ ದಾಸೋಹ ಸಲ್ಲಿಸಿದರೆ ಮಾತ್ರ ತಾಯಿಗೆ ಸಲ್ಲತ್ತದೆ ಎಂಬ ನಂಬಿಕೆಯಿದೆ.

ಗುರುವಾರ ದಾನಮ್ಮನ ವಾರವೆಂದು ಮತ್ತು ಸೋಮವಾರ ಸೋಮನಾಥನ ವಾರವೆಂದು ಗುಡ್ಡಾಪುರ ದೇವಸ್ಥಾನದಲ್ಲಿ ಆಚರಿಸುತ್ತಾರೆ. ಬಸವಣ್ಣನವರ 'ದಯವಿರಬೇಕು ಸಕಲ ಪ್ರಾಣಿಗಳಲ್ಲಿ' ಎಂಬ ಮಾತಿನಂತೆ ದಾನಮ್ಮದೇವಿಯ ದೇವಾಲಯದಲ್ಲಿ ಯಾವುದೇ ಪ್ರಾಣಿಗಳ ಅಹುತಿ ಕೊಡುವ ಪದ್ಧತಿ ಇಲ್ಲ. ಗುಡ್ಡಾಪುರದ ಸುತ್ತ-ಮುತ್ತಲಿನ ಪ್ರದೇಶದ ಗುಡ್ಡಗಾಡಿನಲ್ಲಿ ಕಲ್ಲುಬಂಡೆಗಳೆ ತುಂಬಿಕೊಂಡಿವೆ. ಚಿಕ್ಕ ಚಿಕ್ಕ ಹಳ್ಳಗಳು ಹರಿಯುತ್ತವೆ. ಇಂಥ ನೆಲದಲ್ಲಿ ಯಾವ ಬೆಳೆಯು ಚೆನ್ನಾಗಿ ಬರುವುದಿಲ್ಲ. ಆದರೆ ದಾನಮ್ಮನ ಪೂಜೆಯಲ್ಲಿ ತಪ್ಪದೆ ಹೋಳಿಗೆ ನೈವೇದ್ಯ ಇರುತ್ತದೆ. ಯಾಕೆಂದರೆ ಇಲ್ಲಿ ಭಕ್ತರು ಬರದೇ ಇರುವ ದಿನಗಳಿಲ್ಲ.

ಮೊದಲು ದೇವಸ್ಥಾನದ ಎಲ್ಲಾ ಕಡೆಗಳಲ್ಲಿ ಕರಿಯ ಕಲ್ಲುಗಳ ಹಾಸಿಗೆಯುಳ್ಳ ಚಿಕ್ಕ ಚಿಕ್ಕ ಕೋಣೆಗಳು ಇದ್ದವು. ಅದರೊಳಗೆ ಅಡಿಗೆ ಮಾಡಲು ಸೌದೆಯ ಒಲೆಗಳು. ಯಾವುದೆ ರೀತಿಯ ಸೌಲಭ್ಯಗಳು ಇರಲಿಲ್ಲ. ಅನೇಕ ಕಡೆಗಳಿಂದ ಬರುವ ಭಕ್ತರು ದೇವಸ್ಥಾನದ ಸಮಿತಿಯವರಲ್ಲಿ ಬರೆಸಿ ಕೋಣೆ ಪಡೆದುಕೊಂಡು ಅಲ್ಲಿಯೆ ಅಡಿಗೆ ಮಾಡಲು ಪಾತ್ರೆಗಳು ಪಡೆದು ಹೋಳಿಗೆ ಮಾಡಿ ನೈವೇದ್ಯ ಸಲ್ಲಿಸುತ್ತಿದ್ದರು. ತಮ್ಮ ಸುತ್ತ ಮುತ್ತ ಕಂಡವರಿಗೆ ಮುತ್ತೈದೆಯರು ಎಂದು ಕರೆದು ದಾಸೋಹ ಸಲ್ಲಿಸಿ, ಪ್ರಸಾದ ಸ್ವೀಕರಿಸುತ್ತಿದ್ದರು. ಇಲ್ಲವಾದರೆ ಪೂಜಾರಿಗಳ ಮನೆಗಳಲ್ಲಿಯೂ ನಾವು ತೆಗೆದುಕೊಂಡು ಹೋಗಿರುವ ಬೇಳೆ-ಬೆಲ್ಲ ಕೊಟ್ಟರೆ ಹಣ ಪಡೆದು ಅಡಿಗೆ ಮಾಡಿ ಕೊಡುವರು.

ಇತ್ತೀಚೆಗೆ ದೇವಸ್ಥಾನ ಸಮಿತಿಯವರು ದೇವಾಲಯವನ್ನು ತುಂಬಾ ಬದಲಾವಣೆ ಮಾಡಿ, ಭವ್ಯವಾಗಿ ನಿರ್ಮಿಸಿದ್ದಾರೆ. ದಾಸೋಹ ಭವನ, ಯಾತ್ರಿನಿವಾಸಗಳು, ಅಥಿತಿಗೃಹಗಳು ಕಟ್ಟಿಸಿ, ಬಂದ ಭಕ್ತರಿಗೆ ಇರಲು ಅನುಕೂಲ ಮಾಡಿದ್ದಾರೆ. ಬಂದ ಭಕ್ತರು ತಾವು ತಂದ ಬೇಳೆ-ಬೆಲ್ಲವೆಲ್ಲಾ ದಾಸೋಹ ಮನೆಯಲ್ಲಿಯೆ ಕೊಡಬೇಕೆಂದಲ್ಲಿ ಅಲ್ಲಿಯೆ ವ್ಯವಸ್ಥೆ ಮಾಡಿದ್ದಾರೆ. ದಾನಮ್ಮನಿಗೆ ಸಾಮೂಹಿಕವಾಗಿ ಹೋಳಿಗೆ ನೈವೇದ್ಯ ಸಲ್ಲುತ್ತದೆ. ಭಕ್ತರು ದಾಸೋಹ ಮಂಟಪದಲ್ಲಿ ಸಜಕಾ (ಹುಗ್ಗಿ) ಮತ್ತು ಅನ್ನ ಸಾರು ಪ್ರಸಾದ ಸ್ವೀಕರಿಸಿ ಭಕ್ತರು ಹೊರಡುತ್ತಾರೆ.

೩) ದಾನಮ್ಮ ಕುಲದೇವತೆಯಾದ ಮನೆಗಳಲ್ಲಿನ ಆಚರಣೆ : ದಾನಮ್ಮ ಕುಲದೇವತೆಯಾಗಿರುವ ಮನೆಗಳಲ್ಲಿ ಹಲವು ವಿಶಿಷ್ಟವಾದ ಸಾಂಪ್ರದಾಯಿಕ ಆಚರಣೆಗಳಿವೆ. ದಾನಮ್ಮನ ಹುಟ್ಟುಹಬ್ಬವನ್ನು 'ಆಗಿ ಹುಣ್ಣಿಮೆ' (ಬುದ್ಧ ಪೂರ್ಣಿಮೆ) ದಿನ ಭಕ್ತರು ದೇವರ ಜಗುಲಿಯ ಮೇಲೆ ಶರಣೆಯ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸುತ್ತಾರೆ. ದಾನಮ್ಮ ಕುಲದೇವತೆಯಿರುವ ಮನೆಗಳಲ್ಲಿ ಇಷ್ಟಲಿಂಗ ಧಾರಣೆ ಮಾಡಿಯೂ ಸ್ಥಾವರಲಿಂಗ ಪೂಜೆ ಮಾಡುವವರೆ ಹೆಚ್ಚಿನವರಾಗಿದ್ದಾರೆ. ದಿನಾಲೂ ಮಡಿ, ಮೈಲಿಗೆ ಎನ್ನುತ್ತಾ, ಪರಿಶುದ್ಧತೆಯಿಂದ ವಿಧಿವಿಧಾನದಿಂದ ಪೂಜೆ ಮಾಡಬೇಕು ಎನ್ನತ್ತಾರೆ.

ಪ್ರತಿವರ್ಷ ದೀಪಾವಳಿ ಹಬ್ಬದ ಸಂದರ್ಭದಲ್ಲಿ ಮನೆಯನ್ನು ಸ್ವಚ್ಛಮಾಡಿ, ಸುಣ್ಣ ಬಣ್ಣ ಬಳಿದು ಅಂದವಾಗಿಸುತ್ತಾರೆ. ಮನೆಯಲ್ಲಿರುವ ಎಲ್ಲಾ ಹಾಸಿಗೆಗಳು, ಬಟ್ಟೆಗಳು ಸ್ವಚ್ಛಗೊಳಿಸುತ್ತಾರೆ. ದಾನಮ್ಮ ಈ ಬೆಳಕಿನ ಹಬ್ಬದಂದು ನಮ್ಮ ಮನೆ- ಮನಗಳಲ್ಲಿ ಬೆಳಕು ಚೆಲ್ಲವಳೆಂದು, ನರಕ ಚತುರ್ದಶಿಯ ಹಿಂದಿನ ದಿನಗಳಿಂದಲೆ ದಾನಮ್ಮದೇವಿಯ ಮೂರ್ತಿಯ ಮುಂದೆ ನಂದಾದೀಪ ಬೆಳಗಿಸುತ್ತಾರೆ. ಮನೆಯಲ್ಲಿನ ಒಬ್ಬ ಮಹಿಳೆ

ಉಪವಾಸ ಮಾಡುತ್ತಾ, ಮಡಿಮಾಡಿದ ಹಾಸಿಗೆ, ಹೊದಿಕೆ ತೆಗೆದುಕೊಂಡು ದೇವರ ಮನೆಯಲ್ಲಿಯೇ ಮಲಗಬೇಕು. ದೀಪಕ್ಕೆ ಎಣ್ಣೆ ಕಡಿಮೆ ಬೀಳದಂತೆ ಎಚ್ಚರಿಕೆ ವಹಿಸಬೇಕು. ದೀಪಾರಾಧನೆಯ ಕೊನೆಯ ದಿನ ದಾನಮ್ಮನಿಗೆ ವೈಭವದಿಂದ ಸೀರೆ-ಕುಪ್ಪಸ ಅರ್ಪಿಸಿ ಉಡಿ ತುಂಬಿಸಿ ಪೂಜೆ ಸಲ್ಲಿಸಿ, ಆರತಿ ಬೆಳಗುತ್ತಾರೆ. ಹೋಳಿಗೆ ನೈವೇದ್ಯ ಮಾಡಿ ಜೋಡು ತೆಂಗಿನ ಕಾಯಿ ಒಡೆಯುತ್ತಾರೆ.

ದಾನಮ್ಮ ಕುಲದೇವತೆಯಾಗಿರುವ ಮನೆಗಳಲ್ಲಿ ಮುತ್ತೈದೆಯರನ್ನು ದಾನಮ್ಮನ ಸ್ವರೂಪವೆಂದೆ ಭಾವಿಸುತ್ತಾರೆ. ಹಪ್ಪಳ-ಸಂಡಿಗೆ ಮತ್ತು ಅಡಿಗೆಯೆಲ್ಲಾ ಮಡಿಯಿಂದ ಮಾಡಬೇಕು. ಬಂದ ಮುತ್ತೈದೆಯರಿಗೆ ದೇವರ ಮನೆಯಲ್ಲಿ ಸಾಲಾಗಿ ಕೂಡಿಸಿ, ಅವರ ಕಾಲನ್ನು ತೊಳೆಯುತ್ತಾರೆ. ಮುಂಗೈಯಿಂದ ಮೊಳಕೈವರೆಗೆ ತೆಯ್ದು ಗಂಧವನ್ನು ಸಿಂಪಿಯಿಂದ ಕಲಾತ್ಮಕವಾಗಿ ಗೆರೆ ಮೂಡುವಂತೆ ಹಚ್ಚುತ್ತಾರೆ. ಹಣೆಗೆ ವಿಭೂತಿ, ಕುಂಕುಮ, ಅರಿಸಿಣ ಹಚ್ಚಿ, ತಲೆಗೆ ಹೂವಿನ ದಂಡೆಗಳನ್ನು ಕಟ್ಟುತ್ತಾರೆ. ಎಲೆ-ಅಡಿಕೆ ಉತ್ತತ್ತಿ, ತೆಂಗಿನಕಾಯಿ, ಬಾಳೆಹಣ್ಣು ಇತ್ಯಾದಿಗಳಿಂದ ಉಡಿ ತುಂಬುತ್ತಾರೆ. ಆರತಿ ಬೆಳಗುತ್ತಾರೆ. (ಉತ್ತರ ಕರ್ನಾಟಕದ ಕೆಲವು ಮನೆಗಳಲ್ಲಿ) ಹಸಿಯಾದ ಉದ್ದಿನ ಹಪ್ಪಳ ಅದರ ಮೇಲೆ ಮಸಾಲೆ ತುಂಬಿ ಹಸಿ ಮೆಣಸಿಕಾಯಿ ಹಸಿ ಸಂಡಿಗೆ ಹೀಗೆ ವಿಧವಿಧವಾದ ಅಡಿಗೆ ಮಾಡಿ ಇವುಗಳನ್ನು ಬಂದ ಎಲ್ಲಾ ಮುತ್ತೈದೆಯರಿಗೆ ಒಂದೆ ತಟ್ಟೆಯಲ್ಲಿ ಎಡೆಮಾಡುತ್ತಾರೆ. ಹೀಗೆ ದಾನಮ್ಮ ಕೇವಲ ಲಿಂಗಾಯತ ಮನೆತನಗಳ ಕುಲದೇವತೆಯಾಗಿರದೆ ಅನೇಕ ಸದ್ಭಕ್ತರ ದೇವತೆಯಾಗಿದ್ದಾಳೆ.

೪) **ಶ್ರಾವಣ ಮಾಸದ ಜಾತ್ರೆಯ ಆಚರಣೆ :** ಶ್ರಾವಣಮಾಸವೆಂದರೆ ಪವಿತ್ರವಾದ ತಿಂಗಳು ಎಂದು ಭಕ್ತರು ತಮ್ಮ ಕುಲದೇವರ ದರ್ಶನಕ್ಕಾಗಿ ಹೋಗುವ ಸಂಪ್ರದಾಯವಾಗಿದೆ. ದಾನಮ್ಮನ ಭಕ್ತರು ಶ್ರಾವಣಮಾಸದ ಪ್ರತಿದಿನ ಪುಣ್ಯದ ದಿನವೆಂದು ಭಾವಿಸಿ ದೇವಿಯ ದರ್ಶನ ಪಡೆಯುತ್ತಾರೆ. ಪ್ರತಿ ಸೋಮವಾರದಂದು ದೇವಾಲಯದಲ್ಲಿ ಇರುವ ದಾನಮ್ಮ, ಸೋಮನಾಥ, ಮಲ್ಲಿಕಾರ್ಜುನ, ವೀರಭದ್ರ ದೇವರುಗಳ ಮೂರ್ತಿಗೆ ವಿಶೇಷವಾದ ಅಲಂಕಾರದೊಂದಿಗೆ ಪೂಜೆಯನ್ನು ಸಲ್ಲಿಸಲಾಗುತ್ತದೆ. ಇತ್ತೀಚೆಗೆ ಪ್ರತಿವರ್ಷ ಶ್ರಾವಣ ತಿಂಗಳೆಲ್ಲಾ ಶಿವಕವಿ ರಚಿಸಿದ 'ಮಹಾಶರಣೆ ಗುಡ್ಡಾಪುರೀ ದಾನಮ್ಮದೇವಿ ಚರಿತ್ರ ಕಾವ್ಯ' ದಲ್ಲಿನ ಪುರಾಣ ಪ್ರವಚನ ಕಾರ್ಯಕ್ರಮ ನಡೆಯುತ್ತದೆ.

ಈ ಸಂದರ್ಭದಲ್ಲಿ ಪ್ರತಿ ಸೋಮವಾರದ ದಿನ ಒಂದೊಂದು ವಿಶೇಷವಾದ ಕಾರ್ಯಕ್ರಮಗಳು ಜರಗುತ್ತವೆ. ಮೊದಲನೆ ಸೋಮವಾರದ ಪ್ರವಚನದಲ್ಲಿ ದಾನಮ್ಮನ ಜನನದ ವಿಷಯ ಪ್ರಾರಂಭಿಸುತ್ತಾರೆ. ಎರಡನೆಯ ಸೋಮವಾರ ಚಿಕ್ಕದಾದ ಕಟ್ಟಿಗೆಯ

ತೊಟ್ಟಿಲ ಕಟ್ಟಿ, ಅದರಲ್ಲಿ ಗೊಂಬೆಯನ್ನು ಮಲಗಿಸಿ, ದಾನಮ್ಮನ ನಾಮಕರಣ ಮಹೋತ್ಸವ ಎಂದು ಆಚರಿಸುತ್ತಾರೆ. ಮೂರನೆಯ ಸೋಮವಾರ ದಾನಮ್ಮನ ಮುಂಜಾವಿನ ಮಹಾಪೂಜೆಯ ನಂತರ ಗುಡ್ಡಾಪುರದಿಂದ ದಾನಮ್ಮನ ಪಲ್ಲಕ್ಕಿಯು ಸಂಕತೀರ್ಥದವರೆಗೆ ಛತ್ರ, ಚಾಮರ, ವಾದ್ಯಗಳೊಂದಿಗೆ ತಲುಪುತ್ತದೆ. ಮಧ್ಯಾಹ್ನ 'ನವವಧುವರರ ವಿವಾಹ' ಏರ್ಪಡಿಸಿದಂತೆ ದಾನಮ್ಮ ಸೋಮನಾಥರ ವಿವಾಹ ಮಹೋತ್ಸವ ನೆರವೇರಿಸುತ್ತಾರೆ. ಆ ದಿನ ಸಾಯಂಕಾಲ ದಾನಮ್ಮ ವಿವಾಹ ಕುರಿತು ಪುರಾಣ ನಡೆಯುತ್ತದೆ.

ಶ್ರಾವಣದ ನಾಲ್ಕನೆಯ ಸೋಮವಾರ ಗುಡ್ಡಾಪುರದ ಉತ್ತರ ದಿಕ್ಕಿನಲ್ಲಿ, ದಾನಮ್ಮ ಅನುಷ್ಠಾನ ಮಾಡಿದ ದಟ್ಟವಾದ ಗಿಡಗಂಟಿಗಳಿಂದ ಕೂಡಿದ ಸ್ಥಳಕ್ಕೆ 'ಕಾತರಕಂಠಿ' ಎಂದು ಕರೆಯುತ್ತಾರೆ. ಅಲ್ಲಿ ಚಿಕ್ಕ ದಾನಮ್ಮನ ಮೂರ್ತಿ ಸ್ಥಾಪಿಸಿದ್ದಾರೆ. ದಾನಮ್ಮನ ದೇವಾಲಯದಿಂದ ಶರಣೆಯ ಪಲ್ಲಕ್ಕಿಯು ಸಕಲ ಮಂಗಲ ವಾದ್ಯದೊಂದಿಗೆ ಅಲ್ಲಿಗೆ ಹೋಗುತ್ತಾರೆ. ಮಧ್ಯಾಹ್ನದ ಪೂಜೆ ಸಲ್ಲಿಸಿ, ದಾಸೋಹದ ನಂತರ ಪಲ್ಲಕ್ಕಿಯೊಂದಿಗೆ ಮರಳುತ್ತಾರೆ. ಸಾಯಂಕಾಲ ದಾನಮ್ಮನ ಶಿವಯೋಗದ ಕುರಿತು ಪ್ರವಚನ ಮಾಡುತ್ತಾರೆ.

ಶ್ರಾವಣಮಾಸದ ಐದನೆಯ ಸೋಮವಾರ ಅಥವಾ ಕೊನೆಯ ದಿನ ಅಮವಾಸ್ಯೆಯಂದು ನಡೆಯುವ ದಾನಮ್ಮನ ಜಾತ್ರೆಯೆಂದರೂ ಅದು ಸೋಮನಾಥ ಜಾತ್ರೆಯಾಗಿರುತ್ತದೆ. ಶ್ರಾವಣಮಾಸ ಶಿವನ ಮಾಸವಾಗಿದೆ. ಶಿವಸ್ತುತಿ, ಶಿವಧ್ಯಾನದ ಹಿನ್ನೆಲೆಯಲ್ಲಿ ಈ ಜಾತ್ರೆ ಸೋಮನಾಥನ ಜಾತ್ರೆಯೆಂದು ನಿರ್ಧಾರವಾಗುತ್ತದೆ. ಆದರೂ ದಾನಮ್ಮ ಸೋಮನಾಥರ ಜೊತೆಯಾಗಿ ಜಾತ್ರೆ ಆಚರಿಸುತ್ತಾರೆ. ಸಾಯಂಕಾಲ ದಾನಮ್ಮದೇವಿಯ ಪುರಾಣ ಪ್ರವಚನದ ಮಂಗಲ ನಡೆಯುತ್ತದೆ. ಶ್ರಾವಣಮಾಸದ ಮತ್ತು ಕಾರ್ತಿಕ ಮಾಸದಲ್ಲಿನ ದೀಪೋತ್ಸವ ಈ ಎರಡು ಸಂದರ್ಭಗಳು ಗುಡ್ಡಾಪುರದಲ್ಲಿ ಮಹತ್ವಪೂರ್ಣವಾಗಿವೆ.

೫) ಛಟ್ಟಿ ಅಮಾವಾಸ್ಯೆಗೆ ಜಾತ್ರೆ ಮತ್ತು ದೀಪೋತ್ಸವ : ಛಟ್ಟಿ ಅಮವಾಸ್ಯೆಯಂದು ಗುಡ್ಡಾಪುರ ದೇವಾಲಯದಲ್ಲಿ ದಾನಮ್ಮನ ಜಾತ್ರೆ ಮತ್ತು ಕಾರ್ತಿಕೋತ್ಸವ ಎಂದು ಆಚರಿಸಲಾಗುತ್ತದೆ. ಈ ಸಂದರ್ಭದಲ್ಲಿ ಕಾಲಿಡಲು ಜಾಗವಿರದಷ್ಟು ಜನ ಸೇರುತ್ತಾರೆ. ಅಂದು ಬೆಳಗಿನ ಜಾವ ಪೂಜೆ ರುದ್ರಾಭಿಷೇಕದೊಂದಿಗೆ ದಾನಮ್ಮದೇವಿಗೆ ಸಕಲ ಬಂಗಾರ ವಜ್ರವಿರುವ ಆಭರಣಗಳು ತೊಡಿಸಿ, ವಿಶೇಷವಾದ ಮಹಾಪೂಜೆ ನೆರವೇರಿಸುತ್ತಾರೆ. ಅನೇಕ ಕಡೆಗಳಿಂದ ಭಕ್ತರು ಪರಿವಾರದವರೊಂದಿಗೆ ಬರುತ್ತಾರೆ. ಕೆಲವರು ಪಾದಯಾತ್ರೆಯ ಮೂಲಕ ಗುಡ್ಡಾಪುರಕ್ಕೆ ಬಂದು ತಮ್ಮ ಹರಕೆ ಸಲ್ಲಿಸಿ, ದಾನಮ್ಮನ ದರ್ಶನ ಪಡೆದು ಪುನೀತರಾಗುತ್ತಾರೆ. ಬಂದ ಭಕ್ತರೆಲ್ಲಾ ಜೊತೆಗೂಡಿ

ಸಾಮೂಹಿಕವಾಗಿ ದಾಸೋಹ ನಡೆಸಿಕೊಡುತ್ತಾರೆ.

ಆ ದಿನದ ಸಾಯಂಕಾಲದಲ್ಲಿ ಗುಡಿಯ ಆವರಣದ ತುಂಬಾ ರಂಗೋಲಿಯಿಂದ ದಾನಮ್ಮನ ಮತ್ತು ವಿವಿಧ ಚಿತ್ರಗಳನ್ನು ಬಿಡಿಸುತ್ತಾರೆ. ದೀಪಸ್ತಂಭಗಳಲ್ಲಿ ಎಣ್ಣೆ ಬತ್ತಿಯಿಂದ ಹಣತೆಗಳಲ್ಲಿ ಹತ್ತಿಕಾಳುಗಳಿಂದ ಜ್ಯೋತಿಯನ್ನು ಬೆಳಗಿಸುತ್ತಾರೆ. ಈ ಬೆಳಗುವ ಹಣತೆಗಳು ಅಜ್ಞಾನದ ಕತ್ತಲೆ ಕಳೆದು, ಸುಜ್ಞಾನದ ಕಡೆಗೆ ಕೊಂಡ್ಯೊಯುತ್ತವೆ ಎನ್ನಲಾಗುತ್ತದೆ. ದಾನಮ್ಮನ ಸಾಯಂಕಾಲದ ಪೂಜೆಯ ನಂತರ ದೇವಾಲಯದ ಮಂಡಳಿಯವರು. ಪೂಜಾರಿಗಳು ಮೊದಲಾದವರು ಕೂಡಿ ಪಲ್ಲಕ್ಕಿ ಸೇವೆ ಮೂರು ಪ್ರದಕ್ಷಿಣೆಯ ಮೂಲಕ ನೆರವೇರುವುದು ವಿಶಿಷ್ಟವಾಗಿದೆ. ಮಂಗಳಾರತಿ ನಂತರ ಸರ್ವರಿಗೂ ಪ್ರಸಾದ ವಿತರಿಸುತ್ತಾರೆ.

ಗುಡ್ಡಾಪುರ ದಾನಮ್ಮನ ಕಾರ್ತಿಕೋತ್ಸವದ ಆಚರಣೆಯನ್ನು ಕುರಿತು, ಅನೇಕ ಪ್ರಮುಖವಾದ ದಿನ ಪತ್ರಿಕೆಗಳಲ್ಲಿ 'ಅನ್ಯಾಯ, ಅಧರ್ಮ, ಅಸತ್ಯಗಳ ಕತ್ತಲೆಯನ್ನು ಓಡಿಸಿ, ಧರ್ಮದಲ್ಲಿ ಸುಜ್ಞಾನ, ಸತ್ಯದ ಬೆಳಕು ಬಿತ್ತಿ ಕಾರಿರುಳನ್ನು ತೊಡೆದು ಹಾಕಲು ಕಾರ್ತಿಕದ ಲಕ್ಷ ಲಕ್ಷ ಹಣತೆಗಳು ಬೆಳಗುತ್ತವೆ. ಗುಡ್ಡಾಪುರದ ಆವರಣದಲ್ಲಿ ಛಟ್ಟಿ ಅಮಾವಾಸ್ಯೆಯಂದು ಬೆಳಗುವ ಹಣತೆಗಳು ಕೇವಲ ಹಣತೆಗಳಲ್ಲ. ನಮಗೆ ಮಾರ್ಗ ತೋರುವ ದಾರಿದೀಪಗಳಾಗಿವೆ.' ಎಂದು ಒಂದು ಪತ್ರಿಕೆಯಲ್ಲಿ ವರ್ಣಿಸುತ್ತಾರೆ. ಮತ್ತೊಂದು ಪತ್ರಿಕೆಯಲ್ಲಿ 'ಶರಣ ಸಾಹಿತ್ಯದ ಹೋಳಿಗೆಯನ್ನು ವಿಶ್ವಕ್ಕೆ ಹಂಚಿದ ಮಹಾನ್ ಶಿವಶರಣೆ ದಾನಮ್ಮದೇವಿಯ ಕಾರ್ತಿಕೋತ್ಸವ ಮತ್ತು ಪಲ್ಲಕ್ಕಿ ಉತ್ಸವ ಲಕ್ಷಾಂತರ ಶರಣ ಶರಣೆಯರ ಹರ್ಷೋದ್ಗಾರದ ನಡುವೆ ವಿಜೃಂಭಣೆಯಿಂಧ ನೆರವೇರಿತು.' ಎಂದು ಗುಡ್ಡಾಪುರ ದಾನಮ್ಮದೇವಿಯ ದೀಪೋತ್ಸವದ ಮಹತ್ವವನ್ನು ಪ್ರಕಟಿಸುತ್ತಾರೆ.

೬) ದಾನಮ್ಮ ಹೆಸರಿನಲ್ಲಿ ಹರಕೆಗಳ ಆಚರಣೆ : ದಾನಮ್ಮನ ಭಕ್ತರು ನಾನಾ ಬಗೆಯ ಹರಕೆಗಳನ್ನು ಮಾಡುತ್ತಾರೆ. ಮದುವೆ ಆಗಲೆಂದು, ಮಕ್ಕಳಿಲ್ಲದವರು ಮಕ್ಕಳಾಗಬೇಕೆಂದು, ಸಿರಿಸಂಪತ್ತಿಗಾಗಿ, ವ್ಯಾಪಾರದಲ್ಲಿ ಬಹಳ ಲಾಭವಾಗಲೆಂದು, ರೋಗದಿಂದ ಗುಣಮುಖರಾಗಬೇಕೆಂದು ಹೀಗೆ ತಮ್ಮ ನೂರೆಂಟು ಆಶೆ ಆಕಾಂಕ್ಷೆಗಳನ್ನು ಪೂರೈಸಿಕೊಳ್ಳುವುದಕ್ಕಾಗಿ ಹರಕೆಗಳನ್ನು ಮಾಡುತ್ತಾರೆ.

ಭಕ್ತರು ತಮ್ಮ ಹರಕೆಯಿಂದ ಇಷ್ಟಾರ್ಥವು ಕೈಗೂಡಿದರೆ ದಾನಮ್ಮ ಶರಣೆಯ ದೇವಸ್ಥಾನದಲ್ಲಿ ಬೆಳ್ಳಿ ಅಥವಾ ಬಂಗಾರದಲ್ಲಿ ಮಾಡಿದ ಕಣ್ಬಟ್ಟುಗಳು, ಮೂಗಿನ ನತ್ತು,

ಕಾಲುಂಗುರ, ಕಿವಿಯಲ್ಲಿನ ಬೆಂಡೋಲೆ, ಬುಗಡಿ, ಕೊರಳ ಮಾಂಗಲ್ಯ, ಕೈಬಳೆ, ಉಂಗುರ, ಕಾಲಿನ ಚೈನು, ಪುತ್ತಳಿಸರ, ವಜ್ರಟಿಕೆ, ಸರಿಗೆ,ಚಕ್ರಹಾರ, ಕಟ್ಟಾಣಿಸರ, ವಡ್ಡಾಣಿಸರ, ಕೋತಂಬ್ರಿ ಸರ, ಏಕದಾಗಿನ ಸರ, ಮಂಗಳಗೌರಿ ಸರ, ಲಿಂಗದಕಾಯಿ ಮತ್ತು ಕಿರೀಟ ಮುಂತಾದವುಗಳು. ದಾನಮ್ಮನಿಗೆ ಅಲಂಕಾರಿಕ ಆಭರಣಗಳನ್ನು ಭಕ್ತರು ತಮ್ಮ ಇಷ್ಟದಂತೆ ಹಾಗೂ ಅನುಕೂಲಕ್ಕೆ ಅನುಗುಣವಾಗಿ ತೆಗೆದುಕೊಂಡು ಬಂದು ಅರ್ಪಿಸುತ್ತಾರೆ. ಇವುಗಳ ಜೊತೆಗೆ ಕರ್ಪೂರ ಹಚ್ಚುವುದು, ಅರಿಸಿನ ಕುಂಕುಮ ತೆಂಗು ಒಡೆದು ದೇವಿಗೆ ಹೂವಿನ ಹಾರ, ಕಲ್ಲುಸಕ್ಕರೆ, ಉತ್ತತ್ತಿ ಅರ್ಪಿಸಿ, ತಾಯಿಗೆ ಹರಕೆ ಪೂರ್ಣಗೊಳಿಸುತ್ತಾರೆ. ದಾನಮ್ಮನ ಭಕ್ತರು ಮಾಡುವ ಕೆಲವೊಂದು ವಿಶಿಷ್ಟವಾದ ಹರಕೆಗಳನ್ನು ನೋಡೋಣ.

೧) **ದೀಡ ನಮಸ್ಕಾರ ಸೇವೆ:** ದಾನಮ್ಮನ ಭಕ್ತರು ತಮ್ಮ ಸಮಸ್ಯೆಗಳ ಪರಿಹಾರವಾದರೆ ಇಂತಿಷ್ಟು ಸುತ್ತು ದೀಡ ನಮಸ್ಕಾರ ಪ್ರದಕ್ಷಿಣೆ ಹಾಕುವ ಹರಕೆ ಹೊರುವರು. ಪರಿಹಾರ ದೊರೆತಾಗ ಭಕ್ತನು ಮಡಿಯಿಂದ ಗುಡ್ಡಾಪುರ ದೇವಾಲಯದ ಸುತ್ತಲಿನ ನೆಲದ ಮೇಲೆ ಉದ್ದಾಗಿ ಮಲಗಿ ಎರಡು ಕೈಗಳು ಜೋಡಿಸಿ, ಮುಂದೆ ಮಾಡಿ ನಮಸ್ಕರಿಸುತ್ತಾನೆ. ದೀಡ (ಮರಾಠಿ ಶಬ್ದ) ದೇಹದ ಒಂದು ಮತ್ತು ಅರ್ಧಭಾಗದಿಂದ ನಮಸ್ಕರಿಸುವ ಸಮಯದಲ್ಲಿ ಮುಂದೆ ಒಬ್ಬರು ಒಂದುಚಿಕ್ಕ ಕೋಲಿನಿಂದ ಗೆರೆ ಎಳೆಯುತ್ತಾರೆ. ಮತ್ತೆ ಆ ಗೆರೆಯಿಂದ ಮುಂದಕ್ಕೆ ಹೀಗೆ ಭಕ್ತರು ತಮ್ಮ ಹರಕೆ ಪೂರ್ಣವಾಗುವವರೆಗೆ ದೇಹದಂಡನೆ ಮಾಡುತ್ತಾರೆ.

೨) **ಉರುಳು ಸೇವೆ :** ಈ ಹರಕೆ ಮಾಡಿದ ಭಕ್ತರು ಮೈಯೆಲ್ಲಾ ಒದ್ದೆಯಾದ ಬಟ್ಟೆ ತೊಟ್ಟು ದಾನಮ್ಮ ಹಾಗೂ ಸೋಮನಾಥ ದೇವಾಲಯದ ಸುತ್ತ ಉರುಳುಕೊಂಡು ಪ್ರದಕ್ಷಿಣೆ ಹಾಕುತ್ತಾ ಹರಕೆ ಸಲ್ಲಿಸುತ್ತಾರೆ. ಭಕ್ತರು ತಮ್ಮ ದೇಹವನ್ನು ಪ್ರಯತ್ನಪೂರ್ವಕ ದಂಡಿಸಿಕೊಂಡು ದೇವರಿಗೆ ಹರಕೆ ಸಲ್ಲಿಸುವ ಸಂಪ್ರದಾಯಗಳಲ್ಲಿ ಇದು ಒಂದಾಗಿದೆ.

೩) **ಪಾದಯಾತ್ರೆ :** ಗುಡ್ಡಾಪುರ ದಾನಮ್ಮನಿಗೆ ತಮ್ಮೂರಿನಿಂದ ಪಾದಯಾತ್ರೆ ಮಾಡುತ್ತಾ ಬರುತ್ತೇವೆಯೆಂದು ಹರಕೆ ಮಾಡುತ್ತಾರೆ. ಅತ್ಯಂತ ಬಯಲು ಗುಡ್ಡಗಾಡು ಹಾಗೂ ಚಿಕ್ಕ ಚಿಕ್ಕ ಹಳ್ಳಗಳಿಂದ ಕೂಡಿರುವ ಗ್ರಾಮ ಪ್ರದೇಶವಾಗಿರುವ ಗುಡ್ಡಾಪುರ ಕ್ಷೇತ್ರಕ್ಕೆ ಕಾಲ್ನಡಿಗೆಯಿಂದ ಶ್ರದ್ಧಾಭಕ್ತಿಯಿಂದ ಆಗಮಿಸುತ್ತಾರೆ. ಒಮ್ಮೆ ಪಾದಯಾತ್ರೆಯಿಂದ ಬಂದ ಭಕ್ತರು ಸತತ ಮೂರು ವರ್ಷ ಬರಬೇಕೆಂಬ ಸಂಪ್ರದಾಯವಾಗಿದೆ. ಕೆಲವರು ಬರಿಗಾಲಿನಿಂದ ಬರುವಾಗ ಮುಳ್ಳು ಕಲ್ಲು ಚುಚ್ಚಿದರೂ ದೇವಿಯ ಕೃಪೆಯಿಂದ ತಮಗೇನು ಆಗಲಾರದೆಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಇತ್ತೀಚಿನ ವರ್ಷಗಳಲ್ಲಿ ಛಟ್ಟಿ ಅಮವಾಸ್ಯೆಯ ಜಾತ್ರೆಗಳ ಸಂಧರ್ಭದಲ್ಲಿ ಸಾವಿರಾರು ಜನರು ತಮ್ಮ ಪಾದಯಾತ್ರೆಯ ಹರಕೆಯನ್ನು ಪೂರೈಸಲು ಬರುತ್ತಾರೆ. ಭಕ್ತರು ನಡೆದು ಬರುವಾಗ ದಾನಮ್ಮದೇವಿ ನೈವೇದ್ಯಕ್ಕೆಂದು ಒಂದು ಕಿಲೋದಷ್ಟಾದರೂ ಬೇಳೆ-ಬೆಲ್ಲ ಆಹಾರ ವಸ್ತುಗಳು ಸ್ವಂತ ಹೊತ್ತುಕೊಂಡು, ದಾರಿಯುದ್ದಕ್ಕೂ ದಾನಮ್ಮತಾಯಿಯ ನಾಮಸ್ಮರಣೆ ಮತ್ತು ಭಕ್ತಿಗೀತೆಗಳನ್ನು ಹಾಡುತ್ತಾ ಬರುತ್ತಾರೆ. ನಶೆ ಪದಾರ್ಥ ಸೇವನೆ ಮಾಡುವುದು, ಪೋಲಿತನ, ಬೈಯ್ದಾಟ ಈ ರೀತಿ ತಪ್ಪುಗಳನ್ನು ಮಾಡಿದರೆ ದಾನಮ್ಮನ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ. ಅತ್ಯಂತ ಉತ್ಸಾಹದಿಂದ ನಡೆದು ಬಂದ ಭಕ್ತರು ದೇವಾಲಯದ ಮುಂದೆ 'ಧೂಳುಗಾಯಿ' ಎಂದು ತೆಂಗಿನಕಾಯಿ ಒಡೆದು, ದಾನಮ್ಮನ ದರ್ಶನ ಮಾಡಿ ಆಶೀರ್ವಾದ ಪಡೆಯುತ್ತಾರೆ. ಅಲ್ಲಿಗೆ ಅವರ ಪಾದಯಾತ್ರೆ ಹರಕೆ ಈಡೇರುತ್ತದೆ. ಇಂತಹ ಹರಕೆಗಳು ತಮ್ಮ ಇಷ್ಟಾರ್ಥ ಪಡೆಯಲು ಅಥವಾ ಪಡೆದಾಗ ಮಾಡುತ್ತಾರೆ.

೪) ಜಿನಗಿ (ಘೂಳಿ ದನ) ಸೇವೆ : ಗುಡ್ಡಾಪುರ ದಾನಮ್ಮನ ಒಕ್ಕಲುತನ ಮಾಡುವ ಮನೆತನದ ಭಕ್ತರು ಹರಕೆ ಹೊರುತ್ತಾರೆ. ತಮ್ಮ ಮನೆಯಲ್ಲಿ ದನಕರುಗಳ ಸಂಖ್ಯೆ ಬೆಳೆಯದಿದ್ದರೆ, ಇರುವ ಪಶುಗಳು ಬರಡಾಗಿದ್ದರೆ, ಸರಿಯಾಗಿ ಹಾಲು ಕೊಡದಿದ್ದರೆ, ಇದು ದುಷ್ಟಶಕ್ತಿಯ ಅಥವಾ ದೇವರ ಕಾಟವೆಂದು ನಂಬಿ ಹರಕೆ ಮಾಡುತ್ತಾರೆ. ಕೆಲವು ದಿನಗಳಲ್ಲಿ ಅವರ ಮನೆಗಳಲ್ಲಿ ದನಕರುಗಳ ಮತ್ತು ಹೈನುಗಾರಿಕೆಯಲ್ಲಿ ವೃದ್ಧಿಯಾದಾಗ ಹರಕೆ ಫಲಿಸಿತೆಂದು ದೇವರಿಗೆ ಅರ್ಪಿಸುತ್ತಾರೆ.

೫) ಹುಂಡಿ ಸೇವೆ : ದಾನಮ್ಮನ ಭಕ್ತರು ತಮ್ಮ ಆದಾಯದಲ್ಲಿ ಕೆಲವೊಂದು ಭಾಗವನ್ನು ಪ್ರತಿದಿನ, ವಾರ ಅಥವಾ ತಿಂಗಳು ತಮಗೆ ಆದಾಯ ಬಂದಾಗ ದೇವಿಯ ಹೆಸರಿನಲ್ಲಿ ಕಾಣಿಕೆಯ ಹಣವನ್ನು ಒಂದು ಹುಂಡಿಯಲ್ಲಿ ಇಡುತ್ತಾರೆ. ಅದನ್ನು ದಾನಮ್ಮನ ಛಟ್ಟಿ ಅಮವಾಸ್ಯೆ ಅಥವಾ ಶ್ರಾವಣ ಮಾಸದ ಜಾತ್ರೆಯಲ್ಲಿ ಆಗದಿದ್ದಲ್ಲಿ ತಮಗೆ ಅನುಕೂಲವಾದ ಸಂದರ್ಭದಲ್ಲಿ ಗುಡ್ಡಾಪುರಕ್ಕೆ ಬಂದು, ತಾವು ಸಂಗ್ರಹಿಸಿದ ಹಣವನ್ನು ದೇವಿಗೆ ಅರ್ಪಿಸುತ್ತಾರೆ. ಇಲ್ಲದಿದ್ದರೆ ಆ ಹಣದಿಂದ ತಾವೇ ಆಭರಣಗಳು ಖರೀದಿಸಿ ದಾನಮ್ಮದೇವಿಗೆ ಸಮರ್ಪಣೆ ಮಾಡುತ್ತಾರೆ.

೬) ಮಗುವಿನ ಉಡಿಹಾರಿಸುವ ಆಚರಣೆ: ದಾನಮ್ಮನಲ್ಲಿ ಹರಕೆಹೊತ್ತು ಸಂತಾನಭಾಗ್ಯ ಪಡೆದಿದ್ದರೆ, ಗುಡ್ಡಾಪುರಕ್ಕೆ ಮಗುವಿನೊಂದಿಗೆ ಬರುತ್ತಾರೆ. ದಾನಮ್ಮನಿಗೆ ಪೂಜೆ, ಹೋಳಿಗೆ ನೈವೇದ್ಯವನ್ನು ಸಲ್ಲಿಸುತ್ತಾರೆ. ನಂತರ ಮಗುವನ್ನು ದಾನಮ್ಮನ ಎದುರಿಗೆ ಮಲಗಿಸುತ್ತಾರೆ. ಆಮೇಲೆ ದೇವಾಲಯದ ಹೊರ ಭಾಗದ ಛಾವಣಿಯ ಮೇಲೆ ನಿಂತು ಏಳರಿಂದ

ಎಂಟು ಅಡಿ ಎತ್ತರದಿಂದ ಮಗುವನ್ನು ಕೆಳಗೆ ಹಾರಿಸುತ್ತಾರೆ. ಕೆಳಗಡೆ ನಾಲ್ಕು ಜನರು ದೊಡ್ಡದಾದ ಬಟ್ಟೆಯಲ್ಲಿ ಮಗುವನ್ನು ಸುರಕ್ಷಿತವಾಗಿ ಹಿಡಿಯುತ್ತಾರೆ. ದಾನಮ್ಮ ಕೊಟ್ಟ ಮಗುವನ್ನು ಆಕೆಯ ಉಡಿಯಲ್ಲಿ ಹಾಕಿದೆವು ಇದರ ರಕ್ಷಣೆಯ ಜವಾಬ್ದಾರಿ ದಾನಮ್ಮನದು ಎಂಬ ಭಾವನೆ ಇರುತ್ತದೆ. ಇದನ್ನೇ ಉಡಿ ಹಾರಿಸುವ ಆಚರಣೆ ಎಂದು ಕರೆಯುತ್ತಾರೆ.

೭) ಮಗುವಿನ ಜವುಳ (ಜಡೆ) ತೆಗೆಯುವುದು : ದಾನಮ್ಮತಾಯಿಯ ಸಮ್ಮುಖದಲ್ಲಿ ಮಗುವಿಗೆ ಜವುಳ ಅಥವಾ ಜಡೆ ತೆಗೆಯುತ್ತೇವೆ ಎಂದು ಹರಕೆ ಹೊತ್ತಿರುತ್ತಾರೆ. ಅದರಂತೆ ಗುಡ್ಡಾಪುರಕ್ಕೆ ಬಂದು ಮಗುವಿಗೆ ಸ್ನಾನ ಮಾಡಿಸಿ, ಹೊಸ ಬಟ್ಟೆ ತೊಡಿಸಿ ದಾನಮ್ಮನ ಮುಂದೆ ಮಲಗಿಸುತ್ತಾರೆ. ದಾನಮ್ಮ ದೇವಿಯ ಉಡಿತುಂಬಿ ಮಗುವಿನ ಸೋದರಮಾವನ ಜೊತೆಗೆ ಪೂಜಾರಿ ಎಲೆ ಅಡಿಕೆಯೊಂದಿಗೆ ಮಗುವಿನ ಐದು ಕೂದಲಿನ ಎಳೆಯನ್ನು ತೆಗೆದು ಇಡುತ್ತಾರೆ. ಆಗ ಮಗುವಿನ ಜವುಳ ತೆಗೆಯುವ ಹರಕೆ ತೀರುತ್ತದೆ. ನಂತರ ತೆಗೆದ ಕೂದಲು ಎಲೆ ಅಡಿಕೆಯನ್ನು ಯಾವುದಾದರೂ ಹೊಳೆಯಲ್ಲಿ ಅಥವಾ ಬಾವಿಯಲ್ಲಿ ತೇಲಿ ಬಿಡುತ್ತಾರೆ.ದಾನಮ್ಮ ಕುಲದೇವತೆ ಇರುವ ಮನೆಗಳಲ್ಲಿ ಮತ್ತು ದಾನಮ್ಮನ ಆಶೀರ್ವಾದದಿಂದ ಮಕ್ಕಳ ಭಾಗ್ಯ ದೊರೆತಲ್ಲಿ ಮಗುವಿನ ಜಡಿ ದೇವರಿಗೆ ಅರ್ಪಿಸುತ್ತಾರೆ.

೮) ವಧು-ವರರು ದರ್ಶನ ಪಡೆಯುವುದು : ದಾನಮ್ಮ ಕುಲದೇವತೆಯಾದ ಮನೆಗಳಲ್ಲಿ ಮಕ್ಕಳ ಮದುವೆಯಾದರೆ ವಧು-ವರರು ಜೊತೆಯಾಗಿ ಗುಡ್ಡಾಪುರ ದಾನಮ್ಮನ ದರ್ಶನ ಪಡೆಯಬೇಕು ಎಂಬ ಪದ್ಧತಿಯಿದೆ. ದಾನಮ್ಮ ಶರಣೆಗೆ ಪೂಜೆ, ರುದ್ರಾಭಿಷೇಕ, ಹೋಳಿಗೆ ನೈವೇದ್ಯಗಳನ್ನು ಸಲ್ಲಿಸುತ್ತಾರೆ. ನವಜೋಡಿಗಳಿಗೆ ದಾಂಪತ್ಯ ಬದುಕು ಸುಖಕರವಾಗಲೆಂದು ಹರಸು ತಾಯೆ ಎಂದು ಬೇಡಿಕೊಳ್ಳುತ್ತಾರೆ.

೯) ಕಂಕಣ ಕಟ್ಟುವ ಸೇವೆ : ಮನೆಯಲ್ಲಿ ಹೆಣ್ಣುಮಗಳು ದೊಡ್ಡವಳಾಗಿ ಬಹಳ ದಿನಗಳ ವರೆಗೆ ಮದುವೆ ಆಗದೆ ಇದ್ದರೆ, ಬೇಗ ಮದುವೆಯಾಗಲೆಂದು ಕಂಕಣ ಕಟ್ಟಿಕೊಳ್ಳುವ ಆಚರಣೆ ಮಾಡುತ್ತಾರೆ. ದಾನಮ್ಮನ ಹೆಸರಿನಲ್ಲಿ ಸಂಕಲ್ಪ ಮಾಡಿ ಬಿಳಿದಾರವನ್ನು ಅರಿಷಿಣ ಬೇರಿನ ಜೊತೆಗೆ ಬಲ ಮುಂಗೈಗೆ ದೇವಿಯು ಆಶೀರ್ವಾದವೆಂದು ಪೂಜಾರಿಗಳು ಕಟ್ಟುತ್ತಾರೆ. ಆ ಸಂಕಲ್ಪದಿಂದ ಕನ್ಯೆಗೆ ಬೇಗ ಮದುವೆಯಾದರೆ ವಧು-ವರರು ದಾನಮ್ಮದೇವಿಗೆ ರುದ್ರಾಭಿಷೇಕದಿಂದ ಪೂಜೆ ಸಲ್ಲಿಸಿ ದರ್ಶನ ಪಡೆಯುವ ಸಂಪ್ರದಾಯವಿದೆ.

೧೦) ತುಲಾಭಾರ : ದಾನಮ್ಮನ ಭಕ್ತರು ತಮ್ಮ ಮನೆಯಲ್ಲಿ ಯಾರಾದರೂ

ಸಂಕಷ್ಟದಲ್ಲಿ ಬಳಲುತ್ತಿದ್ದಾಗ ಅದನ್ನು ಪರಿಹರಿಸಬೇಕೆಂದು ತುಲಾಭಾರ ಹರಕೆ ಮಾಡುತ್ತಾರೆ. ಈ ಹರಕೆಯನ್ನು ದಾನಮ್ಮನ ದೇವಾಲಯದ ಮುಂದಿನ ಅಂಗಳದಲ್ಲಿ ತಕ್ಕಡಿಯನ್ನು ತೂಗಿ ಬಿಡುತ್ತಾರೆ. ತಕ್ಕಡಿಯ ಒಂದು ಕಡೆ ತಾವು ಬೇಡಿಕೊಂಡ ವ್ಯಕ್ತಿಯನ್ನು ಕೂಡಿಸುತ್ತಾರೆ. ಮತ್ತೊಂದು ಕಡೆಗೆ ದವಸ-ಧಾನ್ಯ, ಕಲ್ಲುಸಕ್ಕರೆ, ಚಿಲ್ಲರೆ ನಾಣ್ಯಗಳು ಅಥವಾ ತೆಂಗಿನಕಾಯಿ ಮೊದಲಾದ ವಸ್ತುಗಳಲ್ಲಿ ಯಾವುದಾದರೂ ಒಂದರಿಂದ ವ್ಯಕ್ತಿಯ ಸಮತೂಕ ತೂಗಿ ಆ ವಸ್ತುವನ್ನು ದಾನಮ್ಮನ ಸನ್ನಿಧಿಗೆ ಕೊಡುವುದು ಆಚರಣೆಯಿದೆ.

೧೧) **ದಾನಮ್ಮನ ಮಹಾಪೂಜೆಯ ಹರಕೆ:** ಗುಡ್ಡಾಪೂರ ದಾನಮ್ಮನ ದೇವಾಲಯದಲ್ಲಿ ಏರ್ಪಡಿಸುವ ಶ್ರೇಷ್ಠ ಪೂಜೆ ಮಹಾಪೂಜೆಯಾಗಿದೆ. ಶರಣೆಯ ಸ್ಮರಣೆಯಲ್ಲಿ ಹರಕೆ ಹೊತ್ತ ಭಕ್ತರ ಸಂಕಲ್ಪ ಸಿದ್ಧಿಸಿದರೆ ದಾನಮ್ಮನಿಗೆ ಮಹಾಪೂಜೆ ಸಲ್ಲಿಸುವುದಾಗಿ ಬೇಡಿಕೊಂಡಿರುತ್ತಾರೆ. ಆದಿನ ಭಕ್ತರು ದಾನಮ್ಮನ ಬೆಳ್ಳಿಯ ಮೂರ್ತಿಗೆ ರುದ್ರಾಭಿಷೇಕ ಮಾಡಿ, ಕಾಣಿಕೆಯನ್ನು ಸಲ್ಲಿಸುತ್ತಾರೆ. ಪೂಜಾರಿಗಳು ದಾನಮ್ಮನ ಮೂರ್ತಿಗೆ ಎಲ್ಲಾ ಆಭರಣಗಳಿಂದ ಸುವರ್ಣಾಲಂಕಾರ ಮಾಡಿ ಪೂಜಿಸುತ್ತಾರೆ. ಈ ಮಹಾಪೂಜೆಯನ್ನು ಹರಕೆ ಹೊತ್ತವರು ದೂರದಿಂದಲೆ ನೋಡಿ ಕಣ್ತುಂಬಿಸಿ- ಕೊಳ್ಳುತ್ತಾರೆ.

೧೨) **ವೀಳ್ಯದೇಲೆ ಪೂಜೆಯ ಹರಕೆ:** ಈ ಹರಕೆಯು ದಾನಮ್ಮದೇವಿಯನ್ನು ಅರ್ಚಿಸುವ ವಿಧಾನವಾಗಿದೆ. ದಾನಮ್ಮದೇವಿಗೆ ರುದ್ರಾಭಿಷೇಕ ಪೂಜೆ ಸಲ್ಲಿಸಿ, ವೀಳ್ಯದ ಎಲೆಗಳನ್ನು ದೇವಾಲಯದ ಅರ್ಚಕರಿಗೆ ಸಲ್ಲಿಸುತ್ತಾರೆ. ಅರ್ಚಕರು ಹಿತ್ತಾಳೆ ಚಾಮರಕ್ಕೆ ಅಂದವಾಗಿ ವೀಳ್ಯದೆಲೆ ಕಟ್ಟಿ, ದೇವಿಯ ಮುಂಬಾಗದಲ್ಲಿ ಇಡುತ್ತಾರೆ. ದಾನಮ್ಮನನ್ನು ಹೂವುಗಳಿಂದ ಅಲಂಕರಿಸುತ್ತಾರೆ. ಹರಕೆ ಹೊತ್ತ ಭಕ್ತಾದಿಗಳು ದೇವಿಗೆ ಕಾಣಿಕೆಗಳನ್ನು ಅರ್ಚಕರಿಗೆ ಕೊಡುತ್ತಾರೆ.

೧೩) **ಪಲ್ಲಕ್ಕಿ ಪೂಜೆ :** ಭಾರತದಲ್ಲಿ ಹಿಂದಿನ ಕಾಲದಿಂದಲೂ ಹಳ್ಳಿಗಳಲ್ಲಿ ಮತ್ತು ಪಟ್ಟಣಗಳಲ್ಲಿ ಸಂಪ್ರದಾಯುವೆಂದು ದೇವಾಲಯುಗಳಲ್ಲಿ ನಡೆಸುತ್ತಿರುವ ಸಂಪ್ರದಾಯವಾಗಿದೆ. ಪಲ್ಲಕ್ಕಿಯಲ್ಲಿ ದೇವರನ್ನು ಇಟ್ಟು ತಮ್ಮ ಮೈಮೇಲೆ ಹೊರುವ ಆಚರಣೆ ಕಂಡು ಬರುತ್ತದೆ. ತಮ್ಮ ಇಷ್ಟದೇವತೆಗಳನ್ನು ಆಯಾ ದೇವರುಗಳ ನಿಗದಿತ ವಾರ-ತಿಥಿ ಮಾಸದಂದು ಪಲ್ಲಕ್ಕಿ ಸೇವೆ ಏರ್ಪಡಿಸುತ್ತಾರೆ. ಹಾಗೆಯೆ ದಾನಮ್ಮಶರಣೆಯ ದೇವಾಲಯದಲ್ಲಿ ಪಲ್ಲಕ್ಕಿ ಸೇವೆಯು ಪ್ರತಿ ತಿಂಗಳ ಅಮಾವಾಸ್ಯೆ ಹಾಗೂ ಸೋಮವಾದಂದು ಜರಗುತ್ತದೆ. ದೇವಾಲಯದ ಧರ್ಮದರ್ಶಿಗಳು, ಪೂಜಾರಿಗಳು ಒಟ್ಟುಗೂಡಿ ಸಾಯಂಕಾಲದ ಪೂಜೆಯ ನಂತರ ಪಲ್ಲಕ್ಕಿ ಸೇವೆ ನೆರವೇರಿಸುತ್ತಾರೆ.

ಸದ್ಭಕ್ತರು ತಮ್ಮ ಹರಕೆ ಬೇಡಿಕೆಗಳನ್ನು ಪೂರೈಸಲೆಂದು, ತಾಯಿಯ ಮೂರ್ತಿಹೊತ್ತ ಪಲ್ಲಕ್ಕಿ ತಮ್ಮ ಮೇಲೆ ಹಾಯ್ದು ಹೋಗಬೇಕೆಂದು ದೇವಾಲಯದ ಸುತ್ತಲೂ ದೀಡ ನಮಸ್ಕಾರದಲ್ಲಿ ಮಲಗುತ್ತಾರೆ. ಛತ್ರ, ಚಾಮರ, ವಾದ್ಯಗಳೊಂದಿಗೆ ದಾನಮ್ಮನ ಹಿತ್ತಾಳೆ, ಇತ್ತೀಚಿಗೆ ಬೆಳ್ಳಿಯ ಮೂರ್ತಿಯನ್ನು ಪಲ್ಲಕ್ಕಿಯಲ್ಲಿಟ್ಟು ದಾನಮ್ಮನ ಗರ್ಭಗುಡಿಯೊಳಗೊಂಡು, ಸೋಮನಾಥ ದೇವಾಲಯವನ್ನು ಮೂರು ಪ್ರದಕ್ಷಿಣೆ ಹಾಕುತ್ತಾರೆ.

೧೪) **ಶಾಶ್ವತ ಪೂಜೆ** : ವೀರಶರಣೆ ಗುಡ್ಡಾಪುರ ದಾನಮ್ಮ ದೇವಾಲಯದಲ್ಲಿ ಪ್ರತಿದಿನ ಮೂರು ಪೂಜೆಯಲ್ಲಿ ಭಕ್ತಾದಿಗಳು ತಮ್ಮ ಜನ್ಮದಿನ, ಮದುವೆದಿನ, ಪುಣ್ಯಸ್ಮರಣೆಯ ಇತ್ಯಾದಿ ವಿಶೇಷ ದಿನದಂದು ಈ ಶಾಶ್ವತ ಪೂಜೆಯನ್ನು ತಮ್ಮ ತಮ್ಮ ಹೆಸರುಗಳ ಮೇಲೆ ನಿಗದಿಪಡಿಸುತ್ತಾರೆ. ಅನುಕೂಲವಾದಲ್ಲಿ ಗುಡ್ಡಾಪುರಕ್ಕೆ ಬಂದು ತಮಗೆ ನೀಡಿದ ಸಮಯದಲ್ಲಿ ಅರ್ಚಕರು ಮಾಡುವ ಪೂಜೆಯಲ್ಲಿ ಭಾಗಿಯಾಗುತ್ತಾರೆ. ಇಲ್ಲವಾದಲ್ಲಿ ಅವರ ಹೆಸರಿನಲ್ಲಿ ಪೂಜೆ ನಡೆಯಿತೆಂದು ಕಲ್ಲುಸಕ್ಕರೆ ಪ್ರಸಾದ ನಮ್ಮ ಮನೆಗೆ ಪೋಸ್ಟ ಮಾಡಿ ಕಳಿಸುತ್ತಿದ್ದರು. ಹೀಗೆ ವೀರಶರಣೆ ಗುಡ್ಡಾಪುರ ದಾನಮ್ಮ ತಾಯಿಯ ಹೆಸರಿನಲ್ಲಿ ಮುಂತಾದ ಹರಕೆಗಳನ್ನು ಹೊರುತ್ತಾರೆ.

೧೫) **ದಾನಮ್ಮದೇವಿ ಪೂಜಾರಿಗಳು** : ದಾನಮ್ಮದೇವಿ ದೇವಾಲಯದಲ್ಲಿನ ಪೂಜಾರಿಗಳು ಪ್ರತಿಯೊಂದು ಧಾರ್ಮಿಕ ಆಚರಣೆಗಳಲ್ಲಿ ಅಂದರೆ ಪೂಜೆ ಮುಂತಾದ ಎಲ್ಲಾ ಕೆಲಸಗಳಲ್ಲಿ ಇವರು ಮಹತ್ವದ ಪಾತ್ರವಹಿಸುತ್ತಾರೆ. ದಾನಮ್ಮನ ತ್ರಿಕಾಲಪೂಜೆಯ ಸಂದರ್ಭದಲ್ಲಿ ಅಲಂಕರಿಸುವಲ್ಲಿ ಹಾಗೂ ಇನ್ನಿತರ ಕಾರ್ಯಕೈಗೊಳ್ಳುವಲ್ಲಿ ಇವರ ಉಪಸ್ಥಿತಿ ಅವಶ್ಯವಿರುತ್ತದೆ. ದೇವಾಲಯದಲ್ಲಿ ಪರಂಪರಾಗತವಾಗಿ ಲಿಂಗಾಯತ, ಉಪಪಂಗಡದವರು ಪೂಜಾರಿಗಳಾಗಿ ಕಾರ್ಯನಿರ್ವಹಿಸುತ್ತಿರುವುದು ವೈಶಿಷ್ಟವಾಗಿದೆ. ದಾನಮ್ಮನ ದೇವಾಲಯದಲ್ಲಿ ದೇವಿಗೆ ಭಕ್ತರು ಹರಕೆ ನೀಡಿ ಪೂಜಾರಿ ವರ್ಗವನ್ನು ದಾಸೋಹಕ್ಕೆ ಆಹ್ವಾನಿಸುತ್ತಾರೆ. ಪೂಜಾರಿವರ್ಗದವರು ದೇವಾಲಯದ ಪಲ್ಲಕ್ಕಿಸೇವೆ, ಛಟ್ಟಿ ಅಮವಾಸ್ಯೆಯ ಜಾತ್ರೆ, ಹಬ್ಬ ಹುಣ್ಣಿಮೆಯ ದಿನಗಳಲ್ಲಿ ಪ್ರತಿಯೊಂದು ಚಟುವಟಿಕೆಗಳಲ್ಲಿ ಭಾಗವಹಿಸುತ್ತಾರೆ. ಪ್ರತಿನಿತ್ಯ ದೇವಾಲಯದ ಆವರಣವನ್ನು ಸ್ವಚ್ಛವಾಗಿಟ್ಟು ಶಾಂತರೀತಿಯಿಂದ ಪೂಜಿಸುತ್ತಾರೆ. ದಾನಮ್ಮನ ಬಗೆಗಿನ ಶ್ರದ್ಧಾಭಕ್ತಿನಿಷ್ಠೆಯಿಂದ ಸೇವೆ ಸಲ್ಲಿಸುತ್ತಾರೆ. ತಮಗೂ ಬಂದ ಭಕ್ತರಿಗೂ ಒಳ್ಳೆಯದಾಗಲಿ ಎಂಬ ಆಶಾಭಾವದಿಂದ ಪ್ರಾರ್ಥಿಸುತ್ತಾರೆ.

ದಾನಮ್ಮದೇವಿಯ ಅರ್ಚಕರು ಪೂಜಾರಿ ವರ್ಗದವರಂತೆ ದಾನಮ್ಮನಿಗೆ ಪೂಜೆ

ಸಲ್ಲಿಸುತ್ತಾರೆ. ಇವರ ಸ್ಥಾನ ವಿಭಿನ್ನವಾಗಿದೆ. ತ್ರಿಕಾಲವು ದಾನಮ್ಮನನ್ನು ಪೂಜಿಸುವ ಸಂದರ್ಭದಲ್ಲಿ ಮಂತ್ರ ಪಠಿಸುತ್ತಾರೆ. ತಮ್ಮ ಹಾಗೂ ಭಕ್ತರ ಇಷ್ಟಾರ್ಥವನ್ನು ದೇವರಲ್ಲಿ ವಿನಂತಿಸುತ್ತಾರೆ. ದಾನಮ್ಮನ ಪೂಜಾ ವಿಧಿವಿಧಾನಗಳಲ್ಲಿ ಇವರಿಗೆ ತಮ್ಮದೇ ಆದ ಸ್ಥಾನವಿದೆ. ಮುಂಜಾವಿನ ಸಮಯದಲ್ಲಿ ರುದ್ರಾಭಿಷೇಕ ಮಾಡಿ ಆರಾಧಿಸುವ ಸಂದರ್ಭದಲ್ಲಿ ಶ್ರೀರುದ್ರಮಂತ್ರ ಪಠಣದ ಕಾರ್ಯನಿರ್ವಹಿಸುತ್ತಾರೆ. ಮೈಲಿಗೆ ನಿಯಮಗಳನ್ನು ಮಾಡಲೇಬೇಕಾದ ಮತ್ತು ಮಾಡಬಾರದೆನ್ನುವ ಆಚಾರ–ವಿಚಾರಗಳನ್ನು ಮಡಿ–ಮೈಲಿಗೆ ನಿಯಮಗಳನ್ನು ಅರ್ಚಕರು ಪೂಜಾರಿ ವರ್ಗದವರ ಜೊತೆಗೆ ಚಾಚೂತಪ್ಪದೆ ವೈದಿಕರಂತೆ ಆಚರಿಸುತ್ತಾರೆ.

ದೇವಾಲಯದಲ್ಲಿ ಜರುಗುವ ವಿವಾಹ ಮಹೋತ್ಸವ, ಮಹಾಪೂಜೆ, ವೀಳ್ಯದೇಲೆ ಪೂಜೆ, ಸದ್ಭಕ್ತರ ಹರಕೆಗಳನ್ನು ನಡೆಸುವ ಸಂದರ್ಭದಲ್ಲಿ ಪೂಜಾರಿಗಳು ಇರಲೇಬೇಕು. ಆಯಾ ಸಂದರ್ಭಕ್ಕೆ ತಕ್ಕ ಹಾಗೆ ಮಂತ್ರ ಪಠಿಸಿ ಪ್ರಾರ್ಥಿಸುತ್ತಾರೆ. ಜಾತ್ರಾಮಹೋತ್ಸವ ಮೊದಲಾದ ಸಂದರ್ಭದಲ್ಲಿ ಇವರ ಉಪಸ್ಥಿತಿ ಅವಶ್ಯಕವಾಗಿರುತ್ತದೆ. ದಾನಮ್ಮ ದೇವಾಲಯದಲ್ಲಿ ದೇವಾಲಯ ಧರ್ಮದರ್ಶಿಗಳು ಇವರ ಉಪಜೀವನಕ್ಕೆಂದು ಬರುವ ಕಾಣಿಕೆಯಲ್ಲಿ ಇಂತಿಷ್ಟು ಸಂಭಾವನೆಯನ್ನು ಸಲ್ಲಿಸುತ್ತಾರೆ. ಅರ್ಚಕರಿಲ್ಲದೇ ದಾನಮ್ಮದೇವಿಯ ದೇವಾಲಯದಲ್ಲಿ ಯಾವ ಕಾರ್ಯಗಳು ನಡೆಯುವುದಕ್ಕೆ ಅವಕಾಶವಿರುವುದಿಲ್ಲ.

ಆಧುನಿಕತೆಯಲ್ಲಿ ದಾನಮ್ಮ

ದಾನಮ್ಮ ಶರಣೆಯು ಮನುಕುಲದ ಏಳ್ಗೆಗೆ ಅನನ್ಯವಾದ ಮಾನವೀಯತೆಯನ್ನು ಮೆರೆದಳು. ಇಂತಹ ಸಂದರ್ಭದಲ್ಲಿ ಧಾರ್ಮಿಕ ನೆಲೆಯಲ್ಲಿರುವ ದಾನಮ್ಮನು ಆಧುನಿಕ ಜಗತ್ತಿಗೆ ಪ್ರಸ್ತುತವೆ? ಎಂಬ ಚಿಂತನೆ ಮೂಡುವುದು ಸಹಜ. ಪ್ರಪಂಚದಲ್ಲಿ ಧರ್ಮ ಆಚಾರಗಳಿಲ್ಲದ ದೇಶಗಳಿಲ್ಲ, ಜನಾಂಗಗಳಿಲ್ಲ. ಯಾವುದೇ ಒಂದು ಧರ್ಮವು ಜನರನ್ನು ಸಮಾನತೆ, ತನ್ನಂತೆ ಬೇರೆಯವರನ್ನು ಕಾಣುವ ದೃಷ್ಟಿ, ಸರ್ವರನ್ನು ಮುನ್ನಡೆಸುವ ಮನೋಭಾವ, ಸತ್ಯವೇ ದೇವರೆಂದು ನಂಬುವ ಮೊದಲಾದ ಮಾನವೀಯ ಮೌಲ್ಯಗಳನ್ನು ಬಿಂಬಿಸುತ್ತವೆ. ಆದರೆ ಜಾಗತೀಕರಣದ ಇಂದಿನ ಧರ್ಮ ಸಂಘರ್ಷದ ಕಾಲದಲ್ಲಿ ಒಂದು ಧರ್ಮ ಮತ್ತೊಂದು ಧರ್ಮಕ್ಕೆ ಪ್ರಬಲ ಸವಾಲುಗಳನ್ನು ಒಡ್ಡಿ, ಪ್ರಬಲ ಸ್ಪರ್ಧಿಗಳಾಗಿ ಮಾನವನ ಮೇಲೆ ವಿಜಯ ಸಾಧಿಸಲು ಹೊರಟಿವೆ. ಧರ್ಮದ ವ್ಯಾಪಕವಾದ ಅರ್ಥ ಸಂಕುಚಿತಗೊಂಡಿದೆ.

ದಾನಮ್ಮ ಶರಣೆಯು ಅನ್ಯಾಯದ ವಿರುದ್ಧ ಪ್ರತಿಭಟಿಸಿ ಸರ್ವಸಮಾನತೆಯ ಮನೋಭಾವದಿಂದ, ಸರ್ವ ಮಾನವರು ಒಂದೇ, ಮನುಜಮತ, ವಿಶ್ವಪಥ ಎಂಬ ತತ್ವದಡಿ ಧರ್ಮವನ್ನು ಉಳಿಸಿದಳು. ಇಂದಿನ ಆಧುನಿಕ ಸಮಾಜದಲ್ಲಿ ಇಂತಹ ವಿಚಾರಧಾರೆ ಇದ್ದರೂ ಧಾರ್ಮಿಕ ರಂಗದಲ್ಲಿ ಮಹಿಳೆಯರನ್ನು ಕುರಿತು ವಿಭಿನ್ನವಾಗಿದೆ. ಭಾರತಿಯ ಹಿಂದೂ ಧರ್ಮದ ಸಮಾಜದಲ್ಲಿ ಮಹಿಳೆಯರನ್ನು 'ಮಾತೃದೇವೋಭವ' ಎಂದಿದ್ದಾರೆ. ಹೆಣ್ಣನ್ನು ದೇವಿಸ್ವರೂಪಳು ಎಂದು ಭಾವಿಸಿದ್ದಾರೆ. ಆದರೆ ಇನ್ನೊಂದಡೆ ಮಹಿಳೆ ಸ್ವತಂತ್ರ್ಯಕ್ಕೆ ಅರ್ಹಳಲ್ಲ ಎಂಬ ಸಂಕುಚಿತ ಮನೋಭಾವ ಬೇರೂರಿದೆ. ಈ ಹಿನ್ನಲೆಯಲ್ಲಿ ಇಂದಿನ ಆಧುನಿಕ ಜಗತ್ತಿನಲ್ಲಿ ಕೂಡ ದಾನಮ್ಮ ಬೋಧಿಸಿದ ಮೌಲ್ಯಗಳು ಅವಶ್ಯವೆಂದು ತೋರುತ್ತವೆ. ದಾನಮ್ಮ ಬಸವಧರ್ಮದಲ್ಲಿ ಮಹಿಳೆಗೆ ಇರುವ ಸ್ವಾತಂತ್ರ್ಯವನ್ನು ಎತ್ತಿ ಹೇಳಿ ಅದನ್ನು ಮುಂದುವರಿಸುವಂತೆ ಪ್ರತಿಪಾದಿಸಿದಳು.

ಆಧುನಿಕ ಜಗತ್ತಿನ ಕ್ಷಿಪ್ರ ಪ್ರಗತಿಯಿಂದ ಮನುಷ್ಯನ ಸ್ವಾರ್ಥಕ್ಕೆ ಕಡಿವಾಣವಿರದೆ ಬಯಕೆಗಳು ಬೇಗನೆ ಈಡೇರಬೇಕೆಂಬ ತೀವ್ರತರ ಹಂಬಲ ಮನುಷ್ಯ ಸ್ವಭಾವದಲ್ಲಿ ಮೂಡುತ್ತದೆ. ಅವುಗಳಿಗಾಗಿ ಮತ್ತು ತನ್ನ ಸಾಮಾಜಿಕ ಸಮಸ್ಯೆಗಳ ಪರಿಹಾರಕ್ಕಾಗಿ ಮನುಷ್ಯ ಪ್ರಯತ್ನಿಸಿ ವಿಫಲನಾದಾಗ, ಹರಕೆ, ಮಂತ್ರ, ತಂತ್ರಗಳಿಗೆ ಮೊರೆಹೋಗುತ್ತಾನೆ. ವಿಘ್ನ ಪರಿಹಾರಕ್ಕೆ ಸಿದ್ಧನಾಗುತ್ತಾನೆ. ದೈವದ ಮೇಲೆ ನಿಷ್ಠೆ ಇಟ್ಟು ಪ್ರಾರ್ಥಿಸುತ್ತಾನೆ. ದೇವರ ಪ್ರಭಾವದಿಂದ ಕಷ್ಟ ಪರಿಹಾರವಾದರೆ ಆ ದೈವದ ಮೇಲೆ ಮತ್ತಷ್ಟು ವಿಶ್ವಾಸ ಹೆಚ್ಚುತ್ತದೆ. ಶೈವಧರ್ಮದ ಜನಾಂಗವು ಪ್ರಾಚೀನ ಕಾಲದಿಂದ ಇಂದಿನವರೆಗೆ ಇಂತಹ ಪೌರಾಣಿಕ ನೆಲೆಯ ಮನೋಭಾವವನ್ನು ಹೊಂದಿದೆ. ಅನೇಕ ವೀರಶೈವ ಮತಗಳ ಕುಲದೈವಗಳೆಲ್ಲವೂ ವೀರಭದ್ರ, ಶ್ರೀಶೈಲಮಲ್ಲಿಕಾರ್ಜುನ, ಮೈಲಾರಲಿಂಗ, ಕೊಲ್ಲಾಪುರ ಮಹಾಲಕ್ಷ್ಮಿ, ಮೊದಲಾದವು ಪೌರಾಣಿಕ ನೆಲೆಯಲ್ಲಿ ರುವುದು ಸಾಕ್ಷಿಯಾಗಿದೆ. ಶೈವಧರ್ಮವು ಕಾಲಕಾಲಕ್ಕೆ ಪರಿವರ್ತಿತ- ವಾದರೂ ಸಂಪ್ರದಾಯವೆಂಬದು ಆಚರಣೆಯ ಅಡಿಯಲ್ಲಿ ಮುಂದುವರೆದಿದೆ. ಇಂದಿಗೂ ಜನರ ಮನೋಭಾವವು ವೈಚಾರಿಕ ಪ್ರಜ್ಞೆಯಲ್ಲಿ ಪರಿವರ್ತನೆಯಾಗದೆ ಇನ್ನೂ ನಾನಾ ರೀತಿಯಲ್ಲಿ ಪೌರಾಣಿಕ ನೆಲೆಯಲ್ಲಿಯೆ ನಿಂತಿರುವುದು ಕಾಣುತ್ತಿದ್ದೇವೆ.

ದಾನಮ್ಮನ ಸದ್ಭಕ್ತರು 'ಅಜ್ಜ ನೆಟ್ಟ ಆಲದ ಮರಕ್ಕೆ ಜೋತು ಬಿದ್ದಂತೆ' ಬರಿ ದೇವಿಯಾಗಿ ಆರಾಧಿಸುತ್ತಿರುವರೇ ? ಯಾಂತ್ರಿಕತೆಯಾಗಿದೆಯೇ ? ಎಂಬ ಪ್ರಶ್ನೆ ಇದೆ. ಆದರೆ ದಾನಮ್ಮ ಶರಣೆಯ ಜೀವನದ ನೈಜ ತತ್ತ್ವಸಿದ್ಧಾಂತ ಅರಿತು ಬಾಳಿದರೆ ಆಕೆಯ ದರ್ಶನ ಆಧುನಿಕ ಸಮಾಜಕ್ಕೆ ಉಂಟಾಗುತ್ತದೆ. ಈ ನೆಲೆಯಲ್ಲಿ ಮಹಿಳೆಯರು

ಅರಸುವುದು ಅವಶ್ಯವೆಂದು ತೋರುತ್ತದೆ. ಶಿವಯೋಗದ ಔನತ್ಯವನ್ನು ಓರ್ವ ಸ್ತ್ರೀ ಎಲ್ಲ ಕಷ್ಟಗಳನ್ನು ನೀಗಿ ಸಾಧಿಸಿರುವುದು ಅಭಿಮಾನದ ಸಂಗತಿ. ದಾನಮ್ಮನು ಸರ್ವಜನಾಂಗ ಒಂದೇ ಎಂದು ಪರಿಭಾವಿಸಿ ವರ್ಗ, ವರ್ಣ, ಲಿಂಗ, ಜಾತಿರಹಿತ ಸಮಾಜ ನಿರ್ಮಾಣದಲ್ಲಿ ಇಷ್ಟಲಿಂಗ ದೀಕ್ಷೆ ನೀಡಿದಳು. ಸಮಾನ ಮನೋಭಾವದ ಹಾಗೂ ದುಷ್ಟ ಜನರ ಮನಪರಿವರ್ತಿಸುವ ಎದೆಗಾರಿಕೆಯ ಮೌಲ್ಯಗಳು ಇಂದಿನ ಆಧುನಿಕ ಸಮಾಜಕ್ಕೆ ಬೇಕಾಗಿದೆ. ಮೌಲ್ಯಗಳ ಅಧಃಪತನದ ಇಂದಿನ ಕಾಲದಲ್ಲಿ ದಾನಮ್ಮನು ಆಧುನಿಕ ಸ್ತ್ರೀಯರಿಗೆ ಗುರುವಾಗಿ ಕಾಣುತ್ತಾಳೆ.

ದಾನಮ್ಮನ ದಿಟ್ಟ ಮನೋಭಾವ ಸರ್ವಕಾಲಕ್ಕೂ ಮಹಿಳೆಯರಿಗೆ ದಾರಿದೀಪವಾಗಿದೆ. ಆಧುನಿಕ ಮಹಿಳೆಯರ ಮೇಲೆ ದೌರ್ಜನ್ಯ ಕೊಲೆ, ವರದಕ್ಷಿಣೆ ಮುಂತಾದ ಪಿಡುಗುಗಳು, ಮಹಿಳೆಯರ ಮೇಲೆ ಆಸಿಡ್ ದಾಳಿ ನಡೆಸಿ ಅನ್ಯಾಯ ನಡೆಸುವದು, ಇಂತಹ ಸಾಮಾಜಿಕ ಪಿಡುಗುಗಳನ್ನು ತಡೆಯಲು ದಾನಮ್ಮನಂತಹ ವೀರಮಹಿಳೆಯರ ಆದರ್ಶತೆಯ ಕಡೆ ಮುಖಮಾಡಬೇಕು. ಮಹಿಳೆ ಪುರುಷನಷ್ಟು ಸಮಾನವಾಗಿ ನೆಲೆಯೂರಲು ದಾನಮ್ಮನ ಧೀರತೆಯ ಮಾರ್ಗ ಸಮಾಜದಲ್ಲಿ ಮೂಡಬೇಕಾಗಿದೆ. ಇಪ್ಪತ್ತನೆಯ ಶತಮಾನದಲ್ಲಿ 'ಮದರ್ ತೇರಸಾ' ಅಂತವರ ದೀನ ದಲಿತರ ಸೇವೆ ಸ್ಮರಣೀಯವೆನಿಸಿದೆ. ಆದರೆ ಯಾವುದೇ ಸೌಲಭ್ಯಗಳು ಇಲ್ಲದ ಕಾಲದಲ್ಲಿ ೯೦೦ ವರ್ಷಗಳ ಹಿಂದೆ ದೀನ ದಲಿತರ ನೊಂದು ಬೆಂದವರ ಸೇವೆ ಮಾಡುತ್ತ, ಕಾಯಕ, ದಾಸೋಹತತ್ತ್ವದ ಮನೋಭಾವದಡಿ ಸಮಾಜವನ್ನು ಮುನ್ನಡೆಸಿದ ದಾನಮ್ಮನ ಬದುಕಿನ ಆದರ್ಶದ ಆಚರಣೆಗಳನ್ನು ನೆನಪಿಸಿಕೊಳ್ಳುವದು ಮರೆತ್ತಿದ್ದೇವೆ. ಬರೀ ಆಡಂಬರದ ಪೂಜೆ ಉರುಳುಸೇವೆಯಂಥ ಆಚರಣೆಗೆ ಮಾತ್ರ ಸೀಮಿತವಾಗಿಸಿ ನಮ್ಮ ಬೇಡಿಕೆಗಳನ್ನು ಪೂರ್ಣಗೊಳಿಸಿದರೆ ಸಾಕೆನ್ನುವ ಹಂತದಲ್ಲಿರುವುದು ದುರಂತವೆನಿಸುತ್ತದೆ.

ಧಾರ್ಮಿಕ ದೈವೀಸಾಕ್ಷಾತ್ಕಾರದ ನೆಲೆಗಟ್ಟಿನಲ್ಲಿ ಗುಡ್ಡಾಪುರದ ದಾನಮ್ಮನ ಮೂರ್ತಿಯನ್ನು ದೇವರೆಂದು ಪರಿಭಾವಿಸಿ ಪೂಜಿಸಬೇಕೆ? ಆಧುನಿಕ ಕಾಲದ ಕ್ಷಿಪ್ರ ಬೆಳವಣಿಗೆಯಲ್ಲಿ ದಾನಮ್ಮನ ಅವಶ್ಯಕತೆಯಾದರೂ ಏನು? ಎಂದು ವಿಚಾರಿಸುತ್ತ, ಪರಿಭಾವಿಸುವ ಮಾನವನ ಅಂತರಂಗದಲ್ಲಿ ಇಂತಹ ಪ್ರಶ್ನೆಗಳಿಗೆ ದಾನಮ್ಮನ ಚಾರಿತ್ರಿಕ ಜೀವನವು ಉತ್ತರ ಒದಗಿಸುತ್ತದೆ. ಯಂತ್ರ-ತಂತ್ರಗಳ ಸಾಧನೆಯಿಂದ ಮನುಷ್ಯ ಅಂತರಿಕ್ಷದಲ್ಲಿ ಉಪಗ್ರಹಗಳ ಮೇಲೆ ತೇಲಾಡುತ್ತಿದ್ದಾನೆ. ದೂರದರ್ಶನ, ದೂರಸಂಪರ್ಕ, ಸಂಚಾರವಾಣಿ, ಗಣಕಯಂತ್ರ, ಮೋಟಾರು, ವಾಹನ, ವಿದ್ಯುಚ್ಛಕ್ತಿ ಮೊದಲಾದ ಅವಶ್ಯಕತೆಗಳಿಂದ ಮನುಷ್ಯನು ಅವುಗಳ ದಾಸನಾಗಿದ್ದಾನೆ. ವಿಲಾಸಜೀವನ ನಡೆಸಿ ಭೋಗಜೀವಿಯಾದನು. ಆದರೆ ತನ್ನ ಜೀವನದ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು

ನೆಮ್ಮದಿ ಪಡೆಯಲು ಹೆಣಗಾಡುತ್ತಿದ್ದಾನೆ. ಜೀವನ ಪರ್ಯಂತ ಯಾಂತ್ರಿಕ ಬದುಕನ್ನು ನಡೆಸಿ, ಆಧುನಿಕ ಸಮಾಜದಲ್ಲಿ ತನ್ನ ಮನಸ್ಸನ್ನು ಅಶಾಂತಿಯ ಗೂಡನ್ನಾಗಿಸಿಕೊಂಡು, ಮಾನಸಿಕ ವೇದನೆಯಲ್ಲಿದ್ದಾನೆ. ವರ್ತಮಾನ, ಭೂತ, ಭವಿಷ್ಯತ್ತಿನಲ್ಲಿ ದಾನಮ್ಮ ಶರಣೆ ಅಮರಳಾಗಿ ಪ್ರಸ್ತುತ ಸಮಾಜದಲ್ಲಿ ನಿಂತಿದ್ದಾಳೆ. ದಾನಮ್ಮ ಶರಣೆಯ ದಿವ್ಯ ಭವ್ಯ ವ್ಯಕ್ತಿತ್ವದ ಪರಿಕಲ್ಪನೆ ಜಾಗತೀಕರಣ ಮತ್ತು ನಗರೀಕರಣದ ವ್ಯವಸ್ಥೆಯಲ್ಲಿಯೂ ಪ್ರಭಾವಶಾಲಿಯಾಗಿದೆ.

ದಾನಮ್ಮನ ಬದುಕು ಅಧ್ಯಾತ್ಮದ ಶಿವಯೋಗ ಸಾಧನೆ ಮತ್ತು ಸಾಮಾಜಿಕ ಸೇವೆಯು ಅಧರ್ಮದ ವಿರುದ್ಧ ಹೋರಾಡುವ ಕೆಚ್ಚೆದೆಯೊಂದಿಗೆ, ಶಾಂತಿ ಸಹಬಾಳ್ವೆಯ ಬದುಕಾಗಿದೆ. ಸರ್ವ ಭೇದ–ಭಾವ ಮರೆತು ಇಂದಿನ ಯುವಜನತೆ ಗುಡ್ಡಾಪುರ ದಾನಮ್ಮನಿಂದ ಆಕರ್ಷಿತರಾಗಿದ್ದಾರೆ. ಆಧುನಿಕ ಯಾಂತ್ರಿಕ ಬದುಕಿನಲ್ಲಿ ಉದ್ಯೋಗ ವಿವಾಹ ಕೌಟುಂಬಿಕ ಸಮಸ್ಯೆಗಳು ಬದುಕು ಕಟ್ಟಬೇಕೆಂಬ ಅದಮ್ಯ ಆಸೆ ಅವರಲ್ಲಿದೆ. ಆದರೆ ಯುವಜನತೆಗೆ ಎಲ್ಲಾ ಸಮಸ್ಯೆಗಳ ಪರಿಹಾರಕ್ಕೆ ಯೋಗ್ಯ ಮಾರ್ಗದರ್ಶನವಿಲ್ಲ. ನಿಶ್ಚಿತ ಗುರಿ ಸಾಧಿಸಲು ಸಾಧ್ಯವಾಗುತ್ತಿಲ್ಲ. ಇತ್ತೀಚೆಗೆ ಜಾಗತೀಕರಣದ ಭರದಲ್ಲಿ ಹೆಚ್ಚಿನ ಸಂಖ್ಯೆಯ ಯುವಕರು ದುಶ್ಚಟಗಳಿಗೆ ಬಲಿಯಾಗುತ್ತಿದ್ದಾರೆ. ಇದನ್ನು ತಪ್ಪಿಸಲು ದಾನಮ್ಮನ ಜೀವನವು ಯುವಕರಿಗೆ ಸರಿಯಾದ ದಾರಿ ತೋರಿಸುತ್ತದೆ. ಪ್ರಸ್ತುತ ಸಂದರ್ಭದಲ್ಲಿ ದಾನಮ್ಮನ ಆಧ್ಯಾತ್ಮಿಕ ಬದುಕಿನ ಸಿಂಚನ ಯುವಜನತೆಯ ಮೇಲೆ ಪರಿಣಾಮ ಉಂಟಾಗಿದೆ. ಯುವಜನತೆಗೆ ಶರಣೆಯ ಕುರಿತು ಭಕ್ತಿ ಶ್ರದ್ಧೆಗಳು ಇಮ್ಮಡಿಗೊಳ್ಳಲೆಂಬ ಆಶಯವಿದೆ.

ಇತ್ತೀಚಿನ ದಿನಗಳಲ್ಲಿ ಬಸವಕಲ್ಯಾಣದಲ್ಲಿಯೂ ಬಸವತತ್ತ್ವ ಪ್ರಚಾರಕರೂ ಕೂಡ ದಾನಮ್ಮ ಶರಣೆಯ ಬಗ್ಗೆ ಜನಜಾಗೃತಿ ಮೂಡಿಸುವ ನಿಟ್ಟಿನಲ್ಲಿ ವಿವಿಧ ಕಾರ್ಯಕ್ರಮಗಳು ಕೈಗೊಳ್ಳತ್ತಿದ್ದಾರೆ. ಬಸವಕಲ್ಯಾಣದಲ್ಲಿನ ಭಾಗದಲ್ಲಿ ಶರಣೆ ದಾನಮ್ಮನ ದಾಸೋಹ ಮತ್ತು ಸೇವೆ ಗೈದಿರುವ ತಪೋಸ್ಥಾನವನ್ನು ಅಭಿವೃದ್ಧಿಗೊಳಿಸಬೇಕು ಎಂದು ಸರಕಾರಕ್ಕೆ ಮನವಿಮಾಡಿಕೊಳ್ಳಲಾಗುತ್ತಿದೆ. ನಾಡಿನಾದ್ಯಂತ ಅದರಲ್ಲಿ ಉತ್ತರ ಕರ್ನಾಟಕದ ಯುವಜನತೆ ಹೆಚ್ಚಿನ ಸಂಖ್ಯೆಯಲ್ಲಿ ಗುಡ್ಡಾಪುರಕ್ಕೆ ಪಾದಯಾತ್ರೆ ಕೈಗೊಳ್ಳುತ್ತಿದ್ದಾರೆ. ದೇವಿಯ ದರ್ಶನ ಪಡೆದುಕೊಳ್ಳುತ್ತಿದ್ದಾರೆ. ಜೀವನದ ಆದರ್ಶಗಳಿಂದ ಯುವಜನತೆಗೆ ಒಂದು ಮಾರ್ಗ ತೋರಿಸಬೇಕಾಗಿದೆ. ಆಧುನಿಕ ಜಾಗತೀಕರಣ ಸಂದರ್ಭದಲ್ಲಿ ಧರ್ಮ, ಮಹಿಳೆ ಯುವಜನತೆ, ಕಲ್ಯಾಣಮಹೋತ್ಸವ, ಪಾದಯಾತ್ರೆ, ನಗರೀಕರಣ ಹೀಗೆ ಹತ್ತು ಹಲವು ವೈಶಿಷ್ಟ್ಯಗಳೊಂದಿಗೆ ಅವಲೋಕಿಸಿದರೆ ಮನುಕುಲಕ್ಕೆ ಶರಣೆ

ದಾನಮ್ಮನ ಆದರ್ಶ ಜೀವನದ ಅವಶ್ಯಕತೆಯಿದೆ.

ಗುಡ್ಡಾಪುರ ದಾನಮ್ಮ ಪ್ರಾಚೀನ ಕಾಲದಲ್ಲಿ ವರದಾನಿಯಾಗಿ, ದಾನಚಿಂತಾಮಣಿಯಾಗಿ, ದಾನದಾಸೋಹಿಯಾದಳು. ಇಂದು ದಾನಮ್ಮನ ಹೆಸರಿನಲ್ಲಿ ದೇವಾಲಯದ ಆಡಳಿತ ಮಂಡಳಿಯು ದಾಸೋಹಸೇವೆ, ಸದ್ಭಕ್ತರಿಗೆ ನಿರ್ಗತಿಕರಿಗೆ ನೆರವೇರಿಸುತ್ತಿರುವುದು ಶ್ಲಾಘನೀಯವಾಗಿದೆ. ಅನೇಕ ಶಿಕ್ಷಣ ಸಂಸ್ಥೆಗಳು ದಾನಮ್ಮನ ಹೆಸರಿನಲ್ಲಿ ವಿದ್ಯಾದಾನ ನೀಡುತ್ತಿವೆ. ಅನೇಕ ಪರೋಪಕಾರಗುಣದ ಪಾರಂಪರಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು ದಾನಮ್ಮನ ನಾಮಶಕ್ತಿಯಿಂದ ಜರುಗುತ್ತಿವೆ. ಇವೆಲ್ಲವೂ ಆಧುನಿಕ ಸಮಾಜದಲ್ಲಿ ದಾನಮ್ಮನ ಪ್ರಭಾವವನ್ನು ವ್ಯಕ್ತಪಡಿಸುತ್ತವೆ.

ಗುಡ್ಡಾಪುರದಲ್ಲಿನ ಮೂಲ ದೇವಾಲಯ ಹೊರತುಪಡಿಸಿ ಇನ್ನಿತರ ಸ್ಥಳಗಳಲ್ಲಿ ದಾನಮ್ಮನ ದೇವಾಲಯದ ನಿರ್ಮಾಣ ಕಾರ್ಯ ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೆ ನಡೆದಿದೆ. ಪ್ರಾಚೀನ ಕಾಲದಲ್ಲಿ ದೇವಾಲಯ ನಿರ್ಮಿಸಿದ ತಾಳಿಕೋಟೆ, ವಿಜಯಪುರ, ಮುಂತಾದ ಕಡೆಗಳಲ್ಲಿ ದಾನಮ್ಮನ ದೇವಾಲಯ ನಿರ್ಮಿಸಿದ್ದಾರೆ. ಕೆಲವು ಸ್ಥಳಗಳಲ್ಲಿ ದೇವಾಲಯ ನಿರ್ಮಾಣಗೊಂಡಿವೆ. ಇನೂ ಕೆಲವು ಕಡೆ ನಿರ್ಮಿಸುವ ಯೋಜನೆ ಹಾಕಿಕೊಂಡಿದ್ದಾರೆ ಇಲ್ಲಿಯವರೆಗೆ ಸುಮಾರು ೨೫ ಕ್ಕೂ ಹೆಚ್ಚು ಸ್ಥಳಗಳಲ್ಲಿ ದಾನಮ್ಮನ ದೇವಾಲಯಗಳು ನಿರ್ಮಾಣವಾಗಿರಬಹುದು ಎನಿಸುತ್ತದೆ.

ಆಧುನಿಕ ಪರಿಸರದಲ್ಲಿ ಸರ್ವಧರ್ಮ ಜಾತಿಯ ಸದ್ಭಕ್ತರು ದಾನಮ್ಮದೇವಿಯನ್ನು ಶ್ರದ್ಧಾ ಭಕ್ತಿಯಿಂದ ಪೂಜಿಸುತ್ತಾರೆ. ದಾನಮ್ಮದೇವಿಯ ಸ್ಮರಣೆ ಆಶೀರ್ವಾದ ಸದಾಕಾಲ ಇರಬೇಕು ಎಂಬ ಭಾವದಿಂದ ತಮ್ಮ ಮಕ್ಕಳಿಗೆ ಶಿಕ್ಷಣ ಸಂಸ್ಥೆಗಳಿಗೆ ಅಂಗಡಿಗಳಿಗೆ ಇನ್ನಿತರ ಕಡೆಗಳಲ್ಲಿ ದಾನಮ್ಮನ ನಾಮಕರಣ ಮಾಡುವುದು ಪ್ರಚಲಿತದಲ್ಲಿದೆ. ಆಧುನಿಕತೆಯಲ್ಲಿ ಸಾಮೂಹಿಕ ಕಲ್ಯಾಣ ಮಹೋತ್ಸವವನ್ನು ದುಂದುಗಾರಿಕೆ ಗಣಿಗಾರಿಕೆಗೆ ಕಡಿವಾಣ ಹಾಕಲು ಏರ್ಪಡಿಸುತ್ತಾರೆ. ಗುಡ್ಡಾಪುರ ದೇವಾಲಯದಲ್ಲಿ ಸರ್ವಧರ್ಮ ಜಾತಿಯವರು ಒಪ್ಪುವ ಹಾಗೆ ಕಲ್ಯಾಣ ಮಹೋತ್ಸವವನ್ನು ಕೊಳ್ಳುತ್ತಿರುವುದು ಅಭಿನಂದಾರ್ಹವಾಗಿದೆ.

ದಾನಮ್ಮನ ಜೀವನವು ಚಲನಚಿತ್ರದ ಮೂಲಕ ಮಾಧ್ಯಮದಲ್ಲಿ ಚಿತ್ರೀಕರಣಗೊಂಡಿರುವುದು ಸ್ತುತ್ಯರ್ಹವಾಗಿದೆ. ಆದರ್ಶತೆಯ ಮೌಲ್ಯಗಳು ನಶಿಸುತ್ತಿರುವ ಇಂತಹ ಕಾಲದಲ್ಲಿ, ಭಕ್ತಿ ಪ್ರಧಾನ ಚಿತ್ರಗಳು ಬಿಡುಗಡೆಗೊಳ್ಳುತ್ತಿರುವದು ವಿರಳವಾಗಿದೆ. ಅಂಥದರಲ್ಲಿ ದಾನಮ್ಮನ ಚಲನಚಿತ್ರವನ್ನು ನಿರ್ಮಿಸಿದ ನಿರ್ಮಾಪಕರಿಗೆ ಸಾಕಷ್ಟು

ಹಣ ಕೂಡಿಸಲು ಸಾಧ್ಯವಾಗದೆ ಇದ್ದಿರಬಹುದು. ಅದರೆ ನಿರ್ಮಾಪಕರಿಗೆ ಮನಸ್ಸಿಗೆ ನೆಮ್ಮದಿ ಸಿಗುವಂಥ ಭಕ್ತಿಪ್ರದಾಯಕ ಚಿತ್ರವಿದಾಗಿದೆ. ದಾನಮ್ಮದೇವಿ ಚಲನಚಿತ್ರ ಪುರಾಣ ಕೃತಿಗಳನ್ನು ಆಧರಿಸಿ ನಿರ್ಮಿಸಿದ್ದಾರೆ. ಅಗತ್ಯ ಸಂದರ್ಭದಲ್ಲಿ ನಿರ್ದೇಶಕರು ಕಲ್ಪನೆಗೆ ಆಸ್ಪದ ನೀಡಿದ್ದಾರೆ. ಚಿತ್ರದ ಮೇಲೆ ಶಿವ ಕವಿಯ ಕೃತಿ ಹಾಗೂ ಶಾಂತಾದೇವಿ ಮಾಳವಾಡ ದಾನ ದಾಸೋಹಿ ದಾನಮ್ಮ ಗ್ರಂಥದ ಪ್ರಭಾವವಿದೆ.

ಚಲನ ಚಿತ್ರದ ಕಥಾವಸ್ತು ಮತ್ತು ತಂತ್ರವೆಂದರೆ ಚಲನಚಿತ್ರದ ಪೂರ್ವಭಾಗದಲ್ಲಿ ಶರಣೆ ದಾನಮ್ಮ ಶರಣು ನಿನಗೆ ಆ ಶರಣರು ಬೆಳಗಿದ ಭಕ್ತಿ ಹೆಸರಿನ ಕಿರಣ್ ಅದಕ್ಕಾಗಿ ಇದು ಬಸವನಗುಡಿಯಲ್ಲಿ ನಿಲ್ಲಿಸಿದ ಗಾದೆಯಿದು ಎಂದು ದಾನಮ್ಮನ್ನು ಹಾಡಿಹೊಗಳುವ ಗೀತೆಯೊಂದಿಗೆ ಚಿತ್ರಕಥೆ ಪ್ರಾರಂಭಗೊಳ್ಳುತ್ತದೆ. ಕುಮಾರಸ್ವಾಮಿಗೆ ಅನಂತರ ಸನ್ಮಾನ ಮಗಳ ಜನಪದ ಕಥೆಯನ್ನು ಪ್ರಾರಂಭಿಸುವ ಪೂರ್ವದಲ್ಲಿ ಜಗದಗಲ ಮುಗಿಲಗಲ . ಎಂಬ ವಚನಗೀತೆ ಜೋಡಿಸಿರುವುದು ಪರಿಣಾಮಕಾರಿಯಾಗಿದೆ.

ಚಲನಚಿತ್ರದಲ್ಲಿ ಶರಣ ಸಂತಾನ ದಾನಮ್ಮನ ಚರಿತ್ರೆಯನ್ನು ಪರಿಣಾಮಕಾರಿಯಾಗಿ ಬಿಂಬಿಸುವ ಮೂಲಕ ಹಂಸಲೇಖರು ಭಕ್ತಿಸಂಗೀತಕ್ಕೆ ಜೀವತುಂಬಿದ್ದಾರೆ. ಭಕ್ತಿ ಪ್ರಧಾನ ಚಲನಚಿತ್ರವಾದ ಕಾರಣ ಅನುಭಾವದ ವಚನ ಹಾಗೂ ಸ್ವರವಚನ ಸಾಹಿತ್ಯ, ಸಂಗೀತ, ಚಿತ್ರಕಥೆಯಲ್ಲಿ ಮನಸೆಳೆಯುತ್ತವೆ. “ಈ ಮಾತು ಕೇಳಿ ಬಲು ಮಾಯ, ತೂಕ ಮಾಡಿ ಹೇಳತೇನ್ರಿ ನ್ಯಾಯ. ಜೀವಕ್ಕೆ ಅನುತ್ತಿದೆ ದೇಹ ಬಿಟ್ಹೋಗ ಬ್ಯಾಡ ಮಾರಾಯ.” ಎಂಬ ಅಧ್ಯಾತ್ಮದ ಗೀತೆಯನ್ನು ಸಂಗೀತ ಮೇಳದೊಂದಿಗೆ ಪರಿಣಾಮಕಾರಿಯಾಗಿ ಹಾಡಿದ್ದಾರೆ. ಈ ಗೀತೆಯ ಸಾಲುಗಳು ಪ್ರೇಕ್ಷಕನ ಮನಸ್ಸಿನಲ್ಲಿ ಮತ್ತೆ ಮತ್ತೆ ಗುಂಯಿಗುಡುತ್ತವೆ. ಚಲನಚಿತ್ರದಲ್ಲಿ ವೀರಶೈವ ತತ್ತ್ವಗಳ ಸಾರವನ್ನು ಹಾಗೂ ಜನಪದ ಶೈಲಿಯ ಸಂಭಾಷಣೆಯನ್ನು ಅಳವಡಿಸಲಾಗಿದೆ. ಅಲ್ಲಲ್ಲಿ ವಚನಗಳ ಆಂತರ್ಯದ ಉಡುಗೆ ತೊಟ್ಟು ಸಂಭಾಷಣೆಯನ್ನು ಕೇಳುಗ ಪ್ರೇಕ್ಷಕನ ಮನತಣಿಸುತ್ತದೆ. ಸಿದ್ಧರಾಮರು ಬಳಸುವ ಪದಪ್ರಯೋಗಗಳು ಅರ್ಥಪೂರ್ಣವಾಗಿವೆ. 'ಬಸವನೆಂಬ ಬಳ್ಳಿಯಲ್ಲಿ ಮತ್ತೊಂದು ಬಾಡದ ಹೂ ಅರಳಿದೆ' ಎಂದು ದಾನಮ್ಮ ಶರಣೆಯನ್ನು ಹೊಗಳುವ ಪರಿ ಮಹೋನ್ನತವಾದುದಾಗಿದೆ.

ಧ್ವನಿಸುರುಳಿಗಳಲ್ಲಿ ದಾನಮ್ಮ

ಯಾಂತ್ರಿಕತೆಯ ಪ್ರಭಾವದ ಆಧುನಿಕ ಜಗತ್ತಿನಲ್ಲಿ ಕಲೆ-ಸಾಹಿತ್ಯ ವಾಸ್ತುಶಿಲ್ಪ, ಭಾರತೀಯ ಸಂಗೀತ ಕ್ಷೇತ್ರದಲ್ಲಿ ಸುಗಮ ಸಂಗೀತವು ಒಂದು ವಿಶಿಷ್ಟ ಪ್ರಕಾರವಾಗಿದೆ

ಆದರೆ ಆಧುನಿಕ ಪ್ರಭಾವದಿಂದ ಸುಗಮಸಂಗೀತವನ್ನು ಧ್ವನಿಸುರಳಿಗಳಲ್ಲಿ ಅಳವಡಿಸಿರುವುದು ವಿಶೇಷವಾಗಿದೆ. ಸಂಗೀತ ಕ್ಷೇತ್ರದಲ್ಲಿ ಧ್ವನಿಸುರುಳಿಗಳ ಯುಗವೆ ಪ್ರಾರಂಭವಾಗಿ ಮಾಡುವಿಕೆಯನ್ನು ಧ್ವನಿಮುದ್ರಣ ಗೊಳಿಸಿ ಸಂಗೀತದ ಪಡೆಯುತ್ತಿರುವುದು ವೈಶಿಷ್ಟ್ಯವಾಗಿದೆ. ಇನ್ನೊಂದೆಡೆ ಸಿಡಿ ಧ್ವನಿ ತಟ್ಟೆಗಳ ಮುಖಾಂತರ ಹಾಡಿನ ಮುದ್ರಿಕೆಯಿಂದ ದೃಶ್ಯಗಳನ್ನು ಅಳವಡಿಸುತ್ತಿರುವುದು ಮತ್ತೊಂದು ವಿಶೇಷವಾಗಿದೆ ಇಂಥ ಅನೇಕ ಧ್ವನಿಸುರುಳಿ ಮತ್ತು ಸಿಡಿಗಳು ಕುರಿತಾಗಿ ಹೊರಬಂದಿರುವುದು ಗಮನಾರ್ಹವಾಗಿದೆ.

ಕರ್ನಾಟಕದಲ್ಲಿ ದಾನಮ್ಮನ ಭಕ್ತಿಗೀತೆಗಳನ್ನು ಹಾಗೂ ದಂತಕಥೆ ಆಧಾರಿತ ನಾಟಕವನ್ನು ಸಿದ್ಧಪಡಿಸಿವೆ. ' 'ದಾನಮ್ಮ ಬಾರೆ ಮನೆಗೆ', 'ಕರ್ಮಯೋಗಿ ಸಿದ್ಧರಾಮರು', 'ಲೋಕಕ್ಕೆ ಬೆಳಕಾಯಿತು', 'ಗುಡ್ಡಾಪುರಕ್ಕೆ ಹೋಗೋಣ' 'ಕಣ್ತುಂಬ ನೋಡಿರೆ ದಾನಮ್ಮನ', 'ದಾನದ ದಾಸೋಹಿ', 'ವರನೊಂದು ಬೇಡಿ ಬಂದೆ', ' ಬಂದಳು ಶಿವಭಕ್ತೆ', ಇಂತಹ ಅನೇಕ ಭಕ್ತಿಗೀತೆಗಳು ಭಕ್ತರ ಭಕ್ತಿಯನ್ನು ಇಮ್ಮಡಿಗೊಳಿಸುತ್ತವೆ. ದಾನಮ್ಮ ಪ್ರಭಾವಶಾಲಿ ದೇವತೆಯಾಗಿ ಇಂದಿಗೂ ಜನಮಾನಸದಲ್ಲಿ ಇರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಹೀಗೆ ಅನೇಕ ರೀತಿಯಲ್ಲಿ ದಾನಮ್ಮನ ಸ್ತುತಿಸುವುದು ಹಾಗೂ ಭಕ್ತಿಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿರುವುದು ಮಹತ್ವಪೂರ್ಣವಾಗಿದೆ.

ಶಾಸನಗಳಲ್ಲಿ ದಾನಮ್ಮ

ದಾನಮ್ಮದೇವಿ ಪೌರಾಣಿಕ ವ್ಯಕ್ತಿಯಲ್ಲ, ಕವಿಗಳ ಕಲ್ಪನೆಯ ಕೂಸಲ್ಲ. ಐತಿಹಾಸಿಕ ವ್ಯಕ್ತಿಯಾಗಿದ್ದಾಳೆ. ರಾಜರು, ಮಾಂಡಲಿಕರು ಮೊದಲಾದವರಿಂದ ಮನ್ನಣೆ ಪಡೆದಿದ್ದಾಳೆ. ಅವಳು ಲಿಂಗೈಕ್ಯಳಾದ ನಂತರ ಅವಳ ಸ್ಮರಣೆಗೆ ಸಾಯಿದೇವನಿಂದ ದೇವಾಲಯ ಸ್ಥಾಪಿತವಾಗಿದೆ. ಅದಲ್ಲದೇ ಭೀಮಾನದಿಯ ತೀರದಲ್ಲಿ ಒಂದು ಗ್ರಾಮವನ್ನೇ ಅವಳ ಸ್ಮರಣಾರ್ಥವಾಗಿ ರಚಿಸಲಾಗಿದೆ. ಸಾಯಿದೇವನು ಇಲ್ಲಿಯ ಕೆಲವು ಭೂಮಿಗಳನ್ನು ಉಂಬಳಿಯಾಗಿ ಕೊಟ್ಟಿದ್ದಾನೆ. ದಾನಮ್ಮನು ಬಸವೇಶ್ವರರಿದ್ದ ಕಾಲದವಳೆಂಬ ಅಂಶಗಳು ಈ ಶಾಸನಗಳಿಂದ ತಿಳಿದು ಬರುತ್ತದೆ.

ದಾನಮ್ಮನನ್ನು ಕುರಿತ ನಾಲ್ಕಾರು ಶಿಲಾಶಾಸನಗಳನ್ನು ನಾವು ಇಂದಿಗೂ ನೋಡಬಹುದಾಗಿದೆ. 'ಶಿವತತ್ತ್ವಚಿಂತಾಮಣಿ' ಯಂಥ ಕಾವ್ಯದಲ್ಲಿ ಧರ್ಮರಕ್ಷಕಳಾಗಿ, ವೀರಗಣಾಚಾರ ವೃತ್ತಿಯ ವೀರನಾರಿಯಾಗಿ ಕಂಗೊಳಿಸಿದ್ದಾಳೆ. ಷೋಡಷರು-ಗುಡ್ಡವ್ವೆ-

ಷೋಡಶಗಣದಲ್ಲಿ ಗುಡ್ಡವ್ವಗೆಯದು ಸುಪ್ರಸಿದ್ಧ ಹೆಸರು. ವೈಷ್ಣವರು ಕಿತ್ತೊಗೆದ ಅಲಂಪುರ 'ಬಾಲಬ್ರಹ್ಮೇಶ್ವರಲಿಂಗ'ವನ್ನು ತನ್ನ ಷೋಡಶಗಣದ ಬೆಂಬಲದಿಂದ ಪುನಃ ಸ್ಥಾಪಿಸಿದ ಈ ವೀರಮಹಿಳೆಯ ವಿಷಯ ಹಲವು ಶಾಸನಗಳಲ್ಲಿ ಎಡೆಪಡೆದಿದೆ.

ದಾನಮ್ಮನನ್ನು ಕುರಿತ ಕೆಲವು ಅಂಶಗಳಲ್ಲಿ ಮುಖ್ಯವಾಗಿ ಕ್ರಿ.ಶ. ೧೧೪೮ ರಿಂದ ದೊರೆತ ಶಾಸನಗಳಲ್ಲಿ ದಾನಮ್ಮನ ಪ್ರಸ್ತಾಪವಿದೆ. ತಾಳಿಕೋಟೆಯ ಶಾಸನ, ಇಂಗಳಗಿಯ ಶಾಸನ ಹಾಗೂ ವಿಜಾಪುರದ ಶಾಸನಗಳಲ್ಲಿ ಉಲ್ಲೇಖಿತವಾಗಿದೆ.

ತಾಳಿಕೋಟೆ ಶಾಸನ– ಕ್ರಿ.ಶ. ೧೧೮೪ ಎ.ಡಿ. ಎಪ್ರಿಲ್ ೨೫

ಈ ಶಾಸನದಲ್ಲಿ ನೇರವಾಗಿ ದಾನಮ್ಮನ ಉಲ್ಲೇಖವಿರದಿದ್ದರು 'ಅಣಂಪುರ'ದ ಹೆಸರಿದ್ದು ಅಣಂಪುರವೇ ಅಲಂಪುರ ವಿರಬಹುದೆಂದೂ ಷೋಡಶರ ವರ್ಣನೆ ಬೀರುವದರಿಂದಲೂ ದಾನಮ್ಮನಿಗೆ ಸಂಬಂಧಿಸಿರಬೇಕೆಂದು ತಿಳಿಯಲಾಗಿದೆ.

ಇಂಗಳಗಿ ಶಾಸನ– ಕ್ರಿ. ಶ. ೧೨೦೯.

ಸಮಸ್ತಲೋಕಾಲೋಕ ಚಕ್ರವರ್ತಿಯುಂ ಶಾಶ್ವತಯೈಶ್ವರ್ಯ ಮೂರ್ತಿಯುಮಪ್ಪ ಮಹಾಲಿಂಗದೇವರ ಉರಿಗಣ್ಣಜ್ವಾಲೆಯಿಂದುದಯಿಸಿದ ಮಹಾವೀರಗಣಂಗಳ ಸಂಖ್ಯಾತರ ಮಹಿಮೆಯೆಂತೆಂದೊಡೆ **"ಕರಕರನಂ ಸೆಂಡಾಡುವರುರಗಪನಂ ಕೀೞಲಿಟ್ಟು ಬಿಟ್ಟಿಕ್ಕುವರಾ । ಗಿರಿಕುಟೞಮಂ ಕಿತ್ತೆತ್ತುವ । ರುರಿಯೊಟು ಪರಿಮೞಿಯಾಡುತಿರ್ಪ್ಪರು ಸರಣರ್॥"** ಗುಡ್ಡವ್ವಗಳ ಹಿರಿತನದಲ್ಲಿ ಬಲವ್ವೆಗಳ ಕಾಲು ತೊಳೆದು ಶಿವಲಿಂಗಗಳಿಗೆ ದತ್ತಿ ನೀಡಿದುದು ಈ ಶಾಸನದ ವಿಷಯ. ಈ ಗುಡ್ಡವ್ವೆಯು ಷೋಡಶಗಣಕ್ಕೆ ಸಂಬಂಧಿಸಿದವಳೆಂದು ಪಂಡಿತರ ಮತ. "ಕರಿಕರನಂ ಸೆಂಡಾಡುವರ್...." ಎಂಬ ಪದ್ಯ ಅವಳ ಕಲಿತನವನ್ನು ವ್ಯಕ್ತಪಡಿಸುತ್ತದೆ.

ವಿಜಾಪುರ ಶಾಸನ–೧

ಈ ಶಾಸನಗಳಲ್ಲಿ ಮಿತಿಯನ್ನೊಳಗೊಂಡುದು ಎರಡನೆಯ ಶಾಸನ. ಇದರ ಕಾಲ ಕ್ರಿ.ಶ. ೧೨೭೮. ಇಲ್ಲಿ ಬರುವ ಶ್ರೀ ವರದಾನಿಯ ಪ್ರತಿಷ್ಠಾಪನಾ ಉಲ್ಲೇಖ ಆ ಕಾಲದಲ್ಲಿ ನಡೆಯುತ್ತಿದ್ದ ಗುಡ್ಡವ್ವೆಯ ಮೂರ್ತಿಯನ್ನು ತಿಳಿಸುತ್ತದೆ. ಇಲ್ಲಿ ಕಂಡುಬರುವ ಅರ್ಚಕನಿಗಿರಬೇಕಾದ ಅರ್ಹತೆಗಳು ಮತ್ತು ವರದಾನಿ, ದಾನಚಿಂತಾಮಣಿ ಎಂಬ ಗುಡ್ಡವ್ವೆಯ ವಿಶೇಷಣಗಳು ಗಮನಾರ್ಹವಾಗಿವೆ.

ಗುಡ್ಡಾಪುರದಲ್ಲಿ ದೊರೆತ ಅಪ್ರಕಟಿತ ಎರಡು ಶಾಸನಗಳಲ್ಲಿ ಒಂದು ಮಾತ್ರ ಸೋಮನಾಥ ದೇವಾಲಯದ ಎಡಭಾಗದಲ್ಲಿದೆ. ಈ ಶಾಸನ ಶೈವಸಂಪ್ರದಾಯದ ದಾನಶಾಸನವಾಗಿದೆ. "ಇದರ ಮೇಲ್ಬದಿಗೆ ಕಂಡರಿಸಿದ ಚಿತ್ರಗಳು ಲಕ್ಷಣೀಯವಾಗಿವೆ. ನಡುವೆ ವಿಮಾನಾಕಾರದ ದೇವಾಲಯದಲ್ಲಿ ಶಿವಲಿಂಗವು ಪ್ರತಿಷ್ಠಾಪಿತವಾಗಿದೆ. ಇದರ ಎಡಗಡೆ ಭಕ್ತಿ ಭಂಗಿಯಲ್ಲಿ ಕುಳಿತ ಮೂರು ಆಕೃತಿಗಳು ಇವೆ. ಇವುಗಳಲ್ಲಿ ಒಂದಂತೂ ನಿಶ್ಚಿತವಾಗಿ ಸ್ತ್ರೀವಿಗ್ರಹವು ಗುಡ್ಡವ್ವೆಯನ್ನು ಸಂಕೇತಿಸುವಂತಿದೆ. ಈ ಶಾಸನ ತ್ರುಟಿತ ಹಾಗೂ ಅಸ್ಪಷ್ಟವಾಗಿರುವುದರಿಂದ ಪ್ರಕಟವಾಗಿಲ್ಲ. ವೀರಸೋಮನಾಥನ ವರ್ಣನೆ, ದತ್ತಿವರ್ಣನೆ ಶಾಸನದಲ್ಲಿದೆ.

*****

ದಾನಮ್ಮ ದೇವಿಯ ಮಂಗಳಾರತಿ

ಜಯ ಮಗಳಂ ನಿತ್ಯ ಶುಭ ಮಂಗಳಂ
ಜಯ ಜಯತು ಶಿವಶರಣೆ ದಾನಮ್ಮಗೇ ॥ಪಲ್ಲವಿ॥
ಧರ್ಮ ರಕ್ಷಣೆಗಾಗಿ ಧಾರುಣಿಯಲಿ ಬಂದು ।
ಉಮರಾಣಿ ಸಿರಸಮ್ಮನಾ ಮಗುವು ತಾನಾಗಿ
ಧರ್ಮ ಮಾರ್ಗದಿ ಲಿಂಗ ತತ್ವವನು ಬಿತುತ್ತ ।
ತಾ ಮಾತೆ ಪಿತರಿಂಗೆ ಸಾಯುಜ್ಯವಿತ್ತವಳಿಗೆ ॥ ೧ ॥

ಬಸವನ ಮನದೊಳಗೆ ಹರುಷದಲಿ ತಪಗೈದು ।
ವಸುಧೆಯಾ ಕಲ್ಲ-ಹರಳು ನಾಣ್ಯವನು ಮಾಡಿ
ಲಕ್ಷದ ಮೇಲೆ ತೊಂಭತ್ತಾರು ಸಾವಿರದ ।
ಮೋಕ್ಷ ಜಂಗಮಗೇ ಭಕ್ಷವನ್ನಿತ್ತವಳಿಗೇ ॥ ೨ ॥

ಅನುಭವದ ಮಂಟಪಕೆ ಶರಣರು ಕರೆದೊಯ್ದು ।
ದಾನಶೂರ ದಾನಮ್ಮನೂ ಎಂದಿಹರು
ನಿನ್ನನೂ ಬಸವರನು ಸಂಗತೀರ್ಥಕೆ ಕರೆಸಿ ।
ಚನ್ನ ಸೋಮಲಿಂಗನಿಗೆ ಧಾರೆಯೆರೆಸೀ ॥ ೩ ॥

ಕೋಟಿ ಶಿವಲಿಂಗಗಳ ಸ್ಥಾಪನೆಯ ಮಾಡುತ್ತ ।
ಕೊಟ್ಟ ನೀ ಲಿಂಗವನು ಕೃಷ್ಣರಾಜಂಗೆ
ಸೃಷ್ಟಿಯಲಿ ಅಂಗಿಲ್ಲದವರಿಗಂಗವನಿತ್ತು ।
ದಿಟ್ಟ ಕಲ್ಬಸವಂಗೆ ಕಬ್ಬ ತಿನಿಸಿದಳಿಂಗೇ ॥ ೪ ॥

ಲಿಂಗಾಂಗ ಸಮರಸ ಕಾಯದಾ ಜಡವಳಿಸಿ ।
ಮಂಗಳದ ಶಿವಯೋಗ ನಿದ್ರೆಯಲ್ಲಿರ್ದು
ತುಂಗಭಕ್ತಳು ನಿನ್ನ ವೀರಮ್ಮ ಬರೆದಿರುವ ।
ಮಂಗಳಾರತಿ ಪೇಳ್ವೆ ದಾನಮ್ಮಗೇ ॥ ೫ ॥

ಶ್ರೀ ದಾನೇಶ್ವರಿಯ ನೂರೆಂಟು ನಾಮಾವಳಿಗಳು

ಶ್ರೀ ಪಾರ್ವತಿಯ ನಾಮ ಪ್ರಸಿದ್ಧ
ದಾನೇಶ್ವರಿಯ ನೂರೆಂಟು ನಾಮಂ
ಗಳನು ನೇಮದಿಂ, ಸತತಂ ಪಠಿಸಲ್
ಸುರ–ಚಿರವಿಷ್ಠ ಸಕಲ–ಸಂಪದವಕ್ಕುಂ ॥

೧. ಶ್ರೀ ಸುಕ್ಷೇತ್ರಾ ಗುಡ್ಡಾಪುರದೊಳು ವಾಸಿಸುವಾ ಶ್ರೀ ದಾನೇಶ್ವರಿ

೨. ದೇಶದಲ್ಲಿ ಕರುನಾಡ ಪುಣ್ಯದಾ ಉಮರಾಣಿ ಶ್ರೀ ದಾನೇಶ್ವರಿ

೩. ಪಾಂಚಾಳ ಶ್ರೀ ಸಿರಸಮ್ಮನಿಗೆ ಶಿಶುವಾದಳು ಶ್ರೀ ದಾನೇಶ್ವರಿ

೪. ಸಂಚಿತವಳಿಸುವ ಜಂಗಮರಿಂದಲಿ ಲಿಂಗ ಪಡೆದ ಶ್ರೀ ದಾನೇಶ್ವರಿ

೫. ಲಿಂಗಮ್ಮ ವೆಂಬಾ ಹೆಸರಿನಿಂದಲೇ ನಿನ್ನ ಕರೆಯೆ ಶ್ರೀ ದಾನೇಶ್ವರಿ

೬. ಮಂಗಳ ಬಿದಿಗೆ ಚಂದ್ರನಂತೆಯೆ ಬೆಳೆದವಳು ಶ್ರೀ ದಾನೇಶ್ವರಿ

೭. ಲಿಂಗ–ಧರ್ಮದಾ ರಕ್ಷಣೆಗಾಗಿ ಜನಿಸಿ ಬಂದೆ ಶ್ರೀ ದಾನೇಶ್ವರಿ

೮. ಗಂಗಾಧರ ಶ್ರೀ ಸೋಮಲಿಂಗನಾ ರಾಣಿಯಾದೆ ಶ್ರೀ ದಾನೇಶ್ವರಿ

೯. ಮರಳು ಜನತೆಗೆ ಮಾನವಳಾಗಿ ಕಂಡೆಯವ್ವಾ ಶ್ರೀ ದಾನೇಶ್ವರಿ

೧೦. ಮಾತೃದೇವಿಗೆ ಪಿತೃದೇವಗೆ ಲಿಂಗವಿತ್ತೆ ಶ್ರೀ ದಾನೇಶ್ವರಿ

೧೧. ಈಶ ತತ್ತ್ವದ ಧ್ಯಾನದತ್ತ ಒಲವಿತ್ತೆಯವ್ವಾ ಶ್ರೀ ದಾನೇಶ್ವರಿ

೧೨. ಬಸವದರ್ಶನ ಕಲ್ಯಾಣದಲಿ ಪಡೆಯ ಬಂದೆ ಶ್ರೀ ದಾನೇಶ್ವರಿ

೧೩. ಸೃಷ್ಟಿ ಸೊಬಗಿನಲಿ ಚಿತ್ತವಿಟ್ಟು ಶಿವತತ್ವ ಕಂಡೆ ಶ್ರೀ ದಾನೇಶ್ವರಿ

೧೪. ದಿಟ್ಟ ಮಾರನಾ ನಾಮಸ್ಮರಣೆಯಲ್ಲಿ ಕಲ್ಯಾಣ ಕಂಡ ಶ್ರೀ ದಾನೇಶ್ವರಿ

೧೫. ಬಡವಿಗೊಲಿದು ಮಹಾಭಾಗ್ಯವಿತ್ತ ಘನಕರುಣಿ ನೀನು ಶ್ರೀ ದಾನೇಶ್ವರಿ

೧೬. ಝಾಡಿಸಿದೆ ನೀನುಟ್ಟ ಸೀರೆಯಾ ಮುತ್ತುದುರಿತು ಶ್ರೀ ದಾನೇಶ್ವರಿ

೧೭. ಬಾಳೆಯ ವನದೊಳನುಷ್ಠಾನವ ಮಾಡಿದ ಕರುಣೆ ನೀನು ಶ್ರಿ ದಾನೇಶ್ವರಿ

೧೮. ಬಾಳೆ-ತೆಂಗುಗಳು ಬಾಗಿ ನಮಿಸಲು ನೋಡಿದವಳು ಶ್ರೀ ದಾನೇಶ್ವರಿ

೧೯. ಉಡುತಡಿಯಕ್ಕಾ ಮಹಾದೇವಿಯ ದರ್ಶನ ಪಡೆದೆ ಶ್ರೀ ದಾನೇಶ್ವರಿ

೨೦. ಸಡಗರದೀ ವರಹಸ್ತವಿಟ್ಟು ಪ್ರಸಾದ ತೋರ್ದ ಶ್ರೀ ದಾನೇಶ್ವರಿ

೨೧. ನೂರಾತೊಂಭತ್ತಾರು ಸಾವಿರಾ ಚರರುಣಿಸಿದ ಶ್ರೀ ದಾನೇಶ್ವರಿ

೨೨. ಹರಳು ಕಲ್ಲುಗಳ ನಾಣ್ಯ ಮಾಡುತೆ ಚರರಿಗಿತ್ತ ಶ್ರೀ ದಾನೇಶ್ವರಿ

೨೩. ಬಸವ ಪ್ರಮಥರ ಶರಣ-ಶರಣೆಯರ ಸೇವೆಗೊಂಡ ಶ್ರೀ ದಾನೇಶ್ವರಿ

೨೪. ಈಶ ಮಂಟಪದಿ ದಾನಶೂರಳು ಎಂದೆನಿಸಿದ ಶ್ರೀ ದಾನೇಶ್ವರಿ

೨೫. ಪತಿಯು ಇಲ್ಲದಾ ಸತಿಗೆ, ಪತಿಯನ್ನು ತೋರಿಸಿದಾ ಶ್ರೀ ದಾನೇಶ್ವರಿ

೨೬. ಖ್ಯಾತಿ ಶಾಲಿವಾಹನದ ಆನೂರ್ರ ತೊಂಭತ್ತಾರು ಶ್ರೀ ದಾನೇಶ್ವರಿ

೨೭. ರಕ್ತಾಕ್ಷಿ ವೈಶಾಖ ಶುಕ್ಲದಾ ಕಾಲವದುವೆ ಶ್ರೀ ದಾನೇಶ್ವರಿ

೨೮. ಶ್ರೀ ತದಿಗಕ್ಷಯ ಗುರುವಾರದ ಶುಭಸಮಯದಲ್ಲಿ ಶ್ರೀ ದಾನೇಶ್ವರಿ

೨೯. ಸಂಗತೀರ್ಥದಿ ಸೋಮಲಿಂಗಗೇ ಸತಿಯಾದೇ ಶ್ರೀ ದಾನೇಶ್ವರಿ

೩೦. ಲಿಂಗ-ಜಂಗಮರು, ಬಸವ-ನೀಲಮ್ಮ ಸಾಸಿವೆಯೊಡೆ ಶ್ರೀ ದಾನೇಶ್ವರಿ

೩೧. ಐನೂರೈವತ್ತೈದು ಲಗ್ನಗಳ ಮಾಡಿಸಿದೆ ಶ್ರೀ ದಾನೇಶ್ವರಿ

೩೨. ಏನ ಹೇಳಲಿ ಆಗಸದಿಂದಲಿ ಸುಮಗಳುದುರೆ ಶ್ರೀ ದಾನೇಶ್ವರಿ

೩೩. ಮಹಾರಾಷ್ಟಕ್ಕೆ ಕನ್ನಡ ನಾಡಿಗೆ ಬಂಧುವಾದೆ ಶ್ರೀ ದಾನೇಶ್ವರಿ

೩೪. ಮಹಾಭಕ್ತನಿಧಿ ಜತ್ತಿಯವರಿಗೆ ಕರುಣವಿತ್ತೆ ಶ್ರೀ ದಾನೇಶ್ವರಿ

೩೫. ಗುಡ್ಡಾಪೂರ ಸುಕ್ಷೇತ್ರವನ್ನು ಶ್ರೀ ಜತ್ತಿಗಿತ್ತೆ ಶ್ರೀ ದಾನೇಶ್ವರಿ

೩೬. ಆದವಾನಿಯಲಿ ಲಕ್ಷೀಪೂಜೆ ಮಾಡಿಸಿದೆ ಶ್ರೀ ದಾನೇಶ್ವರಿ

೩೭. ಮನೆ-ಮನೆಯಲಿ ಮುತ್ತೈದೆಯಾಗಿ ನೀ ತೋರಿದವ್ವ ಶ್ರೀ ದಾನೇಶ್ವರಿ

೩೮. ಜನ-ಮನದಲಿ ಶಿವಧರ್ಮವ ಬಿತ್ತಿದ ಮಹಾಮಾತೆ ಶ್ರೀ ದಾನೇಶ್ವರಿ

೩೯. ಆಲಂಪುರದಲ್ಲಿ ಶಸ್ತ್ರಧರಿಸಿ ತಾ ವೈರಿ ಬಡೆದ ಶ್ರೀ ದಾನೇಶ್ವರಿ

೪೦. ಮಳಲ ರಾಶಿಯಲಿ ಅನ್ನ ಮಾಡಿದಾ ತ್ರಿವೇಣಿಯೂ ಶ್ರೀ ದಾನೇಶ್ವರಿ

೪೧. ಕಲ್ಲಿನಲ್ಲಿ ಘನಮುದ್ರೆ ನಾಣ್ಯಗಳ ಮಾಡಿಸಿದೆ ಶ್ರೀ ದಾನೇಶ್ವರಿ

೪೨. ಎಲ್ಲ ಕಡೆಯಲಿ ಕೋಟಿ ಲಿಂಗಗಳ ಸ್ಥಾಪಿಸಿದೆ ಶ್ರೀ ದಾನೇಶ್ವರಿ

೪೩. ಒಡೆಯರಾದ ಶ್ರೀ ರಾಜರಾಜರುಗಳಿಗೆ ಲಿಂಗವಿತ್ತೆ ಶ್ರೀ ದಾನೇಶ್ವರಿ

೪೪. ಸಡಗರದಿ ಶ್ರೀ ರಾಮೇಶ್ವರಕೆ ನಂದಿ ತಂದೆ ಶ್ರೀ ದಾನೇಶ್ವರಿ

೪೫. ನಾರಾಯಣನಿಂ ಪೂಜೆಗೊಂಡು ನೀ ಹರಕೆಯಿತ್ತೆ ಶ್ರೀ ದಾನೇಶ್ವರಿ

೪೬. ಶಿರದ ಮೇಲಿನಾ ಲಿಂಗ ಮುದ್ರೆಯಂ ಆತಗಿತ್ತೆ ಶ್ರೀ ದಾನೇಶ್ವರಿ

೪೭. ರಾಜಗೆ ಬಂದ ಮದವಂ ಮುರಿದೆ ನೀ ಕರುಣದಿಂದ ಶ್ರೀ ದಾನೇಶ್ವರಿ

೪೮. ಈ ಜಗದಲಿ ಅಂಗಹೀನರಿಗೆ ಅಂಗವಿತ್ತೆ ಶ್ರೀ ದಾನೇಶ್ವರಿ

೪೯. ಕಣಗಿಲ ರಾಜಗೆ ಲಿಂಗಮಂತ್ರವ ಬೋದಿಸಿದೆ ಶ್ರೀ ದಾನೇಶ್ವರಿ

೫೦. ವಿಷ್ಣು ಕಂಚಿಗೆ ಶಿವಕಂಚಿ ಎಂದೆನಿಸಿದೆಯವ್ವಾ ಶ್ರೀ ದಾನೇಶ್ವರಿ

೫೧. ಜನಿವಾರಕ್ಕೆ ಲಿಂಗ ಕಟ್ಟಿದೇ ಲಿಂಗ ಕಳೆಯ ಶ್ರೀ ದಾನೇಶ್ವರಿ

೫೨. ಕೃಷ್ಣೆಯ ನೀರಲಿ ಕ್ಷೀರವ ಮಾಡಿದೆ ಮಹಾಮಾತೆ ಶ್ರೀ ದಾನೇಶ್ವರಿ

೫೩. ಸತ್ತ ಮನುಜಗೆ ಪ್ರಾಣವನಿತ್ತೆ ಮಹಾಕರುಣಿ ಶ್ರೀ ದಾನೇಶ್ವರಿ

೫೪. ಅತ್ತ ಕಲ್ಲಿನ ಕಲ್ಬಸವಂಗೆ ಕಬ್ಬ ಕೊಟ್ಟ ಶ್ರೀ ದಾನೇಶ್ವರಿ

೫೫. ಕಲ್ಲು ಬಸವನಿಂ ಡುರುಕಿ ಹೊಡೆಸಿದ ಕಾರಣಿಕಳು ಶ್ರೀ ದಾನೇಶ್ವರಿ

೫೬. ಬಲ್ಲಿದಳೆನಿಸೀ ಲಿಂಗದಿಟ್ಟಿಯಲಿ ಧ್ಯಾನಿಯಾದೆ ಶ್ರೀ ದಾನೇಶ್ವರಿ

೫೭. ಲಿಂಗವ ಸಂಗದಿ ಸಮರಸಗೊಳಿಸಿದ ಲಿಂಗದಿಟ್ಟೆ ಶ್ರೀ ದಾನೇಶ್ವರಿ

೫೮. ಲಿಂಗತೀರ್ಥಗಳ ತನ್ನಲಡಗಿಸಿ ತೋರಿಸಿದಾ ಶ್ರೀ ದಾನೇಶ್ವರಿ

೫೯. ಧಾತ್ರಿಲಿ ಗುಡ್ಡಾಪುರವನು ಕ್ಷೇತ್ರವಾಗಿಸಿದಾ ಶ್ರೀ ದಾನೇಶ್ವರಿ

೬೦. ನಿತ್ಯವು ತಪ್ಪದೇ ಮೂರು ಪೂಜೆಯೂ ಮಾಡುವಳು ಶ್ರೀ ದಾನೇಶ್ವರಿ

೬೧. ಬೆಳಗಿನ ಹೊತ್ತು ಬಾಲಕಿಯಾಗಿ ಕಾಣುವಳು ಶ್ರೀ ದಾನೇಶ್ವರಿ

೬೨. ವೇಳೆ ಮಧ್ಯದಿನ ಯುವತಿಯಾಗಿ ಕಾಣುವಳು ಶ್ರೀ ದಾನೇಶ್ವರಿ

೬೩. ಗೋಧೂಳಿಯಲಿ ಮುಪ್ಪಾಗಿರುವ ಕಾರಣಿಕಳು ಶ್ರೀ ದಾನೇಶ್ವರಿ

೬೪. ಮುದ್ದಿನ ಮುಖಕ್ಕೆ ಮುಕುರವಪ್ಪಿದೆ ಮಹಾದೇವಿ ಶ್ರೀ ದಾನೇಶ್ವರಿ

೬೫. ಲಿಂಗಕಾಯದಿ ಜಗವನು ಪೊರೆಯುವ ಮಹಾಮಹಿಮೆ ಶ್ರೀ ದಾನೇಶ್ವರಿ

೬೬. ಅಂಗದಲ್ಲಿ ಶಿವಭಕ್ತಿ–ಮುಕ್ತಿಯ ಸುಖವ ತೋರ್ದೆ ಶ್ರೀ ದಾನೇಶ್ವರಿ

೬೭. ಭಕ್ತವೃಂದದ ಹೃದಯ ಜ್ಯೋತಿಯು ಕರುಣಮೂರ್ತಿ ಶ್ರೀ ದಾನೇಶ್ವರಿ

೬೮. ಭಕ್ತಕೋಟಿಗೆ ಶಾಂತಿಯಿತ್ತು ನೀನುದ್ಧರಿಸಿದೆ ಶ್ರೀ ದಾನೇಶ್ವರಿ

೬೯. ಮಾಟಮದ್ದು ಮಾಡಿದವರಿಗೆ ಮೂಗ ಕೊಯ್ದೆ ಶ್ರೀ ದಾನೇಶ್ವರಿ

೭೦. ನಿಷ್ಠೆಯುಳ್ಳರಿಗೆ ಇಂಬುಕೊಟ್ಟು ನೀ ಪೊರೆದವ್ವಾ ಶ್ರೀ ದಾನೇಶ್ವರಿ

೭೧. ನಂಬಿಗಿಲ್ಲದವರ ಎದೆಗೆ ಅಂಬುವು ನೀನಾದೆ ಶ್ರೀ ದಾನೇಶ್ವರಿ

೭೨. ಬಿಂಬವಾಗಿ ನೀ ಜೀವಿಗಳಿಂದ ಲೇಸೆನಿಸಿದೆ ಶ್ರೀ ದಾನೇಶ್ವರಿ

೭೩. ನಿನ್ನ ಕುರುಹನು ರೂಢಿಯಲ್ಲಿ ನೀ ತೋರಿಸಿದೆ ಶ್ರೀ ದಾನೇಶ್ವರಿ

೭೪. ನೀನೇ ನಮ್ಮ ವೀರಶೈವರಾ ಚಿಂತಾಮಣಿ ಶ್ರೀ ದಾನೇಶ್ವರಿ

೭೫. ಭಸ್ಮ–ಮಂತ್ರ–ರುದ್ರಾಕ್ಷಿ–ಹೂವುಗಳ ಧರಿಸಿದವಳು ಶ್ರೀ ದಾನೇಶ್ವರಿ

೭೬. ಈಶ ಪ್ರೀತಿಯ ಏಕ ಬಿಲ್ವದಳ ಪ್ರೀತಿಯುಳ್ಳ ಶ್ರೀ ದಾನೇಶ್ವರಿ

೭೭. ದಯಾಶೀಲೆ ಘನ ದೀನ ಬಂಧುವೂ ತಾನೆನಿಸಿದ ಶ್ರೀ ದಾನೇಶ್ವರಿ

೭೮. ಕಾಯಕತ್ವದಲಿ ಪಂಚಾಕ್ಷರಿಯ ತೋರಿದವಳು ಶ್ರೀ ದಾನೇಶ್ವರಿ

೭೯. ಧರೆಯೊಳಗಸಮಾಮಹಿಳೆ ಎನಿಸಿದ ಮಂಗಳೆಯು ಶ್ರೀ ದಾನೇಶ್ವರಿ

೮೦. ಸಿರಿ ಶಿವ ಕಳೆಯನ್ನಿಳೆಯಲಿ ಬಿತ್ತಿದ ಮಹಿಮಳು ಶ್ರೀ ದಾನೇಶ್ವರಿ

೮೧. ಶಿವನ ಸುಮಾರ್ಗ ಜಗಕೆ ತೋರಿ ಬೆಳಗನಿತ್ತ ಶ್ರೀ ದಾನೇಶ್ವರಿ

೮೨. ಸರ್ವಾಂಗದಲಿ ಲಿಂಗ ಕಳೆಯನು ಬೆಳಗಿಸುವಾ ಶ್ರೀ ದಾನೇಶ್ವರಿ

೮೩. ಮಹಾ ತಪೋನಿಧಿ ತೇಜಸ್ವಿಯು ನೀ ಮಹಾಮಹಿಮೆ ಶ್ರೀ ದಾನೇಶ್ವರಿ

೮೪. ಮಹಾಪವಾಡದ ಕರ್ತಳು ನೀನು ಪಾವನಳು ಶ್ರೀ ದಾನೇಶ್ವರಿ

೮೫. ನಿತ್ಯ ನಿನ್ನನು ಪೂಜಿಸಿದವರ ಪಾವನಗೊಳಿಸು ಶ್ರೀ ದಾನೇಶ್ವರಿ

೮೬. ನಿತ್ಯ ನಿನ್ನಯ ಭಜನೆಯ ಮಾಡಲು ದುರಿತ ಕಳೆವ ಶ್ರೀ ದಾನೇಶ್ವರಿ

೮೭. ನನ್ನ ತಪ್ಪುಗಳು ಅನಂತ ಕೋಟಿ ಸೈರಿಸವ್ವ ಶ್ರೀ ದಾನೇಶ್ವರಿ

೮೮. ಎನ್ನ ಸುತ್ತಿದ ಸಂಸಾರದಲಿ ಸಲಹು ನನ್ನ ಶ್ರೀ ದಾನೇಶ್ವರಿ

೮೯. ಭವಸಾಗರದಿಂ ನನ್ನನು ಎತ್ತು ಮಹಾಮಹಿಮೆ ಶ್ರೀ ದಾನೇಶ್ವರಿ

೯೦. ದೇವವಂದಿತೆ ಕಂದು ಬರಗ ತೆರ ಕಾಪಾಡು ಶ್ರೀ ದಾನೇಶ್ವರಿ

೯೧. ಜ್ಞಾನಹೀನತೆ ದಾರಿ ಬಿಡಿಸುತ ಪೊರೆಯಮ್ಮಾ ಶ್ರೀ ದಾನೇಶ್ವರಿ

೯೨. ಜ್ಞಾನವೆಂಬುವಾ ಬೆಳಗನು ತೋರಿ ಕಾಪಾಡೌ ಶ್ರೀ ದಾನೇಶ್ವರಿ

೯೩. ಕ್ಲೇಶದಿಂದಲಿ ಕುದಿಯುವ ಮನಸಿಗೆ ಶಾಂತಿ ನೀಡು ಶ್ರೀ ದಾನೇಶ್ವರಿ

೯೪. ದೋಷದಿಂದಲಿ ನಾನೆಡಹಿ ಬಿದ್ದಿಹೆ ಮತಿಯ ನೀಡು ಶ್ರೀ ದಾನೇಶ್ವರಿ

೯೫. ಅಡಿಗಡಿಗೇ ನಾ ನಿನ್ನನು ನೆನೆವಾ ದೃಢವ ನೀಡು ಶ್ರೀ ದಾನೇಶ್ವರಿ

೯೬. ಹೃದಯ ಗೃಹಕೆ ಜ್ಞಾನ ದೀಪದಾ ಬೆಳಗದೋರು ಶ್ರೀ ದಾನೇಶ್ವರಿ

೯೭. ಸದಮಲಾಂಗಿನೀ ಸುಜ್ಞಾನವನು ಕೊಟ್ಟು ಹರಸು ಶ್ರೀ ದಾನೇಶ್ವರಿ

೯೮. ಮುಗ್ಧ ಭಕ್ತಳು ಎನ್ನ ಕರುಣಿಸು ಮಹಾತಾಯಿ ಶ್ರೀ ದಾನೇಶ್ವರಿ

೯೯. ನಿನ್ನಯ ಕೃಪೆಯು ಇರದೆ ಬಾಳಲು ಬರುವುದಿಲ್ಲ ಶ್ರೀ ದಾನೇಶ್ವರಿ

೧೦೦. ನಿನ್ನ ಭಕ್ತಳು ವೀರಮ್ಮನು ನಾ ಮರೆಯಬೇಡ ಶ್ರೀ ದಾನೇಶ್ವರಿ

೧೦೧. ಶರಣು ಶರಣು ನಿನ್ನ ಶ್ರೀಚರಣಕೆ ನಮಿಸುವೆ ಶ್ರೀ ದಾನೇಶ್ವರಿ

೧೦೨. ಮರಣ ಜನನಗಳ ದೂರ ಮಾಡುತ ಎನ್ನ ಪೊರೆವ ಶ್ರೀ ದಾನೇಶ್ವರಿ

೧೦೩. ಪ್ರಸಾದ ಕಾಯದ ತೇಜಸ್ವಿನಿ ನೀ ನಿನಗೆ ಶರಣು ಶ್ರೀ ದಾನೇಶ್ವರಿ

೧೦೪. ಹಸಾದ ಎನ್ನ ತಪ್ಪು-ಒಪ್ಪುಗಳ ನಿನಗರ್ಪಿತ ಶ್ರೀ ದಾನೇಶ್ವರಿ

೧೦೫. ತಪ್ಪು ಮಾಡಿದರೆ ತಿದ್ದಿ ರಕ್ಷಿಸು ಕಾರುಣ್ಯದ ಶ್ರೀ ದಾನೇಶ್ವರಿ

೧೦೬. ಅಪ್ಪಿಕೊಳ್ಳುವೆವು ನಿನ್ನ ಪಾದವ ಸಲಹು ಬಿಡದೆ ಶ್ರೀ ದಾನೇಶ್ವರಿ

೧೦೭. ನಿನ್ನ ಕರುಣ ನೂರೆಂಟು ನಾಮಗಳ ಕೇಳ್ವರ ಪೊರೆ ಶ್ರೀ ದಾನೇಶ್ವರಿ

೧೦೮. ಚಿನ್ಮಯ ಸಾಕ್ಷಾತ್ಕಾರದ ಸಾಯುಜ್ಯ ಕೊಟ್ಟು ಸಲಹು ಶ್ರೀ ದಾನೇಶ್ವರಿ

*****

ಮಾರನಾ ನಾಮಸ್ಮರಣೆಯಲ್ಲಿ ಕಲ್ಯಾಣ ಕಂಡ ಶ್ರೀ ದಾನೇಶ್ವರಿ

ಪಾಲಿಸೆನ್ನನು ಗೌರಿ, ಪಾಪ ಸಂಹಾರಿ,
ಪಾಲಿಸೆನ್ನನು ಗೌರಿ ಪಾಪ ಸಂಹಾರಿ
ಮುಂಜಾನೆ ಏಳೂತ ಹಸುಗೂಸು ಗುಡ್ಡಾಪುರಿ ।
ಮಧ್ಯಾಹ್ನ ಆರತಾಸಿಗಿ ಪ್ರಾಯದ ನಿಧಿತವ್ವಾ
ಸಂಜೆ ಮೂರ ತಾಸೀಗಿ ಮುಪ್ಪಾನ ಮುದಿಕೆವ್ವಾ
ಹಸುಳೆ ಭಾವದ ತಾಯೀ ಬಸವನ ಗುಣವೇ ನೀನು
ದುರಿತ ದುಃಖವನೆಲ್ಲ ದೂರಮಾಡ ಗುಡ್ಡಾಪುರಿ
ಬಂದ ಸಂಕಟನೆಲ್ಲ ಬಯಲ ಮಾಡಮ್ಮ ತಾಯಿ ದಾನಮ್ಮ

****

ದಾನಮ್ಮತಾಯಿಗೆ ನುಡಿನಮನ

ಶರಣು ಶರಣಾರ್ಥಿ ತಾಯೆ
ಶರಣು ಶರಣಾರ್ಥಿ ಶರಣೆಂಬೆ ಸ್ವೀಕರಿಸು ತಾಯೆ
ವೀರಶರಣೆ ಗುಡ್ಡಾಪುರ ದಾನಮ್ಮತಾಯೆ ॥ಪ॥

ಉಮರಾಣಿ ಗ್ರಾಮದೊಳು ಜನಿಸಿದ ಲಿಂಗವ್ವ
ಶಿವತತ್ತ್ವನರಿಯಲು ಕಲ್ಯಾಣಕ್ಕೆ ಧಾವಿಸಿದವ್ವ
ಪರಿಶುದ್ಧತೆಯ ನಿಷ್ಠೆ ಇಷ್ಟಲಿಂಗಯ್ಯನ ಸಾಧನೆವ್ವ
ಬಸವಾದಿ ಶರಣರ ದರ್ಶನದಿ ಶಿವಶರಣೆಯವ್ವ.

ಶಿವತತ್ತ್ವದ ತಿರುಳನರಿತು ಸಮತೆ ಭಾವದಲಿ
ದೀನದಲಿತರ ಸೇವೆಗೈದೆ ನಿತ್ಯ ಕಾಯಕದಲಿ

ಲಿಂಗಮ್ಮ ಲಿಂಗಯ್ಯನಲಿ ಬೆರೆತ ಭಕ್ತಿಯಲಿ
ಬಸವಪ್ಪ ಕರೆದರು ದಾನಮ್ಮ ನಾಮದಲಿ.

ವಚನಗಳು ಕಲಿತು ಪಸರಿಸುತ ಮೈಮರೆತು
ಕರ್ತವ್ಯಶಾಲಿಯಾಗಿ ಜಗವೆಲ್ಲಾ ಸಂಚರಿಸಿದ
ದಾನಶೂರಳು ನೀನವ್ವ ಶಿರಬಾಗಿ ಶರಣೆನುವೆ
ಶರಣಾರ್ಥಿ ವೀರತಾಯೆ ಶರಣೆಂದು ನಮಿಸುವೆ

–ಜಯಶ್ರೀ ಸುಕಾಲೆ

******

ಶರಣು–ಶರಣಾರ್ಥಿ

ಅನುಬಂಧ

ಆಧಾರ ಗ್ರಂಥಋಣ

೧) ಸಮಗ್ರ ವಚನ ಸಾಹಿತ್ಯ ಸಂಪುಟಗಳು : ಡಾ.ಎಂ.ಎಂ.ಕಲಬುರ್ಗಿ.

೨) ಶಿವಶರಣೆಯರ ಚರಿತ್ರೆಗಳು : ಡಾ. ಫ.ಗು. ಹಳಕಟ್ಟಿ.

೩) ವೀರಗಣಾಚಾರಿಣಿ ಗುಡ್ಡಾಪುರ ದಾನಮ್ಮ : ಪ್ರೊ. ಸಿದ್ದಣ್ಣ ಉತ್ನಾಳ.

೪) ಗುಡ್ಡಾಪುರದ ದಾನಮ್ಮ; ಸಾಂಸ್ಕೃತಿಕ ನೆಲೆಗಳು : ಡಾ. ಮಹಾಂತೇಶ್ ಉಕ್ಕಲಿ.

೫) ದಾನದಾಸೋಹಿ ದಾನಮ್ಮ : ಶಾಂತಾದೇವಿ ಮಾಳವಾಡ.

೬) ಶಾಸನಗಳಲ್ಲಿ ಶಿವಶರಣರು : ಡಾ. ಎಂ.ಎಂ.ಕಲಬುರ್ಗಿ.

೭) ಶಿವದಾಸ ಗೀತಾಂಜಲಿ : ಡಾ. ಎಲ್. ಬಸವರಾಜು.

೮) ಬಸವೇಶ್ವರರ ಸಮಕಾಲೀನರು : ಬಸವ ಸಮಿತಿ ಬೆಂಗಳೂರು.

೯) ಕನ್ನಡ ಜನಪದ ಗೀತೆಗಳು : ಡಾ. ಬಿ.ಎಸ್. ಗದ್ದಗಿಮಠ.

೧೦) ಶೂನ್ಯ ಸಂಪಾದನೆಯ ಪರಾಮರ್ಶೆ : ಪ್ರೊ. ಸಂ.ಶಿ. ಭೂಸನೂರಮಠ.

೧೧) ವಚನ ಬೆಳಕು : ಶ್ರೀ ರಂಜಾನ ದರ್ಗಾ.

೧೨) ಬಸವೇಶ್ವರರ ವಚನದೀಪಿಕೆ : ಡಾ. ಎಚ್.ತಿಪ್ಪೇರುದ್ರಸ್ವಾಮಿ.

೧೩) ೧೨ನೇ ಶತಮಾನದ, ಶರಣ ಸ್ಮಾರಕಗಳು: ಡಾ.ವೀರಣ್ಣ ದಂಡೆ, ಡಾ. ಜಯಶ್ರೀ ದಂಡೆ.

೧೪) ಓಂಕಾರ ಸ್ವರೂಪಿಣಿ ಶ್ರೀ ಗುಡ್ಡಾಪುರ ದಾನಮ್ಮ ಶರಣೆಯ ಪ್ರಭೆ: ಸಂ: ಶಿವಶಂಕರ ದಿಂಡವಾರ.

೧೫) ಶ್ರೀ ದಾನಮ್ಮತಾಯಿ : ಶ್ರೀಮತಿ ರಾಜೇಶ್ವರಿ ಮಹೇಶ್ವರಯ್ಯ

೧೬) ಕನ್ನಡ ರತ್ನಕೋಶ (ಪರಿಷ್ಕೃತ).

*****



ವಿಶ್ವಗುರು ಬಸವಣ್ಣನವರ ನೇತೃತ್ವದಲ್ಲಿ ಉದಯಿಸಿದ ಕಲ್ಯಾಣ ಕ್ರಾಂತಿ ಜಗತ್ತಿನ ಇತಿಹಾಸದಲ್ಲೇ ಅಪೂರ್ವವಾದದ್ದು. ಈ ಕ್ರಾಂತಿಯ ಸೇನಾನಿಗಳಾಗಿ ನೂರಾರು ಶರಣ ಶರಣೆಯರು ಹೋರಾಡಿದರು. ಅದರಲ್ಲಿ ಗುಡ್ಡಾಪುರದ ದಾನಮ್ಮ ಒಬ್ಬ ವೀರಶರಣೆ. ಇವರು ಅನುಭವಮಂಟಪದಲ್ಲಿ ಲಿಂಗಾನುಭಾವ ಪಡೆದು. ಅಚ್ಚ ಲಿಂಗವಂತರಾದವರು. ನಾಡು-ಹೊರನಾಡಿನಲ್ಲಿ ಸಂಚರಿಸಿ ಬಸವಧರ್ಮ ಧ್ವಜವನ್ನು ಹಾರಿಸಿದವರು. ಸಾವಿರಾರು ಜನರಿಗೆ ಇಷ್ಟಲಿಂಗ ದೀಕ್ಷೆ ನೀಡಿ ಲಿಂಗವಂತ ಧರ್ಮ ಪ್ರಸಾರ ಮಾಡಿದ ನಿಜ ಜಂಗಮಮೂರ್ತಿ. ವಚನ ಸಾಹಿತ್ಯ ರಕ್ಷಿಸುವಲ್ಲಿ ಅಪಾರ ಕೊಡುಗೆ ನೀಡಿದ ಗಣಾಚಾರಿಣಿ. ಇವರ ಜೀವನ ಚರಿತ್ರೆ ಒಂದು ಅದ್ಭುತ ಸಾಹಸ ಗಾಥೆ, ಪ್ರೇರಕ ಶಕ್ತಿ ಹಾಗೂ ಸ್ಫೂರ್ತಿಯ ಚಿಲುಮೆ. ಆ ಚಿಲುಮೆಯನ್ನು ತಮ್ಮ ಶಬ್ದ ಸಾಮರ್ಥ್ಯದಿಂದ ತೋಡಿದವರು ಶರಣೆ ಜಯಶ್ರೀ ಸುಕಾಲೆ ತಾಯಿಯವರು.

ಶರಣೆ ಜಯಶ್ರೀ ಸುಕಾಲೆ ಅವರು ಅಪ್ಪಟ ಶರಣ ಸಂಸ್ಕೃತಿ ಅಳವಡಿಸಿಕೊಂಡ ಒಬ್ಬ ಸುಗೃಹಿಣಿ. ಅವರ ಸಾಹಿತ್ಯ ಕೃಷಿ ಮೆಚ್ಚುವಂತಹದ್ದು. ಗೃಹಿಣಿಯ ಕರ್ತವ್ಯ ಪೂರೈಸುತ್ತಲೇ ಶರಣ ಸಾಹಿತ್ಯ ಅಧ್ಯಯನ, ಚಿಂತನ, ಮನನದ ಜೊತೆಗೆ ಬರವಣಿಗೆ ಮಾಡುತ್ತಿರುವುದು ಅಭಿನಂದನೀಯ. ಅವರ ಸಿದ್ಧಹಸ್ತದಿಂದ ಈಗಾಗಲೇ ಅನೇಕ ಕೃತಿಗಳು ಹೊರಹೊಮ್ಮಿವೆ. ಅದರಲ್ಲಿ ಇದೊಂದು ವಿಶೇಷ ಕೃತಿಯೆಂದು ಹೇಳಬೇಕಾಗುತ್ತದೆ. ಈ ಕೃತಿಯಲ್ಲಿ ಸುಕಾಲೆ ಅವರು ಶರಣೆ ಗುಡ್ಡಾಪುರ ದಾನಮ್ಮ ತಾಯಿಯವರ ಜೀವನ ಚರಿತ್ರೆಯನ್ನು ಅರ್ಥಪೂರ್ಣವಾಗಿ ಚಿತ್ರಿಸಿದ್ದಾರೆ. ಈ ಗ್ರಂಥರೂಪ ಚಿಲುಮೆಯ ನೀರನ್ನು ಕುಡಿದು ನಾವೆಲ್ಲರೂ ಬಸವಪಥದಲ್ಲಿ ಸಾಗುವ ಸಂಕಲ್ಪ ಮಾಡೋಣ.

– ಪೂಜ್ಯ ಶ್ರೀ ಗುರುಬಸವ ಪಟ್ಟದ್ದೇವರು
ಹಿರೇಮಠ ಸಂಸ್ಥಾನ, ಭಾಲ್ಕಿ ಜಿ:ಬಿದರ